ನೀನೇ ತೆಗೆದುಕೊಂಡು ಹೋಗು ಎಂದಳು. ಆಯಿತು ಎಂದು ಹೇಳಿ, ಉಳಿದ ನೂರು ರೂಪಾಯಿಯನ್ನು ಅಜ್ಜಿಯ ಖರ್ಚಿಗೆ ಕೊಟ್ಟು ಮನೆಗೆ ತೆರಳುತ್ತಾನೆ. ಮನೆ ಸ್ವಲ್ಪ ದೂರವಿರುವಾಗಲೇ ಯಲ್ಲಪ್ಪನಿಗೆ ಹೆದರಿಕೆ ಉಂಟಾಯಿತು. ಎಲ್ಲಿ ಅಜ್ಜಿ ಗದರುವಳು, ಕೋಲಿನಿಂದ ಬಾಸುಂಡೆ ಬರುವವರೆಗೆ ಹೊಡೆಯುವಳೋ. ಅಯ್ಯೋ ದೇವರೇ ನೀನೇ ಕಾಪಾಡಬೇಕು ಎಂದು ದೇವರನ್ನು ಸ್ಮರಿಸುತ್ತಾ ಗುಡಿಸಿಲೊಳಗೆ ಹೋದನು. ಅಜ್ಜಿಯು ನಿದ್ದೆಯಲ್ಲಿ ಮುಳುಗಿದ್ದಳು. ಯಲ್ಲಪ್ಪನಿಗೆ ಧೈರ್ಯ ಬಂತು. ಹಾವನ್ನು ಬುಟ್ಟಿಯಲ್ಲಿಟ್ಟು, ಗಿಳಿಯನ್ನು ಪಂಜರದಲ್ಲಿ ಮತ್ತು ಮಂಗವನ್ನು ಗುಡಿಸಿಲಿನಲ್ಲಿ ಬಿಟ್ಟನು. ಆ ಮಂಗವು ಮಲಗಿದ ಅಜ್ಜಿರ ಸೀರೆಯ ಸೆರಗನ್ನು ತುಂಡು ಮಾಡುತ್ತಿತ್ತು. ಅಲ್ಲಿರುವ ಹಣ್ಣನ್ನು ಕಚ್ಚಿ–ಕಚ್ಚಿ ಬಿಟ್ಟಿತು. ಎಚ್ಚರವಾದ ಅಜ್ಜಿಯು ಸಿಟ್ಟಿನಿಂದ ಎದ್ದು ಆ ಮಂಗನಿಗೆ ಎರಡು ಬಾರಿಸಿದಳು. ಮಂಗವು ಯಲ್ಲಪ್ಪನ ಬಳಿ ಓಡಿತು. ಅಜ್ಜಿಯು ಓಡಿಸಿಕೊಂಡು ಬರುವುದನ್ನು ಕಂಡು ಯಲ್ಲಪ್ಪನು ಸಹ ಓಡಿ ಹೋದ. ನಂತರ ಸಾಯಂಕಾಲ ಮಂಗನೊಂದಿಗೆ ಗುಡಿಸಿಲಿಗೆ ಬಂದ. ಯಲ್ಲಪ್ಪನಿಗೆ ಅಜ್ಜಿಯು ಸಿಟ್ಟಿನಿಂದ ಬಾಸುಂಡೆ ಬರುವವರೆಗೂ ಹೊಡೆದು ಹಾವು, ಗಿಳಿ, ಮಂಗಗಳ ಸಮೇತ ಹೊರ ಹಾಕಿದಳು. ದುಃಖಗೊಂಡ ಯಲ್ಲಪ್ಪನು ಬೇಜಾರಿನಿಂದ ಕಾಡಿಗೆ ಹೋಗಿ ಹಾವು, ಗಿಳಿ, ಮಂಗಗಳಿಗೆ ನೀವು ಹೋಗಿ. ನನ್ನೊಟ್ಟಿಗೆ ಇದ್ದರೆ ನನ್ನ ಸಮೇತ ಅಜ್ಜಿ ಕೊಂದು ಹಾಕುತ್ತಾಳೆ ಎಂದು ಹೇಳಿದನು. ಆಗ ಅವು ನೀನು ನಮಗೆ ಇಷ್ಟು ಸಹಾಯ ಮಾಡಿದ್ದೀಯಾ. ನಿನಗೆ ನಾವು ಏನಾದರೂ ಸಹಾಯ ಮಾಡಬೇಕು ಎಂದು ಹೇಳಿದವು. ಮೊದಲಿಗೆ ಗಿಳಿಯು ಕಾಡಿನಲ್ಲಿರುವ ಋಷಿ ಜಪ ಮಾಡುವ ಸಮಯದಲ್ಲಿ ಮುನಿಯ ಉಂಗುರವನ್ನು ತೆಗೆದುಕೊಂಡು ಯಲ್ಲಪ್ಪನಿಗೆ ಕೊಟ್ಟಿತು. ಈ ಉಂಗುರದ ವಿಶೇಷತೆ ಏನೆಂದರೆ, ಆ ಉಂಗುರವನ್ನು ಬೆರಳಿಗೆ ಹಾಕಿಕೊಂಡು ಇಷ್ಟವಾದುದನ್ನು ಬೇಡಿಕೊಂಡರೆ ಅದೆಲ್ಲವು ಸಿಗುತ್ತಿತ್ತು. ಇದನ್ನು ಅರಿತ ಯಲ್ಲಪ್ಪನು ಉಂಗುರವನ್ನು ಬೆರಳಿಗೆ ಹಾಕಿಕೊಂಡು ದೇವರೆ, ನನಗೆ ಒಂದು ಅರಮನೆ ಬೇಕು ಮತ್ತು ಅದಕ್ಕೆ ಒಬ್ಬಳು ರಾಣಿ ಬೇಕು ಎಂದು ನುಡಿದ. ತಟ್ಟನೇ ಎಲ್ಲವೂ ಸಿದ್ಧಿಸಿತು. ಹೀಗೆ ಯಲ್ಲಪ್ಪನು ಸಂತೋಷದಿಂದ ರಾಣಿಯೊಂದಿಗೆ ಜೀವನ ನಡೆಸಿದ. ಒಂದು ದಿನ ಭಿಕ್ಷುಕನೊಬ್ಬ ಅರಮನೆಗೆ ಬಂದು ಅನ್ನ ಕೇಳಿದಾಗ ವಿವಿಧ ರೀತಿಯ ಭೋಜನವನ್ನು ತಕ್ಷಣವೆ ನೀಡಿದ. ಮತ್ತೊಂದು ದಿನ ಭಿಕ್ಷುಕ ಬಂದಾಗ ರಾಣಿಯ ಬಳಿ, ತಾಯೇ ನೀನು ದಿನೇದಿನೇ ತರತರಹದ ಭೋಜನ ಕೊಡುತ್ತಿಯಲ್ಲ. ಎಲ್ಲಿಯದಮ್ಮ ಎಂದು ಕೇಳಿದ. ಆಗ ರಾಣಿಯು ಇದೆಲ್ಲ ನನ್ನ ಗಂಡನದ್ದು ಪವಾಡ ಅವರ ಉಂಗುರದಿಂದ ಎಂದು ಹೇಳಿದಳು. ಭಿಕ್ಷುಕನು, ಅಮ್ಮ ಒಮ್ಮೆ ಆ ಉಂಗುರವನ್ನು ತೋರಿಸಿ, ನೋಡಿ ಆನಂದ ಪಡುತ್ತೇನೆ ಎಂದಾಗ ರಾಣಿಯು, ಇಲ್ಲ. ಅದು ಅವರ ಬೆರಳಲ್ಲಿರುತ್ತೆ ಎಂದು ಹೇಳಿ ಮತ್ತೆ ಒಂದು ದಿನ ತಂದು ಭಿಕ್ಷುಕನ ಕೈಲಿ ಕೊಡುತ್ತಾಳೆ. ಭಿಕ್ಷುಕ ಅದನ್ನು ತೆಗೆದುಕೊಂಡು ಓಡುವನು.

ನಂತರ ಯಲ್ಲಪ್ಪನ ಆಸ್ತಿ ತನಿಖೆಗೆ ಗುರಿಯಾಗುತ್ತದೆ. ಪೋಲೀಸರು ಯಲ್ಲಪ್ಪನನ್ನು ಜೈಲಿಗೆ ಹಾಕಿದರು. ವಿಚಾರಣೆ ಮುಂದುವರಿಯುತ್ತದೆ. ಇದನ್ನೆಲ್ಲಾ ಕಂಡು ಮಂಗವು ಆ ಭಿಕ್ಷುಕನ ಬೆರಳನ್ನು ಕತ್ತಿರಿಸಿ ಉಂಗುರ ತೆಗೆದುಕೊಂಡು ಬರುವಾಗ ಅದು ಜಾರಿ ಹೊಳೆಯಲ್ಲಿ ಬೀಳುತ್ತದೆ. ಹೊಳೆಯಲ್ಲಿರುವ ಮೀನು ಆ ಉಂಗುರವನ್ನು ನುಂಗಿತು.

ಯಲ್ಲಪ್ಪನ ವಿಚಾರಣೆ ನಡೆದು ಅವನನ್ನು ಒಬ್ಬ ಅಪರಾಧಿಯೆಂದು ನಿರ್ಧರಿಸಿ ಗಲ್ಲು ಶಿಕ್ಷೆಗೆ ಗುರಿಪಡಿಸುತ್ತಾರೆ. ಪೋಲೀಸರು ಯಲ್ಲಪ್ಪನ ಬಳಿ ಬಂದು ನೀನು ಹೇಗಾದರೂ ಗಲ್ಲಿಗೇರುವವನು. ನಿನ್ನ ಕೊನೆಯ ಆಸೆ ಏನು ಹೇಳು. ನಿನಗೆ ಇಷ್ಟವಾದ ಪದಾರ್ಥ ಹೇಳು, ಮಾಡಿಸುತ್ತೇನೆ ಎಂದು ಕೇಳಿದಾಗ ಯಲ್ಲಪ್ಪನು ಮೀನು ಎಂದು ಕೇಳಿದ. ಪೋಲೀಸರು ಹೊಳೆಯಲ್ಲಿನ ಮೀನು ತರಲು ತೆರಳಿದಾಗ ಆ ಉಂಗುರ ನುಂಗಿದ ಮೀನು ಬಲೆಗೆ ಸಿಗುತ್ತದೆ. ಪೋಲೀಸರು ಪದಾರ್ಥ ಮಾಡಿ ತಂದು ಕೊಟ್ಟಾಗ ಯಲ್ಲಪ್ಪನು ತಿನ್ನುವಾಗ ಆ ಉಂಗುರ ಸಿಗುತ್ತದೆ. ಆಗ ಯಲ್ಲಪ್ಪನಿಗೆ ಎಲ್ಲಿಲ್ಲದ ಸಂತೋಷವಾಗುತ್ತದೆ.

ನಂತರ ಆ ಉಂಗುರ ತೆಗೆದುಕೊಂಡು ಪುನಃ ಜಪ ಮಾಡಿ ದೇವರ ಬಳಿ ಹೀಗೆ ಬೇಡಿಕೊಳ್ಳುತ್ತಾನೆ.

ದೇವರೆ ನನಗೆ ನನ್ನದು ಎನ್ನುವುದಿಲ್ಲ. ಚಿರಕಾಲ ಉಳಿಯಬೇಕು. ಕಳೆದುಹೋದ ನನ್ನ ರಾಣಿ, ಅಜ್ಜಿ, ಹಾವು, ಗಿಳಿ, ಮಂಗ ಎಲ್ಲವೂ ನನಗೆ ಬೇಕು ಎಂದು ಬೇಡಿಕೊಂಡಾಗ ತಕ್ಷಣವೆ ಬೇಡಿಕೊಂಡದ್ದು ಸಿದ್ಧಿಸಿತು. ನಂತರ ಯಲ್ಲಪ್ಪ ರಾಣಿ, ಅಜ್ಜಿ, ಹಾವು, ಗಿಳಿ ಮತ್ತು ಮಂಗಗಳೊಂದಿಗೆ ಸಂತೋಷದಿಂದ ಜೀವನ ನಡೆಸುತ್ತಾನೆ.

ದುರ್ಜನಃ ಪರಿಹರ್ತವ್ಯೋ ವಿದ್ಯಯಾಲಂಕೃತೋಽಪಿ ಸನ್ ।
ಮಣಿನಾ ಭೂಷಿತಃ ಸರ್ಪಃ ಕಿಮಸೌ ನ ಭಯಂಕರಃ ॥

ವಿದ್ಯೆಯಿದ್ದರೂ ಕೂಡಾ ದುರ್ಜನನಾದರೆ ಆತನನ್ನು ಬಿಡುವುದೇ ಒಳಿತು. ಮಣಿಯಿಂದ ಅಲಂಕೃತವಾಗಿದ್ದರೂ ಸರ್ಪ ವಿಷದಿಂದಾಗಿ ಭಯಾನಕವಲ್ಲವೇ?

ಶ್ರಮಕ್ಕೆ ತಕ್ಕ ಪ್ರತಿಫಲ

– ವಿದ್ಯಾಶ್ರೀ
ದ್ವಿತೀಯ ಬಿ.ಎಸ್ಸಿ. 'ಬಿ'

ಒಂದೂರಲ್ಲಿ ಬಡವ ಹಾಗೂ ಶ್ರೀಮಂತನ ಕುಟುಂಬಗಳು ವಾಸವಿತ್ತು. ಬಡವನ ಮನೆಯವರು ತಮ್ಮ ಬಳಿ ಇರುವ ಕಡಿಮೆ ಜಾಗದಲ್ಲಿ ಹೊಲ ಅಥವಾ ಗದ್ದೆಯನ್ನು ಉತ್ತು ಬಿತ್ತನೆ ಆರಂಭಿಸುತ್ತಾರೆ. ಬಹಳ ಕಷ್ಟದಿಂದ ಅವರು ತಮ್ಮ ಜೀವನವನ್ನು ಸಾಗಿಸುತ್ತಾರೆ. ಆದರೆ ಅವರಿಗೆ ಕಷ್ಟಪಟ್ಟ ದುಡಿಮೆಯಿಂದ ಒಂದು ಹೊತ್ತು ಊಟ ಸಾಕಾಗುತ್ತಿತ್ತು. ಬಡವನ ಮನೆಯಲ್ಲಿ ಆತನ ಹೆಂಡತಿ ಹಾಗೂ ಮಗ ವಾಸವಾಗಿದ್ದರು. ವಾಸು ಬಹಳ ಚುರುಕಿನ ಹುಡುಗ ಓದಿನಲ್ಲೂ ಮುಂದಿದ್ದ ಹಾಗೆಯೇ ಆಟ, ಕೆಲಸ, ಕಾರ್ಯಗಳಲ್ಲೂ ತನ್ನನ್ನು ತೊಡಗಿಸಿಕೊಂಡಿದ್ದ.

ಶ್ರೀಮಂತನ ಮನೆಯಲ್ಲಿ ಆತನ ಹೆಂಡತಿ ಮತ್ತು ಆತನ ಪುತ್ರ ವಿಶ್ವ ವಾಸವಿದ್ದರು. ವಿಶ್ವ ಬಹಳಷ್ಟು ದಡ್ಡನಾಗಿದ್ದ. ಆತ ಬಹಳ ಸಿಡುಕು ಅಲ್ಲದೇ ದೊಡ್ಡವರನ್ನು ಗೌರವದಿಂದ ಕಾಣುತ್ತಿರಲಿಲ್ಲ.

ಆ ಊರಿನಲ್ಲಿ ಒಂದೇ ಶಾಲೆ ತೆರೆದಿತ್ತು. ವಾಸು ಹಾಗೂ ವಿಶ್ವ ಶಾಲೆಗೆ ಒಟ್ಟಿಗೆ ಹೋಗುತ್ತಿದ್ದರು. ಆದರೆ ವಿಶ್ವನಿಗೆ ಒಂದು ವಿಧದ ಅಹಂಕಾರ ಅಥವಾ ಗತ್ತು ಇತ್ತು. ತಾನೊಬ್ಬ ಶ್ರೀಮಂತ ಹುಡುಗ ಅದಲ್ಲದೇ ತನ್ನ ಬಳಿ ಬಹಳಷ್ಟು ಹಣ, ಆಸ್ತಿ ಇದೆ ಎಂದು ಹಿಗ್ಗುತ್ತಿದ್ದ. ಆದರೆ ವಾಸುವಿಗೆ ಯಾವುದರ ಆಸೆ ಇರಲಿಲ್ಲ. ಅವನ ಗುರಿ ತಾನು ಓದಿ ತನ್ನ ತಂದೆ ತಾಯಿಗೆ ಒಳ್ಳೆಯ ಕೀರ್ತಿ ತರುವಂತಾಗಿ, ಮೊದಲು ಅವರನ್ನು ಈ ಕಷ್ಟ ಎನ್ನುವ ಕೂಪದಿಂದ ಹೊರ ತರಬೇಕು ಎಂದು ಇತ್ತು. ಅಂತೆಯೇ ತಾನೊಬ್ಬ ದೊಡ್ಡ ಆಫೀಸರ್ ಆಗುವ ಕನಸು ಹೊತ್ತಿದ್ದ.

ವಿಶ್ವನಿಗೆ ಹಾಗಲ್ಲ, ಈ ಓದೆಲ್ಲಾ ಯಾಕೆ ತನ್ನ ತಂದೆ ಬಹಳಷ್ಟು ಮಾಡಿ ಇಟ್ಟಿದ್ದಾರೆ. ಇದನ್ನೇ ತಿಂದು ತೇಗಿ ಆರಾಮವಾಗಿ ಇರಬಹುದಲ್ಲಾ ಎಂದು ಯೋಚಿಸುತ್ತಿದ್ದ. ತುಂಬಾ ದಿನಗಳ ಬಳಿಕೆ, ಅಂದರೆ, ಅಂದಾಜು ವರ್ಷಗಳನ್ನೇ ಹಿಡಿಯೋಣ, ವಾಸು ತಾನು ಓದಿ ಒಬ್ಬ ಕೀರ್ತಿವಂತನಾಗಿ ಆತನ ಕನಸನ್ನು ಪೂರೈಸಿಕೊಂಡು ಮುನ್ನಡೆದು ಒಬ್ಬ ದೊಡ್ಡ ವ್ಯಕ್ತಿಯಾದ. ಅದಲ್ಲದೇ ಸಮಾಜಸೇವೆ ಕೂಡ ಮಾಡುತ್ತಾ ಹೋದ. ಇವನ ಬೆಳವಣಿಗೆ ಕಂಡು ಆತನ ಅಪ್ಪ–ಅಮ್ಮ ಬಹು ಸಂತಸಪಟ್ಟರು. ಅದಲ್ಲದೇ ಆತನ ಅಪ್ಪ–ಅಮ್ಮನಿಗೆ ಈತ ಐಶಾರಾಮಿ ಜೀವನ ಕಲ್ಪಿಸಿದ.

ಅಯ್ಯೋ, ಕಥೆ ಮುಗಿಯಿತೇ ಎಂದು ತಿಳಿಯಬೇಡಿ, ಇನ್ನೂ ಇದೆ.

ವಿಶ್ವ ತಾನು ಏನು ಸಾಧನೆ ಮಾಡಿಲ್ಲ, ಇದು ಆತನ ತಂದೆ–ತಾಯಿಗೆ ಬಹಳಷ್ಟು ಆತಂಕ ಮೂಡಿಸಿತು. ಅದಲ್ಲದೇ ವಿಶ್ವನಿಗೆ ಇನ್ನೊಬ್ಬರ ಕಷ್ಟ ಅರ್ಥವಾಗುವುದೇ ಇಲ್ಲ. ಏಕೆಂದರೆ ಇವನ ಪ್ರಕಾರ ತಂದೆ–ತಾಯಿ ಕಷ್ಟಪಟ್ಟಿಲ್ಲ. ಆತನ ತಂದೆ ತಾಯಿ ಕೂಡ ಕಷ್ಟಪಟ್ಟು ದುಡಿದು ಈಗ ಐಶಾರಾಮಿ ಜೀವನದಲ್ಲಿದ್ದಾರೆ. ಮಗನನ್ನು ಕಂಡ ಅವರು ಒಂದು ನಿರ್ಧಾರ ಕೈಗೊಳ್ಳುತ್ತಾರೆ. ಅವರು ಮಗನ ಬಳಿ ಒಂದು ಹೇಳುತ್ತಾರೆ, ಮಗನೇ ನಾವು ತಿರುಗಾಡಲು ಹೋಗೋಣ ಎಂದು ಕಾರಿನಲ್ಲಿ ಗಂಡ–ಹೆಂಡತಿ ಮಗ ಹೋಗುತ್ತಾರೆ. ಆದರೆ ಅವರೇ ಮಗನಿಗೆ ಪುನಃ ಐಶಾರಾಮಿ ಜೀವನ ತೋರಿಸುತ್ತಾರೆ ಎಂದೆನಿಸಿಕೊಳ್ಳಬೇಡಿ.

ಆ ತಂದೆ–ತಾಯಿ ಮಗನನ್ನು ಒಂದು ಹಳ್ಳಿಯ ಕಡೆ ಕರೆದುಕೊಂಡು ಹೋಗುತ್ತಾರೆ. ಹಳ್ಳಿಯ ಜನರ ಕಷ್ಟ ಅರ್ಥವಾಗಲೆಂದು ಹಳ್ಳಿಯ ಓರ್ವನ ಮನೆಯಲ್ಲಿ, ಒಂದು ವಾರ ವಾಸವಿರುತ್ತಾರೆ. ಆಗ ವಿಶ್ವ ಅಲ್ಲಿನ ಜನರ ಕಷ್ಟ ಹಾಗೂ ಅವರ ಬಡತನ ನೋಡಿ ಅವನು ಅತೀವ ದುಃಖಿ ಪಡುತ್ತಾನೆ. ಅಂತೆಯೇ, ತಂದೆ–ತಾಯಿ ಬಂದು ಮಗ ವಿಶ್ವನನ್ನು ಕರೆದು ಹೇಗಿತ್ತು ಟ್ರಿಪ್ ಎಂದಾಗ ಅವನು ಕಣ್ಣೀರನ್ನು ಸುರಿಸುತ್ತಾನೆ. ಅಂತೆಯೇ ಹೇಳುತ್ತಾನೆ.

ಅಪ್ಪಾ ನಮಗೆ ನಮ್ಮ ಮನೆಯಲ್ಲಿ ವಿದ್ಯುತ್ ಸೌಲಭ್ಯಗಳಿವೆ ಆದರೆ ಅವರಿಗೆ ಆಕಾಶದಲ್ಲಿರುವ ನಕ್ಷತ್ರಗಳೇ ಬೆಳಕಿನ ದೀಪ. ಹಾಗೆಯೇ ನಮಗೆ ಟೈಂಪಾಸ್ ಮಾಡಲು ಟಿವಿ, ಮೊಬೈಲ್‌ಗಳಿವೆ. ಆದರೆ ಅವರು ಅವರ ಕುಟುಂಬದವರ ಜೊತೆಗೆ ಕಾಲ ಕಳೆಯುತ್ತಾರೆ. ಅದಲ್ಲದೇ ನಾವು ಅಂಗಡಿಗಳಿಂದ ಸಾಮಾನು ತರಕಾರಿಗಳನ್ನು ತರುತ್ತೇವೆ. ಆದರೆ ಅದನ್ನು ಅವರು ಬೆಳೆಯುತ್ತಾರೆ.

ನಾವು ಜಂಕ್‌ಫುಡ್‌ಗಳನ್ನು ತಿಂದರೆ ಅವರು ಭುವಿಯಲ್ಲಿ ಬೆಳೆದ ಪರಿಶುದ್ಧ ಆಹಾರಗಳನ್ನೇ ತಿನ್ನುತ್ತಾರೆ.

ನಮ್ಮ ಮನೆ ದೊಡ್ಡದಾಗಿದೆ. ಅವರ ಮನೆ ಚಿಕ್ಕದಾದರೂ ಅವರು ಆ ಚಿಕ್ಕ ಮನೆಯಲ್ಲಿಯೇ ಬಹಳಷ್ಟು ಆನಂದದಿಂದ ಇದ್ದಾರೆ.

ಇದನ್ನು ಕೇಳಿದ ವಿಶ್ವನ ತಂದೆ–ತಾಯಿ ಆನಂದಭಾಷ್ಪವನ್ನು ಸುರಿಸುತ್ತಾರೆ. ಮತ್ತೆ ಮುಂದೆ ವಿಶ್ವನೂ ಕೂಡ ಕಷ್ಟ ಪಟ್ಟು ದುಡಿದು ಅದರ ಫಲಾನುಭವಿಸುತ್ತಾನೆ.

ಭೂತ ತಂದ ಆಪತ್ತು

– ಅನಂತರಾಜ್
ದ್ವಿತೀಯ ಬಿ.ಎ.

ಒಬ್ಬ ಗೆಳೆಯ, ಆತನಿಗೆ ಸಿನಿಮಾ ಹುಚ್ಚು. ಭೂತದ ಸಿನಿಮಾಗಳೆಂದರೆ ಪ್ರಾಣ. ಸಿನಿಮಾಗಳನ್ನು ಬಹಳ ಒಳಹೊಕ್ಕು ಅದನ್ನು ವಿಪರೀತವಾಗಿ ಪರಿಕಲ್ಪನೆಗಳೊಂದಿಗೆ ನೋಡುತ್ತಾನೆ. ಅಲ್ಲಿ ನಡೆಯುವಂತಹ ಸನ್ನಿವೇಶಗಳನ್ನು ತನ್ನ ಜೀವನದಲ್ಲಿ ತನ್ನವರನ್ನು ಆ ಒಂದು ಪಾತ್ರಕ್ಕೆ ಗುರುತಿಸಿ ಅಲ್ಲಿ ನಡೆಯುವ ಘಟನೆಗಳು ತನ್ನ ಜೀವನದಲ್ಲಿ ನಡೆದಂತೆ ಕನಸು ಕಾಣುತ್ತಾ ಇರುತ್ತಾನೆ, ಅದು ವಿಕೋಪಕ್ಕೆ ತೆರಳಿ ಅದರಲ್ಲಿಯೇ ತನ್ನ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ ಹೋಗುತ್ತಾನೆ. ಅದು ಆತನ ಅಂತ್ಯಕ್ಕೆ ಕಾರಣ ಆಗುವ ಮಟ್ಟಿಗೆ ಮುಂದುವರಿಯುತ್ತದೆ.

ಒಮ್ಮೆ ತಾನು ಕಂಡ ಒಂದು ಸಿನಿಮಾದಲ್ಲಿ ಒಂದು ಪಾತ್ರವು ತನ್ನ ಪ್ರೇಯಸಿಯನ್ನು ಮಾನಸಿಕ ಹಿಂಸೆ ನೀಡಿ ಸಾಯಿಸುವಂತಹ ದೃಶ್ಯವನ್ನು ನೋಡಿರುತ್ತಾನೆ. ಎಂದಿನಂತೆ ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವ ಕನಸು ಶುರುಮಾಡಲು ಯೋಚನೆ ಹೊಂದುತ್ತಾನೆ. ಆದರೆ ಆತನನ್ನು ಬಹಳ ಚೆಂದದ ಹಾಗೂ ಮುಗ್ಧ ಹುಡುಗಿ ಪ್ರೀತಿಸುತ್ತಿರುತ್ತಾಳೆ. ಆಕೆಯನ್ನು ಅಂತಹ ದೃಷ್ಟಿಯಲ್ಲಿ ಕಾಣುವುದು ಅವನ ಮನಸ್ಸಿಗೂ ಹಿಡಿಸದೆ ಆ ವಿಷಯದಿಂದ ಹೊರಬರಲು ಪ್ರಯತ್ನಿಸಿದ. ಆದರೆ ಯಾವತ್ತು ಆ ತರಹದ ಕಲ್ಪನೆಗಳಲ್ಲಿ ಮುಳುಗಿರುವವನಿಗೆ ತಡೆಯಲಾಗದೆ ಆ ವಿಚಾರವನ್ನು ಆಕೆಯ ಬಳಿ ಹಂಚಿಕೊಳ್ಳುತ್ತಾನೆ. ಮನೆಯಲ್ಲಿ ಒಪ್ಪಿಗೆ ಇದ್ದು ಮುಂದೆ ವಿವಾಹಕ್ಕೆ ಮುಂದಾಗಿದ್ದ ಜೋಡಿಯದು. ಭಯಗೊಂಡ ಹುಡುಗಿ ಮುಂದೆ ಆ ಘಟನೆ ತನ್ನ ಜೀವನದಲ್ಲಿ ನಡೆಯಬಹುದೆಂದು ಮನೆಯಲ್ಲಿ ವಿಷಯ ತಿಳಿಸಿದಳು. ಮನೆಯವರು ಬುದ್ಧಿಮಾತು ಹೇಳಿ ಸರಿದಾರಿಗೆ ತರುವಲ್ಲಿ ಪ್ರಯತ್ನಿಸಿದರು. ಗೆಳೆಯರು ಅವನ ಸಂಗ ತೊರೆದರು. ಅವನು ಒಬ್ಬಂಟಿಯಾದ. ತನ್ನ ಆ ಒಂದು ಯೋಚನೆ ಕೆಟ್ಟದ್ದು ಎಂದು ಎಲ್ಲರೂ ದೂಷಿಸಿದರೆಂದು ಮಾನಸಿಕ ಸ್ಥಿಮಿತ ಕಳೆದುಕೊಂಡ. ಆ ಹುಡುಗಿ ತನ್ನನ್ನು ತೊರೆದಳು ಎಂದ ಮೇಲೆ ಆ ನನ್ನ ಕಲ್ಪನೆ, ಆ ಸಿನಿಮಾ ಕಥೆಯೇ ನಿಜವಾಗಲಿ ಎಂದು ಕೆಟ್ಟ ನಿರ್ಧಾರಕ್ಕೆ ಬಂದನು. ಅದನ್ನು ತಿಳಿದ ಹುಡುಗಿ ತನ್ನ ಮನೆಯವರಲ್ಲಿ ತಿಳಿಸಿದಳು. ಆಕೆಯ ಮನೆಯವರು ಹುಡುಗನ ಮನೆಯಲ್ಲಿ ತಿಳಿಸಿದರು. ಮನೆಯವರು ಮಾಡುವ ಪ್ರಯತ್ನವನ್ನೆಲ್ಲಾ ಮಾಡಿ ವಿಫಲರಾದರು. ಇನ್ನು ದಾರಿಯಿಲ್ಲದೇ ಅವರು ಗುಟ್ಟಾಗಿ ಅವನ ಪ್ರಾಣವನ್ನು ತೆಗೆಯುವ ನಿರ್ಧಾರಮಾಡಿ ಅವನನ್ನು ಕೊಂದರು.

ಕಾಲ್ಪನಿಕ ಭೂತದ ಗುಂಗಿನಲ್ಲಿಯೇ ಮುಳುಗಿ ತನ್ನ ನಿಜಜೀವನವನ್ನೇ ಹಾಳು ಮಾಡಿಕೊಂಡು ಪ್ರಾಣವನ್ನೇ ಕಳೆದುಕೊಂಡ. ತೃಪ್ತಿ ಇಲ್ಲದ ಆತ್ಮವಾಗಿ ತಾನೆ ಕೊನೆಯಲ್ಲಿ ಭೂತವಾಗಿ ಹೋದ!

ವಜ್ರ ಹುಡುಕಲು ಹೋದವನು

ಸಂಗ್ರಹ – ಕೆ. ಜಿ. ಪ್ರತಿಮಾ ಆಚಾರ್ಯ
ಪ್ರಥಮ ಬಿ.ಕಾಂ.

ಒಂದಾನೊಂದು ಊರಿನಲ್ಲಿ ಸಾಬಾ ಮತ್ತು ಕರೀಮ್ ಎಂಬ ಇಬ್ಬರು ರೈತರಿದ್ದರು. ಇವರು ತಮ್ಮ ಪುಟ್ಟ ಜಮೀನುಗಳಲ್ಲಿ ಬೇಸಾಯ ಮಾಡಿ ಸುಖವಾಗಿ ಜೀವನ ನಡೆಸುತ್ತಿದ್ದರು.

ಒಂದು ದಿನ ಅವರಿಬ್ಬರೂ ಜೊತೆಯಾಗಿ ಪಟ್ಟಣಕ್ಕೆ ಹೋಗಿದ್ದರು. ಅಲ್ಲಿ ಮೂಸಾ ಎಂಬ ವರ್ತಕನೊಬ್ಬ ಅವರಿಗೆ ಭೇಟಿಯಾದ. ಅವನು ವಿಶ್ವದ ಅದ್ಭುತಗಳ ಬಗ್ಗೆ ಮಾತನಾಡುತ್ತ ಅವರಿಗೆ ವಜ್ರಗಳ ಕಥೆ ಹೇಳತೊಡಗಿದ.

ಇಲ್ಲಿಗೆ ನೂರು ಮೈಲು ದೂರದಲ್ಲಿ ನೈಲ್ ನದಿ ಹುಟ್ಟುವಲ್ಲಿ ಒಂದು ಬೆಟ್ಟ ಇದೆ. ವಜ್ರ ಎಂದರೆ ಹೊಳೆಯುವ ಕಲ್ಲು. ಒಂದು ಚಿಕ್ಕ ವಜ್ರ ಸಿಕ್ಕಿದರೂ ನಿಮ್ಮ ಬದುಕೇ ಬದಲಾಗುತ್ತದೆ. ಒಂದು ಗೋಧಿ ಕಾಳಿನ ಗಾತ್ರದ ವಜ್ರ ಸಿಕ್ಕಿದರೆ ಒಂದು ಹಳ್ಳಿಯನ್ನೇ ಖರೀದಿಸಬಹುದು. ಒಂದು ಮುಷ್ಠಿಯಷ್ಟು ದೊಡ್ಡ ವಜ್ರ ಸಿಕ್ಕಿದರೆ ನೀವು ಒಂದು ರಾಜ್ಯದ ಸುಲ್ತಾನನೇ ಆಗಬಹುದು ಎಂದು ಅವನು ಹೇಳಿದ.

ಅವನ ವರ್ಣನೆ ಕೇಳಿ ಕರೀಮ್‌ಗೆ ಆಸೆಯಾಯಿತು. ಅವನು ವಜ್ರಗಳನ್ನು ತರಲು ಹೋಗಬೇಕೆಂದು ನಿರ್ಧರಿಸಿದ. ಯಾತ್ರೆಯ ವೆಚ್ಚಕ್ಕಾಗಿ ತನ್ನ ಜಮೀನನ್ನು ಮಾರಲು ನಿಶ್ಚಯಿಸಿದ.

ಇಷ್ಟು ಫಲವತ್ತಾದ ಜಮೀನನ್ನು ಮಾರಬೇಡ ಎಂದು ಸಾಬಾ ಅವನನ್ನು ತಡೆಯಲು ಪ್ರಯತ್ನಿಸಿದ. ನನಗೆ ವಜ್ರ ಸಿಕ್ಕಿದಾಗ ಇದರ ಹತ್ತು ಪಟ್ಟು ಹೊಲ ಖರೀದಿಸುತ್ತೇನೆ. ಈಗ ನನಗೆ ಹಣ ಬೇಕು ಎಂದು ಕರೀಮ್ ಹಠ ಹಿಡಿದ. ಕೊನೆಗೆ ಸಾಬಾ ಆ ಜಮೀನನ್ನು ತಾನೇ ಖರೀದಿಸಿದ.

ಕರೀಮ್ ನೈಲ್ ನದಿ ಹುಟ್ಟುವ ಜಾಗಕ್ಕೆ ಹೋಗಿ ವಜ್ರಕ್ಕಾಗಿ ಹುಡುಕಾಟ ಆರಂಭಿಸಿದ. ಅವನಲ್ಲಿದ್ದ ಹಣವೆಲ್ಲ ಮುಗಿದು ಹೋಗಿತ್ತು.

ಮರಳಿ ಊರಿಗೆ ಹೋಗಲು ಅವನು ಸಿದ್ಧನಿರಲಿಲ್ಲ. ವಜ್ರ ಸಿಗದೆ ಅಲ್ಲಿಂದ ಮರಳಿ ಹೋಗಲಾರೆ ಎಂದು ನಿರ್ಧರಿಸಿದ.

ವಜ್ರಗಳು ಇಲ್ಲಿ ಸಿಗುವುದಿಲ್ಲ. ಇಲ್ಲಿಂದ ನೂರು ಮೈಲು ದೂರದ ಕಾಫಾ ಕಣಿವೆಯಲ್ಲಿ ಸಿಗುತ್ತದೆ ಎಂದು ಯಾರೋ ಅವನಿಗೆ ಹೇಳಿದರು. ಅವನು ಗಂಟುಮೂಟೆ ಕಟ್ಟಿಕೊಂಡು ಕಾಫಾ ಕಣಿವೆಗೆ ಹೋದ.

ಕರೀಮ್ ಸಾಬಾನಿಗೆ ಮಾರಿದ್ದ ಜಾಗ ಫಲವತ್ತಾಗಿತ್ತು. ಅದರ ನಡುವೆ ಒಂದು ಪುಟ್ಟ ತೊರೆ ಹರಿಯುತ್ತಿತ್ತು. ಅದರ ನೀರನ್ನು ತನ್ನ ಹೊಲಕ್ಕೂ ಸಾಗಿಸಬೇಕೆಂದು ಸಾಬಾ ಕಾಲುವೆ ತೋಡಲು ಅಲ್ಲಿಗೆ ಹೋದ. ನದಿ ತೀರದಲ್ಲಿ ಏನೋ ಹೊಳೆಯುವುದು ಕಣಿಸಿತು. ಅದೊಂದು ಹೊಳೆಯುವ ಕಲ್ಲಾಗಿತ್ತು. ಅತ್ತಿತ್ತ ನೋಡಿದಾಗ ಅಂತಹ ಇನ್ನೂ ಕೆಲವು ಕಲ್ಲುಗಳು ಅವನಿಗೆ ಸಿಕ್ಕಿದವು.

ಅವನು ಒಂದು ಹೊಳೆಯುವ ಕಲ್ಲನ್ನು ಹಿಡಿದುಕೊಂಡು ಪಟ್ಟಣಕ್ಕೆ ಹೋದ. ವ್ಯಾಪಾರಿ ಮೂಸಾನಿಗೆ ಅದನ್ನು ತೋರಿಸಿದ. ಅದನ್ನು ನೋಡುತ್ತಲೇ ಊಸಾ ಆಶ್ಚರ್ಯದಿಂದ ದಂಗಾದ. ಇದೇ ನಾನು ಹೇಳುತ್ತಿದ್ದ ವಜ್ರ. ಇದು ನಿನಗೆ ಎಲ್ಲಿ ಸಿಕ್ಕಿತು? ಎಂದು ವಿಚಾರಿಸಿದ.

ನನ್ನ ಹೊಲದಲ್ಲೇ ಸಿಕ್ಕಿತು ಎಂದ ಸಾಬಾ. ಮೂಸಾ ಸಾಬಾನನ್ನು ತನ್ನ ಪರಿಚಯದ ಒಬ್ಬ ವಜ್ರದ ವ್ಯಾಪಾರಿಯ ಬಳಿಗೆ ಕರೆದೊಯ್ದ. ಅವನು ಅದನ್ನು ಪರೀಕ್ಷಿಸಿ ಸಾಬಾನಿಗೆ ಭಾರೀ ಮೊತ್ತದ ಹಣ ಕೊಟ್ಟ. ಈ ಹಣದಿಂದ ಸಾಬಾ ಹೊಸ ಮನೆ ಕಟ್ಟಿಸಿದ. ಕೆಲವು ಹೊಲಗಳನ್ನು ಖರಿದಿಸಿ ಊರಿನ ದೊಡ್ಡ ಜಮೀನ್ದಾರನಾದ.

ಅವನು ಉಳಿದ ವಜ್ರಗಳನ್ನು ಮಾರಲಿಲ್ಲ. ಪಾಪ ನನ್ನ ಗೆಳೆಯನಿಗೂ ಇದರಲ್ಲಿ ಪಾಲು ಸೇರಬೇಕು ಎಂದು ಅವನು ಯೋಚಿಸುತ್ತಿದ್ದ. ಆದರೆ ಕರೀಮ್ ತನ್ನೂರಿಗೆ ಮರಳಿ ಬರಲೇ ಇಲ್ಲ. ಅವನು ತನ್ನ ಹೊಲದಲ್ಲೇ ಇದ್ದ ವಜ್ರಗಳನ್ನು ಬಿಟ್ಟು ಜೀವಮಾನ ಇಡೀ ಅವುಗಳನ್ನು ಅರಸುತ್ತ ಎಲ್ಲೋ ಊರೂರು ತಿರುಗುತ್ತಿದ್ದ!

ಆಸೆಯೇ ದುಃಖಕ್ಕೆ ಮೂಲ

ಸಂಗ್ರಹ – ಸ್ವಾತಿ
ಪ್ರಥಮ ಬಿ.ಎಸ್ಸಿ.

ಅದೊಂದು ಹಳ್ಳಿಯ ಪ್ರದೇಶ. ಆ ಹಳ್ಳಿಯಲ್ಲಿ ದಟ್ಟವಾದ ಅರಣ್ಯಗಳು. ಅಲ್ಲಿ ಒಂದೊಂದು ಮನೆ ಹುಡುಕಬೇಕಾದರೆ ಒಂದು ಅರಣ್ಯ ದಾಟಿ ಇನ್ನೊಂದು ಕಡೆ ಹೋಗಬೇಕು. ಕಾಡು ಪ್ರಾಣಿಗಳ ಹಾವಳಿ ಬೇರೆ. ಆ ಹಳ್ಳಿಯಲ್ಲಿ ವಾಸವಿತ್ತು ರಾಮಯ್ಯ ಹಾಗೂ ಆತನ ಸಂಸಾರ. ರಾಮಯ್ಯ ತುಂಬಾ ಕುಡುಕ. ಅವನ ಹೆಂಡತಿ ಮೀನಾಕ್ಷಿ ತುಂಬಾ ಜಿಪುಣೆ. ಆಸ್ತಿ, ಒಡವೆ, ಹಣಕ್ಕಾಗಿ ಏನು ಬೇಕಾದರೂ ಮಾಡುತ್ತಾಳೆ. ಗಂಡ–ಹೆಂಡತಿಯ ಈ ಪರಿಸ್ಥಿತಿಯಿಂದ ಇವರ ಇಬ್ಬರು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರಲಿಲ್ಲ. ಮೀನಾಕ್ಷಿ ತನ್ನ ಮಗನಿಗೆ 10 ವರ್ಷ ತುಂಬುತ್ತಿದ್ದಂತೆ ಆತನನ್ನೇ ದೂರದ ಪ್ರದೇಶಕ್ಕೆ ಬಾಲಕಾರ್ಮಿಕನಾಗಿ ದುಡಿಯಲು ಕಳುಹಿಸಿದಳು. ಮಗ ಶರಣ್ ಕೆಲಸದ ಮನೆಯಲ್ಲಿ ಅನುಭವಿಸಲಾರದ ಕಷ್ಟಗಳನ್ನು ಅನುಭವಿಸಿದ. ಆತ ದುಡಿದ ಹಣ ಮಾತ್ರ ಆತನ ತಾಯಿಗೆ ಸೇರುತ್ತಿತ್ತು. ಆತನಿಗೆ ಮನೆಗೆ ಬರಲು ದಾರಿ ತೋರಲಿಲ್ಲ. ಆತನನ್ನು ನೋಡಲು ಮನೆಯವರ್ಯಾರೂ ಬರಲಿಲ್ಲ. ಹೀಗಾಗಿ ರಾತ್ರೋರಾತ್ರಿ ಆ ಮನೆಯಿಂದ ತಪ್ಪಿಸಿಕೊಂಡು ಅಲ್ಲಿಂದ ಹೊರಟೇ ಬಿಟ್ಟ. ಮಗಳು ಜಾನಕಿ ಹೆಣ್ಣು ಎಂಬ ಕಾರಣಕ್ಕಾಗಿ ಅವಳನ್ನೂ ಮನೆಯಲ್ಲಿಯೇ ಇರಿಸಿಕೊಂಡಿದ್ದರು. ಮನೆಯ ಎಲ್ಲಾ ಕೆಲಸವನ್ನು ಆಕೆಯೇ ಮಾಡಬೇಕಾಗಿತ್ತು.

ಶರಣ್ ಈಗ ಬೆಳೆದು ದೊಡ್ಡವನಾಗಿದ್ದ. ಆತ ಈಗ ದೊಡ್ಡ ಪಟ್ಟಣದಲ್ಲಿ ಒಂದು ಕಂಪೆನಿಯಲ್ಲಿ ಕೆಲಸದಲ್ಲಿದ್ದಾನೆ. ಕೈತುಂಬಾ ಸಂಬಳ. ಬೇಕಾದ್ದನ್ನು ಮಾಡಿಕೊಂಡಿದ್ದಾನೆ. ಆದರೆ ಒಂದೇ ಒಂದು ಕೊರತೆ, ತಂದೆ ತಾಯಿ ಹಾಗೂ ಅಕ್ಕ ಇಲ್ಲ ಎಂಬುದು.

ಒಂದು ದಿನ ರಾಮಯ್ಯನ ಮನೆಗೆ ಯಾರೋ ಒಬ್ಬ ದಾರಿಹೋಕ ಬಂದಿದ್ದ. ಅದು ಕತ್ತಲಿನ ವೇಳೆಗೆ. ಮೀನಾಕ್ಷಿ ಜಿಪುಣೆಯಾಗಿದ್ದರೂ ಆತನನ್ನು ಒಳಗೆ ಕರೆದು ಅತಿಥಿ ಸತ್ಕಾರ ಮಾಡಿದಳು. ಆತ ಯಾರೆಂದು ತಿಳಿಯಲಿಲ್ಲ. ಆತನ ಕೈಬೆರಳುಗಳಲ್ಲಿ ಚಿನ್ನದ ಉಂಗುರಗಳು, ಕೈಯಲ್ಲಿ ಚಿನ್ನದ ವಾಚ್ ಹಾಗೂ ಕತ್ತಲ್ಲಿ ಚಿನ್ನದ ಸರ ಇತ್ತು. ಆತನಿಗೆ ರಾತ್ರಿ ಊಟ ಬಡಿಸಿ ಅವರ ಮನೆಯಲ್ಲೇ ಮಲಗುವಂತೆ ಹೇಳಿದಳು. ಮೀನಾಕ್ಷಿ ತನ್ನ ಗಂಡ ಬಂದೊಡನೆ ದಾರಿಹೋಕ ಬಂದಿರುವ ವಿಷಯ ತಿಳಿಸಿದಳು. ಮೀನಾಕ್ಷಿ ಆಸೆಬುರುಕಿ ಆಗಿದ್ದರಿಂದ ಸ್ವಲ್ಪ ಆಸೆ ಹೆಚ್ಚಾಯಿತು. ಆತನನ್ನು ಕೊಲೆ ಮಾಡಿ ಆತನ ಒಡವೆ ಪಡೆದುಕೊಂಡರೆ ನಾವು ಶ್ರೀಮಂತರಾಗಬಹುದು ಎಂದು ತಿಳಿದುಕೊಂಡು ಈ ವಿಷಯವನ್ನು ತನ್ನ ಗಂಡನಲ್ಲಿ ತಿಳಿಸಿದಳು. ರಾಮಯ್ಯ ಆ ದಿನ ಸ್ವಲ್ಪ ಕುಡಿದಿದ್ದ. ಶ್ರೀಮಂತಿಕೆ ಬಂದರೆ ಯಾರೂ ಬೇಡ ಅನ್ನುತ್ತಾರೆ. ದಿನವೂ ದುಡಿವ ಅವಶ್ಯಕತೆ ಇಲ್ಲ ಎಂದು ತಿಳಿದು, ಒಪ್ಪಿಕೊಂಡು ಕೂಡಲೆ ಅಲ್ಲೇ ಸ್ವಲ್ಪ ದೂರದಲ್ಲಿದ್ದ ಶಾಮಯ್ಯನನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿ ಹೊರಟ. ಈ ವಿಷಯ ಆತನ ಮಗಳಿಗೆ ತಿಳಿದಿರಲಿಲ್ಲ. ರಾಮಯ್ಯ ತನ್ನ ಗೆಳೆಯ ಶಾಮಯ್ಯನ ಮನೆಗೆ ಹೋಗಿ ಎಲ್ಲಾ ವಿಷಯ ತಿಳಿಸಿದ. ಇದನ್ನು ಕೇಳಿದ ಶಾಮಯ್ಯ, ಆತ ನಿನ್ನೆ ನಮ್ಮ ಮನೆಗೂ ಬಂದಿದ್ದ. ಆಗ ನೀನು ಯಾರು ಎಂದು ಕೇಳಿದಾಗ, ನಾನು ರಾಮಯ್ಯ ಹಾಗೂ ಮೀನಾಕ್ಷಿಯವರ

ಮಗ. ನನಗೆ ಒಬ್ಬಳು ಜಾನಕಿ ಎಂಬ ತಂಗಿ ಇದ್ದಾಳೆ. ನಾನು ಅವರನ್ನು ಹುಡುಕುತ್ತಾ ಬಂದಿದ್ದೇನೆ. ನಾನೀಗ ಶ್ರೀಮಂತನಾಗಿದ್ದೇನೆ. ಅವರನ್ನು ಪಟ್ಟಣಕ್ಕೆ ಕರೆದುಕೊಂಡು ಹೋಗಲು ಬಂದಿದ್ದೇನೆ ಎಂದ. ನಾನೇ ಅವನಿಗೆ ನಿಮ್ಮ ಮನೆಯವರೆಗೆ ದಾರಿ ತೋರಿಸಿ ಬಂದೆ ಎಂದು ಶಾಮಯ್ಯ ರಾಮಯ್ಯನಲ್ಲಿ ಹೇಳಿದ. ರಾಮಯ್ಯ ಅಲ್ಲಿಂದ ಒಂದೇ ಸಮನೆ ಮನೆಗೆ ಓಡಿ ಬಂದ. ವಿಷಯ ತಿಳಿಯುವುದರ ಮೊದಲೇ ಮೀನಾಕ್ಷಿ ಆಸೆ ತಡೆಯಲಾರದೆ ಆತನನ್ನು ಕೊಂದು ಬಿಟ್ಟಿದ್ದಳು. ಇದನ್ನು ಕಂಡ ರಾಮಯ್ಯ ಅಯ್ಯೋ! ಎಂದು ಕೂಗಿದ. ಮೀನಾಕ್ಷಿ ಆತನ ಒಡವೆಗಳನ್ನೆಲ್ಲ ಎತ್ತಿ ಜೋಪಾನವಾಗಿ ತೆಗೆದಿಟ್ಟು ಶ್ರೀಮಂತಿಕೆಯ ಕನಸು ಕಾಣುತ್ತಿದ್ದಳು. ಕೂಡಲೇ ಓಡಿ ಬಂದ ಶಾಮಯ್ಯ ಎಲ್ಲಾ ವಿಷಯವನ್ನು ಮೀನಾಕ್ಷಿಗೆ ತಿಳಿಸಿದ. ಮೀನಾಕ್ಷಿ ಒಂದೇ ಸಮನೆ ಗರ ಬಡಿದವಳಂತೆ ನಿಂತು ಬಿಟ್ಟಳು. ಮಗ ಎಂಬುದನ್ನು ತಿಳಿಯದೆ ಆಸೆಗಾಗಿ ಕೊಂದೆನಲ್ಲ ಎಂದು ಪಶ್ಚಾತ್ತಾಪ ಪಟ್ಟಳು.

ಕಳೆದುದು ಸಿಕ್ಕಿದಾಗ

(ಹೊಸದಿಗಂತ ಪತ್ರಿಕೆಯ ದೀಪಾವಳಿ ವಿಶೇಷಾಂಕದ 'ಕಳೆದುದು ಸಿಕ್ಕಿದಾಗ' ಕಥಾ ಸ್ಪರ್ಧೆಯಲ್ಲಿ ಆಯ್ಕೆಗೊಂಡ ಲೇಖನ.)

– ಪಂಚಮಿ ಕಾಮತ್
ತೃತೀಯ ಬಿ.ಎ.

ನನ್ನ ಬಳಿಯಲ್ಲಿ ಒಂದು ಸುಂದರವಾದ ಕೈಗಡಿಯಾರವಿತ್ತು. ಅದು ಯಾವ ರೀತಿ ಕಳೆದುಹೋಗಿ ನನ್ನ ಕೈಗೆ ಸಿಕ್ಕಿತು ಎಂಬುದರ ಕುರಿತಾಗಿ ಈ ಲೇಖನ.

ನನ್ನ ಸೋದರಮಾವ ಒಮ್ಮೆ ಹೈದರಾಬಾದ್‌ನಿಂದ ಸುಂದರವಾದ ಆಕರ್ಷಕವಾದ ಕೈಗಡಿಯಾರ / ವಾಚ್‌ನ್ನು ನನಗಾಗಿ ತಂದಿದ್ದರು. ಅದರ ವಿಶೇಷತೆ ಏನೆಂದರೆ ಅದಕ್ಕೆ ಅನುಗುಣವಾಗಿ ಬಣ್ಣ–ಬಣ್ಣದ ಬೆಲ್ಟ್‌ಗಳು ಹಾಗೂ ವಿವಿಧ ವಿನ್ಯಾಸದ ರಿಂಗ್‌ಗಳು ಇದ್ದವು. ನಾವು ಧರಿಸುವ ಉಡುಪಿಗೆ ಒಪ್ಪುವಂತೆ ಅದನ್ನು ಬದಲಿಸಿ ಧರಿಸಬಹುದಾಗಿತ್ತು. ಆ ವಾಚು ನನಗೆ ಕೊಡಮಾಡಿದ್ದು ನಾನು 8ನೇ ತರಗತಿಯಲ್ಲಿದ್ದಾಗ. ನನ್ನ ಮನೆ ಶಾಲೆಯಿಂದ ದೂರ ಇದ್ದುದರಿಂದ ಶಾಲಾ ವ್ಯಾನಿನಲ್ಲೇ ಹೋಗಿ ಬರುತ್ತಿದ್ದೆ.

ಅದೊಂದು ದಿನ ನಾನು ಹೊಸ ವಾಚು ತೊಟ್ಟು ವ್ಯಾನ್‌ಗಾಗಿ ಕಾಯುತ್ತಿದ್ದೆ. ಶಾಲೆ ಬಂತೆಂದು ವ್ಯಾನಿನಿಂದ ಕೆಳಗಿಳಿಯುವಾಗ ಯಾಕೋ ನನ್ನ ಕೈ ಬೋಳುಬೋಳಾದಂತೆ ಅನಿಸಿತು. ಹೀಗೇಕೆಂದು ನೋಡಿದರೆ ಕೈಯಲ್ಲಿದ್ದ ವಾಚ್ ಇರಲಿಲ್ಲ. ಇದರಿಂದ ನಾನು ಗಾಬರಿಗೊಂಡೆ. ಎಲ್ಲಿ ಹಾಗೂ ಹೇಗೆಂದು ಹುಡುಕುವುದು ಎಂದು ಆಲೋಚಿಸಿದೆ. ಮನೆಯಲ್ಲಿ ಈ ವಿಷಯ ಗೊತ್ತಾದರೆ ನನ್ನನ್ನು ಮುಗಿಸಿಯೇ ಬಿಡುತ್ತಾರೆಂದುಕೊಂಡೆ. ಮತ್ತೇನು ಮಾಡಲಿ? ಶಾಲೆಯ ವಠಾರದಲ್ಲಿ ವ್ಯಾನ್ ನಿಂತ ಜಾಗದಲ್ಲಿ ಎಲ್ಲಾ ಕಡೆ ತಡಕಾಡಿದರೂ ಸಿಗದೆ ನಿರಾಶಳಾದೆ.

ತರಗತಿಗಳು ಮುಗಿದ ನಂತರ ನಾನು ಗೆಳತಿಯರೊಂದಿಗೆ ವ್ಯಾನ್ ಬರುವ ಹಾದಿಯನ್ನು ನೋಡುತ್ತಿದ್ದೆ. ಅವರಲ್ಲಿಯೂ ಇದರ ಬಗ್ಗೆ ಹೇಳಿದೆ. ವ್ಯಾನ್ ಬರುವವರೆಗೂ ನಾವೆಲ್ಲಾ ಸೇರಿ ಹುಡುಕಿದರೂ ಸಿಗಲಿಲ್ಲ. ಎಷ್ಟರ ಮಟ್ಟಿಗೆ ಅಂದರೆ ವ್ಯಾನ್‌ನ ಡ್ರೈವರ್‌ರಲ್ಲಿಯೂ ನನ್ನ ವಾಚನ್ನು ಹುಡುಕುವಂತೆ ಕೇಳಿಕೊಂಡೆ. ಮನೆಗೆ ಬಂದ ತಕ್ಷಣ ಮನಸ್ಸಲ್ಲಿ ಒಂದೇ ಚಿಂತೆ. ಈ ವಿಷಯ ಮನೆಯಲ್ಲಿ ಹೇಗೆ ಹೇಳುವುದು ಎಂದು. ಹೇಳಿದರೂ ಬೈಗುಳ ಕೇಳಬೇಕು ಎಂಬ ಗಾಬರಿ. ಕೊನೆಗೆ ಹೇಗೋ ಧೈರ್ಯ ತಂದುಕೊಂಡು ಅಮ್ಮನಲ್ಲಿ ವಿಷಯ ಹೇಳಿದೆ. ಆಗ ಅಮ್ಮನಿಂದ ಅಪೇಕ್ಷಿಸಿದಷ್ಟೇ ಬೈಗುಳ ಸಿಕ್ಕಿತು. ಇನ್ನೇನು ಮಾಡಲಿ? ಸುಮ್ಮನೆ ಬೈಗುಳಗಳ ಸುರಿಮಳೆಯನ್ನು ಕೇಳುತ್ತಲಿದ್ದೆ. ಹಾಗೆಯೇ ದಿನಗಳು ಉರಿಳಿದವು.

ನನ್ನ ಪಾಲಿನ ಅದೃಷ್ಟದ ಬಾಗಿಲು ತೆರೆಯಿತು. ಒಂದು ದಿನ, ಘಟನೆಯ ಒಂದು ವಾರದಲ್ಲೇ ಆ ನನ್ನ ಪ್ರೀತಿಯ ವಾಚಿನ ಮಣಿಯುಕ್ತವಾದ ರಿಂಗೊಂದು ರಸ್ತೆಯಲ್ಲಿ ಫಳಫಳನೆ ಹೊಳೆಯುತ್ತಿತ್ತು. ಅದೂ ವ್ಯಾನಿನಿಂದ ಇಳಿಯುವಾಗಲೇ, ಅದೂ ಶಾಲಾವಠಾರದಲ್ಲಿಯೇ. ಇದರಿಂದ ಉಂಟಾದ ಸಂತೋಷ ಸ್ವಲ್ಪವಲ್ಲ. ಆ ರಿಂಗ್‌ನ ಸುಳಿವಿನ ಬಗ್ಗೆ ಗೆಳತಿಯರಿಗೂ, ತಂದೆ ತಾಯಿಗೂ ಹೇಳಿದೆ. ಎರಡು ದಿನ ಬಿಟ್ಟು ಶಾಲೆಯ ಆಫೀಸಿನಲ್ಲಿ ಸ್ವಲ್ಪ ಕೆಲಸ ಇದ್ದುದರಿಂದ ಅಲ್ಲಿ ಭೇಟಿ ನೀಡಿದಾಗ, ಅಲ್ಲಿಯ ಸಿಬ್ಬಂದಿಯಲ್ಲಿ ನನ್ನ ವಾಚ್‌ನ ಬಗ್ಗೆ ವಿಚಾರಿಸಿದೆ. ಅವರು ಒಂದು ಪುಟ್ಟ ಕವರಿನಲ್ಲಿ ಹಾಕಿದ್ದ ವಾಚ್‌ನ್ನು ತೆಗೆದು ತೋರಿಸಿ, ಇದೇಯಾ ನಿನ್ನ ವಾಚ್ ಎಂದು ಕೇಳಿದಾಗ ಅದು ನನಗೆ ಚಮತ್ಕಾರದಂತೆಯೇ ಅನಿಸಿತು. ಏನು ಹೇಳಬೇಕು ಎಂದು ತೋಚದೆ ಅದನ್ನು ಸ್ವೀಕರಿಸಿ ಅವರಿಗೆ ಧನ್ಯವಾದ ತಿಳಿಸಿದಾಗ, ಅವರೆಂದರು, ನಿಜವಾದ ಧನ್ಯವಾದವನ್ನು ವಾಚ್‌ನ್ನು ನಿಯತ್ತಾಗಿ ಆಫೀಸಿಗೆ ತಂದುಕೊಟ್ಟ ವಿದ್ಯಾರ್ಥಿಗೇ ತಿಳಿಸಬೇಕು ಎಂದರು. ಆ ಮಾತನ್ನು ಕೇಳಿ ನಾನು ಆ ಪ್ರಾಮಾಣಿಕ ವಿದ್ಯಾರ್ಥಿಗೆ ಮನದಲ್ಲೇ ಧನ್ಯವಾದ ಸಲ್ಲಿಸಿ ಈ ಬಗ್ಗೆ ಮನೆಯಲ್ಲಿಯೂ ತಿಳಿಸಿ ಸಂಭ್ರಮಿಸಿದೆ.

ನೆನಪೆಂಬ ಸಾಗರದಲ್ಲಿ ಅಲೆಗಳು ಬಂದಪ್ಪಳಿಸಿದಾಗ...

– ನಾಗಲಕ್ಷ್ಮೀ
ದ್ವಿತೀಯ ಬಿ.ಎಸ್ಸಿ.

ಕಡಲು ತನ್ನೊಡಲಿನ ಅಲೆಗಳನ್ನು ತೀರದ ಬಂಡೆಗಳಿಗೆ ಆಲಿಂಗನ ಮಾಡಲು ಬಿಟ್ಟು ತಾನು ಸೂರ್ಯನಿಗೆ ಆ ದಿನದ ವೃತ್ತಿಗೆ ವಿದಾಯ ಕೊಡಿನಿ, ವಿಶ್ರಾಂತಿಗೆ ಕಳುಹಿಸಿ ಕೊಡಲು ಸಿದ್ಧವಾಗಿತ್ತು ಆ ಸಂಜೆ.

ಕೆಲವು ಹೃದಯಗಳು ತಾವು ಪ್ರೀತಿಸೋ ಹೃದಯಗಳೊಂದಿಗೆ ವಿಹಾರ ಮಾಡುತ್ತಿದ್ದರೆ, ಇನ್ನೂ ಕೆಲವು ಹೃದಯಗಳು ತಮ್ಮನ್ನು ತೊರೆದು ಹೋದ ಹೃದಯಗಳ ಬಗ್ಗೆ ಯೋಚಿಸುತ್ತಾ ತೀರದಲ್ಲಿ ಅಲೆಯುತ್ತಿದ್ದವು. ಮುಗ್ಧ ಹೃದಯಗಳು ತೀರದಲ್ಲಿ ತುಂಟಾಟ ಮಾಡುತ್ತಾ, ನಲಿಯುತ್ತಾ ತಮ್ಮ ಬಾಲ್ಯವನ್ನು ಸವಿಯುತ್ತಿದ್ದವು.

ಇದು ಯಾವುದರ ಪರಿವಿಲ್ಲದೆ ಸಾಗರವು ತನ್ನಷ್ಟಕ್ಕೆ ತನ್ನ ರಮಣೀಯತೆಯನ್ನು ಯಾವ ಹೃದಯಕ್ಕೂ ಬೇಸರವಾಗದಂತೆ ಅತ್ಯಂತ ಮನೋಹರವಾಗಿ ನೀಡುತ್ತಿತ್ತು.

ಇತ್ತ ಸಾಗರ ಅಲೆಗಳನ್ನು ನೋಡುತ್ತಾ, ನೆನಪಿನಾಳಕ್ಕೆ ಇಳಿದು ಬಿಟ್ಟಳು ಸುರಭಿ. ಹೌದು, ಅವತ್ತು ಕೂಡಾ ಸಂಜೆ ಹೀಗೇನೇ ಇತ್ತು. ಸುರಭಿ ಶರತ್‌ನೊಂದಿಗೆ ತಮ್ಮ ಮುಂದಿನ ಜೀವನದ ಕುರಿತು ಆಲೋಚಿಸುತ್ತಾ ತೀರದಲ್ಲಿ ದಿಗಂತದತ್ತ ನೋಟವನ್ನಿಟ್ಟು ಸಾಗುತ್ತಿದ್ದಳು. ಆದರೆ ಭವಿಷ್ಯದ ಬಗ್ಗೆ ಚಿಂತಿಯೇ ಇಲ್ಲದಂತೆ ಶರತ್, ಅವಳೊಂದಿಗೆ ತುಂಟಾಟಿಕೆಯನ್ನು ಮಾಡುತ್ತ ಜೋಡಿಹಕ್ಕಿಯಂತೆ ಅವಳನ್ನು ಹಿಂಬಾಲಿಸುತ್ತಿದ್ದನು. ಯೋಚನಾಮಗ್ನಳಾದ ಸುರಭಿಯು ಇವನ ತುಂಟಾಟಿಕೆಗೆ ನಿಧಾನದಲ್ಲಿಯೇ ಪ್ರತ್ಯುತ್ತರಗಳನ್ನು ನೀಡುತ್ತಿದ್ದಳು.

ಆದರೆ.....ಶರತ್‌ನೊಂದಿಗೆ ಸುರಭಿಯ ಸಾಗರ ತೀರದ ವಿಹಾರ ಅಂದೇ ಕೊನೆಯಾಗಿತ್ತು. ಸುರಭಿ ದಕ್ಷಿಣ ಕನ್ನಡದ ಹುಡುಗಿಯಾಗಿದ್ದರೂ ಹುಟ್ಟಿ ಬೆಳೆದದ್ದು ಮುಂಬೈನಲ್ಲಿ. ತಂದೆ ಅಂಗಡಿ ವ್ಯಾಪಾರಿ, ತಾಯಿ ಟೈಲರ್. ಸುರಭಿ ಒಂಭತ್ತನೆಯ ತರಗತಿಯಲ್ಲಿರುವಾಗ ಅವಳ ತಂದೆ ರೋಗಪೀಡಿತರಾಗಿ, ವ್ಯಾಪಾರ ಮುಂದುವರಿಸಲಾರದೆ ಅಂಗಡಿಯನ್ನು ಒಬ್ಬ ಶೇಟ್‌ಗೆ ಮಾರಿ ತಮ್ಮ ಹುಟ್ಟೂರಾದ ಪಣಂಬೂರಲ್ಲಿ ಬಂದು ನೆಲೆಸಿದರು. ಮಂಗಳೂರಿನಲ್ಲಿ ಪದವಿ ಶಿಕ್ಷಣವನ್ನು ಪೂರೈಸಿದ ಸುರಭಿ ಖಾಸಗಿ ಸಂಸ್ಥೆಯೊಂದರಲ್ಲಿ ಬ್ರಾಂಚ್ ಮ್ಯಾನೇಜರ್ ಹುದ್ದೆಗೆ ನೇಮಕಗೊಂಡಳು. ತಂದೆಯು ಅನಾರೋಗ್ಯದಿಂದ ತೀರಿಕೊಂಡರು. ತಾಯಿ ಮಗಳಿಗೆ ಆಸರೆ ಆದರು. ಇವರ ಕುಟುಂಬಕ್ಕೆ ತಾನಾಗಿಯೇ ಬಂದವನು ಶರತ್.

ಶರತ್ ಮೂಲತ ಮಂಗಳೂರಿನವನಾಗಿದ್ದು ಖಾಸಗಿ ಬ್ಯಾಂಕಿನಲ್ಲಿ ಪ್ರತಿಷ್ಠಿತ ಹುದ್ದೆಯಲ್ಲಿದ್ದ. ಸಿರಿತನದಿಂದಲೇ ಬಂದ ಶರತ್‌ನಿಗೆ ಸುಮಾರು 20 ಎಕರೆ ಜಾಗ, ಆಸ್ತಿ–ಪಾಸ್ತಿಗಳು ಇತ್ತು. ಶರತ್‌ನ ತಂದೆ ರಾಘವ್ ಮತ್ತು ತಾಯಿ ಶ್ಯಾಮಲಾ, ಕಾಲೇಜಿನ ಪ್ರಾಧ್ಯಾಪಕರಾಗಿದ್ದು ತಮ್ಮ ಒಬ್ಬನೇ ಮಗನನ್ನು ಅತ್ಯಂತ ಮುದ್ದಿನಿಂದ ಸಾಕಿದ್ದರು.

ಶರತ್ ಮತ್ತು ಸುರಭಿ ಮೊದಲ ಭೇಟಿ ಒಂದು ಖಾಸಗಿ ಸಭೆಯಲ್ಲಿ ಆಯಿತು. ಮುಂದೆ ಒಂದೊಂದೆ ಖಾಸಗಿ ಸಭೆ, ಕಾರ್ಯಾಗಾರಗಳಲ್ಲಿ ಭಾಗವಹಿಸಿ ಪರಿಚಯವಾಯಿತು. ಪರಿಚಯ ಸ್ನೇಹಕ್ಕಿಂತ ಹೆಚ್ಚಿನ ಸಲುಗೆಯನ್ನು ನೀಡಿತು. ಮುಂದೆ ಅದು ಪ್ರೀತಿಯೆಂಬ ಆಕಾರ ಪಡೆದು ತಮ್ಮ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ ಇಬ್ಬರು ಪ್ರಣಯ ಪಕ್ಷಿಗಳಂತೆ ವಿರಹಕ್ಕೆ ಎಡೆಗೊಡದೆ ಪ್ರೀತಿಸುತ್ತಿದ್ದರು. ಇವರ ಪ್ರೇಮಕ್ಕೆ ಹಲವಾರು ಉದ್ಯಾವನಗಳು; ಚಿತ್ರಮಂದಿರಗಳು, ದೇವಾಲಯಗಳು ಹಾಗೂ ಸಾಗರ ಸಾಕ್ಷಿಯಾಗಿದ್ದವು.

ಇಬ್ಬರ ಪ್ರೇಮದ ವಿಚಾರ ಮನೆಯವರಿಗೂ ತಿಳಿಸಿ, ಎರಡು ಕುಟುಂಬದ ಒಮ್ಮತದೊಂದಿಗೆ ಮದುವೆಯೆಂಬ ಬಂಧನಕ್ಕೆ ಸಿಲುಕಿ ಸಂಸಾರಿಗಳಾದರು. ಇವರ ಸಂಸಾರಕ್ಕೆ ಪುಟಾಣಿ ಹಿಮನ್ಯಳ ಆಗಮನವಾಯಿತು.

ಹಿಮನ್ಯಳಿಗೆ ನಾಲ್ಕು ವರ್ಷ ತುಂಬಿತ್ತಷ್ಟೆ. ದಂಪತಿಗಳು ಮಗಳೊಂದಿಗೆ ಸುತ್ತಾಡಲೆಂದು ಒಂದು ವಾರದ ರಜೆಯಲ್ಲಿ ಕೆಲವು ಪ್ರವಾಸಿತಾಣಗಳಿಗೆ ಹೊರಟರು. ಪ್ರಕೃತಿ ಸೌಂದರ್ಯದ ಸೊಬಗಲ್ಲಿ ಮೈಮರೆತ ದಂಪತಿಗಳಿಗೆ ಮುಂದೆ ಸಂಭವಿಸಬಹುದಾದ ಅವಘಡದ ಅರಿವಿರಲಿಲ್ಲ. ಪ್ರಕೃತಿ ಮಾತೆಗೆ ವಿದಾಯ ಹೇಳಿ ಮಂಗಳೂರಿಗೆ ಹಿಂದಿರುಗುವಾಗ ಟ್ಯಾಕ್ಸಿ ಚಾಲಕನ ಸಣ್ಣ ತಪ್ಪಿನಿಂದಾಗಿ ಭಯಂಕರ ಹೃದಯವಿದ್ರಾವಕ ಘಟನೆಯೊಂದು ನಡೆಯಿತು. ಟ್ಯಾಕ್ಸಿ ಟಿಪ್ಪರ್‌ಗೆ ಹೊಡೆದು ರಸ್ತೆಯ ಬದಿಯಲ್ಲಿದ್ದ ಆಳವಾದ ಕುಂದಕಕ್ಕೆ ಬಿತ್ತು.

ಸುರಭಿ ಕಣ್ತೆರೆದಾಗ ಆಸ್ಪತ್ರೆಯಲ್ಲಿದ್ದಳು. ಪಕ್ಕದಲ್ಲಿ ಹಿಮನ್ಯ ಆದರೆ ಶರತ್...? ಶರತ್ ಆಗಲೇ ಈ ಜಗತ್ತಿಗೆ ವಿದಾಯ ಹೇಳಿ ಸುಮಾರು 12 ಗಂಟೆಗಳಾಗಿತ್ತು. ಅವನೊಂದಿಗೆ ಟ್ಯಾಕ್ಸಿ ಚಾಲಕನು ವಿಧಿವಶನಾಗಿದ್ದ. ಸುರಭಿ ಗರಬಡಿದವಳಂತೆ ಆದಳು. ತಾನೂ ಕೂಡಾ ಆ ಕ್ಷಣದಲ್ಲಿ ತನ್ನ ಪ್ರಾಣಸಖನೊಂದಿಗೆ ಪ್ರಾಣಬಿಡಬಾರದಿತ್ತೆ ಎಂದು ಕೂಗಾಡಿದಳು. ಆದರೆ ಇತ್ತ ತನ್ನ ಪ್ರಾಣಹಂಚಿಕೊಂಡಿರುವ ಹಿಮನ್ಯ...? ಅವಳ ಭವಿಷ್ಯದ ಗತಿಯೇನು? ಬಹುಷ ಆ ದೇವರು ತನ್ನನ್ನು ಉಳಿಸಿದ್ದು ಇದಕ್ಕೇನೆ ಇರಬಹುದೆಂದು ಎನಿಸಿ ಮನಸ್ಸನ್ನು ಕಲ್ಲು ಮಾಡಿಕೊಂಡು ತನ್ನ ಮುಂದಿನ ಜೀವನ ಏನಿದ್ದರೂ ಅದು

ಮಗಳಿಗೆ ಅರ್ಪಣೆ ಎಂದು ಭಾವಿಸಿ ನಡೆದ ಕಹಿ ಘಟನೆಯನ್ನು ಒಂದು ಕೆಟ್ಟ ಕನಸೆಂದು ತಿಳಿದು ಮರೆಯಲು ಪ್ರಯತ್ನ ಪಟ್ಟಳು. ಆದರೆ ಮನಸ್ಸಿನ ತಿರುಳಿನಲ್ಲಿ ಅವಿತ ನೆನಪುಗಳನ್ನು ಮರೆಯುವುದು ಸುಲಭವೆ? ಕಷ್ಟ! ಆದರೆ ಮಗಳ ಮುಗ್ಧತನ, ತುಂಟಾಟಿಕೆ ಎಲ್ಲಾ ಸುರಭಿಯ ಹೊಸ ಜೀವನಕ್ಕೆ ನಾಂದಿ ಆಗತೊಡಗಿತು.

ವಿಧಿಬರಹಕ್ಕೆ ಹೊಣೆಯಾರು? ಎಂಬಂತೆ ಸುರಭಿಗೆ ಆಧಾರವಾಗಿದ್ದ ತಾಯಿ ಕೂಡಾ ಅನಾರೋಗ್ಯಕ್ಕೆ ತುತ್ತಾಗಿ ತೀರಿಕೊಂಡರು. ಆದರೆ ಬರಡು ಭೂಮಿಯಲ್ಲಿ ಮೊಳಕೆ ಒಡೆದಂತೆ ಸುರಭಿಗೆ ಬ್ರಾಂಚ್ ಮ್ಯಾನೇಜರ್ ಹುದ್ದೆಯಿಂದ ಮೇಲ್ದರ್ಜೆಯ ಹುದ್ದೆಗೆ ಭರ್ತಿಗೊಂಡಳು. ಇದರ ನಿಮಿತ್ತ ಮಗಳೊಂದಿಗೆ ದೆಹಲಿಗೆ ಸ್ಥಳಾಂತರಗೊಂಡಳು. ಊರಿನಲ್ಲಿದ್ದ ತೋಟಗಳನ್ನು ಆಳುಗಳಿಗೆ ವಹಿಸಿಕೊಟ್ಟಳು. ಇತ್ತ ಹಿಮನ್ಯ ಚೆನ್ನಾಗಿ ವಿದ್ಯಾಭ್ಯಾಸ ಪಡೆದು ವೈದ್ಯೆಯಾಗುವ ಗುರಿಯನ್ನಿಟ್ಟುಕೊಂಡಳು. ವೈದ್ಯಕೀಯ ಶಿಕ್ಷಣ ಪಡೆಯತೊಡಗಿದಳು.

ಮಂಗಳೂರಿನಲ್ಲಿ ಮಗಳ ಸ್ನೇಹಿತೆಯ ವಿವಾಹಕ್ಕೆಂದು ಹಲವಾರು ವರುಷಗಳ ನಂತರ ಮಗಳೊಂದಿಗೆ ತವರಿಗೆ ಬಂದ ಸುರಭಿ, ಬಂದಾದ ನಂತರ ಒಂದು ನೆನಪಿನ ಪುಟಗಳನ್ನು ತಿರುವುತ್ತಾ ಹೋಗಿ ದಿಗಂತದತ್ತ ನೋಡುತ್ತಾ ಕಲ್ಲಾದಳು. "ಅಮ್ಮಾ, ಏನು ಯೋಚ್ನೆ ಮಾಡ್ತಿದ್ದೀಯಾ? ಫ್ಲೈಟ್ ಟಿಕೇಟ್ ಆಗಿದೆ. ಫ್ರೆಂಡ್ ಬೇರೆ ಕಾಲ್ ಮಾಡ್ತಾ ಇದ್ದಾಳೆ. ನಾಳೆ ಬೆಳಗ್ಗೆ ಮೀಟ್ ಆಗ್ಬೇಕಂತೆ ನಾವು ಅವ್ಳನ್ನ. ಮತ್ತೆ ಸಂಜೆ ಫ್ಲೈಟ್‌ನಲ್ಲಿ ದೆಹಲಿಗೆ ವಾಪಸ್. ಬಾ ಬೇಗ." ಎಂದು ಮಗಳು ಕೈ ಹಿಡಿದು ಎಳೆದಾಗ ಪ್ರಸ್ತುತ ಜಗತ್ತಿಗೆ ಬಂದಳು ಸುರಭಿ. ಮಗಳ ನಗುಮೊಗವನ್ನು ನೋಡಿ ಮುಂದಿನ ಕಾರ್ಯಕ್ಕೆ ಕಿರುನಗೆಯಿಂದ ಸಮ್ಮತಿಸಿ ಮಗಳನ್ನು ಹಿಂಬಾಲಿಸಿದಳು. ಇವರನ್ನು ಪ್ರಕೃತಿ ಲೀನನಾಗಿದ್ದ ಶರತ್ ಕೂಡಾ ನೆನಪಿನ ಅಲೆಗಳಂತೆ ಹಿಂಬಾಲಿಸಿದನು. ಸಾಗರವು ಇವರ ಪಯಣಕ್ಕೆ ಶುಭವಿದಾಯವನ್ನು ಹೇಳಿ ತನ್ನ ಒಡಲಿನಲ್ಲಿರುವ ಅದೆಷ್ಟೋ ನೆನಪುಗಳನ್ನು ಹಾಗೆಯೇ ಭದ್ರವಾಗಿ ತನ್ನಲ್ಲಿರಿಸಿಕೊಂಡು ತನ್ನ ಕಾರ್ಯದಲ್ಲಿ ತೊಡಗಿಸಿಕೊಂಡು, ಚಂದ್ರನ ಆಗಮನಕ್ಕೆ ಕಾಯತೊಡಗಿತು.

ಅಲ್ಪಾನಾಮಪಿ ವಸ್ತೂನಾಂ ಸಂಹತಿಃ ಕಾರ್ಯಸಾಧಿಕಾ ।
ತೃಣೈರಾರಭ್ಯತೇ ರಜ್ಜುಸ್ತಯಾ ನಾಗೋऽಪಿ ಬಧ್ಯತೇ ॥

ನಿಃಸಾರವಾಗಿದ್ದರೂ ಆ ವಸ್ತುಗಳ ಸಮೂಹ ಕಾರ್ಯವನ್ನು ಉಂಟುಮಾಡುತ್ತದೆ. ಹುಲ್ಲುಗಳಿಂದ ಉಂಟಾದ ಹಗ್ಗ ಆನೆಯನ್ನೂ ಕೂಡಾ ಕಟ್ಟಿ ಹಾಕುತ್ತದೆ.

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ ॥

ಯಾವಾತನಿಗೆ ಸ್ವಯಂ ಬುದ್ಧಿಯಿಲ್ಲವೋ ಆತನಿಗೆ ಶಾಸ್ತ್ರದಿಂದ ಏನು ತಾನೇ ಪ್ರಯೋಜನ? ಕಣ್ಣಿಲ್ಲದ ಕುರುಡನಿಗೆ ಕನ್ನಡಿಯಿಂದೇನು ಉಪಯೋಗವಿದೆ?

ಸರ್ಪದುರ್ಜನಯೋರ್ಮಧ್ಯೇ ವರಂ ಸರ್ಪೋ ನ ದುರ್ಜನಃ ।
ಸರ್ಪೋ ದಶತಿ ಕಾಲೇನ ದುರ್ಜನಸ್ತು ಪದೇ ಪದೇ ॥

ಸರ್ಪ ಮತ್ತು ಕೆಟ್ಟ ಮನುಷ್ಯ ಇವೆರದರಲ್ಲಿ ಸರ್ಪವಾದರೂ ಬೇಕು ದುರ್ಜನನಲ್ಲ. ಸರ್ಪವು ಎಂದಾರರೊಂದು ದಿನ ಕಚ್ಚುತ್ತದೆ ಆದರೆ ದುರ್ಜನ ಮಾತ್ರ ಪದೆ ಪದೆ ಕಚ್ಚುತ್ತಿರುತ್ತಾನೆ.

ನ ದೈವಮಿತಿ ಸಂಚಿಂತ್ಯ ತ್ಯಜೇದುದ್ಯೋಗಮಾತ್ಮನಃ ।
ಅನುದ್ಯಮೇನ ಕಸ್ತೈಲಂ ತಿಲೇಭ್ಯಃ ಪ್ರಾಪ್ತುಮರ್ಹತಿ ॥

'ಎಲ್ಲಾ ನನ್ನ ಭಾಗ್ಯದಿಂದಾಗುತ್ತದೆ' ಎಂದು ಭಾವಿಸಿ ಕೆಲಸದಲ್ಲಿ ಪ್ರವೃತ್ತನಾಗದೇ ಕುಳಿತುಕೊಳ್ಳಬಾರದು. ಪ್ರವೃತ್ತನಾಗದೇ ಯಾರು ತಾನೇ ಎಳ್ಳುಗಳಿಂದ ಎಣ್ಣೆಯನ್ನು ತೆಗೆಯಲು ಸಮರ್ಥನಾಗುತ್ತಾನೆ.

ಪೃಥಿವ್ಯಾಂ ತ್ರೀಣಿ ರತ್ನಾನಿ ಜಲಮನ್ನಂ ಸುಭಾಷಿತಮ್ ।
ಮೂಢೈಃ ಪಾಷಣಖಂಡೇಷು ರತ್ನಸಂಜ್ಞಾ ವಿಧೀಯತೇ ॥

ಈ ಜಗತ್ತಿನಲ್ಲಿ ನೀರು, ಅನ್ನ ಮತ್ತು ಸುಭಾಷಿತ ಎಂಬುದಾಗಿ ಮೂರೇ ಮೂರು ರತ್ನಗಳು. ಮೂರ್ಖರು ಮಾತ್ರ ಕಲ್ಲಿನ ತುಂಡನ್ನು ರತ್ನವೆಂದು ಕರೆಯುತ್ತಾರೆ.

ಕವಿಃ ಕರೋತಿ ಪದ್ಯಾನಿ ಲಾಲಯತ್ಯುತ್ತಮೋ ಜನಃ ।
ತರುಃ ಪ್ರಸೂತೇ ಪುಷ್ಪಾಣಿ ಮರುದ್ವಹತಿ ಸೌರಭಮ್ ॥

ಕವಿಯಾದವನು ಪದ್ಯಗಳನ್ನು ರಚಿಸುತ್ತಾನೆ. ಆದರೆ ಅದನ್ನು ಆಸ್ವಾದಿಸುವವನು ಸಹೃದಯ. ಮರವು ಹೂಗಳನ್ನು ಬಿಡುತ್ತದೆ. ಆದರೆ ಅದರ ಪರಿಮಳವನ್ನು ಹೊರುವವದು ಮಾತ್ರ ಗಾಳಿ.

ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಮ್ ।
ನಹಿ ವಂಧ್ಯಾ ವಿಜಾನಾತಿ ಗುರ್ವೀಂ ಪ್ರಸವವೇದನಾಮ್ ॥

ವಿದ್ವಾಂಸನೇ ವಿದ್ವಾಂಸರ ಪ್ರಯತ್ನವನ್ನು ತಿಳಿದುಕೊಳ್ಳಬಲ್ಲ. ಹಡೆಯುವವಳು ಮಾತ್ರ ಹೆರಿಗೆಯ ಕಠೋರ ನೋವನ್ನು ತಿಳಿದುಕೊಳ್ಳುತ್ತಾಳೆ ಹೊರತು ಬಂಜೆಯಲ್ಲ.

ಅಂತಃಸಾರವಿಹೀನಸ್ಯ ಸಹಾಯಃ ಕಿಂ ಕರಿಷ್ಯತಿ ।
ಮಲಯೇ ಸ್ಥಿತೋ ವೇಣುರ್ವೇಣುರೇವ ನ ಚಂದನಃ ॥

ಒಳಗಡೆ ಸಾರವಿಲ್ಲದಿದ್ದರೆ ಸಹಾಯಕನಾದರೂ ಏನನ್ನು ಮಾಡಲು ಸಾಧ್ಯ? ಮಲಯಪರ್ವತದಲ್ಲಿ ಇದ್ದ ಬಿದಿರು ಬಿದಿರೇ. ಸಾರವಿಲ್ಲದಿರುವುದರಿಂದ ಮಲಯಪರ್ವತ ಅದಕ್ಕೆ ಏನನ್ನೂ ಕೂಡಾ ಸಹಾಯ ಮಾಡಲಾರದು.

–: ಅನುಭವ ಕಥನ :– ಕವಿಗೋಷ್ಠಿಯೊಂದರ ಅಧ್ಯಕ್ಷೆಯಾಗಿ.....

– ಮೇಘನ ವಿ. ಭಟ್
ತೃತೀಯ ಬಿ.ಎಸ್ಸಿ.

ಪೂರ್ಣಪ್ರಜ್ಞ ಕಾಲೇಜು ಹಲವಾರು ವರ್ಷಗಳ ಇತಿಹಾಸ ಹೊಂದಿದೆ. ಹಲವಾರು ಗಣ್ಯ–ವಿಶೇಷ–ಪ್ರತಿಭಾವಂತ ವ್ಯಕ್ತಿಗಳನ್ನು ಕಂಡಿದೆ ಹಾಗೂ ಕಾಣುತ್ತಿದೆ. ನಾವು ಪೂರ್ಣಪ್ರಜ್ಞದ ವಿದ್ಯಾರ್ಥಿಗಳು ಎಂಬುದೇ ಒಂದು ರೀತಿಯ ಹೆಮ್ಮೆಯ ವಿಷಯ. ಎಲ್ಲಾ ಕ್ಷೇತ್ರಗಳಲ್ಲೂ ತನ್ನದೇ ಸ್ಥಾನಮಾನವನ್ನು ಹೊಂದಿದ ನಮ್ಮ ಕಾಲೇಜು ಅತೀ ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ.

ಕನ್ನಡ ಸಾಹಿತ್ಯದಲ್ಲಿ ತಮ್ಮ ಹೆಸರು ಶಾಶ್ವತವಾಗಿರಿಸಿದ ಕವಿಗಳಲ್ಲಿ ಗೋಪಾಲಕೃಷ್ಣ ಅಡಿಗರು ಒಬ್ಬರು. ಕವಿಗಳಲ್ಲಿ ಶ್ರೇಷ್ಠ ಸ್ಥಾನಮಾನವನ್ನು ಪಡೆದವರೂ ಕೂಡ.

ನಮ್ಮ ಕಾಲೇಜಿನ ಬಗ್ಗೆ ಮಾತನಾಡುವಾಗ ಗೋಪಾಲಕೃಷ್ಣ ಅಡಿಗರ ಬಗ್ಗೆ ಏಕೆ ಹೇಳುತ್ತಿದ್ದಾಳೆ ಎಂದು ಭಾವಿಸುತ್ತೀರ? ಹಾಗಾದರೆ ಇಲ್ಲಿ ಕೇಳಿ. ಗೋಪಾಲಕೃಷ್ಣ ಅಡಿಗರು ನಮ್ಮ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಅಂತಹ ಮಹಾನ್ ವ್ಯಕ್ತಿ ನಮ್ಮ ಕಾಲೇಜಿನ ಪ್ರಾಂಶುಪಾಲರೆನ್ನುವುದು ಹೆಮ್ಮೆಯ ಜೊತೆಗೆ ಸಂತೋಷದ ಅನುಭವ. ಕಲೆ ಮತ್ತು ಸಂಸ್ಕೃತಿಗೆ ಹೆಚ್ಚಿನ ಗೌರವ ನೀಡುವ ನಮ್ಮ ಕಾಲೇಜು ಗೋಪಾಲಕೃಷ್ಣ ಅಡಿಗರ ಹುಟ್ಟಿದ ದಿನವನ್ನು ಪ್ರತಿವರ್ಷ ಆಚರಿಸುತ್ತದೆ. ಆಚರಿಸುವ ಬಗೆಯೆಂದರೆ, ಇಷ್ಟು ವರ್ಷಗಳ ಕಾಲ, ಅವರ ಪುಸ್ತಕಗಳ ವಿಮರ್ಶೆ, ಸ್ಪರ್ಧೆ, ಪ್ರಬಂಧ ಸ್ಪರ್ಧೆ ಮತ್ತು ಅವರ ಹಾಡುಗಳ ಗಾಯನ ಸ್ಪರ್ಧೆಯನ್ನು ಏರ್ಪಡಿಸಿದೆ. ಹೆಚ್ಚಿನ ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ, ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ನೀಡುವ ಮೂಲಕ ಅಭಿನಂದಿಸುತ್ತಾರೆ.

ಆದರೆ ಈ ವರ್ಷ ಅರ್ಥಾತ್ 2017, ಶತಾಬ್ಧಿ. ಎಂದರೆ ನೂರನೇ ವರ್ಷದ ಹುಟ್ಟುಹಬ್ಬ. ಆದ್ದರಿಂದ ಇದನ್ನು 'ವಿದ್ಯಾರ್ಥಿಗಳ ಕವಿಗೋಷ್ಠಿ'ಯನ್ನು ಮಾಡುವುದರ ಮೂಲಕ ಹುಟ್ಟು ಹಬ್ಬವನ್ನು ಆಚರಿಸಲಾಯಿತು. ಅಂದಿನ ದಿನದ ನನ್ನ ಅನುಭವ ಪದಗಳಲ್ಲಿ ವರ್ಣಿಸಲಾಗದಂತದ್ದು.

ಅಂದಿನ ಮುಂಜಾನೆ ಸಭಾ ಕಾರ್ಯಕ್ರಮವಿದ್ದು ಅಲ್ಲಿ ಹಲವಾರು ಅಭ್ಯಾಗತರು ಉಪಸ್ಥಿತರಿದ್ದರು. ಅವರೂ ಸಹ ಗೋಪಾಲಕೃಷ್ಣ ಅಡಿಗರನ್ನು ನೆನೆದು ಧನ್ಯವಾದ ಅರ್ಪಿಸಿದರು.

ಇನ್ನು ಮಧ್ಯಾಹ್ನ ವಿದ್ಯಾರ್ಥಿ ಕವಿಗೋಷ್ಠಿ. ಎಲ್ಲರಂತೆಯೇ ನಾನು ನನ್ನ ಕವನ ವಾಚನಕ್ಕೆ ತಯಾರಾಗಿದ್ದೆ. ಆದರೆ ಊಹಿಸಲಾಗದ ಅನಿರೀಕ್ಷಿತ ಜವಾಬ್ದಾರಿ ನನಗೆ ದೊರಕಿತು. ಅದು ಆ ಕವಿಗೋಷ್ಠಿಯ ಅಧ್ಯಕ್ಷತೆ. ಒಂದೆಡೆ ಸಂತೋಷವಾದರೆ ಇನ್ನೊಂದೆಡೆ ಅದನ್ನು ನಿಭಾಯಿಸಲು ಸಾಧ್ಯವಾ ಎಂಬ ಭಯ. ಒಟ್ಟಾರೆ ಭಯ ಮಿಶ್ರಿತ ಸಂತೋಷ.

ವೇದಿಕೆಯಲ್ಲಿ ನನ್ನನ್ನೂ ಸೇರಿ ಒಂಬತ್ತು ಜನ ಕುಳಿತಿದ್ದೆವು.

ತಾಯಿ, ತಂದೆ, ರಾಷ್ಟ್ರೀಯ ಸೇವೆ, ಪರಿಸರ ಮುಂತಾದ ವಿಷಯಗಳ ಕುರಿತು ಅದ್ಭುತವಾಗಿ ಸ್ವರಚಿತ ಕವಿತೆಗಳನ್ನು ವಾಚಿಸಿದ್ದರು ನನ್ನ ಸಹಪಾಠಿಗಳು. ನಾನು ತಾಯಿ–ಮಗುವಿನ ಸಂಬಂಧ ಕರುಳ ಬಳ್ಳಿಯಿಂದ ಪ್ರಾರಂಭ ಎಂಬ ಸಂದೇಶದೊಂದಿಗೆ ಬರೆದ 'ಕರುಳ ಬಳ್ಳಿ' ಎಂಬ ಕವನವನ್ನು ವಾಚಿಸಿದ್ದೆ. ಕೆಲವು ಕವನಗಳ ಬಗ್ಗೆ ನನ್ನ ಅನಿಸಿಕೆಯನ್ನು ವ್ಯಕ್ತಪಡಿಸಲು ಅವಕಾಶ ದೊರಕಿತ್ತು. ಅದೊಂದು ನನ್ನ ಜೀವನದ ಅಮೂಲ್ಯ ಕ್ಷಣ ಎಂಬುದಂತೂ ಖಚಿತ. ಕೆಲವೊಂದು ಅಧ್ಯಕ್ಷೀಯ ನುಡಿಗಳ ಜೊತೆಗೆ ಗೋಪಾಲಕೃಷ್ಣ ಅಡಿಗರನ್ನೂ ಸ್ಮರಿಸುತ್ತಾ ಮಾತುಗಳನ್ನು ಮುಗಿಸಿದ್ದೆ.

ನಿಜವಾಗಿಯೂ ಇಂತಹದ್ದೊಂದು ಅವಕಾಶ ನನಗೆ ನೀಡಿದಂತಹ ಪೂರ್ಣಪ್ರಜ್ಞ ಕಾಲೇಜಿಗೆ ನಾನು ಸದಾ ಋಣಿಯಾಗಿರುತ್ತೇನೆ...

ಮದೋಪಶಮನಂ ಶಾಸ್ತ್ರಂ ಖಲಾನಾಂ ಕುರುತೇ ಮದಮ್ ।
ಚಕ್ಷುಃಪ್ರಕಾಶಕಂ ತೇಜ ಉಲೂಕಾನಾಮಿವಾಂಧತಾಮ್ ॥

ಅಹಂಕಾರವನ್ನು ಉಪಶಮನ ಮಾಡುವ ಶಾಸ್ತ್ರವು ದುರ್ಜನರಿಗೆ ಮಾತ್ರ ಅಹಂಕಾರವನ್ನೇ ಉಂಟುಮಾಡುತ್ತದೆ. ಕಣ್ಣುಗಳಿಗೆ ವಸ್ತುಗಳನ್ನು ತೋರಿಸುವ ಬೆಳಕು ಗೂಬೆಗೆ ಮಾತ್ರ ಕುರುಡುತನವನ್ನೇ ಉಂಟುಮಾಡುತ್ತದೆ.

ಶೋಭತೇ ವಿದುಷಾಂ ಮಧ್ಯೇ ನೈವ ನಿರ್ಗುಣಮಾನಸಃ ।
ಅಂತರೇ ತಮಸಾಂ ದೀಪಃ ಶೋಭತೇ ನಾರ್ಕತೇಜಸಾಮ್ ॥

ತಿಳಿದವರ ಮಧ್ಯದಲ್ಲಿ ಗುಣವಿಲ್ಲದ ವ್ಯಕ್ತಿ ಶೋಭಿಸಲಾರನು. ಕತ್ತಲೆಯ ಮಧ್ಯದಲ್ಲಿ ದೀಪ ಶೋಭಿಸಬಹುದೇ ಹೊರತು ಸೂರ್ಯನ ಕಿರಣಗಳ ಮಧ್ಯದಲ್ಲಲ್ಲ.

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।
ಲೋಕೋತ್ತರಾಣಾಂ ಚೇತಾಂಸಿ ಕೋ ನು ವಿಜ್ಞಾತುಮರ್ಹತಿ ॥

ಲೋಕೋತ್ತರ ವ್ಯಕ್ತಿಗಳ ಮನಸ್ಸು ವಜ್ರಕ್ಕಿಂತಲೂ ಕಠೋರ. ಹೂವಿಗಿಂತಲೂ ಮೃದು. ಅದನ್ನು ಯಾರು ತಾನೇ ತಿಳಿದುಕೊಳ್ಳಲು ಸಮರ್ಥನಾದಾನು?

ರಥಬೀದಿಯಲ್ಲಿ ಕಂಡ ಅಜ್ಜಿ!

– ಮೇಘನ ಎಸ್. ಕೆ.
ತೃತೀಯ ಬಿ.ಎಸ್ಸಿ. 'ಬಿ'

ಆಗತಾನೆ ಪದವಿ ಶಿಕ್ಷಣಕ್ಕಾಗಿ ಉಡುಪಿಗೆ ಬಂದಿದ್ದೆ. ಹೊಸ ಜೀವನ ಪ್ರಾರಂಭವಾಯಿತೆಂಬ ಸಂತೋಷ ಒಂದೆಡೆಯಿದ್ದರೂ ಮನೆಯವರನ್ನೆಲ್ಲಾ ಬಿಟ್ಟು ದೂರ ಒಂದು ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿ ಇರಬೇಕಲ್ಲಾ ಎಂಬ ಬೇಸರ ಒಂದೆಡೆಯಿತ್ತು. ಆದರೂ ಇರೋ ಒಂದು ಜೀವನ ಸಂತೋಷವಾಗಿ ಕಳೆಯಬೇಕು ಎಂಬ ಹಂಬಲದಿಂದ ನನಗೆ ನಾನೇ ಸಮಾಧಾನ ತಂದುಕೊಂಡಿದ್ದೆ. ಇವಲ್ಲದೇ ಕಾಲೇಜಿನ ಪರಿಸರದಲ್ಲಿರುವ ವಿದ್ಯಾರ್ಥಿನಿಲಯದಲ್ಲಿ ನಮಗೆ ಬಹಳ ಕಟ್ಟುನಿಟ್ಟು. ವಾರದ ಅಂತ್ಯ ಅಂದರೆ, ಶನಿವಾರದಂದು ನಮಗೆ ಎರಡು ಗಂಟೆಗಳ ಕಾಲ ಹೊರ ಸುತ್ತಾಡಲು ಅವಕಾಶವಿತ್ತು.

ಪ್ರಥಮ ಬಾರಿಗೆ ಹೊರ ಸುತ್ತಾಡಲು ಹೋದಾಗ ಆದ ಖುಷಿ ಅಪಾರ. ಯಾವುದೋ ಹೊಸ ಜಗತ್ತಿಗೆ ಹೊರಟಿದ್ದೇವೆ ಎಂಬ ಗರ್ವದಿಂದ ಗೆಳತಿಯರೆಲ್ಲ ಕೂಡಿಕೊಂಡು ಒಂದು ವಾರದಿಂದ ಆಲೋಚಿಸಿ ಆಲೋಚಿಸಿ ಕೊನೆಗೆ ನಮ್ಮ ಉಡುಪಿಯ ಪ್ರಚಲಿತವಾದ ಶ್ರೀಕೃಷ್ಣ ಮಠಕ್ಕೆಂದು ಹೊರಟೆವು. ನಮಗೆ ಹೊರ ಹೋಗಲು ಸಮಯವಿದ್ದದ್ದೇ ಸಂಜೆ ನಾಲ್ಕು ಗಂಟೆಗೆ. ಸಾಯಂಕಾಲದ ನಾಲ್ಕು ಗಂಟೆ ಆದದ್ದೇ ತಡ, ಹೊರ ಸುತ್ತುವ ಬಯಕೆಯಿಂದ ವೇಗವಾಗಿ ಮಠದತ್ತ ಚಲಿಸುತ್ತಿದ್ದೆವು. ಆ ಸಮಯದಲ್ಲಿ ಅನೇಕ ದಾರಿಹೋಕರು ಇದ್ದರು. ಯಾರನ್ನೂ ಗಮನಿಸದೇ ಹೋಗುವಾಗ ಒಬ್ಬ ಅಜ್ಜಿ ನಮ್ಮನ್ನು ಅಡ್ಡಗಟ್ಟಿದರು. ನಮಗೋ ಒಂದೆಡೆ ಸಮಯ ಮುಗಿಯುತ್ತದೆ ಎಂಬ ಭಯ. ಹಾಗೆಯೇ ಅಜ್ಜಿ ಮೇಲೆ ಕೋಪ ಕೂಡ ಬಂತು. ಎಷ್ಟೇ ಕೋಪ ಇದ್ದರೂ ನಿಧಾನವಾಗಿ, "ಅಜ್ಜಿ ನಮಗೆ ಲೇಟ್ ಆಗ್ತಿದೆ ಹೋಗ್ಬೇಕು ಬಿಡಿ" ಎಂದು ಕೇಳಿದರೂ ಆ ಅಜ್ಜಿ ಒಂದೇ ಸಮನೆ ಕಣ್ಣಲ್ಲಿ ನೀರು ಸುರಿಸಲು ಪ್ರಾರಂಭ ಮಾಡಿದರು. ಒಂದು ಕ್ಷಣ ನಮಗೆ ಮನಕಲುಕಿದರೂ ಅಜ್ಜಿ ಭಿಕ್ಷೆಗಾಗಿ ಬಂದಿರಬೇಕು ಎಂದು 5 ರೂಪಾಯಿ ಕೊಟ್ಟೆವು. ಆದರೆ ಆ ಅಜ್ಜಿ ಅದನ್ನು ನಿರಾಕರಿಸಿ, "ಮಗಾ ನಂಗೆ ದುಡ್ಡು ಬೇಡ. ನನ್ನ ಮಕ್ಕಳು ನನ್ನನ್ನು ಮನೆಯಿಂದ ಹೊರಹಾಕಿದರು. ಕಾಣದ ಊರಲ್ಲಿ ಬಿಟ್ಟು ಹೋದರು. ನಾವು ಬಡವರು. ನಮ್ಮ ಊರಿಗೆ ಹೋದರೂ ಅವನು ನಮ್ಮನ್ನು ಸೇರಿಸುವುದಿಲ್ಲ. ಊಟ ಮಾಡಿ ಎರಡು ದಿನ ಆಯಿತು" ಎಂದು ಒಂದೇ ಸಮನೆ ಕಣ್ಣಲ್ಲಿ ನೀರು ಹಾಕಿದರು. ನಮಗೂ ಬೇಸರ ಆಗಿ ಅಲ್ಲೇ ಇದ್ದ ಅಂಗಡಿಯಿಂದ ಎರಡು ಕಿತ್ತಳೆ ಹಾಗೂ ಬಾಳೆ ಹಣ್ಣನ್ನು ನೀಡಿ ಸ್ವಲ್ಪ ಹಣ ಕೊಟ್ಟು ಊರಿಗೆ ಹೋಗಿ ಎಂದೆವು.

ಅದೇ ರೀತಿ ಮತ್ತೊಂದು ವಾರ ಮಠದ ದಾರಿಯಲ್ಲಿದ್ದಾಗ ಅದೇ ಅಜ್ಜಿ ಬೇರೆಯವರ ಬಳಿ ನಮಗೆ ಹೇಳಿದ ಕಥೆಯನ್ನೇ ಹೇಳಿ ಅವರಿಂದಲೂ ಹಣ ಪಡೆಯುವುದು ಕಂಡಿತು.

ಅಲ್ಲೇ ಇದ್ದ ಅಂಗಡಿಯವ ಹಣ ನೀಡುವವರಿಗೆ ಹೇಳುವುದು ಕೇಳಿತು. "ಆ ಅಜ್ಜಿಯನ್ನು ನಂಬಬೇಡಿ. ಬಂದವರ ಬಳಿ ಹೊಸ ಹೊಸ ಮುಖ ಎಂದು ತಿಳಿದ ತಕ್ಷಣ ಆಕೆ ನಂಬಿಸಿ ಹಣ ಹಣ್ಣು ತರಕಾರಿಗಳನ್ನು ತೆಗೊಂಡು ಮನೆಗೆ ಹೋಗ್ತಾಳೆ" ಎಂದು ಹೇಳುತ್ತಿದ್ದನು.

ಆ ದಿನ ಅಜ್ಜಿಗೆ ಸಹಾಯ ಮಾಡಿದೆವಲ್ಲಾ ಎಂಬ ಹೆಮ್ಮೆಯಿಂದ ಬೀಗುತ್ತಿದ್ದ ನಾವು ಇಂದು ಮೋಸ ಹೋದೆವಲ್ಲಾ ಎಂದು ನಾಚಿಕೆಯಿಂದ ನಮ್ಮ ರೂಮಿಗೆ ಬಂದು ನಕ್ಕಿದೇ ನಕ್ಕಿದ್ದು.

ಹಾಗೆಯೇ ಇತ್ತೀಚೆಗೆ ಮಠದ ಪರಿಸರದಲ್ಲಿ ಎಲ್ಲೂ ಅಜ್ಜಿ ಕಾಣಿಸದೇ ಇರುವುದು ಒಂಥರಾ ಬೇಜಾರಿಗೂ ಕಾರಣವಾಗಿದೆ.

ಕೊಡಚಾದ್ರಿಯ ಮಡಿಲಿನಲ್ಲಿ

– ಮನೋಜ್ ಕುಮಾರ್ ಎ. ಕೆ.
ದ್ವಿತೀಯ ಬಿ.ಕಾಂ. 'ಬಿ–1'

ಹಲವಾರು ವರ್ಷಗಳ ಹಿಂದೆ ನಡೆದ ಘಟನೆ ಇದು. ನಾನು ನಮ್ಮ ನಿಟ್ಟೂರು ಪದವಿಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಈ ನಿಟ್ಟೂರು ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಲ್ಲಿ ಬರುತ್ತದೆ. ಆ ಎರಡು ವರ್ಷಗಳನ್ನು ನನ್ನ ಜೀವನದ ಸುವರ್ಣ ಯುಗವೆಂದು ಹೇಳಲು ಇಚ್ಛಿಸುತ್ತೇನೆ. ಅದು ಡಿಸೆಂಬರ್ 14, 2014. ಅಂದು ನಮ್ಮ ಕಾಲೇಜಿನಲ್ಲಿ ಕೊಡಚಾದ್ರಿ ಎಂಬ ಅದ್ಭುತ ಪ್ರೇಕ್ಷಣೀಯ ಸ್ಥಳ ನನ್ನ ಶಿಕ್ಷಕರು ಹಾಗೂ ಸಹಪಾಠಿಗಳ ಜೊತೆಗೆ ಹೋಗಿದ್ದೆ. ನಾನು ಕೊಡಚಾದ್ರಿ ನೋಡಿದ್ದು ಮೊದಲನೇ ಸಲವೇನಲ್ಲ. ಆದರೆ ಎಲ್ಲಾ ಸಹಪಾಠಿಗಳು ಹಾಗೂ ಶಿಕ್ಷಕರೊಂದಿಗೆ ಹೋಗಿದ್ದು ಮೊದಲು. ಆ ದಿನ ನನ್ನ ಜೀವನದ ಅವಿಸ್ಮರಣೀಯ ದಿನ. ಅಂದು ನಾವು ಬೆಳಗ್ಗೆ ಸರಿಸುಮಾರು 8 ಗಂಟೆ ಹೊತ್ತಿಗೆ ಬೆಟ್ಟವನ್ನೇರಲು ಪ್ರಾರಂಭಿಸಿದೆವು. ಅದು ಕಾಲ್ನಡಿಗೆಯಲ್ಲೆ! ಸರಿಸುಮಾರು ಮಧ್ಯಾಹ್ನ 12 ಗಂಟೆ ಹೊತ್ತಿಗೆ ನಾವು ಬೆಟ್ಟವನ್ನೇರಿದೆವು. ಅಲ್ಲಿ ನಮ್ಮ ಬುತ್ತಿಯನ್ನೆಲ್ಲ ತಿಂದು ಸರಿಸುಮಾರು 3 ಗಂಡೆ ಹೊತ್ತಿಗೆ ಇಳಿಯಲು ಪ್ರಾರಂಭಿಸಿದೆವು. 5.45ಕ್ಕೆ ನಾವು ಬುಡಕ್ಕೆ ಬಂದೆವು. ಆಗ ಅಲ್ಲಿ ಬಸ್ ವ್ಯವಸ್ಥೆ ಸ್ಥಗಿತವಾಗಿತ್ತು.

ಆದ್ದರಿಂದ ನಾವು ಜೀಪಿನಲ್ಲಿ ನಿಟ್ಟೂರು ತಲುಪಿದೆವು. ಅಲ್ಲಿನ ಅವಿಸ್ಮರಣೀಯ ಘಟನೆಗಳು ಹಲವಾರು. ನಮ್ಮ ಕರಿಯಪ್ಪ ಸರ್, ಗಣೇಶ್ ಸರ್, ಹೀಗೆ ಹಲವಾರು ಶಿಕ್ಷಕರ ಜೊತೆಗೆ ಹೋದ ಅನುಭವದ ಜೊತೆಗೆ ಅವರ ಜೀವನದ ಕೆಲವು ಅದ್ಭುತ ಘಟನೆಗಳನ್ನು ಹೇಳಿದರು. ಆ ಪ್ರವಾಸದ ನಂತರ ನಾವು ಮತ್ತೆ ಮುಂದಿನ ವರ್ಷ ಡಿಸೆಂಬರ್ 21 2015ರಂದು ಬನವಾಸಿ, ಉಡುಪಿ, ಕೊಲ್ಲೂರು, ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದೆವು. ನನ್ನ ಜೀವನದಲ್ಲಿ ಹೊರ ಪ್ರವಾಸ ಇವೆರಡೇ. ಈ ಎರಡು ಪ್ರವಾಸಗಳನ್ನು ನಾನು ಇನ್ನು ಮೆಲುಕು ಹಾಕಿಕೊಳ್ಳುತ್ತಿದ್ದೇನೆ. ಆ ನೆನಪುಗಳೆಲ್ಲ ಅವಿಸ್ಮರಣೀಯ. ಜೀವನದಲ್ಲಿ ಒಮ್ಮೆ ಕಳೆದು ಹೋದ ಸಮಯ ಪುನಃ ದೊರೆಯುವುದಿಲ್ಲ ಎಂಬ ಅರ್ಥವನ್ನು ತಿಳಿಸಿದ ಪ್ರವಾಸ ಅದು. ಹೀಗೆ ಹತ್ತು ಹಲವು ಒಳ್ಳೆಯ ಪಾಠವನ್ನು ನನಗೆ ಕಲಿಸಿ ಕಬಟ್ಟರು. ಆ ಕಾಲೇಜು ನನ್ನ ಜೀವನದಲ್ಲಿ ನಾನು ಮರೆಯಲಾಗದ ಎರಡು ವರ್ಷ ಅದು. ಜೀವನದಲ್ಲಿ ಗುರಿಯೇ ಇಲ್ಲದ ವ್ಯಕ್ತಿಯನ್ನು ಬದಲಾಯಿಸಿ ಆ ಒಂದು ಪ್ರಮುಖ ಗುರಿಯತ್ತ ಆತನನ್ನು ಮುನ್ನಡೆಸುತ್ತಿರುವ ವ್ಯಕ್ತಿ ಕೂಡ ಅದೇ ಕಾಲೇಜಿನ ಗಣೇಶ್ ಸರ್.

ಹೀಗೆ ಹತ್ತು ಹಲವು ರೀತಿಯಲ್ಲಿ ನನ್ನ ಜೀವನದಲ್ಲಿ ಬದಲಾವಣೆಯನ್ನು ಉಂಟುಮಾಡಿದ ಕಾಲೇಜು ನಿಟ್ಟೂರು ಕಾಲೇಜು. ಈಗಲೂ ಸಹ ನಾನು ನನ್ನ ಊರಿಗೆ ಭೇಟಿ ಕೊಟ್ಟಾಗಲೆಲ್ಲ ನಾನು ನಿಟ್ಟೂರು ಕಾಲೇಜಿಗೆ ಭೇಟಿ ಕೊಡುತ್ತೇನೆ.

ನನ್ನ ಪ್ರವಾಸದ ಅನುಭವ

– ವರ್ಷಾ
ದ್ವಿತೀಯ ಬಿ.ಕಾಂ.

ನಾನು ನನ್ನ ಪರಿವಾರದವರೊಂದಿಗೆ ರಜೆಯಲ್ಲಿ ದಕ್ಷಿಣ ಭಾರತದ ಪ್ರವಾಸೀ ಸ್ಥಳಗಳಿಗೆ ಭೇಟಿ ನೀಡಿದ್ದೆ. ನಮ್ಮ ಜೊತೆಯಲ್ಲಿ ಬೇರೆ 3 ಪರಿವಾರಗಳೂ ಬಂದಿದ್ದವು. ನಾವು ಟ್ರಾವಲ್ಲರ್ ಮುಖಾಂತರ ಅಲ್ಲಿಗೆ ಹೋಗಿದ್ದೆವು. ಒಟ್ಟಿಗೆ ನಾವು 21 ಜನ ಒಂದು ಬಸ್ಸಿನಲ್ಲಿ ಇದ್ದೆವು. ಮೊದಲ ದಿನ ಬಸ್ಸಿನಲ್ಲಿ ಒಬ್ಬರನ್ನೊಬ್ಬರು ಪರಿಚಯಿಸುವ ಕಾರ್ಯಕ್ರಮವನ್ನು ನಮ್ಮ ಟೂರ್ ಮ್ಯಾನೇಜರ್ ನಡೆಸಿದರು. ಮರುದಿನ ಆ ಬಗೆಗೆ ಸ್ಪರ್ಧೆಯನ್ನು ಮಾಡುತ್ತೇವೆ ಎಂದು ಹೇಳಿದ್ದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನಗಳೂ ಇದ್ದವು.

ನಾವು ನಮ್ಮ ಪ್ರವಾಸದ ದಿನಗಳಲ್ಲಿ ಹಲವಾರು ದೇವಸ್ಥಾನಗಳಿಗೆ ಹೋಗಿದ್ದೆವು. ಊಟಿ, ಪಲನಿ, ಕೊಡೈಕೆನಾಲ್, ತಂಜಾವೂರ್, ತಿರುವನಂತಪುರ, ರಾಮೇಶ್ವರ, ಗುರುವಾಯುರ್, ಕನ್ಯಾಕುಮಾರಿ, ಕೊಚಿನ್, ಇತ್ಯಾದಿ. ಒಂದೇ ಟ್ರಾವಲ್ಲರ್ಸ್‌ನವರ ಐದು ಬಸ್ಸುಗಳು ಕೊಡೈಕೆನಾಲ್‌ನಲ್ಲಿ ಸೇರಿದ್ದರಿಂದ ಟ್ರಾವಲ್ಲರ್ಸ್‌ನವರು ನಮಗೆ ಸಂಜೆಯವೇಳೆ ಹಲವಾರು ಕಾರ್ಯಕ್ರಮಗಳನ್ನು ನಡೆಸಿದರು.

ಹಲವಾರು ಕಡೆಗಳಲ್ಲಿ ನಾವು ಬೋಟಿಂಗ್‌ಗೆ ತೆರಳಿದ್ದೆವು. ಕೊಚಿನ್‌ನಲ್ಲಿ ನಮಗೆ ಒಂದು ಘಂಟೆ ಸಮಯದ ಬೋಟಿಂಗ್ ಇದ್ದು ಅವರು ಅಲ್ಲಿಗೆ ಬರುವ ಹಲವು ದೇಶಗಳ ಹಡಗುಗಳ ಬಗ್ಗೆ ತಿಳಿಸುತ್ತಾ ಹೋದರು. ಒಂದೊಂದು ಹಡಗುಗಳ ಗಾತ್ರ ಹಾಗೂ ಅವುಗಳು ಹೊತ್ತುತ್ತಿರುವ ಅನಿಲಗಳ ಬಗ್ಗೆ ನಮಗೆ ತಿಳಿಯಿತು. ದೇವಸ್ಥಾನಗಳಿಗೆ ತೆರಳುವ ಮೊದಲು ನಮಗೆ ಅವುಗಳ ಇತಿಹಾಸದ ಬಗ್ಗೆ ತಿಳಿಸಿದರು. ದೇವಸ್ಥಾನದ ಇತಿಹಾಸವು ಹಲವಾರು ವಂಶಸ್ಥರು ಅದನ್ನು ಕಟ್ಟಿಸಿದ ಬಗೆಯನ್ನು ನಮಗೆ ತಿಳಿಸಿದರು. ಇದು ನನ್ನ ಮನಸ್ಸಿನಲ್ಲಿ ಅಳಿಯದೆ ಚಿರಕಾಲ ಉಳಿಯುತ್ತದೆ.

ಎನ್.ಸಿ.ಸಿ.ಯಲ್ಲಿ.....

– ಮನೋಜ್ ಪೈ
ದ್ವಿತೀಯ ಬಿ.ಕಾಂ. ಬಿ'–1'

ಎನ್.ಸಿ.ಸಿ. ಎಂಬುದು ಒಂದು ಅದ್ಭುತ ಯುವ ಪ್ರೇರೇಪಣಾ ಸಂಸ್ಥೆ. ಇದರ ವಿದ್ಯಾರ್ಥಿಗಳು ಶಿಸ್ತಿನ ಸಿಪಾಯಿಯಂತಿರುತ್ತಾರೆ. ಇದು ಯುವತರುಣರಿಗೆ ಕೇವಲ ಭೌತಿಕವಾಗಿ ಅಲ್ಲದೇ ಮಾನಸಿಕವಾಗಿಯೂ ಸದೃಢ ಮಾಡುತ್ತದೆ. ಶಿಸ್ತು ಮತ್ತು ಒಗ್ಗಟ್ಟು ಎನ್.ಸಿ.ಸಿ. ವಿದ್ಯಾರ್ಥಿಗಳ ಧ್ಯೇಯ ವಾಕ್ಯ. ಸ್ವಂತ ಕೆಲಸಕ್ಕಿಂತ ಸೇವೆ ಮೊದಲು ಎಂಬ ಉದ್ದೇಶವನ್ನು ಈ ವಿದ್ಯಾರ್ಥಿಗಳು ಹೊಂದಿರುತ್ತಾರೆ. ಸೈನ್ಯ ಸೇರಲು ಬೇಕಾದ ಎಲ್ಲಾ ರೀತಿಯ ಪೂರ್ವ ತಯಾರಿ ಮಾಡಲು ಸಹಕರಿಸುತ್ತದೆ. ಪ್ರತೀ ವರ್ಷ ಹಲವು ರೀತಿಯ ಕ್ಯಾಂಪ್‌ಗಳು ಇಲ್ಲಿ ನಡೆಸುತ್ತಾರೆ. ಕೇವಲ ಉತ್ತಮರಲ್ಲಿ ಉತ್ತಮರೆಂದೆನಿಸಿದವರಿಗೆ ಮಾತ್ರ ಕ್ಯಾಂಪ್‌ಗಳಿಗೆ ಹೋಗುವ ಅವಕಾಶ ಸಿಗುತ್ತದೆ. ಹಲವು ಕಡೆ ನಡೆಯುವ ಈ ಕ್ಯಾಂಪ್‌ಗಳಿಗೆ ಹೋಗಿ ಹಲವು ರೀತಿಯ ಅನುಭವಗಳನ್ನು ಪಡೆಯುತ್ತೇವೆ. ಅಲ್ಲದೇ ರಾಷ್ಟ್ರಮಟ್ಟದ ಕ್ಯಾಂಪ್‌ನಲ್ಲಿ ಪಾಲ್ಗೊಂಡ ಕೆಡೆಟ್‌ಗಳಿಗೆ ಹೊಸ ಸಮಸವಸ್ತ್ರ, ಶ್ಯೂ, ಪದಕ, ಇತ್ಯಾದಿಯನ್ನು ಕೊಡುತ್ತಾರೆ. ಅಲ್ಲದೇ ಯುದ್ಧನೌಕೆ, ಟ್ಯಾಂಕ್, ಜೆಟ್ ವಿಮಾನಗಳನ್ನು ಸಮೀಪದಿಂದ ನೋಡುವ ಅವಕಾಶವೂ ಸಿಗುತ್ತದೆ. Second Line of Defence ಎಂದೂ ಕೂಡ ಇದನ್ನು ಕರೆಯುತ್ತಾರೆ. ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗುವುದರೊಂದಿಗೆ ದೇಶ ಸೇವೆ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಎನ್.ಸಿ.ಸಿ. ಒಂದು ಪ್ರೇರಣೆ ಎಂಬುದು ಸತ್ಯ.

ಹೈದರಾಬಾದ್ ಪ್ರವಾಸದಲ್ಲಿ ನನ್ನ ಅನುಭವ

– ದೀಕ್ಷಾ ಬಲ್ಲಾಳ್
ದ್ವಿತೀಯ ಬಿ.ಕಾಂ. 'ಬಿ–1'

ನನ್ನ ಎರಡನೇ ಸೆಮಿಸ್ಟರ್ ಪರೀಕ್ಷೆ ಮುಗಿದ ಕೂಡಲೇ ನಾನು ರಜೆಯಲ್ಲಿ ಪ್ರವಾಸಕ್ಕೆಂದು ಹೈದರಾಬಾದ್, ಮೈಸೂರು ಹಾಗೂ ಬೆಂಗಳೂರಿಗೆ ಹೋದೆ. ಅದರಲ್ಲಿ ಹೈದರಾಬಾದ್‌ನಲ್ಲಿ ಕಳೆದಂತಹ ಕೆಲವು ದಿನಗಳು ಬಹಳಷ್ಟು ಒಳ್ಳೆಯ ದಿನಗಳು. ಹೈದರಬಾದ್‌ಗೆ ಹೋದ ಮೊದಲನೆ ದಿನ, ರಾತ್ರಿ ಒಂದು ಪಾರ್ಟಿ ಇತ್ತು. ಅಂದು ನನ್ನ ಅಣ್ಣ–ತಮ್ಮಂದಿರೊಂದಿಗೆ ತುಂಬಾ ಸಂತೋಷಪಟ್ಟೆ. ಸಂಗೀತ ಕಾರ್ಯಕ್ರಮ, ಇತ್ಯಾದಿಗಳನ್ನು ಏರ್ಪಡಿಸಲಾಗಿತ್ತು. ನಾನು ಅಲ್ಲಿ ಹಾಡು ಹಾಡಿದ್ದೆ. ನಂತರ ಮಾರನೆಯ ದಿನ ನನ್ನ ಅಕ್ಕನ ಮದುವೆ ಇತ್ತು. ಅಂದೂ ಸಹ ನಾವೆಲ್ಲರೂ ಒಗ್ಗೂಡಿ ಚೆನ್ನಾಗಿ ಕಾಲ ಕಳೆದೆವು. ಆ ಸಂಜೆ ನಾವು ಅಲ್ಲೇ ಹತ್ತಿರದಲ್ಲಿ ಇದ್ದಂತಹ 'ಶಿಲ್ಪಾರಾಮಂ' ಎಂಬ ಒಂದು ಆರ್ಟ್ ಹೌಸ್ ಗೆ ಹೋಗಿದ್ದೆವು. ಅಲ್ಲಿ ಮಣ್ಣಿನಿಂದ ಮಾಡುವಂತಹ ಹಲವಾರು ಮಡಕೆಗಳು, ಪಾತ್ರಗಳು ಇತ್ಯಾದಿ ಹಾಗೂ ಹಲವಾರು ಹಳೆಯ ಕಾಲದ ಅಭ್ಯಾಸಗಳನ್ನು ಕಂಡೆವು. ಮಡಕೆ ಮಾಡುವ, weaving ಮಾಡುತ್ತಿರುವ, ಗದ್ದೆಯಲ್ಲಿ ಕೆಲಸ ಮಾಡುತ್ತಿರುವ , ಮಣ್ಣಿನ ಗೊಂಬೆಗಳನ್ನು ಮಾಡುವ ರೀತಿಯನ್ನು ನೋಡಿದೆವು. ಅಲ್ಲಿ ನಾವು ನಮಗೆ ಗೊತ್ತೇ ಇರದಂತಹ ಹಲವು ವಿಷಯಗಳು ಅಲ್ಲಿ ನೋಡ ಸಿಕ್ಕಿತು. ನಂತರ ಮುಂದಿನ ದಿನ, ಇಡೀ ಹೈದರಾಬಾದ್‌ನ್ನು ಸುತ್ತಿದೆವು. ಹಲವಾರು ಪ್ರಸಿದ್ಧ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿದೆವು. ಅವು ಯಾವುದೆಂದರೆ, ಅತೀ ದೊಡ್ಡ ಹಾಗೂ ಬಹು ಪ್ರಸಿದ್ಧವಾದ 'ಸಾಲಾರ್‌ಜಂಗ್ ಮ್ಯೂಸಿಯಮ್', ಕೆಲವು ರಾಜರ ಅರಮನೆಗಳು, ಎನ್.ಟಿ.ಆರ್. ಉದ್ಯಾವನ, ಬಿರ್ಲಾ ಮಂದಿರ್, ಗೋಲ್ಕೊಂಡಾ ಫೋರ್ಟ್ ಇತ್ಯಾದಿ. ಆ ಇಡೀ ದಿನ ಇಂತಹ ಜಾಗಗಳಿಗೆಲ್ಲಾ ಭೇಟಿ ನೀಡಿ ಕಳೆದದ್ದು ಬಹಳ informative ಆಗಿತ್ತು. ಆದರೆ ಅಂದು ನಮಗೆ ತುಂಬಾ ಆಯಾಸವಾಗಿತ್ತು. ರಾತ್ರಿ ಗಟ್ಟಿ ನಿದ್ದೆ ಮಾಡಿ, ನಂತರ ಮಾರನೆಯ ದಿನ ಪುನಃ ಹೊರಟೆವು. ಆದಿನವಂತೂ ನಾನು ಖಂಡಿತ ಮರೆಯುವುದಿಲ್ಲ. ಯಾಕೆಂದರೆ, ಅಂದು ನಾನು ಹೋದದ್ದು ಅತ್ಯಂತ ಪ್ರಸಿದ್ಧವಾದಂತಹ 'ರಾಮೋಜಿ ಫಿಲ್ಮ್ ಸಿಟಿ'ಗೆ. ನಾನು ಅದರ ಬಗ್ಗೆ ಸಾಕಷ್ಟು ಕೇಳಿದ್ದೆನು. ಆದರೆ ಅಲ್ಲಿಗೆ ಎಂದೂ ಹೋಗಿರಲಿಲ್ಲ. ಅಂದು ನನ್ನ ಅತ್ಯಂತ ಮೆಮೊರೇಬಲ್ ದಿನ. ಅಲ್ಲಿ ಹಲವಾರು ಶೂಟಿಂಗ್ ಸೆಟ್‌ಗಳನ್ನು ಕಂಡೆವು. ಸಿನಿಮಾದಲ್ಲಿ ಸೌಂಡ್ ಇಫೆಕ್ಟ್ ಹೇಗೆ ನೀಡುತ್ತಾರೆ ಎನ್ನುವುದನ್ನೂ ಸಹ ಕಲಿತೆವು. ನಂತರ 'ರೈನ್ ಡ್ಯಾನ್ಸ್'ನಲ್ಲಿ ಭಾಗವಹಿಸಿದೆವು. ಇಡೀ ದಿನ ಅಲ್ಲೇ ಕಳೆದೆವು. ಕೊನೆಯ ದಿನ ಬೆಳಗ್ಗೆ ನಾವು ಚಾರ್‌ಮಿನಾರ್‌ಗೆ ಹೋದೆವು. ಅಲ್ಲಿ ತುಂಬಾ ಅಂಗಡಿಗಳೂ ಸಹ ಇದ್ದವು. ಎಲ್ಲರಿಗೂ ಗೊತ್ತಿದ್ದ ಹಾಗೆ ಹೈದರಾಬಾದ್‌ನಲ್ಲಿ ಮುತ್ತು ತುಂಬಾ ಪ್ರಸಿದ್ಧವಾದುದು. ನಾನು ಅಲ್ಲಿ ಹಲವಾರು ಮುತ್ತಿನ ಆಭರಣಗಳನ್ನು ಕೊಂಡೆನು. ಅಲ್ಲೂ ಸಹ ತುಂಬಾ ಗಮ್ಮತ್ತಾಯಿತು. ನಂತರ ಅದೇ ರಾತ್ರಿ ನಾವು ಅಲ್ಲಿಂದ ಮೈಸೂರಿಗೆ ಹೊರಡುವ ಸಮಯ ಬಂದಿತು. ನಾವು ಅಲ್ಲಿಂದ ಮೈಸೂರಿಗೆ ಹೋದೆವು. ಅಲ್ಲಿ ಮೂರು ದಿನಗಳನ್ನು ಕಳೆದ ನಂತರ ಬೆಂಗಳೂರಿನಲ್ಲಿ ಹತ್ತು ದಿನ ಕಳೆದೆವು. ಅಲ್ಲಿಂದ ನಮ್ಮ ಮನೆಗೆ ಬಂದೆವು.

ಹೀಗೆ ನನ್ನ ಈ ಸಲದ ರಜೆ ಬಹಳ ಸುಂದರವಾಗಿ ಕಳೆದೆನು. ಹೈದರಾಬಾದ್‌ನಲ್ಲಿ ಕಳೆದ ಆ ದಿನಗಳನ್ನು ಎಂದೂ ಮರೆಯಲಾರೆ. ಅದೂ ಸಹ ಮೊದಲನೇ ಸಲ ಹೋಗಿದ್ದು. ಎಲ್ಲರೂ ಒಂದು ಸಲವಾದರೂ ಅಲ್ಲಿಗೆ ಹೋಗಿ ಬರಬೇಕು.

ನನ್ನನ್ನೇ ಹುಡುಕಿ ಬರುವ ಕಷ್ಟಗಳು

– ನಂದನ ಹೆಗಡೆ
ಪ್ರಥಮ ಬಿ.ಎ.

ಕಷ್ಟ ಎಂಬ ಪದ ಕೇಳಿದರೆ ಸಾಕು, ನಮ್ಮ ಮನೋವರ್ತನೆಗಳು ಕ್ಷಣಾರ್ಧದಲ್ಲಿ ಬದಲಾಗಿ ಬಿಡುತ್ತವೆ. ಇನ್ನು ಆ ಕಷ್ಟಗಳು ಬಂದೀತು ಎಂದರೆ ಕೇಳುವ ಮಾತಿಲ್ಲ. ಪ್ರಪಂಚದಲ್ಲಿ ಸಮಸ್ಯೆಗಳಿಂದ ಹೊರತಾಗಿ ಯಾವ ಜೀವಿಯೂ ಇಲ್ಲ ಎಂಬುದು ನಗ್ನ ಸತ್ಯವಾದರೂ ಅದು ನಮಗೆ ತಿಳಿದಿದ್ದರೂ ಅದನ್ನು ನಂಬುವ ಪರಿಪಾಠ ನಮ್ಮಲ್ಲಿ ಇನ್ನೂ ಬೆಳೆದು ಬಂದಿಲ್ಲ. ನಮ್ಮ ಕಷ್ಟಗಳ ಮುಂದೆ ಎಲ್ಲರ ಸಮಸ್ಯೆಯೂ ಗೌಣ ಎಂಬ ಭಾವನೆ ನಮ್ಮಲ್ಲಿ ಬೆಳೆದು ಬಂದಿದೆ. ಚಿಕ್ಕ–ಪುಟ್ಟ ಸಮಸ್ಯೆಗಳನ್ನೇ ಬಹಳವಾಗಿ ಆಲೋಚಿಸಿ ಮನಸ್ಸಿನ ಸಂತೋಷವನ್ನು ಹಾಳುಮಾಡಿಕೊಳ್ಳುತ್ತೇವೆ. ಸೂಜಿ ಗಾತ್ರದ ಸಮಸ್ಯೆಯನ್ನು ಬೆಟ್ಟಕ್ಕೆ ಹೋಲಿಸಿಕೊಂಡು ಮರುಗುತ್ತೇವೆ. ಇಷ್ಟು ಸಾಲದೆಂದು ದೇವರಿಗೂ ಹಳಿಯುತ್ತೇವೆ.....ದೇವರು ಎಲ್ಲಾ ಕಷ್ಟವನ್ನು ನನಗೇ ಕೊಡುತ್ತಾನೆಂದು.....

ಹಾಗಾದರೆ ನಾವು ಕಷ್ಟ ಎಂದು ಭಾವಿಸಿದ ವಿಷಯವನ್ನು ಯಾರಾದರೂ ಕೇಳಿದರೆ ನಕ್ಕು ಬಿಡಬಹುದು...! ತನ್ನ ಮರಿ ಹೊನ್ನ ಮರಿ; ಪರರ ಮರಿ ಕಾಗೆ ಮರಿ ಎಂಬಂತೆ ನಮ್ಮ

ಕಷ್ಟಗಳು ನಮಗೆ ಕಷ್ಟದ ಸಾಲಿನಲ್ಲಿಯೇ ಅಗ್ರ ಸ್ಥಾನದಲ್ಲಿರುವ ಕಷ್ಟದಂತೆ ಭಾಸವಾಗುತ್ತದೆ.

ಯಾವುದೋ ಒಂದು ಕಾರ್ಯ ಹೇಳಿದ ತಕ್ಷಣ ಆಗಿಲ್ಲವೆಂದರೆ, ಪರೀಕ್ಷೆಯಲ್ಲಿ ಯಾವುದೋ ಒಂದು ವಿಷಯ ಫೇಲ್ ಆದರೆ, ಯಾರೋ ಒಂದೆರಡು ದಿನ ಮಾತನಾಡಿಲ್ಲವೆಂದರೆ ಬಹಳ ಖಿನ್ನತೆಗೊಳಲಾಗಿ, ಇದೇ ದೊಡ್ಡ ಸಮಸ್ಯೆ ಎಂದು ನರಳಾಡಿಬಿಡುತ್ತೇವೆ. ಒಮ್ಮೆ ತಾಳ್ಮೆಯಿಂದ ಅವಲೋಕಿಸಿದರೆ ಇದು ವಿಷಯವೇ ಅಲ್ಲ.

ನಮ್ಮ ಬದುಕಿನಲ್ಲಿ ಜರುಗುವ ಪ್ರತಿಯೊಂದು ಘಟನಾವಳಿಗಳನ್ನು ನಕಾರಾತ್ಮಕವಾಗಿ ಅಳೆಯುವುದು ನಮ್ಮ ದೌರ್ಬಲ್ಯವಾಗಿಬಿಟ್ಟಿದೆ. ಇದು ನಮ್ಮ ಮನಸ್ಸನ್ನು ಹದೆಗೆಡಿಸುತ್ತದೆ. ಈ ದೌರ್ಬಲ್ಯದಿಂದ ನಾವು ಯಾರೆಂದು ನಾವೇ ಮರೆಯುತ್ತಿದ್ದೇವೆ.

ಕಷ್ಟಗಳು ಎದುರಾದಾಗ ನಮಗೆ ದೇವರು ನೆನಪಾಗುವುದು ಸಹಜ. ಅದು ಆ ಸಮಯದಲ್ಲಿ ಮಾತ್ರ ಇರಬಹುದು. ಮನೆಯವರು, ಸ್ನೇಹಿತರು, ಸಂಬಂಧಿಗಳು, ಎಲ್ಲರೂ ಒಮ್ಮೆಲೇ ನೆನಪಾಗಿಬಿಡುತ್ತಾರೆ. ಅದು ಕೇವಲ ನಮ್ಮ ಅಸಹಾಯಕ ಭಾವನೆಯಿಂದ...!

ಅದೇ ರೀತಿ ಒಂದು ವೇಳೆ ನಾನು ಕ್ಲಾಸಿಗೆ ಪ್ರಥಮ ಸ್ಥಾನ ಪಡೆದರೆ, ನಮಗಾಗಿ ಖರ್ಚು ಮಾಡುವ ಹುಡುಗ / ಹುಡುಗಿಯ ಸ್ನೇಹ ಸಿಕ್ಕರೆ... ನಮಗೆ ಯಾರೂ ನೆನಪಿಗೆ ಬರುವುದಿಲ್ಲ. ಬದಲಾಗಿ ನಾವು ಇನ್ನೂ ಕನಸಿನ ಲೋಕದಲ್ಲಿ ವಿಹರಿಸುತ್ತಿರುತ್ತೇವೆ. ಸಂತೋಷದ ಬದುಕಿಗೆ ಸಹಜವಾಗಿ ಒಗ್ಗಿಕೊಂಡುಬಿಡುತ್ತೇವೆ.

ಜೀವನದಲ್ಲಿ ಬರುವ ಸುಖವನ್ನು ಹೇಗೆ ಸ್ವೀಕರಿಸುತ್ತೇವೆಯೋ, ಅದೇ ರೀತಿ ಕಷ್ಟಗಳನ್ನೂ ಎದುರಿಸಿ ಪರಿಹಾರೋಪಾಯ ಕಂಡುಕೊಳ್ಳಬೇಕಷ್ಟೆ...ಜೀವನವೇ ಶಾಶ್ವತವಲ್ಲದ ಸಂಗತಿ, ಕೆಲವೊಬ್ಬರಿಗೆ ಜೀವನವೇ ನಶ್ವರವಾಗಿರಬೇಕಾದರೆ, ಜೀವನದಲ್ಲಿ ಬರುವ ಸಮಸ್ಯೆಗಳು ಹೇಗೆ ಶಾಶ್ವತವಾಗಿ ಉಳಿದೀತು? ಸಮಸ್ಯೆಗಳನ್ನು ಎದುರಿಸೋಣ, ಖಿನ್ನತೆಯಿಂದ ದೂರವಾಗೋಣ, ಇರುವ ಮೂರು ದಿನದಲ್ಲಿ ಸಂತೋಷವಾಗಿರೋಣ.

ನಮ್ಮ ಶಾಲೆ

– ಅನುಶಾ ರಾವ್

ಶಾಲೆಯು ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿ ಸ್ಮರಣೀಯ ದಿನಗಳಾಗಿರುತ್ತವೆ. ನಮ್ಮ ಭವಿಷ್ಯವನ್ನು ಕಟ್ಟಿಕೊಡುವಂತದ್ದು ಶಾಲೆ. ಅಲ್ಲಿ ಕಲಿತಂತ ಆಟ–ಪಾಠ ನಮ್ಮ ಜೀವನದಲ್ಲಿ ಅಚ್ಚಳಿಯದೆ ಉಳಿಯುತ್ತದೆ. ತುಂಬ ಮಕ್ಕಳು ಶಾಲೆಗೆ ಹೋಗದೆ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ನಮ್ಮ ಶಾಲೆಯ ಶಿಕ್ಷಕರು, ಅವರು ಹೇಳಿದಂಥ ಪಾಠ, ಕತೆ, ಕವನಗಳು, ಹೇಳುವ ರೀತಿ–ನೀತಿ, ನಾವು ತಪ್ಪು ಮಾಡಿದಾಗ ತಿದ್ದಿ ತೀಡಿ ಹೇಳಿದ ಬುದ್ಧಿ ಮಾತು ಇಂದು ನಮ್ಮ ನಮ್ಮ ನಡೆ ನುಡಿ ಸಂಸ್ಕಾರವಂತರನ್ನಾಗಿ ಮಾಡಿದೆ. ನಾವು ನಮ್ಮ ಗೆಳೆಯ/ಗೆಳತಿಯರೊಡನೆ ಮಾಡಿದ ತುಂಟಾಟ, ತರ್ಲೆ ಈಗಲೂ ನೆನೆದಾಗ ಮೈ ನವಿರೇಳುತ್ತದೆ. ನಾವು ಶಾಲೆಗೆ ಹೋಗಲು ಹಠ ಮಾಡಿದಾಗ ಅಮ್ಮ ಚಾಕ್ಲೇಟು ಕೊಟ್ಟು ಪುಸಲಾಯಿಸಿದ್ದು, ಮನೆಗೆ ಬರುವಾಗ ಗೋಲ್‌ಗಪ್ಪ ಬೇಕೆಂದು ಹಠ ಮಾಡಿದ ನೆನಪುಗಳು ಇಂದಿಗೂ ನಗು ತರಿಸುವಂಥದ್ದು. ಶಾಲೆಯಲ್ಲಿ ನಾವೆಲ್ಲಾ ಒಟ್ಟಿಗೆ ಕುಳಿತು ಊಟ ಮಾಡುವಂಥದಾಗಲಿ, ಒಬ್ಬರಿಗೊಬ್ಬರು ಹಂಚಿಕೊಂಡು ತಿನ್ನುವಂತಹುದಾಗಲಿ, ಸ್ನೇಹ, ವಾತ್ಸಲ್ಯ, ಪ್ರೀತಿ, ವಿಶ್ವಾಸ ಎಂಬುದು ಶಾಲೆಯಲ್ಲಿ ಕಲಿತ ಪಾಠಗಳಾಗಿವೆ. ಸ್ನೇಹ ಎಂಬುದಕ್ಕೆ ಅರ್ಥ ಕೊಡುವುದು ಅಥವಾ ಕಲಿಸುವುದು ನಮ್ಮ ಶಾಲೆ. ಇನ್ನು ನಮ್ಮ ಶಾಲೆಯಲ್ಲಿ ಆಟವಾಡುತ್ತಿದ್ದ ಆಟಗಳೆಂದರೆ ಹೈಜಂಪ್, ಲಾಂಗ್‌ಜಂಪ್, ಟೆನ್ನಿಸ್, ಬಾಸ್ಕೆಟ್ ಬಾಲ್ ಮುಂತಾದವು.

ನರ್ಸರಿಯಿಂದ ಹಿಡಿದು ಹತ್ತನೆ ತರಗತಿಯವರೆಗೆ ನವು ನಡೆದು ಬಂದ ರೀತಿ ನಡೆಸಿಕೊಂಡು ಬಂದ ರೀತಿ, ನಡೆಸಿಕೊಂಡು ಬಂದ ನಮ್ಮ ಶಾಲೆಯನ್ನು ಎಷ್ಟು ನೆನಪಿಸಿಕೊಂಡರೂ ಸಾಲದು. ನಮ್ಮ ಜೀವನಕ್ಕೆ ದಾರಿ ರೂಪಿಸಿಕೊಟ್ಟ ನಮ್ಮ ಶಾಲೆಯನ್ನು ನಮ್ಮ ಜೀವನದಲ್ಲಿ ಎಂದೂ ಮರೆಯಲಾಗದು.

ನಮ್ಮ ಶಾಲೆಯ ಜೀವನದ ಮೊದಲ ಮೆಟ್ಟಿಲು, ಮೊದಲ ಘಟ್ಟ. ಇಂಥ ಶಾಲೆಯ ಜೀವನ ನಮ್ಮ ಕಣ್ಣಲ್ಲಿ ಎಂದಿಗೂ ಅಚ್ಚಳಿಯದೆ ನಿಲ್ಲುತ್ತದೆ.

ಸಂಪದೋ ಮಹತಾಮೇವ ಮಹತಾಮೇವ ಚಾಪದಃ ।
ವರ್ಧತೇ ಕ್ಷೀಯತೇ ಚಂದ್ರೋ ನ ತು ತಾರಾಗಣಃ ಕ್ವಚಿತ್ ॥

ಸಂಪತ್ತಾಗಲಿ ವಿಪತ್ತಾಗಲಿ ಅದು ಕೇವಲ ದೊಡ್ಡವರಿಗೆ ಮಾತ್ರ. ಹಿಗ್ಗುವುದಾಗಲಿ ಕುಗ್ಗುವುದಾಗಲಿ ಅದು ಕೇವಲ ಚಂದ್ರನಿಗೆ ಮಾತ್ರ ಹೊರತು ನಕ್ಷತ್ರ ಸಮೂಹಕ್ಕಲ್ಲ.

ನನ್ನ ನೆಚ್ಚಿನ ಪ್ರವಾಸ

– ಕೆ.ಜಿ.ಪ್ರತಿಮಾ ಆಚಾರ್ಯ
ಪ್ರಥಮ ಬಿ.ಕಾಂ. 'ಬಿ–1'

ಮಕ್ಕಳೆಲ್ಲರೂ ಶಾಲಾ ಕಾಲೇಜುಗಳಲ್ಲಿ ಪ್ರವಾಸ ಹೋಗುವುದು ಸಹಜ. ಅಂತೆಯೇ ನಾವು ಪ್ರೌಢಶಾಲಾ ವಿಭಾಗದಲ್ಲಿರುವ ಸಂದರ್ಭ ಮೂರು ವರ್ಷವೂ ಪ್ರವಾಸ ಏರ್ಪಡಿಸಿದ್ದೆವು. ನಾನು 9ನೆಯ ತರಗತಿಯಲ್ಲಿ ಪ್ರವಾಸಕ್ಕೆ ಹೋಗಿದ್ದೆ. ಅದು ನನಗೆ ಸಂತೋಷ ನೀಡಿದ, ನಾನು ಮೆಚ್ಚಿದ ನನ್ನ ನೆಚ್ಚಿನ ಪ್ರವಾಸ.

ನಮಗೆ ಪಿಲಿಕುಳ ಅರಣ್ಯಧಾಮ ಹಾಗೂ ಮಾನಸಾ ವಾಟರ್ ಪಾರ್ಕ್‌ಗೆ ಪ್ರವಾಸ ಏರ್ಪಡಿಸಿದ್ದರು. ನಾವು ಬೆಳಗ್ಗೆ ಬೇಗ ಅಂದರೆ 6.30ಕ್ಕೆ ನಮ್ಮ ಶಾಲಾ ವಠಾರದಿಂದ ಹೊರಟೆವು. ನಂತರ ನಮ್ಮನ್ನು ಒಂದೆಡೆ ಹೋಟೇಲಗೆ ಕರೆದುಕೊಂಡು ಹೋಗಿ ತಿಂಡಿ ತಿನ್ನಿಸಿ, ನಂತರ ಅಲ್ಲಿಂದ ಮಂಗಳೂರಿನಲ್ಲಿರುವ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ತಯಾರಿಸುವ ಕೆಎಮ್‌ಸಿ ಫಾಕ್ಟರಿಗೆ ಕರೆದುಕೊಂಡು ಹೋದರು. ಅಲ್ಲಿನ ಮುಖ್ಯಸ್ಥರು ನಮ್ಮನ್ನೆಲ್ಲಾ ಫಾಕ್ಟರಿಯ ಒಳಗೆ ಕರೆದುಕೊಂಡು ಹೋಗಿ ಡೈರಿಯಿಂದ ಬಂದ ಹಾಲು ಯಾವ ರೀತಿಯಾಗಿ ಪ್ಯಾಕೆಟುಗಳಿಗೆ ತಂಬಿಸುತ್ತಾರೆ, ಅದನ್ನು ಶುದ್ಧೀಕರಿಸುವುದನ್ನು, ಅದರ ಇತರ ಉತ್ಪನ್ನಗಳನ್ನು ಹೇಗೆ ತಯಾರಿಸುತ್ತಾರೆ ಎಂದು ತೋರಿಸಿದರು ಮತ್ತು ಅದರ ಬಗ್ಗೆ ನಮಗೆ ಮಾಹಿತಿ ನೀಡಿದರು. ನಂತರ ಅಲ್ಲಿಂದ ನಮ್ಮ ಬಸ್ಸು ಹೊರಟು ನೇರ ಪಿಲಿಕುಳ ಅರಣ್ಯಧಾಮ ಸೇರಿತು. ದಾರಿ ಮಧ್ಯೆ ಬಸ್ಸಿನಲ್ಲಿ ನಾವು ಹಾಡುತ್ತಾ, ಕುಣಿಯುತ್ತಾ ತುಂಬಾ ಮಜಾ ಮಾಡಿದೆವು. ನಂತರ ಪಿಲಿಕುಳದಲ್ಲಿ ಮಧ್ಯಾಹ್ನ 12.30 ವರೆಗೆ ಪ್ರಾಣಿ, ಪಕ್ಷಿ, ಹಾವು, ವಿಜ್ಞಾನ, ಕರಕುಶಲ ವಸ್ತುಗಳು, ಹಿಂದಿನ ಕಾಲದ ವಸ್ತುಗಳು ಸಂಗ್ರಹಿಸಿದ್ದನ್ನು ಎಲ್ಲವನ್ನೂ ನೋಡಿಕೊಂಡು ಬಂದೆವು. ನಂತರ ಅಲ್ಲಿಂದ ನಮ್ಮ ಬಸ್ಸು ನೇರ ಮಾನಸಾ ವಾಟರ್ ಪಾರ್ಕ್‌ಗೆ ಹೋಯಿತು. ಅಲ್ಲಿ ನಾವು ಹೋಟೇಲಿನಲ್ಲಿ ತಿಂಡಿ ತಿಂದು ಅಲ್ಲಿಂದ ಹೊರೆಟೆವು. ದಾರಿ ಮಧ್ಯೆ ಬಸ್ಸಿನಲ್ಲ ಮೋಜು ಮಸ್ತಿ ಮಾಡುತ್ತಾ ಪ್ರವಾಸದ ಕುರಿತು ಮಾತಾಡುತ್ತಾ ಬಂದೆವು. 8.30ಕ್ಕೆ ನಾವು ನಮ್ಮ ಮನೆ ಸೇರಿದೆವು. ಇದು ನನ್ನ ಜೀವನದಲ್ಲಿ ಮರೆಯಲಾಗದ ಪ್ರವಾಸ. ನಾನು ನನ್ನ ಜೀವನದಲ್ಲಿ ಅದಕ್ಕೂ ಮೊದಲು ಎಲ್ಲಾ ಪ್ರವಾಸ ಹೋಗಿರಲಿಲ್ಲ. ಆದ್ದರಿಂದ ಅದು ನನ್ನ ನೆಚ್ಚಿನ ಪ್ರವಾಸ.

ಅಪ್ಪ ಅಮ್ಮ ಎಂದರೆ ಒಂದು ಸುಂದರ ಜಗತ್ತು

– ಪೂಜಾ ಎಸ್. ಕರ್ಕೇರ
ದ್ವಿತೀಯ ಬಿ.ಕಾಂ. 'ಬಿ–1'

ಅಪ್ಪ ಅಮ್ಮ ಎಂದರೆ ನಿಜಕ್ಕೂ ಒಂದು ಸುಂದರ ಜಗತ್ತು. ಯಾಕೆ ಅಂದರೆ ನಮ್ಮ ಜೀವನದಲ್ಲಿ ತಂದೆ ತಾಯಿಯ ಪಾತ್ರ ಅಪಾರವಾದದ್ದು. 'ಅಮ್ಮ ನಿಮ್ಮನ್ನು ಪ್ರಪಂಚಕ್ಕೆ ಪರಿಚಯಿಸುತ್ತಾಳೆ. ಅಪ್ಪ ಪ್ರಪಂಚವನ್ನು ನಿಮಗೆ ಪರಿಚಯಿಸುತ್ತಾನೆ.' 'ಜೀವ ಅಮ್ಮನದು. ಜೀವನ ಅಪ್ಪನದು.' 'ಹಸಿವೆ ತಿಳಿಯದಂತೆ ಅಮ್ಮ ನೋಡುತ್ತಾಳೆ, ಹಸಿವಿನ ಬೆರೆಯನ್ನು ಅಪ್ಪ ತಿಳಿಸುತ್ತಾನೆ.' 'ಅಮ್ಮ ಭದ್ರತೆಯಾದರೆ.....ಅಪ್ಪ ಬಾಧ್ಯತೆಯಾಗುತ್ತಾನೆ...' 'ಬೀಳದಂತೆ ಹಿಡಿಯಬೇಕೆಂದು ಅಮ್ಮ ನೋಡುತ್ತಾಳೆ, ಬಿದ್ದರೂ ಮೇಲೆ ಏಳಬೇಕೆಂದು ಅಪ್ಪ ಹೇಳುತ್ತಾನೆ.' 'ನಡೆಸುವುದು ಅಮ್ಮನಾದರೆ, ನಡವಳಿಕೆ ಅಪ್ಪನಿಂದ.' 'ತನ್ನ ಅನುಭವಗಳನ್ನು ವಿದ್ಯೆಯಂತೆ ಬೋಧಿಸುತ್ತಾಳೆ ಅಮ್ಮ, ನಿನ್ನ ಅನುಭವವೇ ವಿದ್ಯೆ ಎಂದು ತಿಳಿಸುವಂತೆ ಮಾಡುತ್ತಾನೆ ಅಪ್ಪ.' ' ಅಮ್ಮ ಆಲೋಚನೆಯಾದರೆ, ಅಪ್ಪ ಆಚರಣೆ.' ಅಮ್ಮನ ಪ್ರೇಮವನ್ನು ನೀನು ಹಸುಳೆ ಇರುವಾಗಲೇ ತಿಳಿದುಕೊಳ್ಳುತ್ತೀಯಾ...ಆದರೆ ಅಪ್ಪನ ಪ್ರೇಮವನ್ನು ತಿಳಿದುಕೊಳ್ಳುವುದು ನೀನೊಬ್ಬ ಹಸುಳೆಯ ತಂದೆ ಆದಾಗಲೇ ಮಾತ್ರ.

ಹೀಗೆ ನಮ್ಮ ಜೀವನದಲ್ಲಿ ತಂದೆ ತಾಯಿ ಸಹ ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. ಸಾಧ್ಯವಾದಷ್ಟು ನಿಮ್ಮ ತಂದೆ ತಾಯಿಯನ್ನು ಪ್ರೀತಿಸಿ.

ಮುಖೇನ ನೋದ್ಗಿರತ್ಯುರ್ವ್ಯಂ ಹೃದಯೇನ ನಯತ್ಯಧಃ ।
ಜರಯತ್ಯಂತಃ ಸಾಧುರ್ದೋಷಂ ವಿಷಮಿವೇಶ್ವರಃ ॥

ಸಜ್ಜನನು ಪರರಲ್ಲಿರುವ ದೋಷವನ್ನು ಕುತ್ತಿಗೆಯಿಂದ ಹೊರಗೆ ಹಾಕುವುದೂ ಇಲ್ಲ, ಒಳಗೆ ನುಂಗುವುದೂ ಇಲ್ಲ. ಈಶ್ವರನು ವಿಷವನ್ನೆಂಬಂತೆ ತನ್ನ ಕುತ್ತಿಗೆಯಲ್ಲಿಯೇ ಇಟ್ಟುಕೊಂಡು ಅದನ್ನು ಜೀರ್ಣಮಾಡುತ್ತಾನೆ.

ಅಮ್ಮ

– ನಂದಿನಿ
ದ್ವಿತೀಯ ಬಿ.ಎಸ್ಸಿ. 'ಬಿ'

'ಅಮ್ಮ' ಎಂಬ ಪದವೇ ಚೆಂದ. ಒಂದು ಚಿಕ್ಕ ಮಗುವೂ ಕೂಡ ತನ್ನ ಕಣ್ಣಿನ ಅಂಚಿನಲ್ಲಿ ನೀರನ್ನು ತುಂಬಿಕೊಂಡು ಹುಡುಕುವುದು ತನ್ನ ತಾಯಿಯನ್ನೇ. ಇಂದಿಗೂ ಎಲ್ಲಾ ವಿಷಯದಲ್ಲೂ ತಾಯಿಗೇ ಅಗ್ರಸ್ಥಾನ. ಮಕ್ಕಳು ಹೆಚ್ಚಾಗಿ, ಅದರಲ್ಲೂ ಹೆಣ್ಣುಮಕ್ಕಳು ಖುಷಿಯಾದಾಗ ತಂದೆಯ ತೋಳನ್ನು ಬಯಸಿದರೂ, ನೋವಾದಾಗ, ದುಃಖವಾದಾಗ ತಾಯಿಯ ಮಡಿಲನ್ನೇ ಆಶ್ರಯಿಸುತ್ತಾರೆ. 'ತಾಯಿಯೇ ದೇವರು', 'ತಾಯಿಯೇ ಮೊದಲ ಗುರು' ಈ ರೀತಿಯಾಗಿ ಹೇಳುತ್ತಾ ಹಿಂದಿನಿಂದಲೂ ತಾಯಿಯನ್ನು ಅಗ್ರಸ್ಥಾನದಲ್ಲಿಯೇ ಇರಿಸಕೊಂಡು ಬಂದಿದ್ದಾರೆ. ಒಬ್ಬ ತಾಯಿಯು ತನ್ನ ಗರ್ಭದಲ್ಲಿ ಒಂಭತ್ತು ತಿಂಗಳುಗಳ ಕಾಲ ಮಗುವೊಂದನ್ನು ಸಲಹಿ, ನಂತರ ಅದನ್ನು ಹೊರ ಪ್ರಪಂಚಕ್ಕೆ ಪರಿಚಯಿಸುತ್ತಾಳೆ. 9 ತಿಂಗಳುಗಳ ಕಾಲ ಹೂವಿನಂತೆ ಹೊಟ್ಟೆಯಲ್ಲಿ ಇಟ್ಟುಕೊಂಡು ನಂತರ ಅತೀವ ವೇದನೆಯನ್ನು ಸಹಿಸಿಕೊಂಡು ಆ ಮಗುವಿಗೆ ಜನ್ಮ ನೀಡುತ್ತಾಳೆ. ಆ ಸಂದರ್ಭದಲ್ಲಿ ಅವಳಿಗೆ ಆಗುವ ನೋವಿಗಿಂತ ಖುಷಿಯೇ ಹೆಚ್ಚು. ಆದರೆ ಇಂದಿನ ಮಕ್ಕಳು ಅವರ ವೃದ್ಧಾಪ್ಯದಲ್ಲಿ ಅವರನ್ನು ಸಾಕಲಾರದೆ ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ.

ಒಬ್ಬ ತಾಯಿಯು ಹುಟ್ಟಿದ ಮಗುವಿಗೆ ಜೀವನಕ್ಕೆ ಬೇಕಾದ ಎಲ್ಲಾ ಮೌಲ್ಯಗಳನ್ನು ಚಿಕ್ಕಂದಿನಿಂದಲೇ ಕಲಿಸಲು ಪ್ರಾರಂಭಿಸುತ್ತಾಳೆ. ಕಡುಬಡತನದಲ್ಲಿದ್ದರೂ ತಾನು ಅರ್ಧ ಹೊಟ್ಟೆ ತುಂಬುವಷ್ಟು ತಿಂದು ತನ್ನ ಮಗುವಿಗೆ ಕೊಡುತ್ತಾಳೆ. ಒಂದು ಮಗುವಿಗೆ ಹೊರ ಪ್ರಪಂಚವನ್ನು ಪರಿಚಯಿಸುವುದೇ ತಾಯಿ. ಜೀವನಕ್ಕೆ ಬೇಕಾದ ಅಗತ್ಯತೆಗಳನ್ನು ಕೊಡುವವಳು ತಾಯಿ. ಎಷ್ಟೇ ಕಷ್ಟ ಇದ್ದರೂ ತನ್ನ ಮಗುವನ್ನು ಓದಿ ವಿದ್ಯಾವಂತರಾಗಿ ಕೆಲಸ ದೊರೆತ ಕೂಡಲೇ ತಾಯಿಯನ್ನೇ ಮರೆತು ಬಿಡುತ್ತಾರೆ. ಅವರ ಬಳಿಯಲ್ಲಿ ಹೊಟ್ಟೆ ತುಂಬಿ ಜಾಸ್ತಿಯಾಗುವಷ್ಟು ಇದ್ದರೂ ತನ್ನ ತಾಯಿಗೆ ಒಂದು ಹೊತ್ತು ಅನ್ನ ಹಾಕುವ ಒಳ್ಳೆಯ ಮನಸ್ಸು ಇರುವುದಿಲ್ಲ. ಇದೇ ತಾಯಿಗೂ ಮಕ್ಕಳಿಗೂ ಇರುವ ವ್ಯತ್ಯಾಸ.

ಹಿಂದಿರುಗಿ ನೋಡಿದಾಗ

– ಅಶ್ವಿನಿ
ದ್ವಿತೀಯ ಬಿ.ಎಸ್ಸಿ. 'ಬಿ'

ಅನುಭವ ಎಂದರೆ ಮೊದಲು ನೆನಪಾಗುವುದು ವಿದ್ಯಾರ್ಥಿ ಜೀವನ. ಮೊದಮೊದಲು ಶಾಲೆಗೆ ತೆರಳುವಾಗ ಮಕ್ಕಳು ಹಿಂಜರಿಯುತ್ತಾರೆ. ಏನೋ ಮನದಲ್ಲಿ ಭಯ. ಒಮ್ಮೆ ಆ ಶಾಲೆಯೆಂಬ ತರಗತಿಗೆ ಕಾಲಿಟ್ಟಂತೆ ಮತ್ತೆ ವಾಪಾಸು ಮರಳಲು ಮನಸ್ಸೇ ಇರುವುದಿಲ್ಲ. ಬೆಳಗ್ಗೆ ಬೇಗ ಎದ್ದು ನಮ್ಮನ್ನು ಶಾಲೆಗೆ ಕಳುಹಿಸಲು ಅವಸರ ಪಡುವ ಅಮ್ಮಂದಿರು, ಪ್ರತಿದಿನ ಶಾಲೆಗೆ ಜೊತೆಗೆ ಬಂದು ನಮ್ಮನ್ನು ನೋಡಿಕೊಳ್ಳುವುದು, ಆದಿನಗಳ ಕೈ ತುತ್ತು. ಈವಾಗ ಒಮ್ಮೆ ನಮ್ಮ ಬಾಲ್ಯಜೀವನವನ್ನು ನೆನೆಸಿಕೊಂಡರೆ ಏನೋ ಮನಸ್ಸಿಗೆ ಖುಷಿ, ಆ ನೆನಪುಗಳು ನಮ್ಮ ಮುಖದಲ್ಲಿ ಒಂದು ಮಂದಹಾಸವನ್ನೇ ತರುತ್ತದೆ. ಆ ಪ್ರಾಥಮಿಕ ಹಂತದ ವಿದ್ಯಾರ್ಥಿಯಾಗಿರುವಾಗ ಆ ಕೆಜಿಗಟ್ಟಲೆ ಪುಸ್ತಕಗಳನ್ನು ಹೊತ್ತು ಹೋಗುವುದು. ದೊಡ್ಡ ವಿದ್ಯಾರ್ಥಿಗಳನ್ನು ನೋಡಿ ನಾವು ಯಾವಾಗ ದೊಡ್ಡವರಾಗುತ್ತೇವೋ.....ಈ ಪುಸ್ತಕಗಳ ಭಾರ ಯಾವಾಗ ಕಡಿಮೆ ಆಗ್ತದೋ ಅಂತ ಅಂದುಕೊಂಡದ್ದು ಉಂಟು. ಇನ್ನು ಸ್ಕೂಲ್‌ಡೇಗಳು ಬಂದಾಗಂತೂ ಶಿಕ್ಷಕರ ಪರಿಸ್ಥಿತಿ ಎಲ್ಲರಿಗೂ ಡ್ಯಾನ್ಸ್ ಕಲಿಸುವುದು. ಆ ಕ್ಷಣವನ್ನು ಯಾವತ್ತೂ ಮರೆಯಲು ಆಗಲ್ಲ. ಇನ್ನು ಸ್ಪೋರ್ಟ್ಸ್‌ಡೇ ನನ್ನ ಲೈಫ್ ಅಲ್ಲಿ ಮರೆಯಲಾಗಲ್ಲ. ಪ್ರತಿ ರನ್ನಿಂಗ್ ರೇಸ್ ಅಲ್ಲಿ ನಾನೇ ಕೊನೆ. ಆಮೇಲೆ ಪಿಟಿ ಸರ್ ಅವರ ಹಾಸ್ಯದ ಮಾತುಗಳು ನನ್ನ ಓಟದ ಬಗ್ಗೆ. ಆ ಕ್ಷಣವನ್ನು ನೆನೆಸಿಕೊಂಡರೆ ಈವಾಗಲೂ ನಗುಬರುತ್ತದೆ. ಖುಷಿಯ ಸಂಗತಿ ಏನೆಂದರೆ ಈವಾಗಲೂ ನನಗೆ ನನ್ನ ಹಳೆಯ ಸರ್ ಸಿಕ್ಕಿದರೆ ನನ್ನ ಹೆಸರು ಕೂಗಿ 'ರನ್ನಿಂಗ್ ರೇಸ್ ನಲ್ಲಿ ಫಸ್ಟ್ ಅಂತೆ,' ಅಂತ ಹಾಸ್ಯಮಾಡುತ್ತಾರೆ. ಆವಾಗ ಇದರಿಂದ ಅಯ್ಯೋ ನಾನು ಸೋತು ಹೋದೆ ಅಲ್ಲಿ ಎಂದು ಬೇಜಾರಂತೂ ಆಗಲ್ಲ. ಇಷ್ಟು ವರ್ಷ ಆದ್ರೂ ನಾನು ರನ್ನಿಂಗ್ ರೇಸ್ ನಲ್ಲಿ ಸೋತಿದಕ್ಕಾದರೂ ನನ್ನ ನೆನಪಿಟ್ಟುಕೊಂಡಿದ್ದಾರಲ್ಲ, ನಾನೇ ಗ್ರೇಟ್ ಅಂತ ಖುಷಿ ಪಡ್ತೀನಿ.

ಇನ್ನು 10th ಮುಗಿತ್ ಕಾಲೇಜ್ ಬಂದ್ರೆ ಕೇಳುವವರು ಯಾರೂ ಇಲ್ಲ. ಆರಾಮಾಗಿ ಇರಬಹುದು. ಒಂದು ಕೆಜಿ ಪುಸ್ತಕ ಇರಲ್ಲ. ಇದೆಲ್ಲಾ ಬರೀ ಮನಸ್ಸಿನ ಮಾತುಗಳು. ಒಂದು ಸಾರಿ ಕಾಲೇಜ್ ಮೆಟ್ಟಲು ಹತ್ತಿದಾಗ ಬಹುತೇಕ ವಿದ್ಯಾರ್ಥಿಗಳಲ್ಲಿ ಕೇಳೋ ಮಾತು, 'ಅಯ್ಯೋ! ಇದಕ್ಕಿಂತ ಸ್ಕೂಲ್ ಲೈಫೇ ಬೆಸ್ಟ್ ಅಲ್ವಾ...' ಅಂತ. ಆ ಪ್ರೈಮರಿ ಸ್ಕೂಲ್‌ನಲ್ಲಿ ದಿನಾಲು 'ಗುಡ್ ಮಾರ್ನಿಂಗ್ ಮೇಡಂ' ಆ ತುಂಟತನ ಎಲ್ಲನ್ನೂ ಮಿಸ್ ಮಾಡ್ತೀವಿ. ಮೊದಲಿನಷ್ಟು ಎಂಜಾಯ್ ಮಾಡಲ್ಲ. ಇವಾಗ ಮೊಬೈಲ್, ಸ್ನೇಹಿತರು ಅಂತಾನೇ ಕಾಲ ಕಳೀತೀವಿ.

ಮೊದಲು ಮನೆಯಲ್ಲಿ ಅಪ್ಪ–ಅಮ್ಮಂದಿರು ಶಾಲೆ ಮುಗಿದ ತಕ್ಷಣ 'ಹೋಮ್‌ವರ್ಕ್ ಮಾಡೋ' ಅಂತ ಕೂಗುತ್ತಿದ್ದರು. ಇವಾಗ 'ಫಸ್ಟ್ ಆ ಮೊಬೈಲ್ ಆಫ್ ಮಾಡೋ' ಅಂತ ಕೂಗ್ತಾರೆ.

ಸಹಾಯ ಮಾಡಿ ಪ್ಲೀಸ್

– ಸುಮೇಧ್ ಶೆಟ್ಟಿ
ದ್ವಿತೀಯ ಬಿ.ಎಸ್ಸಿ.

ಒಂದು ದಿನ ನಾನು ಮತ್ತು ನನ್ನ ಸ್ನೇಹಿತ ಮೀನು ಹಿಡಿಯುತ್ತಾ ಕುಳಿತಿದ್ದೆವು. "ಅಬ್ಬಾ ಮೀನು ಸಿಕ್ತು" ಅಂತಾ ಖುಷಿ ಇಂದ ಮೇಲೆ ಎತ್ತಿ ನೋಡಿದರೆ ಮೀನ್ ಅಲ್ಲ!

ಹಾಗೆಯೇ ಬೇಜಾರಿಂದ ಮನೆಗೆ ಹೋಗುವ ಅಂತ ಗೆಳೆಯನ ಜೊತೆ ಹೋಗ್ತಾ ಇದ್ದೆ. ಗೆಳೆಯನ ಮನೆ ಬಂತು ಹಾಗೆ ಅವನು ಹೋದ.

ನಂತರ ನಾನು ಮುಂದೆ ಹೆಜ್ಜೆ ಹಾಕಿದೆ. ದಾರಿಯಲ್ಲಿ ಒಂದು ಚಿಕ್ಕ ಬಾಕ್ಸ್ ಮತ್ತು ಅದರ ಒಳಗೆ ಒಂದು ಪೇಪರ್ ಇತ್ತು. ಕುತೂಹಲದಿಂದ ತೆಗೆದು ನೋಡಿದೆ. ಅದರಲ್ಲಿ '987654231' ಹಾಗೆ ನಂಬರ್ ಇತ್ತು. ಮತ್ತು ಅದರಲ್ಲಿ ಬರೆದಿತ್ತು, "ನಾನು ತುಂಬಾ ಬೇಜಾರಿನಲ್ಲಿ ಇದ್ದೆ." ಇದನ್ನು ನೋಡಿ ನಾನು ಯಾವುದೋ ಹುಡುಗಿ ಇರಬೇಕು ಎಂದು ಭಾವಿಸಿದೆ.

ಮನೆಗೆ ಹೋಗಿ ಆ ನಂಬರ್‌ಗೆ ಮೆಸೇಜ್ ಮಾಡಿದೆ. ಒಂದು ತಕ್ಷಣದಲ್ಲಿ ರಿಟರ್ನ್ ಮೆಸೇಜ್ ಬಂತು. ನಾನು ತುಂಬಾ ಖುಷಿ ಆದೆ. ಒಂದು ಹುಡುಗಿ ಸಿಕ್ಕಿದಳು ಅಂತ.....

ಹಾಗೆ ಅವಳೊಂದಿಗೆ ಮೆಸೇಜ್ ಮಾಡ್ತಾ ಹೋದೆ. ದಿನಾಲು ಊಟ ಮಾಡುವ ಟೈಮ್ ಬೇಕಿದ್ರೂ ಮಿಸ್ ಆಗಬಹುದು. ಆದರೆ ಅವಳಿಗೆ ಮೆಸೇಜ್ ಮಾತ್ರ ಮಿಸ್ ಆಗ್ತಾ ಇರಲಿಲ್ಲ. ನನಗೆ ಅವಳೊಂದಿಗೆ ಮಾತನಾಡುವುದ ಎಂದರೆ ತುಂಬಾ ಖುಷಿ. ಹಾಗೇ ಅವಳೂ ಕೂಡ....

ನಾವು ದಿನಾಲು ಒಂದು ವರ್ಷದ ತನಕ ಮೆಸೇಜ್ ಮಾಡ್ತಾ ಇದ್ವಿ. ಇಬ್ರಿಗೂ ಸಹ ಬೇಜಾರು ಎನ್ನುವ ಮಾತು ಬರ್ತಾ ಇರ್ಲಿಲ್ಲ. ನನಗೆ ಕುತೂಹಲ ಇತ್ತು. ಇವಳನ್ನು ನೋಡಬೇಕು. ಎಷ್ಟು ಸುಂದರವಾಗಿ ಇದ್ದಳೋ ಏನೋ. ಎದುರು ನಿಂತು ಮಾತನಾಡಬೇಕಿತ್ತು.

ಹೀಗೆ ಒಂದು ದಿನ ಮೆಸೇಜ್ ಮಾಡ್ತಾ ಮಾಡ್ತಾ ನಾನು ಹೇಳಿದೆ, "ಐ ಲವ್ ಯೂ. ನೀನು ನನಗೆ ತುಂಬಾ ಇಷ್ಟ ಆಗಿದ್ದೀಯಾ. ನೀನು ಹೇಗಿದ್ದಿ ಅದು ನನಗೆ ಬೇಕಾಗಿಲ್ಲ" ಅಂತ. ಅದಕ್ಕೆ ಅವಳು ಎರಡು ದಿನ ಟೈಮ್ ಕೇಳಿದ್ಲು. ನಾನು "ಒಕೆ. ಏನಿದ್ರೂ ಡೈರೆಕ್ಟ್ ಹೇಳು ಅಂದೆ."

ಎರಡು ದಿನ ಬಿಟ್ಟು ಕಾಯ್ತಾ ಇದ್ದೆ. ಹಾಗೆಯೇ ಮೆಸೇಜ್ ಬಂತು. "ಐ ಲವ್ ಯು 2." ನನಗೆ ಆ ಸಂದರ್ಭದಲ್ಲಿ ಏನು ಮಾಡ್ಬೇಕು ಎಂದು ಗೊತ್ತಾಗಲಿಲ್ಲ. ಅಷ್ಟು ಖುಷಿಯಲ್ಲಿದ್ದೆ. ನಮ್ಮ ಪ್ರೇಮ ಪಯಣ ಮುಂದುವರಿಯಿತು.

ನಾನು ಒಂದು ದಿನ ಕೇಳಿದೆ. "ನಾನು ನಿನ್ನನ್ನು ನೋಡಬೇಕು. ಎಲ್ಲಿಗೆ ಬರಲಿ ಅಂತ?" ಅದಕ್ಕೆ ಅವಳು ಸಹ ಹಾಗೆ ಹೇಳಿದಳು. "ನಾನು ನಿನ್ನ ನೋಡಬೇಕು."

ಆಯ್ತು ಅಂತ ಒಂದು ದಿನ ನಿಗದಿಯಾಯಿತು. ಅದು ಶನಿವಾರ ಆಗಿತ್ತು.

ಶುಕ್ರವಾರ ಸಂಜೆಯಂತೂ ಎಷ್ಟು ಖುಷಿ.....ನಾಳೆ ನನ್ನ ಮುಂದಿನ ಹೆಂಡತಿಯನ್ನು ಮೀಟ್ ಆಗ್ತೇನೆ ಅಂತ. ತುಂಬಾ ಖುಷಿಯಿಂದ ಇದ್ದೆ.

ಶನಿವಾರ ಬೆಳಗ್ಗೆ ಆಯ್ತು. ಎಲ್ಲಾ ದಿನ 10.00 ಗಂಟೆಗೆ ಏಳುವವ ನಾನು ಆ ದಿನ 6.00 ಗಂಟೆಗೆ ಎದ್ದೆ. ಅಷ್ಟು ಖುಷಿ ಇತ್ತು.

ನಾನು ನನ್ನ ಅಣ್ಣನ ಕಾರ್ ತೆಗೊಂಡು ಒಳ್ಳೆ ಲವ್ ಸಾಂಗ್ ಹಾಕಿ ಹೋಗ್ತಾ ಇದ್ದೆ. ಅವಳು ನನಗೆ ಮೆಸೇಜ್ ಮಾಡಿದ್ಲು. ನಾನು ದೇವಸ್ಥಾನದಲ್ಲಿ ಕಾಯ್ತಾ ಇರ್ತೆ. ಆಮೇಲೆ ಹೇಳಿದ್ಲು, "ನಿನಗೆ ನನ್ನ ಮನೆ ಎಡ್ರೆಸ್ ಮೆಸೇಜ್ ಮಾಡಿದೆ" ಅಂತ. ನಾನು ಕೂಡಾ ಖುಷಿಯಲ್ಲಿ ಹೋಗ್ತಾ ಇದ್ದೆ.

ಹಾಗೆ ಹೋಗ್ತಾ ಇರುವಾಗ ದಾರಿ ಮಧ್ಯೆ ಒಂದು ಆಕ್ಸಿಡೆಂಟ್ ಆಗಿತ್ತು. ಒಬ್ಬ ಅಜ್ಜ ಬಂದು, "ಮಗಾ, ಆ ಹೆಣ್ಣು ಮಗೂನಾ ಉಳಿಸು, ಆಸ್ಪತ್ರೆಗೆ ಕರೆದುಕೊಂಡು ಹೋಗು" ಎಂದು ಅಳುತ್ತಾ ಇದ್ದ. ನಾನು ಹುಡುಗಿ ಮುಖ ನೋಡಿದೆ. ಅವಳು ಬದುಕುವ ಯಾವ ಲಕ್ಷಣವೂ ಇರಲಿಲ್ಲ. ಅದಕ್ಕೆ ಹೇಳಿದೆ, "ಅಜ್ಜ, ಆಂಬುಲೆನ್ಸ್‌ಗೆ ಕಾಲ್ ಮಾಡಿದೆ. ಅವರು ಬರುತ್ತಾರೆ. ನೀವು ಇಲ್ಲೆ ಇರಿ." ನಾನು ಒಂದು ಇಂಪಾರ್ಟೆಂಟ್ ವರ್ಕ್ ಇದೆ." ಎಂದು ಸುಳ್ಳು ಹೇಳಿದೆ. ಅಲ್ಲಿಂದ ಜಾಗ ಖಾಲಿ ಮಾಡಿದೆ.

ನಾನು ದೇವಸ್ಥಾನಕ್ಕೆ ಹೋಗಿ ತುಂಬಾ ಹೊತ್ತು ವೈಟ್ ಮಾಡಿದೆ. ಅವಳು ಬರಲೇ ಇಲ್ಲ. ಮೆಸೇಜ್ ಕೂಡಾ ಮಾಡಿದೆ. ಆದರೂ ಬರಲೇ ಇಲ್ಲ. ಸಂಜೆ ಆಗ್ತಾ ಇತ್ತು. ನಾನು ಅವಳು ಕೊಟ್ಟ ಮೆಸೇಜ್ ಹಿಡ್ಕೊಂಡು ಅವಳ ಮನೆ ಅಡ್ರೆಸ್‌ಗೆ ಹೋದೆ.....

ಮನೆ ಹತ್ತಿರ ಬರುತ್ತಾ ಇರುವಾಗ ಎಲ್ಲರೂ ಅಳುತ್ತಿರುವ ಶಬ್ದ ಕೇಳಿಸಿತು. ನಾನು ಗಾಬರಿಯಾದೆ. ಏನೋ ಆಗಿದೆ ಎಂದು. ಧೈರ್ಯದಿಂದ ಮುಂದೆ ಹೋಗಿ ನೋಡಿದೆ. ಅಲ್ಲಿ ಯಾರೋ ಸತ್ತು ಹೋಗಿದ್ರು. ನಾನು ಅವರನ್ನು ಗಮನಿಸಲೇ ಇಲ್ಲ. ಒಂದು ಹುಡುಗಿ ಹತ್ರ ಹೋದೆ. ಹೋಗಿ ಕೇಳಿದೆ, "ನೀನು ಕಾವ್ಯ ನಾ..." ಅವಳು ಮತ್ತೂ ಜೋರಾಗಿ ಅಳಲು ಶುರು ಮಾಡಿದಳು.

ನಾನು, "ಏನಾಯ್ತು? ಸುಮ್ನೆ ಇರು. ಯಾಕೆ ಅಳ್ತಾ ಇದ್ದೀಯಾ" ಎಂದೆ. ಅದಕ್ಕೆ ಅವಳು, "ಕಾವ್ಯ ಇನ್ನಿಲ್ಲ" ಎಂದು ಬಿಕ್ಕಿ ಬಿಕ್ಕಿ ಅತ್ತಳು. ಹಾಗೆಯೇ ಹೇಳಿದಳು, "ಇವತ್ತು ಯಾರನ್ನೋ ನೋಡ್ಬೇಕು" ಎಂದು ಸ್ಕೂಟಿಯಲ್ಲಿ ಹೋಗ್ತಾ ಇರಬೇಕಾದರೆ ಆಕ್ಸಿಡೆಂಟ್ ಆಗಿ ತೀರಿ ಹೋದಳು.

ನನಗೆ ಅಲ್ಲಿಯೇ ಹೃದಯ ಬಡಿದಂತಾಯಿತು. ಹೋಗಿ ಅವಳ ಮುಖ ನೋಡಿದೆ.

ನೋಡಿದರೆ ಅದು ನಾನು ದಾರಿ ಮಧ್ಯೆ ಬಿಟ್ಟು ಬಂದ ಅದೇ ಹುಡುಗಿ. ನಾನು ಸುಮ್ನೆ ಅಳುತ್ತಾ ಕುಳಿತೆ...ನನಗೆ ನನ್ನ ಮೇಲೆ ಕೋಪ ಬರುತ್ತಾ ಇತ್ತು. ನನ್ನಿಂದಲೇ ಇವಳ ಪ್ರಾಣ ಹೋಯ್ತು ಎಂದು.

ಸ್ನೇಹಿತರೇ, ಯಾರಾದರೂ ಸಹಾಯ ಕೇಳಿದರೆ ಅದು ಕಷ್ಟವಾಗಲಿ ನಾವು ಮಾಡಲು ಪ್ರಯತ್ನಿಸಬೇಕು. ಅವರು ಸಹಾಯ ಕೇಳುತ್ತಾರೆ ಎಂದರೆ ಅವರಿಗೆ ನಮ್ಮ ಅವಶ್ಯಕತೆ ಇದೆ ಎಂದು....ಅದನ್ನ ಅರ್ಥ ಮಾಡಿಕೊಂಡು ನಾವು ಸಹಾಯ ಮಾಡಬೇಕು.

ಎನ್.ಎಸ್.ಎಸ್. ಶಿಬಿರ

– ಹರ್ಷಿತಾ
ದ್ವಿತೀಯ ಬಿ.ಎಸ್ಸಿ.

ನನ್ನ ಜೀವನದ ಸಂತೋಷದ ದಿನಗಳು ಎಂದರೆ ನಾನು ಎನ್.ಎಸ್.ಎಸ್.ಕ್ಯಾಂಪ್‌ಗೆ ಹೋಗಿದ್ದು. ಅದು ನಾನು ಅಂದುಕೊಂಡದ್ದಕ್ಕಿಂತ ತುಂಬಾ ಚೆನ್ನಾಗಿತ್ತು. ಕಾಂಪ್ ಏಳು ದಿನಗಳ ಕಾಲ ನಡೆದಿತ್ತು. ಅದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಮಾಸೆಬೈಲು, ಇಲ್ಲಿ ನಡೆದಿತ್ತು. ಆ ಶಾಲೆಯನ್ನು ತಲುಪಿದ ಮೊದಲ ದಿನ ನಮಗೆ, ಅಂದರೆ ಕ್ಯಾಂಪ್‌ಗೆ ಹೋದ ಸದಸ್ಯರಿಗೆ ಪರಸ್ಪರ ಪರಿಚಯ ಇರಲಿಲ್ಲ. ನಮಗಿಂತ ಒಂದು ವರ್ಷ ಹಿರಿಯರಾದ ದ್ವಿತೀಯ ವರ್ಷದಲ್ಲಿದ್ದವರಿಗೆ ಒಂದು ವರ್ಷದ ಅನುಭವದಿಂದ ಕಾಂಪ್ ಬಗ್ಗೆ ಸ್ವಲ್ಪವಾದರೂ ತಿಳಿದಿತ್ತು. ಆದರೆ ನನಗೆ ಏನೂ ತಿಳಿದಿರಲಿಲ್ಲ. ಅದು ನನಗೊಂದು ಹೊಸ ಅನುಭವ. ಹೊಸಬರ ಪರಿಚಯ. ಏಳೂ ದಿನಗಳ ಕಾಲ ನಮಗೆ ಹೊಸ ಹೊಸ ಕರ್ತವ್ಯಗಳು. ಒಮ್ಮೆ ಅಡುಗೆಮನೆಯಲ್ಲಿ ಕೆಲಸವಾದರೆ, ಇನ್ನೊಮ್ಮೆ program management. ಹೀಗೆ ಇನ್ನೂ ಹಲವಾರು ಕೆಲಸಗಳು. ಇವೆಲ್ಲದರ ಮಧ್ಯೆ ಮಧ್ಯೆ ಶ್ರಮದಾನ.

ನಮ್ಮ ದಿನ ಪ್ರಾರಂಭವಾಗುವುದು ಹೀಗೆ; ಬೆಳಗ್ಗೆ 4.15ಕ್ಕೆ ಎದ್ದು ಸರದಿಯಿಂದ ಸಾಲಿನಲ್ಲಿ jogging, ವ್ಯಾಯಾಮ. ನಂತರ ಬೆಚ್ಚಗಿನ ನೀರು ಕುಡಿದು ಆ ದಿನದ ಪ್ರಾರಂಭ ಮಾಡುತ್ತಿದ್ದೆವು. (ಧ್ವಜಾರೋಹಣ, ಎನ್.ಎಸ್.ಎಸ್. ಹಾಡು, ಆಮೇಲೆ ಚಹಾ ಅಥವಾ ಮಾಲ್ಟ್ ಕುಡಿದು ನಮಗೆ ಬಂದ ಅಥವಾ ನೀಡಿದ ಜವಾಬ್ದಾರಿಯನ್ನು ನಮಗೆ ಮೊದಲೇ ಮಾಡಿದ 5 ಬೇರೆ ಬೇರೆ ಗುಂಪುಗಳಡಿಯಲ್ಲಿ. ಗುಂಪಿನ ನಾಯಕರು ಹೇಳಿದಂತೆ ಮಾಡುತ್ತಿದ್ದೆವು. ಅಲ್ಲಿ ಇದ್ದುದು 5 ಗುಂಪು, ಬಿ.ಎಸ್ಸಿ., ಬಿ.ಕಾಮ್., ಬಿ.ಎ., ಬಿ.ಬಿ.ಎಮ್. ಎಂದು ಬೇರ್ಪಡಿಸದೆ ಎಲ್ಲಾ ವಿದ್ಯಾರ್ಥಿಗಳೂ ಇರುತ್ತಿದ್ದರು. ರಚಿಸಿದ ಆ 5 ಗುಂಪುಗಳಲ್ಲಿ, ಗುಂಪುಗಳಿಗೆ ಪ್ರಸಿದ್ಧ ವಿದ್ಯಾನಿಲಯಗಳ ಹೆಸರಿಟ್ಟಿದ್ದೆವು. ಅಲ್ಲಿ ಹೊಸ ವಿದ್ಯಾರ್ಥಿಗಳು, ಪರಸ್ಪರ ಪರಿಚಯ ಇಲ್ಲ, ಕೆಲವರಿಗೆ ಮಾತನಾಡಲೂ ಮುಜುಗರ. ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿ. ಆದರೆ ನನಗೆ ಸ್ವಲ್ಪ ಮಾತು ಜಾಸ್ತಿ. ಆದ್ದರಿಂದ ಮೊದಲ ದಿನವೇ ಸಾಕಷ್ಟು ವಿದ್ಯಾರ್ಥಿಗಳು (ಸದಸ್ಯರು) ನನಗೆ ಪರಿಚಯವಾಗಿದ್ದರು. ಎಂದೂ ಅಡುಗೆ ಮನೆಯಲ್ಲಿ ಕೆಲಸ ಮಾಡದ ನಾನು ಅಡುಗೆ ಮನೆ ಕೆಲಸದ ಅನುಭವ ಪಡೆದೆ. ಪಾದರಕ್ಷೆಗಳಿಲ್ಲದೇ ನಡೆಯದ ನನ್ನ ಕಾಲ್ಗಳು ಇಡೀ ಶಾಲೆಯ ಸುತ್ತ ನಡೆದ ಅನುಭವ ಪಡೆದೆವು. ಎನ್.ಎಸ್.ಎಸ್.ನಿಂದ ಎದುರು ನಿಂತು ಮಾತನಾಡುವ ಧೈರ್ಯ ಪಡೆದೆವು. ಜವಾಬ್ದಾರಿಯ ನಿಜವಾದ ಅರ್ಥ ತಿಳಿದುಕೊಂಡೆವು. ಅಲ್ಲಿ ನಾವೇ ಬಡಿಸುವವರು.

ನಾವೇ ಕೆಲಸ ಮಾಡುವವರು. ನಾವೇ ತಿನ್ನುವವರು. ನನಗೆ ಆಗ ಅರಿವಾಗಿದ್ದು ಅಮ್ಮ ಎಷ್ಟು ಕೆಲಸ ಮಾಡುತ್ತಿದ್ದಳೋ! ಮನೆಯಲ್ಲಿ ಎಂಬುದು. ಮತ್ತು ಅಲ್ಲಿ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸುವ ಅವಕಾಶವಿತ್ತು. ಅಂದರೆ ಮನೋರಂಜನಾ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಹಾಗೆಯೇ ಆ ಊರಿನ ಅತೀ ಪ್ರಮುಖ ವ್ಯಕ್ತಿಗಳಾದ ಕೊಡ್ಗಿಯವರ ಪರಿಚಯ, ಅವರನ್ನು ಪ್ರಶ್ನಿಸಿ ನಾವು ಉತ್ತರದಕ್ಕಿಸಿಕೊಳ್ಳುವ ಅವಕಾಶ. ಅವರವರ ಮನೆಯಲ್ಲಿ ಉಂಡು, ಅವರ ಆ ಸ್ವರ್ಗದಂಥ ಮನೆ ನೋಡುವ ಭಾಗ್ಯ ನಮ್ಮ ಪಾಲಿಗೆ ಒದಗಿತು. ವಾರಾಹಿಗೆ ಕೂಡ ನಾವು ಭೇಟಿ ಕೊಟ್ಟೆವು. ಸಾಕಷ್ಟು ತಿಳಿದುಕೊಂಡೆವು. ಹ್ಞಾ...ಮರೆತೆ, ನಾವು 4.15ಕ್ಕೆ ಎದ್ದರೆ ರಾತ್ರಿ 12.00ಕ್ಕೆ ಮಲಗುತ್ತಿದೆವು. ಆದರೂ ಆ jogging, ವ್ಯಾಯಾಮಗಳು ನಮ್ಮ ದಣಿವು ಮರೆಸಿ ಬಿಟ್ಟಿದ್ದವು. ನನಗೆ ಅಲ್ಲಿಂದ ಬರುವಾಗ ಸಾಕಷ್ಟು ಜನರ ಪರಿಚಯವಾಗಿತ್ತು. ಕೊನೆಯದಾಗಿ ಜ್ಯೋತಿ ಬೆಳಗಿಸುವ ಮೂಲಕ 'ಪ್ರಾರಂಭಿಸಿದ ನಮ್ಮ ಕ್ಯಾಂಪನ್ನು ಭಾರತ್ ಜ್ಯೋತಿಯ ಮೂಲಕ ಸಮಾರೋಪ ಮಾಡಿ ಅಲ್ಲಿಂದ ಹೊರಟೆವು. ಆದರೆ ಹೊರಡುವ ದಿನ ಎನ್.ಎಸ್.ಎಸ್. ಕ್ಯಾಂಪ್‌ನ ಬಗ್ಗೆ ಏನೂ ತಿಳಿಯದೆ ಬಂದಿದ್ದ ನನಗೆ ಸಾಕಷ್ಟು ತಿಳಿದುಕೊಂಡು, ಸಾಕಷ್ಟು ಜನರ ಜೊತೆ ಇದ್ದು ಖುಷಿ ಅನುಭವಿಸಿದ ಸಂತೋಷ ಇತ್ತು. ಭಾರವಾದ ಹೃದಯದಿಂದ ಪ್ರತಿಯೊಬ್ಬರೂ ಮತ್ತೆ ಕಾಲೇಜಿನಲ್ಲಿ ಸಿಗುವ ಭರವಸೆಯೊಂದಿಗೆ ಹಿಂದಿರುಗಿದೆವು.

ಕೊಟ್ಟಿದ್ದು ತಿಳಿ ನೀಲಿ ಮನಸಾ, ಬರಿ ಪೋಲಿ ಕನಸಾ....

– ನಂದನ್ ಹೆಗಡೆ
ಪ್ರಥಮ ಬಿ.ಎ.

.....ಹೀಗೆ ದಿನ ಉರುಳಿತ್ತಿರುವಾಗ ನಮ್ಮಿಬ್ಬರ ಆ ಸ್ನೇಹ ಗಟ್ಟಿಯಾ ಹೆಮ್ಮರವಾಗಿ ಬೆಳೆದಿತ್ತು. ಆದರೆ ನಾಮಕರಣಕ್ಕು ತುಸು ದೂರವೇ ಇತ್ತು.

ನೆನಪಿದೆಯೇ ಗೆಳತಿ, ಮೊದಲ ಭೇಟಿಗೆ ನಾವಿಬ್ಬರೂ ಸೂಚಿಸಿದ ಆ ಜಾಗ? ನಿನಗೋಸ್ಕರ ಸುಡು ಬಿಸಿಲಿನಲ್ಲಿ ನಾನು ಬಂದಿದ್ದು? ನೀ ನನ್ನ ನೋಡಿ ಮುಗುಳ್ನಕ್ಕ ಕ್ಷಣ ನನ್ನ ಪ್ರತಿನಗು, ಹಾರುವ ನಿನ್ನ ಮುಂಗುರುಳಿಗೆ ನನ್ನ ಬೆರಳುಗಳ ಜೊತೆ ಪ್ರೀತಿ ಹುಟ್ಟಿದ ಕ್ಷಣ...

ನಾವು ಹೋದ ಜಾಗ ಅದೆಷ್ಟೋ...ಸುಳ್ಳು ನೆಪ ತೋರಿ ನಿನ್ನ ಭೇಟಿ ಮಾಡಿದ್ದು. ನಿನ್ನ ಜೊತೆಗಿದ್ದ ಕಾಲ ಕಳೆದಷ್ಟು ಎಷ್ಟು ಸಂತಸದಿಂದ ಇದ್ದೆ ಎಂದರೆ ಜೀವನದಲ್ಲಿ ಎಂದೂ ಕಂಡಿರದ ಸುಮಧುರ ಕ್ಷಣಗಳನ್ನು ನಿನ್ನೊಂದಿಗೆ ಬೆರೆತಾಗ ನಾ ಕಂಡಿರುವೆ.

ಆಡಿದ ಮಾತುಗಳು, ನಾವಿಬ್ಬರೂ ಸೇರಿ ಸವಿದ ನೆನಪುಗಳು, ವಿಷಯವೇ ಇಲ್ಲದೆ ಕಿತ್ತಾಡಿದ ಜಗಳಗಳು, ತತ್ ಕ್ಷಣದಲ್ಲಿಯೇ ಸಾಗರದ ಅಲೆಗಳನ್ನೇ ಮೀರಿಸುವ ಪ್ರೀತಿಯ ಮಾತುಗಳು, ಬೇಜಾರಾದಾಗ ಆ ನಿನ್ನ ಸಾಂತ್ವನ ಇಂದಿಗೂ ಆ ಕ್ಷಣಗಳು ಒಮ್ಮೆ ಕಣ್ಣನ್ನು ಒಸರಿಸುತ್ತವೆ. ನಾವು ಸುತ್ತಾಡಿದ ಆ ಜಾಗಗಳು, ಆ ಸುಮಧುರ ಕ್ಷಣಗಳು, ನನ್ನನ್ನು ಕೈಬೀಸಿ ಕರೆದು ಹೇಳುತ್ತಿವೆ. ಇವೆಲ್ಲ ಬರಿ ನೆನಪುಗಳು ಎಂದು.....ಯಾರದೋ ಚಾಡಿ ಮಾತಿಗೆ ಕಿವಿಗೊಟ್ಟು ನನ್ನನ್ನು ದೂರ ಮಾಡಿದೆ. ನನ್ನ ನಿನ್ನ ಸ್ನೇಹ ಮುಗಿದು ಆಗಲೇ ನಾವು ಅಪರಿಚಿತರಾಗಿ ಬಿಟ್ಟೆವು ಅಲ್ಲವೇ.....

ಹೀಗೆ ಒಂದು ದಿನ ರಾತ್ರಿ ಆ ಜನಜಂಗುಳಿಯಲ್ಲಿ ನೀ ಕಂಡೆ, ಕೆರೆಯೊಳಗಿನ ಕಮಲದಂತೆ! ನೀ ನನ್ನ ಕಂಡರೂ ನಾವಿಬ್ಬರೂ ಆಗಲೇ ಅಪರಿಚಿತರಲ್ಲವೆ.....

ನಾನು ನಿನ್ನ ತದೇಕಚಿತ್ತದಿಂದ ನೋಡುತ್ತಿದ್ದರೂ ಬೇಕಂತಲೇ ನನ್ನಿರುವಿಕೆಯ ಉಪೇಕ್ಷಿಸುವ ನಿನ್ನ ದೃಷ್ಟಿ, ಎದುರಾದಾಗ ಎತ್ತಲೋ ತಿರುಗುವ ಮೊಗ....ನೀ ಹೇಳಬೇಕಿಲ್ಲ, ಎಲ್ಲವನ್ನೂ ಮರೆತಂತೆ ನಟಿಸಿ ಮರೆಯಾಗಬೇಕಷ್ಟೆ...ಅಲ್ಲವೇ...?

ನೀನು ನನ್ನ ಹಚ್ಚಿಕೊಂಡಿರುವೆ ಎಂಬ ನನ್ನ ನಂಬಿಕೆ...ಕನಸುಗಳು ಎಲ್ಲವೂ ಸುಳ್ಳು ಎಂದು ಆ ದಿನ ತಿಳಿಯಿತು. ಆದರೂ ಮನದಲ್ಲೊಂದು ಸಣ್ಣ ಆಸೆ, ಮರಳಿ ಬರಬಹುದೆಂದು. ಏಕೆಂದರೆ ಯಾವತ್ತೂ ಕಾಣದ ತೇಜಸ್ಸನ್ನು ಆ ರಾತ್ರಿ ನಾ ನಿನ್ನ ಕಂಗಳಲ್ಲಿ ಕಂಡೆ, ಆದರೂ ತಿರಸ್ಕರಿಸದೆ!

ಮೊದಮೊದಲು ಕಾರಣವಿಲ್ಲದೆಯೇ ಮಾತನಾಡುತ್ತಿದ್ದೆವು. ಈಗ ಮಾತನಾಡಲು ನೆಪ ಹುಡುಕಿದಷ್ಟೂ ವತಾನೆ. ನೀನೂ ನನ್ನಂತೆ ಒಡೆದ ಸ್ನೇಹಕ್ಕೆ ಬೆಸುಗೆ ಹಾಕಲು ಕಾಯುತ್ತಿದ್ದೆಯೇನೋ. ಆದರೆ ಆ ರಾತ್ರಿ ಅದಕ್ಕೆ ಅನುವೂ ಮಾಡಿ ಕೊಡಲಿಲ್ಲ. ಈಗ ಹೇಳು ಗೆಳತಿ, "ನೀ ಕೊಟ್ಟಿದ್ದು ತಿಳಿ ನೀಲಿ ಮನಸೋ, ಇಲ್ಲಾ ಬರಿ ಪೋಲಿ ಕನಸೋ..."

ಬಾಲ್ಯದ ನೆನಪು

– ಪವಿತ್ರಾ
ತೃತೀಯ ಬಿ.ಎ.

ಕಳೆದು ಹೋದ ಕ್ಷಣಗಳು ಮತ್ತೆ ಹಿಂದಿರುಗಿ ಬರುವುದಿಲ್ಲ. ಹಾಗೆಯೇ ಕಳೆದುಹೋದ ಬಾಲ್ಯದ ಸವಿನೆನಪುಗಳು, ಸಿಹಿಕಹಿ ಭಾವನೆಗಳು, ತುಂಟಾಟ, ಬೇಸರ, ಆಟಪಾಠಗಳು ಬರೀ ನೆನಪುಗಳು ಅಷ್ಟೇ. ಚಿಕ್ಕವರಿಂದ ದೊಡ್ಡವರಾಗಬಹುದು ಆದರೆ ಪುನಃ ಚಿಕ್ಕವರಾಗಲು ಸಾಧ್ಯವಿಲ್ಲ.

ನಾನು ನನ್ನ ತಂದೆತಾಯಿಗೆ ಒಬ್ಬಳೇ ಮಗಳು. ನನ್ನನ್ನು ತುಂಬಾ ಪ್ರೀತಿಯಿಂದ ಮುದ್ದಾಗಿ ನೋಡಿಕೊಳ್ಳುತ್ತಿದ್ದಾರೆ. ನನ್ನ ಅತ್ತೆ–ಮಾವನಿಗೆ ಮಕ್ಕಳಿಲ್ಲ, ಹಾಗಾಗಿ ನನ್ನನ್ನು ಮಗಳಂತೆ ನೋಡಿಕೊಳ್ಳುತ್ತಾರೆ. ನಾನು ಚಿಕ್ಕವಳಿದ್ದಾಗ ತುಂಬಾ ಕಾಲ ಆಟವಾಡುತ್ತಿದ್ದೆ. ಮನೆಯ ಹತ್ತಿರ ಮಕ್ಕಳು ಇರುತ್ತಿದ್ದರು. ಹಾಗಾಗಿ ಆಟವಾಡುತ್ತಿದ್ದೆ. ಆಟವಾಡುತ್ತಿದ್ದರೆ ಊಟ, ತಿಂಡಿ ಬೇಡ. ಮತ್ತೆ ನಾನು ತುಂಬಾ ಪಾಪವಂತೆ. ಅಮ್ಮ ಹೇಳುತ್ತಿದ್ದರು. ಆದರೆ ಶಾಲೆಯಲ್ಲಿ ಎಲ್ಲರ ಜೊತೆಯಲ್ಲಿ ಸ್ನೇಹವನ್ನು ಬೆಳೆಸಲು ಆಗುತ್ತಿರಲಿಲ್ಲ. ನಂತರ, ಅಂಗನವಾಡಿಯ ನಂತರ 1ನೇ ತರಗತಿಗೆ ಸೇರಿದಾಗ ಕ್ಲಾಸಿಗೆ ಹೋಗಲು ಕೇಳುತ್ತಿರಲಿಲ್ಲ. ಅಮ್ಮ ನನ್ನನ್ನು ಶಾಲೆಗೆ ಬಿಟ್ಟು ಬರಲು ಬರುತ್ತಿದ್ದರು. ಅವರು ಹೋಗುವಾಗ ತುಂಬಾ ಅಳುತ್ತಿದ್ದೆ. ಆನಂತರ ಅಳುತ್ತಿರಲಿಲ್ಲ. ಕ್ಲಾಸಿಗೆ ಬರುತ್ತಿದ್ದೆ. ಜಾಸ್ತಿ ರಜೆ ಹಾಕುತ್ತಿರಲಿಲ್ಲ. ನಾನು ಊಟ ಮಾಡಲು ಕೇಳುತ್ತಿರಲಿಲ್ಲ. ಖಾಲಿ ತಿಂಡಿ ತಿನ್ನುತ್ತಿದ್ದೆ. ಅಮ್ಮನಿಗಿಂತ ಜಾಸ್ತಿ ಅತ್ತೆಯ ಜೊತೆ ಇರುತ್ತಿದೆ. ಚಿಕ್ಕದಿರುವಾಗ ಡಾನ್ಸ್, ಪದ್ಯ ಹಾಡುವುದೆಂದರೆ ಇಷ್ಟ. ಆಟೋಟಗಳಲ್ಲಿ ಭಾಗವಹಿಸುತ್ತಿದ್ದೆ. ಬಹುಮಾನಗಳನ್ನು ಪಡೆಯುತ್ತಿದ್ದೆ. ಅದರಲ್ಲೂ ಮಕ್ಕಳ ದಿನಾಚರಣೆಯಂದೂ ಹೊಸ ಬಟ್ಟೆಗಳನ್ನು ಹಾಕಿ ಚೆಂದವಾಗಿ ನನ್ನನ್ನು ಅಲಂಕರಿಸುತ್ತಿದ್ದರು. ಆದರೆ ಒಂದು ಬೇಸರವೆಂದರೆ ಇಬ್ಬರು ಗೆಳತಿಯರು ನನಗೆ

ಬೈಯುತ್ತಿದ್ದರು. ಆದರೆ ನಾನು ಬೈಯುತ್ತಿರಲಿಲ್ಲ. ಆಗ ನನಗೆ ಬೇಸರವಾಗುತ್ತಿತ್ತು. ಹೇಗೆ ಬೈಯಬೇಕೆಂದು ಗೊತ್ತಿರಲಿಲ್ಲ. ಮನೆಯವರೆಲ್ಲ ಹೇಳುತ್ತಿದ್ದರು ಪ್ರೈಮರಿ ಕ್ಲಾಸಿನಲ್ಲಿ ತುಂಬಾ ನಗುತ್ತಾ, ಗಮ್ಮತ್ತು ಮಾಡುತ್ತಾ ತುಂಬಾ ಅನ್ಯೋನ್ಯದಿಂದ ಇದ್ದೆವು. ನಾವು ಲಗೋರಿ ಆಟವನ್ನು ಆಡುತ್ತಿದ್ದೆವು. ನನಗೆ ತುಂಬಾ ಖುಷಿಯನ್ನು ತಂದುಕೊಟ್ಟದ್ದು ಶಾಲೆಯಲ್ಲಿ ಆಗ ಸಿನಿಮಾಕ್ಕೆ ಕರೆದುಕೊಂಡು ಹೋಗಿದ್ದು. ಒಳ್ಳೆಯ ಸಿನಿಮಾ ಮಕ್ಕಳ ಸಿನಿಮಾ ಆಗಿತ್ತು. ಅಲ್ಲಿ ನಾವು ಗೆಳತಿಯರು ಒಟ್ಟಿಗೇ ಇರುತ್ತಿದ್ದೆವು. ಅನಂತರ ಹೈಸ್ಕೂಲ್‌ಗೆ ಬಂದಾಗ ಒಂದು ಥರ ಬೇಸರ. ಯಾಕೆಂದರೆ ನಾವೆಲ್ಲ ಒಂದೇ ಹೈಸ್ಕೂಲ್‌ಗೆ ಹೋಗಿದ್ದೆವು. ಆದರೆ ಅಲ್ಲಿ ಸೆಕ್ಷನ್ ಬೇರೆ ಬೇರೆ ಮಾಡಿದರು. ನನಗೆ ಗಮ್ಮತ್ತು ಮಾಡಲು ಆಗುತ್ತಿರಲಿಲ್ಲ. ಮತ್ತೆ ನನಗೆ ಗಣಿತ ಎಂದರೆ ಭಯ, ಏಕೆಂದರೆ ಮುರಳಿ ಕಡೆಕಾರ್ ಸರ್, ಇವರು ತುಂಬಾ ಜೋರು. ಹೊಡೆಯುತ್ತಿದ್ದರು ಮತ್ತು ಲೆಕ್ಕ ತಪ್ಪು ಮಾಡಿದರೆ ಚುಂಟುತ್ತಿದ್ದರು. ಅದೆ ಬೇರೆ ನಾನು ಗಣಿತದಲ್ಲಿ ಸ್ವಲ್ಪ ಹಿಂದೆ. ನಾನು ಮಾತ್ರ ಮೂರ ವರ್ಷ ಹೈಸ್ಕೂಲ್ ಜೀವನದಲ್ಲಿ ತುಂಬಾ ಪೆಟ್ಟನ್ನು ತಿಂದಿದ್ದೇನೆ. ಆಮೇಲೆ ನನಗೆ ಗಣಿತದಲ್ಲಿ ಸ್ವಲ್ಪ ಸುಲಭ ಅನಿಸುತ್ತಿತ್ತು. ನನಗೆ ಗೆಳತಿಯರು ಪಪ್ಪಿ ಎಂದು ಕರೆಯುತ್ತಿದ್ದರು. ಆದರೆ ನಾನು ಮಾತ್ರ ಯಾರಿಗೂ ಹೇಳಲಿಲ್ಲ.

ಆದರೂ ನನಗೆ ಪ್ರೈಮರಿ ಕ್ಲಾಸನ್ನು ಮರೆಯುವಂತಿಲ್ಲ. ತುಂಬಾ ನಕ್ಕಿದ್ದೇನೆ. ನಾನು ಅಳುವುದು ಮಾತ್ರ ಕಡಿಮೆಯಾಗಿತ್ತು. ಮತ್ತೆ ನಾನು ಟಿವಿಯಲ್ಲಿ ಕಳೆದುಹೋಗುತ್ತಿದ್ದೆ. ನನಗೆ ಟಾಮ್ ಆಂಡ್ ಜೆರ್ರಿ ಎಂದರೆ ತುಂಬಾ ಇಷ್ಟ. ಅದು ಕಾರ್ಟೂನ್ ನಲ್ಲಿ ಬರುತ್ತಿತ್ತು. ಯಾವಾಗಲೂ ಅದನ್ನೇ ನೋಡುತ್ತೇನೆ. ಈಗಲೂ.

ನನ್ನ ಹಾಸ್ಟೆಲ್ ಜೀವನ

– ಶಾಂತಾ
ತೃತೀಯ ಬಿ.ಎ.

ನಾನು ಕಂಡ ನನ್ನ ಮರೆಯಲಾರದ ಹಾಸ್ಟೆಲ್ ಜೀವನ ನಾನು ಮೊದಲು ಹಾಸ್ಟೆಲ್‌ಗೆ ಸೇರುವಾಗ ಏನೋ ಒಂಥರಾ ಭಯ, ದುಃಖ ಮತ್ತು ನನ್ನ ತಂದೆ ತಾಯಿಯನ್ನು ದೂರ ಹೋಗಬೇಕು ಎನ್ನುವ ದುಃಖ ನನ್ನ ಮನಸ್ಸಿನಲ್ಲಿ ಇತ್ತು. ನಾನು ಮೊದಲು ನನ್ನ ತಂದೆ ನನ್ನ ಮತ್ತು ನನ್ನ ಅಕ್ಕನ ಹಾಸ್ಟೆಲ್‌ಗೆ ಸೇರಿಸಿದ್ರು. ನಾನು ಮೊದಲು 1ನೇ ತರಗತಿಗೆ ಹಾಸ್ಟೆಲ್‌ಗೆ ಬಂದಿದ್ದು. ಆಗ ಅಲ್ಲಿನ ವಾತಾವರಣ ಮತ್ತು ಅಲ್ಲಿನ ಜನರನ್ನು ನೋಡುವಾಗ ನನಗೆ ತುಂಬಾ ಭಯ ಆಗುತ್ತಿತ್ತು. ಹಾಗೇ ದಿನಗಳು ಕಳೆದಂತೆ ಎಲ್ಲರ ಪರಿಚಯವಾಯಿತು. ಆಗ ಎಲ್ಲರ ಜೊತೆಯು ಚೆನ್ನಾಗಿ ಮಾತನಾಡಲು ಪ್ರಾರಂಭಿಸಿದ್ದೆ ನಾನು. 1ನೇ ತರಗತಿಯಿಂದ 5ನೇ ತರಗತಿಯವರೆಗೆ ಕುಂದಾಪುರದ ಆಶ್ರಮ ಶಾಲೆಯಲ್ಲಿ ಕಲಿತೆ ಮತ್ತು ನನಗೆ ಹಾಸ್ಟೆಲ್‌ಗೆ ಸೇರಿಸಿದ್ದರಿಂದ ಹೆಚ್ಚಿನ ಅನುಭವ ಕೂಡಾ ಆಯಿತು. ಮತ್ತೆ ಏನಂದ್ರೆ ಅಲ್ಲಿನ ಸಿಬ್ಬಂದಿ ವರ್ಗದವರು ನಮ್ಮ ಜೊತೆ ಅನೇಕ ಕೆಲಸ ಮಾಡಲು ಹೇಳುತ್ತಿದ್ದರು. ಅದರಿಂದ ನನಗೆ ಹೆಚ್ಚಿನ ಕೆಲಸ ಮಾಡಲು ಕಲಿತೆ. ನಾವು ಹಾಸ್ಟೆಲ್‌ನಲ್ಲಿ ತುಂಬಾ ಜನ ಇದ್ದ ಕಾರಣ ಸಂಜೆಯ ವೇಳೆ ಅನೇಕ ಆಟಗಳನ್ನು ಆಡುತ್ತಿದ್ದೆವು. ನಮ್ಮ ಮನಸ್ಸಿಗೆ ತುಂಬಾ ಸಂತೋಷ ಕೊಡುತ್ತಿತ್ತು. ಆದರೆ ಕೆಲವು ದಿನ ನಮಗೆ ಮನೆಯ ನೆನಪಾಗಿ ಅಳುತ್ತಿದ್ದೆವು. ಹಾಸ್ಟೆಲ್ ಜೀವನ ಅಂದ ಮೇಲೆ ಅನೇಕ ನೋವು, ನಲಿವು ಎಲ್ಲವೂ ಕೂಡ ಇರುತ್ತದೆ. 1ನೇ ತರಗತಿಯಿಂದ 5ನೇ ತರಗತಿಯ ವರೆಗೆ ಅನೇಕ ತುಂಟಾಟವನ್ನು ಕೂಡ ಮಾಡಿದ್ದೆ. ಕೆಲವು ಬಾರಿ ಟೀಚರ್ ಹತ್ತಿರ ಪೆಟ್ಟು ತಿಂದದ್ದು ಕೂಡ ಈಗ ನನಗೆ ನೆನಪಿಗೆ ಬರುತ್ತಿದೆ. 1ನೇ ತರಗತಿಯಿಂದ 5ನೇ ತರಗತಿವರೆಗೆ ಆಶ್ರಮ ಶಾಲೆಯಲ್ಲಿ ಕಲಿತ ನಂತರ 6ನೇ ತರಗತಿಯಿಂದ 10ನೇ ತರಗತಿಯ ವರೆಗೆ ಇನ್ನೊಂದು ಹಾಸ್ಟೆಲ್ ಆದ ಕುಂದಾಪುರದಲ್ಲಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ ಕುಂದಾಪುರ. ನಾನು 1ನೇ ಯಿಂದ 5ನೇ ಕ್ಲಾಸ್ ವರೆಗೆ ಮಾಡಿದ್ದ ತಪ್ಪುಗಳನ್ನು 6ನೆಯ ತರಗತಿಯಲಗಲಿ ತಿದ್ದಿಕೊಂಡು ಅನೇಕ ಹೊಸ ಅನಂದ ಆಯಿತು. ಆದರೆ ಮತ್ತೆ ಬೇಜಾರು ಅಂದ್ರೆ ಪುನಃ ಹಾಸ್ಟೆಲ್‌ಗೆ ಹೋಗಬೇಕು ಎನ್ನುವ ಚಿಂತೆ ಕಾಡುತ್ತಿತ್ತು. 10ನೇ ತರಗತಿಗೆ ಹೋದ ಮೇಲೆ ಇನ್ನೂ ಅನೇಕ ಅನುಭವ ಹಾಸ್ಟೆಲ್‌ನಲ್ಲಿ ಹೇಗೆ ಇರಬೇಕು ಎನ್ನುವ ಅನುಭವ ಮೊದಲು ಹಾಸ್ಟೆಲ್‌ಗೆ ಬಂದಾಗಲೇ ಗೊತ್ತಾಗಿತ್ತು. ಹಾಸ್ಟೆಲ್ ನಲ್ಲಿ ನಮ್ಮ ಕೆಲಸ ನಾವೇ ಮಾಡಿಕೊಳ್ಳಬೇಕಿತ್ತು. ಮತ್ತೆ ಬೆಳಗ್ಗೆ ತಿಂಡಿಯ ಬದಲು ಊಟ ಮಾಡಬೇಕಿತ್ತು. ಅದು ದೊಡ್ಡ ಸಮಸ್ಯೆಯಾಗಿತ್ತು. ಹೀಗೆ ದಿನಗಳು ಕಳೆದಂತೆ 1ರಿಂದ 10ನೇ ತರಗತಿಯ ವರೆಗಿನ ಹಾಸ್ಟೆಲ್ ಜೀವನ ಮುಗಿಯಿತು.

ಮತ್ತೆ 10ನೇ ಕ್ಲಾಸ್ ಆದಮೇಲೆ ಪಿಯುಗೆ ಪುನಃ ಹಾಸ್ಟೆಲ್‌ಗೆ ಸೇರಬೇಕಾದ ಪರಿಸ್ಥಿತಿ ಬಂತು. ಆಗ ಯಾವುದೇ ಉಪಾಯವಿಲ್ಲದೆ ಕುಂದಾಪುರ ಬಿಟ್ಟು ಉಡುಪಿಗೆ ಬರುವ ಒಂದು ಆಸೆಯಿಂದ ಪ್ರಥಮ ಪಿಯುಸಿಗೆ ಉಡುಪಿಯ ಹಾಸ್ಟೆಲ್ ಗೆ ಬಂದು ಸೇರಿದ್ದೆ. ಆದರೆ ಏನೋ ಒಂಥರಾ ಬೇಜಾರು, ದುಃಖ, ನಮ್ಮ ಊರು ಬಿಟ್ಟು ಇಲ್ಲಿಗೆ ಯಾಕೆ ಬಂದೆ ಎನ್ನುವ ಚಿಂತೆ ಪುನಃ ಬಂತು. ಆದ್ರೆ ಏನು ಮಾಡುವುದು ಮನೆಯಲ್ಲಿ ಸಮಸ್ಯೆ ಇದ್ದ ಕಾರಣ ಹಾಸ್ಟೆಲ್‌ಗೆ ಬರಬೇಕಾಯಿತು. ಸ್ವಲ್ಪ ದಿನ ಬೇಜಾರು ಆಯಿತು. ನಂತರ ನನ್ನ ಮೊದಲು ಹಾಸ್ಟೆಲ್‌ನಲ್ಲಿ ಇದ್ದ ಕೆಲವು ಅಕ್ಕಂದಿರು ಇದ್ದರು. ಆಗ ಅವರನ್ನು ನೋಡಿ ತುಂಬಾ ಖುಷಿ ಆಯಿತು.

ಹೀಗೆ ಹೆಚ್ಚಿನ ಗೆಳತಿಯರ ಪರಿಚಯವಾಯಿತು. ಇದರಿಂದ ತುಂಬಾ ಖುಷಿ ಕೊಟ್ಟಿತು. ನಾನು ಪ್ರಥಮ ಮತ್ತು ದ್ವಿತೀಯ ಪಿಯುಸಿ ಹೀಗೆ ಎಲ್ಲರ ಜೊತೆ ಹಾಸ್ಟೆಲ್‌ನಲ್ಲಿ ಕಳೆದೆ ಮತ್ತೆ ಕೆಲವು ದಿನ ಅಂದ್ರೆ, ಶನಿವಾರ ನಾನು ಮತ್ತು ನನ್ನ ಗೆಳತಿಯರು ಕೃಷ್ಣಮಠಕ್ಕೆ ಹೋಗುತ್ತಿದ್ದರಿಂದ ಹೆಚ್ಚಿನ ಖುಷಿ ಸಿಗುತ್ತಿತ್ತು. ಹೀಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಹಾಸ್ಟೆಲ್ ಜೀವನ ಆಯಿತು. ಮತ್ತೆ ಈಗ ನನ್ನದು 15ನೇ ವರುಷದ ಹಾಸ್ಟೆಲ್ ಜೀವನ. ಅದೇ ಒಂದು ತರದಲ್ಲಿ ಖುಷಿಯನ್ನು ಕೊಡುತ್ತಿದೆ.

ಕೆಲವು ತಪ್ಪು ಘಟನೆಗಳು

– ವಿವಿನ್ ಡಿ'ಸೌಜ
ದ್ವಿತೀಯ ಬಿ.ಎ.

ನಾನು ಸಣ್ಣವನಿರುವಾಗ ದೊಡ್ಡವರ ಮಾತುಕತೆಯಲ್ಲಿ ಅವರ ಮುಂದೆ ಹಿಂದೆ ಅಥವಾ ಅಕ್ಕ ಪಕ್ಕ ಕುಳಿತು ಮಾತು ಕೇಳುವ ಅಭ್ಯಾಸ ಒಂದಿತ್ತು. ಯಾರಾದರೂ ನಾಲ್ಕು ಜನರು ಗುಂಪು ಕಟ್ಟಿ ನೆರೆದರೆ ಅಲ್ಲಿಗೆ ಪಕ್ಕನೆ ಧಾವಿಸುವ ಛಲ ನನಗೆ ಹಾಗೂ ಅವರ ಮಾತು ಕೇಳುವುದು. ಅದು ಯಾವುದೋ ಘಟನೆಯಾಗಿರಬಹುದು. ದಿನನಿತ್ಯದ ದಿನಚರಿ ವಾತಾವರಣಗಳೂ ಆಗಿರಬಹುದು. ಯಾವುದಾದರೂ ಇರಲಿ ನನಗೆ ಅಂತಹ ವಿಷಯಗಳೂ ಕುತೂಹಲ.

ನನ್ನ ನೆನಪಿನ ಪ್ರಕಾರ ಒಂದು ದಿನ ಸಮಯ ಸಂಜೆ 3.30 ಆಗಿರಬಹುದು. ಕೆಲಸ ಮುಗಿಸಿ ಮನೆಗೆ ಬಂದು ಊರಕಟ್ಟೆಯಲ್ಲಿ ಕುಳಿತು ಮಾತನಾಡತೊಡಗುತ್ತಾರೆ. ನಾನು ಒಂದು ಹೊರೆ ಕಟ್ಟಿಗೆ ತಂದು ಮನೆಯಲ್ಲಿ ಇಟ್ಟು ಊರಕಟ್ಟೆಯೆಡೆಗೆ ನಡೆದೆ. ಅಲ್ಲಿ ಕಳ್ಳತನದ ಬಗ್ಗೆ ಚರ್ಚೆ ನಡೆಯುತ್ತಿತ್ತು. ತುಂಬಾ ಜಾಣತನದಿಂದ ನಾನು ಅದನ್ನು ಗ್ರಹಿಸಿದೆ. ಅದು ಒಂದು ಬೆಲೆಬಾಳುವ ಮರ, ಅಂದರೆ ಗಂಧದ ಮರದ ಕಳ್ಳತನವಾಗಿದ್ದು ನಾನು ಆಗ 8ನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದೆ. ಕೆಲವು ವಿಚಾರಗಳು ನನಗೆ ತಿಳಿದಿತ್ತು. ಆ ಮರದ ತಿರುಳು ಆಗ 1.1ಕೆಜಿಗೆ 750 ರೂಪಾಯಿ ಬೆಲೆ ಬೀಳುತ್ತಿತ್ತು. ಮನೆಯಲ್ಲಿ ಖರ್ಚಿಗೆ ಹಣ ಸಿಗದೇ ಇರುವುದು, ಹಣದ ಹುಚ್ಚು ಆಗ ಹೆಚ್ಚು. ಮೊಬೈಲ್ ತೆಗೆದುಕೊಳ್ಳಬೇಕೆಂಬ ನನ್ನ ಬಯಕೆ ಸಮುದ್ರದ ಅಲೆಯಂತೆ ಇತ್ತು. ಹೇಗೂ 4 ಜನ ಗೆಳೆಯರೊಡಗೂಡಿ ಗಂಧದ ಮರ ತೆಗೆಯುವ ಕೆಲಸಕ್ಕೆ ಲಗ್ಗೆ ಇಟ್ಟೆವು. 20 ದಿನಗಳ ನಂತರ ರಾತ್ರಿ 10.00ರ ಸಮಯ. ಊರಿನ ಜನರೆಲ್ಲಾ ನಿದ್ರೆಗೆ ಜಾರಿದ ಬಳಿಕ ನಾಲ್ಕು ಜನರೊಡಗೂಡಿ ಹೊರವಲಯದ ಉತ್ತರಭಾಗದ ಅರಣ್ಯವಾದ ಬಾಳೆಹೊಳೆ ಅರಣ್ಯಕ್ಕೆ ಧಾವಿಸಿದೆವು. ಎಲ್ಲಿ ನೋಡಿದರೂ ಒಣಗಿದ ಅತ್ಯಧಿಕ ಬೆಲೆಬಾಳುವ ಮರದ ತಿರುಳು ಬಾಂಡಗಳು ಕತ್ತಿ ಮತ್ತಿತರ ಸಲಕರಣೆಯಿಂದ ಆದಷ್ಟು ಮರವನ್ನು ಉರುಳಿಸಿದೆವು. ಸುಮಾರು 20ಕೆಜಿ ಗಂಧ ಸಂಗ್ರಹಯಾಯಿತು. ನಮ್ಮ ಊರಿನಿಂದ ಅರಣ್ಯ ಸುಮಾರು 7 ಮೈಲಿ ದೂರದಲ್ಲಿದ್ದುದರಿಂದ ಹೊತ್ತುಕೊಂಡು ಬಂದು ಊರಿನ ಕಾಡಿನೊಳಗೆ ತಂದು ಮರದ ಎಲೆ, ಹುಲ್ಲು ಮೊದಲಾದವುಗಳನ್ನು ಮುಚ್ಚಿಟ್ಟೆವು. ಆಗ ನಮ್ಮ ಊರಿಗೆ ಮಂಗಳೂರಿನಿಂದ ಗಂಧದ ವ್ಯಾಪಾರಿ ಬರುತ್ತಿರುವ ಸುದ್ದಿ ತಿಳಿಯಿತು. ಹೇಗಾದರೂ ಅವರೊಡನೆ ಮಾತನಾಡಿ 20ಕೆಜಿ ಗಂಧಕ್ಕೆ 4,000/– ನೀಡುವ ಷರತ್ತಿನಿಂದಿಗೆ ಒಪ್ಪಿಕೊಂಡೆವು. ನಾವು ಅಷ್ಟು ತಿಳಿದವರಲ್ಲವಾದ್ದರಿಂದ ನಮಗೆ ತುಂಬಾ ಮೋಸವಾಗಿ ಒಬ್ಬೊಬ್ಬರಿಗೆ ತಲಾ 1,000 ಲಭಿಸಿತು. ಹೀಗೆ ದಿನ ಕಳೆದಂತೆ ಹಣದ ಹುಚ್ಚು ಹೆಚ್ಚಾಗಿ ಒಬ್ಬನೇ ಗಂಧ ಸಂಗ್ರಹಿಸಲು ಪ್ರಾರಂಭಿಸಿದೆ. 1,000 ರೂಪಾಯಿ ಸಾವಿರವು 10 ಸಾವಿರಕ್ಕೆ ಮುಟ್ಟಿತು. ಎಲ್ಲಿಲ್ಲದ ಖುಷಿ ಮೂಡಿತು. ಆದರೂ ಆ ಹಣ ಕಳ್ಳತನದ ಸಂಪಾದನೆಯಾದ್ದರಿಂದ ಅದನ್ನು ಇಟ್ಟುಕೊಳ್ಳಲು ಬಯಸಲಿಲ್ಲ.

ನನಗೆ ಬೇಟೆಯಾಡುವ ಚಟ ಇದ್ದುದರಿಂದ 8,300 ರೂಪಾಯಿ ನೀಡಿ ಸಿಂಗಲ್ ಬ್ಯಾರೆಲ್‌ನ ತೋಟಾ ಕೋವಿಯನ್ನು ಕೊಂಡುಕೊಂಡು ಮನೆಯವರಿಗೆ ತಿಳಿಯದಂತೆ ಬಚ್ಚಿಟ್ಟಿದ್ದೆ.

ಬೇಟೆಗೆಂದು ಒಂದು ದಿನ ಸುಮಾರು 8 ಜನ ಹುಡುಗರು ಗಡಿಬಿಡಿಯಿಂದ ನಡೆದೆವು. ದುಃಖಕರ ಸಂಗತಿಯೆಂದರೆ 8 ಜನರಿರುವ ಪಂಗಡದಲ್ಲಿ ನನ್ನ ಆಪ್ತಗೆಳೆಯ ಕಾಡಿನ ಮಧ್ಯೆ ಪಿಲಿಯ ದಾಳಿಗೆ ಸಿಲುಕಿದ. ಗಾಯಗೊಂಡ ಅವನನ್ನು ಆಸ್ಪತ್ರೆಗೆ ದಾಖಲಿಸಿದರೂ ಅವನು ಕೊನೆಯುಸಿರೆಳೆದ.

ತದನಂತರ ಊರಿನಜನರು ಅರಣ್ಯಾಧಿಕಾರಿಗೆ ಹುಲಿಯನ್ನು ಹಿಡಿಯಲು ಮನವಿ ಸಲ್ಲಿಸಿದಾಗ ಅದನ್ನು ಕೊಲ್ಲಬೇಕೆಂದು ಊರಿನವರು ಚಿಂತಿಸಿದರು. ನನ್ನ ಕೈಯಲ್ಲಿ ಬಂದೂಕು ಇದ್ದುದರಿಂದ ಹುಲಿಯು ನೀರು ಕುಡಿಯುವಾಗ ಸುಲಭವಾಗಿ ಗುಂಡೇಟಿಗೆ ಬಲಿಯಾಯಿತು. ಅದರ ವಿಷಯವಾಗಿ ನನ್ನ ಮೇಲೆ ಅರಣ್ಯಠಾಣೆಯಲ್ಲಿ ಕೇಸು ದಾಖಲಾಗಿತ್ತು ಎಂದು ಅಕ್ರಮ ಶಸ್ತ್ರಾಸ್ತ್ರ, ಹುಲಿಯ ಬೇಟೆ, ಹುಲಿಯ ಚರ್ಮ, ಮೀಸೆ, ಉಗುರು ಬೆಲೆಬಾಳುವ ವಸ್ತುವಾದ್ದರಿಂದ ಚರ್ಮ ಆಗ ಸುಮಾರು 25,000 ಕ್ಕೆ ಮಾರಾಟವಾಯಿತು. ಹೀಗೆ ಹಣ ಸಂಪಾದನೆ ಸುಗಮವಾಗಿ ಸಾಗಿತ್ತು. 10ನೆಯ ತರಗತಿಯಲ್ಲಿ ಕೊನೆಯ ಪಬ್ಲಿಕ್ ಪರೀಕ್ಷೆ ಮುಗಿದ ದಿನವೇ ಬೇಟೆಗೆಂದು ತೆರಳಿ 2 ಜಿಂಕೆಯನ್ನು ಬೇಟೆಯಾಡಿದೆ. ಅದರ ಚರ್ಮವು ಬೆಲೆಬಾಳುತ್ತಿತ್ತು. ಅದನ್ನು ನನ್ನ ಅಂಕಲ್ ಖರೀದಿ ಮಾಡಿ ಹಣ ತಂದುಕೊಟ್ಟರು. ಇದರೆಲ್ಲದರ

ಸಹಾಯದಿಂದ ಮೊದಲ ಬಾರಿಗೆ ನಾನು ನಾನು ಕೂಡಾ ಟಚ್ ಸ್ಕ್ರೀನ್ ಮೊಬೈಲ್ ಹಣ ಕೊಟ್ಟು ಖರೀದಿ ಮಾಡಿದೆ. ಬೈಕ್ ತೆಗೆದುಕೊಂಡೆ. ಕಳ್ಳತನದ ಸುಖ ನಾಲ್ಕೆ ದಿನದ್ದಾದ್ದರಿಂದ ಚಿಕ್ಕಮಂಗಳೂರಿನಲ್ಲಿ ಬೈಕ್‌ನಿಂದ ಬಿದ್ದು ಗಾಯಗೊಂಡು ಬೈಕ್ ಹಾಳಾಯಿತು. ಈಜಾಡುವಾಗ ಸೇತುವೆ ಮೇಲಿರಿಸಿದ ನನ್ನ ಮೊಬೈಲ್‌ನ್ನು ನನ್ನ ಗೆಳೆಯ ನನ್ನ ಮೇಲಿನ ಹಳೆಯ ದ್ವೇಷದಿಂದ ನೀರಿಗೆ ಬಿಸಾಡಿದ. ಆದರೂ ನನ್ನಲ್ಲಿ ಹಣ ಏತ್ತು. ನನ್ನ ಈ ಬುದ್ಧಿಯಿಂದ ಮನೆಯವರು ನನ್ನನ್ನು ನನ್ನ ಕಾಟ ತಾಳಲಾರದೆ ಉಡುಪಿಗೆ ನನ್ನ ದೊಡ್ಡಪ್ಪನ ಮನೆಗೆ ಕಳುಹಿಸಿದರೂ ಒಳ್ಳೆಯ ವಿದ್ಯಾರ್ಥಿಯಾಗಿದ್ದ ನಾನು ಓದುದರಲ್ಲಿ ತುಂಬಾ ಹಿಂದೆ ಇದ್ದೆ. ಆದರೆ ಎರಡನೆಯ ಪಿಯುಸಿಯಲ್ಲಿ 89% ಅಂಕವನ್ನು ಗಳಿಸಿದೆ. ನನ್ನ ಬೇರೆ ಕಾರ್ಯ ಚಟುವಟಿಕೆಯಾದ ಕಳ್ಳತನ, ಬೇಟೆಯನ್ನು ಅಲ್ಲಿಗೆ ನಿಲ್ಲಿಸಿಬಿಟ್ಟೆ. ಈಗ ಒಬ್ಬ ಶಿಸ್ತಿನ ಹುಡುಗನಾಗಿದ್ದೇನೆ. ನನ್ನ ಮೇಲಿನ ಕೇಸ್ ನಾನು ಎರಡನೆಯ ಪಿಯುಸಿಯಲ್ಲಿ ಇರುವಾಗ ಬಾರಿ ಮೊತ್ತದ ದಂಡದೊಂದಿಗೆ ಕೊನೆಗೊಂಡಿತು.

ಹುಡುಗಾಟದ ಕಾಲದಲ್ಲಿ ಎಂತಹ ಅವಿವೇಕದ ಕೆಲಸ ಆಗುತ್ತದೆ ಎನ್ನುವ ಅರಿವು ಇರುವುದಿಲ್ಲ. ಬುದ್ಧಿ ಬೆಳೆದಾಗ ಬದಲಾಗಬೇಕು. ಅಲ್ಲವೇ?

ಎನ್.ಎಸ್.ಎಸ್. ಶಿಬಿರದ ಸವಿನೆನಪುಗಳು

– ಶ್ರೀಲಕ್ಷ್ಮೀ
ದ್ವಿತೀಯ ಬಿ.ಎ.

ಎನ್.ಎಸ್.ಎಸ್. ಎಂದರೆ ರಾಷ್ಟ್ರೀಯ ಸೇವಾ ಯೋಜನೆ. ರಾಷ್ಟ್ರೀಯ ಸೇವಾ ಯೋಜನೆಯ ಮುಖ್ಯ ಗುರಿ ಅಥವಾ ಅದಕ್ಕೆ ಇರುವ ಇನ್ನೊಂದು ಹೆಸರು ಎಂದರೆ ಶ್ರಮ ಯೋಜನೆ ಎಂದೇ ಕರೆಯಬಹುದು. ರಾಷ್ಟ್ರೀಯ ಸೇವಾಯೋಜನೆ ಎಂಬುದು ಪ್ರತಿಯೊಬ್ಬ ಸ್ವಯಂ ಸೇವಕನಿಗೂ ಉನ್ನತವಾದಂತಹ ವೇದಿಕೆಯನ್ನು ಸೃಷ್ಟಿಸುತ್ತದೆ ಎಂದರೆ ತಪ್ಪಾಗಲಾರದು. ನಾನು ಎನ್.ಎಸ್.ಎಸ್.ಗೆ ಸೇರಿದ್ದು ಪ್ರಥಮ ಪಿಯುಸಿಯಲ್ಲಿ. ಆಗ ನನಗೆ ಎನ್.ಎಸ್.ಎಸ್. ಬಗ್ಗೆ ಅಷ್ಟೇನೂ ತಿಳಿದಿರಲಿಲ್ಲ. ಆದರೂ ಕುತೂಹಲದಿಂದ ಸೇರಿಕೊಂಡೆ. ನಾನು ಸೇರಿದೆ ಎಂದು ನನ್ನ ಗೆಳತಿಯರೂ ಸೇರಿಕೊಂಡರು. ಎನ್.ಎಸ್.ಎಸ್.ಗೆ ಒಟ್ಟು ನೂರು ವಿದ್ಯಾರ್ಥಿಗಳು ಬೇಕು. ದ್ವಿತೀಯ ವರ್ಷದವರು ಐವತ್ತು ಜನರಿದ್ದರು. ಆದ್ದರಿಂದ ಪ್ರಥಮ ವರ್ಷದ ವಿದ್ಯಾರ್ಥಿಗಳಲ್ಲಿ ಐವತ್ತು ಮಂದಿ ಮಾತ್ರ ಸಾಕು ಎಂದರು. ನಾವು ಪ್ರಥಮ ವರ್ಷದವರು ತುಂಬಾ ಜನರಿದ್ದೆವು. ಆದ್ದರಿಂದ ಸಂಯೋಜನಾಧಿಕಾರಿಗಳು ದೂರದ ಊರಿನಿಂದ ಬರುವ ಮಕ್ಕಳು ಬೇಡ. ಅವರಿಗೆ ಒಂದೊಂದು ದಿನ ತಡವಾದರೆ ತೊಂದರೆಯಾಗುತ್ತದೆ ಎಂದರು. ಆಗ ಸ್ವಲ್ಪ ಬೇಸರವಾಯಿತು. ನಂತರ ಎಲ್ಲರೂ ಅಲ್ಲಿಂದ ಹೋದರು. ನಾವು ಅಲ್ಲೇ ನಿಂತಿದ್ದರಿಂದ ನಮ್ಮ ಬಳಿ ನಿಮಗೆ ಅಷ್ಟೂ ಆಸೆ ಇದ್ದರೆ ಸೇರಿ ಎಂದರು. ಪ್ರತಿ ಶನಿವಾರ ಮಧ್ಯಾಹ್ನ ತರಗತಿ ಮುಗಿದ ಮೇಲೆ ಶ್ರಮದಾನವಿರುತ್ತಿತ್ತು. ಆ ಶ್ರಮದಾನದಲ್ಲಿ 2–3 ಗುಂಪು ಮಾಡಿ ಒಬ್ಬೊಬ್ಬರನ್ನು ಒಂದೊಂದು ಕಡೆಗೆ ಕಳುಹಿಸಿ ಶ್ರಮದಾನ ಮಡಿಸುತ್ತಿದ್ದರು. ನಮ್ಮ ಸಂಯೋಜನಾಧಿಕಾರಿಗಳು ನಮ್ಮನ್ನು ತುಂಬಾ ಪ್ರೀತಿಯಿಂದ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಶ್ರಮದಾನ ಮುಗಿದ ನಂತರ ಉಪಹಾರ ನೀಡುತ್ತಿದ್ದರು. ನಾವೆಲ್ಲರೂ ಅದನ್ನು ಹಂಚಿಕೊಂಡು ತಿನ್ನುತ್ತಿದ್ದೆವು. ಪ್ರತಿದಿನ ಬೆಳಗ್ಗೆ ಕಾಲೇಜಿಗೆ ಹೋದ ಕೂಡಲೇ ಗ್ರೌಂಡಿಗೆ ಬಂದು ಅಲ್ಲಿದ್ದ ಕಸಗಳನ್ನು ಹೆಕ್ಕುತ್ತಿದ್ದೆವು. ನನಗದು ತುಂಬಾ ಇಷ್ಟವಾಗಿತ್ತು. ಬೆಳಗ್ಗೆ ಬಂದ ಕೂಡಲೇ ಇಡೀ ಮೈದಾನ ಸುತ್ತು ಹೊಡೆಯುತ್ತಿದ್ದೆವು. ಆಗ ಕೆಲವರು ನಮಗೆ ನರಗಸಭೆಯವರು ಎಂದು ಹಂಗಿಸುತ್ತಿದ್ದರು. ಆದರೆ ನನಗದು ಏನೂ ಅನಿಸಲಿಲ್ಲ. ಹೀಗೆ ನಮ್ಮ ಶ್ರಮದಾನ ಪ್ರತಿ ದಿನ ನಡೆಯುತ್ತಿತ್ತು. ನಾನು ನನ್ನ ಪಿ.ಯು.ಸಿ.ಯ ಎರಡು ವರ್ಷಗಳ ಎನ್.ಎಸ್.ಎಸ್. ವಾರ್ಷಿಕ ಶಿಬಿರದಲ್ಲಿ ಭಾಗವಹಸಿದೆ. ನನಗೆ ಇಂದಿಗೂ ಸಹ ಆ ಶಿಬಿರವನ್ನು ಮರೆಯಲಾಗುತ್ತಿಲ್ಲ. ಆ ಶಿಬಿರವನ್ನು ನೆನೆದಾಗ ಕೆಲವೊಮ್ಮೆ ನಗು ಬರುತ್ತದೆ. ಏಕೆಂದರೆ, ನಾವು ಅಲ್ಲಿ ಮಕ್ಕಳಂತೆ ವರ್ತಿಸಿದ ರೀತಿ. ಕೆಲವೊಂದು ವಿಷಯಗಳು ದುಃಖ ಉಂಟುಮಾಡುತ್ತವೆ. ಶಿಬಿರದಲ್ಲಿ ನಮ್ಮ ಯೋಜನಾಧಿಕಾರಿಗಳು ನಮಗೆ ಆ ಏಳು ದಿನ ಯಾವುದೇ ರೀತಿಯ ಕೊರತೆಯಾಗದಂತೆ ನೋಡಿಕೊಂಡರು. ಕೆಲವರು ಮೊದಲ ಬಾರಿಗೆ ಮನೆಯವರನ್ನು ಬಿಟ್ಟು ಬಂದಿದ್ದರು. ನಮ್ಮ ಅಕ್ಕಂದಿರು ಅಂದರೆ ನಮ್ಮ ದ್ವಿತೀಯ ವರ್ಷದವರು ನಮಗೆ ಎಲ್ಲಾ ರೀತಿಯ ಶಿಬಿರದ ಚಟುವಟಿಕೆಗಳಲ್ಲಿ ಪ್ರೋತ್ಸಾಹಿಸಿದರು. ನಾವು ಶಿಬಿರದಲ್ಲಿ ಕೆಲವೊಂದು ದಿನ ನಿದ್ದೆ ಬಿಟ್ಟು ಜಾಗರಣೆ ಕೂತದ್ದು ಉಂಟು. ಪ್ರಥಮ ಪಿ.ಯು.ಸಿ.ಯ ಶಿಬಿರದಲ್ಲಿ ಒಂದು ದಿನ ಯಾರೋ ಒಬ್ಬ ರಿಕ್ಷಾದಲ್ಲಿ ಬಂದು ಅಲ್ಲಿಯೇ ಸಮೀಪದಲ್ಲಿದ್ದ ಕಟ್ಟಡವೊಂದರಲ್ಲಿ ಅಡಗಿ ಕುಳಿತಿದ್ದ. ಅದನ್ನು ನೋಡಿ ಪೋಲೀಸರಿಗೆ ವಿಷಯ ತಿಳಿಸಿ ನಂತರ ನೋಡಿದರೆ ಅವನು ಕುಡಿದು ಬಂದಿದ್ದ. ನಾವು ಅಲ್ಲಿ ಎಲ್ಲಾ ಗಿಡಗಳನ್ನು ತೆಗೆಯುವ ಮೊದಲು ಆಕಟ್ಟಡ ಭೂತಬಂಗಲೆಯಂತಿತ್ತು. ನನಗಂತೂ ಎನ್.ಎಸ್.ಎಸ್. ಒಂದು ಒಳ್ಳೆಯ ವೇದಿಕೆಯಾಗಿತ್ತು ಎನ್ನುವುದು ಸುಳ್ಳಲ್ಲ.

ಕಳೆದುಹೋದ ಕ್ಷಣಗಳು

– ಚೈತ್ರಾ ಜಿ. ತಿಂಗಳಾಯ
ದ್ವಿತೀಯ ಬಿ.ಎ.

ನಾನು ಆರನೆಯ ತರಗತಿಯಲ್ಲಿದ್ದೆ. ಆಗ ಯಕ್ಷಗಾನ ಕಲಿಸಲು ಗುರುಗಳು ಬಂದಿದ್ದರು. ಆಗ ನಾನು ಯಕ್ಷಗಾನಕ್ಕೆ ಸೇರುತ್ತೇನೆ ಎಂಬುದು ನನಗೆ ಗೊತ್ತಿರಲಿಲ್ಲ. ಟೀಚರ್ ಸೇರಲು ಹೇಳಿದರು. ನಾನು ಹೋದೆ. ಶಾಲಾ ವಾರ್ಷಿಕೋತ್ಸವಕ್ಕೆ ಶಾಲಾ ಮಕ್ಕಳೆಲ್ಲರೂ ಯಕ್ಷಗಾನ ಮಾಡಿದ್ದೆವು. ಒಂದು ತಿಂಗಳಿನವರೆಗೆ ನಮಗೆ ಯಕ್ಷಗಾನ ಕಲಿಸಿಕೊಟ್ಟರು. ನನಗೆ ಅದರಲ್ಲಿ "ಕುಮುದಿನಿ" ಎನ್ನುವ ಪಾತ್ರ ಸಿಕ್ಕಿತ್ತು. ಎಲ್ಲಾ ತಯರಿ ನಡೆಯಿತು. ಶಾಲಾ ವಾರ್ಷಿಕೋತ್ಸವದ ದಿನ ಹತ್ತಿ ಬಂತು. ಎಲ್ಲಾ ಪಾತ್ರಗಳು ಚೆನ್ನಾಗಿ ನಡೆಯುತ್ತಿತ್ತು. ಕೊನೆಗೆ ನನ್ನ ಪಾತ್ರ ಮೊದಲ ಹಂತ, ಎರಡನೇ ಹಂತದಲ್ಲಿ ಡೈಲಾಗ್ ನೆನಪಿನಲ್ಲಿತ್ತು. ಸರಿಯಾಗಿ ಮಾಡಿದೆ. 3ನೇ ಸಲ ಬರುವಾಗ ಡೈಲಾಗ್ ಮರೆತೇ ಬಿಟ್ಟೆ. ಕುಮುದಿನಿ ಉಂಗುರ ನೀಡುವಗ ಡೈಲಾಗ್ ಹೇಳಬೇಕಿತ್ತು. ಅದನ್ನೇ ಮರೆತುಹೋಗಿದ್ದೆ. ಸ್ಟೇಜ್‌ನಲ್ಲಿ ಆತನಿಗೆ ಉಂಗುರ ನೀಡುವಾಗ ಡೈಲಾಗ್ ಮರೆತು ತುಳುವಿನಲ್ಲಿ "ಉಂಗುರ ದೆತೊನಿಯಾ" ಅಂತ ಹೇಳಿದ್ದೆ. ಇದು ನನಗೆ ಮರೆಯಲಾಗದ ಒಂದು ಚಿಕ್ಕ ಘಟನೆ.

ಇನ್ನು ನಗೆ ಬರುವ ವಿಷಯವೆಂದರೆ ಛದ್ಮವೇಷ. ಇದು ಕೂಡ ಮರೆಯಲಾಗದ ವಿಷಯ. 'ಛದ್ಮವೇಷ' ಇದೇ ಹೇಳುತ್ತದೆ, ಮೂಕಾಭಿನಯ ಎಂದು. ಆದರೆ ಛದ್ಮವೇಷದಲ್ಲಿ ನಾವು ಮಾತಾಡಿದ್ದೆವು.

ಸುಮಾರು 10ನೇ ತರಗತಿಯಲ್ಲಿದ್ದಾಗ ನವು ಛದ್ಮವೇಷ ಮಾಡಬೇಕೆಂದು ನಿರ್ಧರಿಸಿದ್ದೆವು. ಆಗ ಹೊಸದಾಗಿ ಬಂದ ಕ್ಲರ್ಕ್ ಒಬ್ಬರು ನಮಗೆ ಛದ್ಮವೇಷ ಕಲಿಸಿಕೊಟ್ಟರು. ಕ್ಲರ್ಕ್ ಕಲಿಸುವುದಲ್ವ ಸ್ವಲ್ಪ ಎಲ್ಲರ ಮುಂದೆ 9ನೇ, 8ನೇ ತರಗತಿಯ ಮಕ್ಕಳ ಮುಂದೆ ಛದ್ಮವೇಷಕ್ಕೆ ನಮಗೆ ಬಹುಮಾನ ಸಿಗುವುದು ಎಂದು ಬೀಗುತ್ತಿದ್ದೆವು. ಛದ್ಮವೇಷದ ದಿನ ಬಂತು. ಕಲಿಸಿಕೊಟ್ಟಿದ್ದ ಕ್ಲರ್ಕ್ ಛದ್ಮವೇಷಕ್ಕೆ ಮುಖ್ಯವಾಗಿ ಬೇಕಿದ್ದ ಬೋರ್ಡ್ ತಂದಿರಲಿಲ್ಲ. ನಾವು ನಮಗೆ ಬಹುಮಾನ ಎಂದು ಎನಿಸಿಕೊಂಡಿದ್ದೆವು. ಛದ್ಮವೇಷ ಮಾಡುವಾಗ ಕುಳಿತಿರುವ ಪ್ರೇಕ್ಷಕರಿಗೆ ಅರ್ಥವಾಗುತ್ತಿಲ್ಲವೆಂದು ಮಾತನಾಡಿದೆವು. ಕೊನೆಗೆ ನಾವು ಮಾಡಿದ್ದು ಛದ್ಮವೇಷವೆಂದು ಯಾರೂ ಹೇಳುವಂತಿರಲಿಲ್ಲ. ಕೊನೆಗೆ ಅದರಲ್ಲಿ 9, 8ನೆಯ ಮಕ್ಕಳಿಗೆ ಬಹುಮಾನ ಸಿಕ್ಕಿತು. ನಮಗೆ ಸಿಗಲಿಲ್ಲ. ಆ ಮಕ್ಕಳು ನಮ್ಮ ಮುಂದೆ ಕೂಗಿಕೊಂಡು ಹೋಗುವಾಗ ಆ ಕ್ಷಣದಲ್ಲಿ ಅನಿಸಿತ್ತು, ಅವರ ಮುಂದೆ ನಮಗೆ ಬಹುಮಾನ ಸಿಗುತ್ತದೆ ಎಂದು ಬೀಗಬಾರದಿತ್ತು, 'ಆತ್ಮವಿಶ್ವಾಸ ಇರಬೇಕು, ಮಿತಿಮೀರಬಾರದು.' ಎಲ್ಲಾ ಟೀಚರ್ಸ್ ಸಮಾ ಬೈದಿದ್ದರು. ಅದು ನಿಮ್ಮದು ಎಂಥಾ ಛದ್ಮವೇಷ ಎಂದು. ಹಿಂದಿನ ಕೆಲವು ಘಟನೆಗಳು ಬರೆಯುವಾಗ ಏನೋ ಒಂಥರಾ ಖುಷಿ ಸಿಗುತ್ತದೆ. ದೊಡ್ಡವರಾಗುತ್ತಾ...ಆಗುತ್ತಾ...ಹಿಂದೆ ಕಳೆದಂತಹ ಆ ಖುಷಿಯ ಕ್ಷಣವನ್ನು ಪಡೆಯಬೇಕೆಂದರೂ ಈಗ ಸಿಗುತ್ತಿಲ್ಲ.

"ಕಳೆದು ಹೋದ ದಿನಗಳು ಮರಳಿ ಬಾರದು."

ಡಿಸೆಂಬರ್ – 8

– ರಸಿಕ್ ಕುಮಾರ್ ಶೆಟ್ಟಿ
ತೃತೀಯ ಬಿ.ಎ.

ಇದೊಂಥರಾ ಯರ್ರಾಬಿರ್ರಿ ಪ್ರೇಮ ಕಥನ. ನೋಡೋಕ್ ಎಲ್ಲಾರ್ ಥರ ಒಂದೆ ಕಥೆ ಅನ್ಸಿದ್ರು ಒಂದ್ಸಲ ನಿಮ್ಮನ್ನ capture ಮಾಡುತ್ತೆ.

ಅವನ್ ಹೆಸ್ರು ಗಣೇಶ್, ಇಂಜಿನಿಯರಿಂಗ್ ಓದ್ತಾ ಇದ್ದ. ಪಿ.ಯು.ಸಿ. ಮುಗ್ಸಿ ಬರೋತನಕ ಹುಡ್ಗೀರತ್ರ ಹೇಗ್ ಮಾತಾಡ್ಬೇಕು, ಹೇಗೆ ನಿತ್‌ಕೋಬೇಕು ಅಂತಾನೇ ಗೊತ್ತಿಲ್ದೋನು, ಇಂಜಿನಿಯರಿಂಗ್ ಬಂದು ಒಂದೇ ತಿಂಗ್ಳಲ್ಲಿ ಎಲ್ಲಾ ಫಟಾಫಟ್ ಕಲಿತ್‌ಕೊಂಡ್ ಬಿಟ್ಟ. ಹಾಗಂತ ಅವ್ನಿಗೆ ಹುಡ್ಗೀರ್ ಹುಚ್ಚು ಅಂತ ಅಲ್ಲ. ಯಾರತ್ರಾದ್ರೂ ಮಾತಾಡೋವಾಗ atleast basic manners ಇರ್ಬೇಕು. ಶಿಕ್ಷಣದ ಜೊತೆ ಅದು ಮುಖ್ಯ ಅದಕ್ಕೋಸ್ಕರ ಅದನ್ನ ಕಲಿತಿದ್ದು. ಹುಡ್ಗೀರ್ ಹುಚ್ ಇದ್ರೆ basic manners ಕಲೀಬೇಕಂತಾನೇ ಇಲ್ಲ, ಎಲ್ಲಾರತ್ರ ಹೇಗ್ ಮಾತಾಡಿದ್ರು ನಡಿಯುತ್ತೆ.

ಗಣೇಶ್‌ಗೆ ಸ್ವಲ್ಪ ಸಿಟ್ ಜಾಸ್ತಿ. ಅವ್ನಂದ್ರೆ ಕಾಲೇಜಿನಲ್ಲಿ ಎಲ್ಲಾರಿಗೂ ಇಷ್ಟ. ಅವನಿಗೆ ಹುಡುಗರ್‌ಕಿಂತ ಹುಡ್ಗೀರೇ ಸ್ನೇಹಿತರು ಜಾಸ್ತಿ. ಹಾಗಂತ ಈ ಲವ್ ವಿಷಯದಲ್ಲಿ ಅವ್ನ್ ಇಲ್ವೇ ಇಲ್ಲ. ಅವ್ನ್ ಆಯ್ತು, ಅವನ್ ಕೆಲ್ಸ ಆಯ್ತು. ಹೀಗೆ ಮೂರು ವರ್ಷ ಇಂಜಿನಿಯರಿಂಗ್ ಮುಗ್ಸಿದ. ಕೊನೇ ಒಂದ್ ವರ್ಷ ಇತ್ತು. ಎಲ್ಲಾ ಸೀನಿಯರ್ ಸ್ಟೂಡೆಂಟ್ಸ್ ಜೂನಿಯರ್ಸ್‌ಗೆ ಲೈನ್ ಹಾಕೋಕಂತ ಯೋಚನೆ ಎಲ್ಲಾ ಹಾಕೋತಾ ಇದ್ರು. ಆದ್ರೆ ಗಣೇಶ್‌ಗೆ ಆ ಥರ ಆಲೋಚನೆನೇ ಇರ್ಲಿಲ್ಲ. ಅವ್ನಿಗ್ ಗೊತ್ತಿತ್ತು ಜೂನಿಯರ್ಸ್ ಬಂದ್ರೆ ಫೈನಲ್ ಇಯರ್ ಅವ್ರನ್ನ ಅಣ್ಣಾ ಅಂತಾನೇ ಕರಿಯೋದು ಅಂತ.

ಗಣೇಶ್ ಇಂಜಿನಿಯರಿಂಗ್ ಕೊನೆ ವರ್ಷ ಸ್ಟಾರ್ಟ್ ಆಯ್ತು. ಜೂನಿಯರ್ಸ್ ವೆಲ್ಕಮ್ ಸಮಾರಂಭ ಏರ್ಪಡಿಸಿದ್ರು. ಅದ್ರಲ್ಲಿ ತುಂಬಾ ಕಾರ್ಯಕ್ರಮಗಳಿತ್ತು. ಗಣೇಶ್ ಫೈನಲ್ ಇಯರ್ ಆಗಿದ್ರಿಂದ

ಎಲ್ಲಾ ಇವ್ನು ಇವ್ನ ಫ್ರೆಂಡ್ಸ್ ನೋಡ್ಕೋಬೇಕಾಗಿತ್ತು. ಆ ಕಾರ್ಯಕ್ರಮದಲ್ಲಿ ಒಂದು ನೃತ್ಯ ಕಾರ್ಯಕ್ರಮ ಅವ್ನಿಗ್ ತುಂಬಾ ಇಷ್ಟ ಆಯ್ತು. ಅದ್ರಲ್ ಒಬ್ಳು ಹುಡ್ಗಿ ತುಂಬಾ ಚೆಂದ ಮಾಡಿದ್ಲು. ಅವ್ನ್ ಬಗ್ಗೆ ವಿಚಾರಿಸ್ದಾಗ ಅವ್ಳು ಇವ್ನ್ ಫ್ರೆಂಡ್ ಸಂಬಂಧಿ ಅಂತ ಗೊತ್ತಾಯ್ತು. ಅವಳ ಹೆಸ್ರು ನಾಟ್ಯ. ನಾಟ್ಯ ಅಂತ ಯಾಕ್ ಹೆಸ್ರು ಇಟ್ಕೊಂಡ್ಲು ನಂಗೂ ಗೊತ್ತಿಲ್ಲ. ಯಾಕಂತ ಕೇಳ್ಬೇಡಿ.

ನಾಟ್ಯಂಗೆ ಹುಡುಗ್ರನ್ನ ನೋಡುದ್ರೇನೇ ಅಷ್ಟಕ್ಕಷ್ಟೇ, ಅದ್ರಲ್ಲೂ ಈ ಲವ್ ಎಲ್ಲ ಕೇಳ್ಬೇಡಿ, ಥೂ...ಗಮ್ಮತ್ ಅಂತೆ ಗಣೇಶ್ ಮತ್ತು ನಾಟ್ಯ ಮೊದ್ಲು ಮೊದ್ಲು ಹೀಗೆ ಹಾಂಯ್ ಬಾಂಯ್ ಅನ್ಕೊಂಡಿದ್ದೋರು....ಬರ್ತಾ ಬರ್ತಾ ಕ್ಲೋಸ್ ಆದ್ರು. ಬೆಸ್ಟ್ ಫ್ರೆಂಡ್ಸ್ ಆದ್ರು. ಕೊನೆಗೆ ಬಿಟ್ಟಿರೋಕೆ ಆಗ್ದೇ ಇರೋವಷ್ಟು ಹತ್ರ ಆದ್ರು. ಕೊನೆಗೆ ಗಣೇಶ್ ವಿಧಿ ಇಲ್ದೇ ಪ್ರೊಪೋಸ್ ಮಾಡೇ ಬಿಟ್ಟ. ಆದ್ರೆ ನಾಟ್ಯ ಒಪ್ಕೊಳ್ಳೇ ಇಲ್ಲ..... "ಇದೆಲ್ಲ ನಂಗ್ ಆಗಿಬರೋಲ್ಲ. ಮನೇಲಿ ಒಪ್ಪಿದ್ರೆ ಕಷ್ಟ. ಮುಂದೆ ನೋಡ್ವ" ಅಂದ್ಲು.

ಒಂದಿನ ಇವ್ರಿಬ್ರಿಗ್ಗೂ ಜಗಳ ಆಯ್ತು. ಗಣೇಶ್ ಅವ್ಳತ್ರ ಮಾತಾಡೋದೇ ಬಿಟ್ಟ. ನಾಟ್ಯ ಅಳ್ತಾ ಕೂತ್ಕೊಂಡು ಟೆಕ್ಸ್ಟ್ ಮಾಡಿದ್ಲು, "ಸಾರಿ ಗಣೇಶ್....ನಂದೇ ತಪ್ಪು. ನಾನ್ ಯಾಕ್ ನಿನ್ ಬಗ್ಗೆ ಕೇರ್ ಮಾಡುವುದು....? Because I Love You" ಅಂದ್ಲು. ಅಲ್ಲಿಗೆ ಲವ್ ಅಂದ್ರೇನೇ ಇಷ್ಟ ಇಲ್ದೇ ಇರೋರ ಕ್ಯೂಟ್ ಲವ್ ಸ್ಟೋರಿ ಆಯ್ತು.

ಬರ್ತಾ ಬರ್ತಾ ಬಿಟ್ಟಿರೋಕೇ ಆಗ್ದೇ ಇರೋವಷ್ಟು ಹತ್ರ ಆದ್ರು. ಗಣೇಶಾನು ಓದುದ್ರಲ್ಲಿ ತನ್ನ ಮುಂದಿನ ಭವಿಷ್ಯದ ಬಗ್ಗೆ ಸೀರಿಯಸ್ ಆದ. ತಾನು ಹೇಗಾದ್ರು ಒಳ್ಳೆ ಸ್ಥಾನಕ್ ಹೋಗಿ ನಾಟ್ಯನ್ನ ಪಡೀಲೇಬೇಕು ಅಂತ ಹಠ ಇಟ್ಕೊಂಡ. ರಿಲೇಶನ್‌ಶಿಪ್‌ನಲ್ಲಿ ಮುಖ್ಯ ವಿಷ್ಯ ಆಗೂದಂದ್ರೆ ಜಗಳ. ಅದಾಗ್ದೇ ಇದ್ರೆ ಅದು ಲವ್ ಅಲ್ಲ. ಇವ್ರಿಬ್ರ ವಿಷ್ಯದಲ್ಲೂ ಹಾಗೆ ಆಯ್ತು. ಪ್ರತೀಸತಿ ಜಗ್ಳ ಆದಾಗ್ಲೂ ನಾಟ್ಯಾನೇ ಕಾಂಪ್ರೊಮೈಸ್ ಆಗ್ತಾ ಇದ್ಲು. ಗಣೇಶ್‌ಗೂ ಗೊತ್ತಿತ್ತು ಇವ್ಳು ತನ್ನನ್ನ ಬಿಟ್ಟು ಎಲ್ಲೂ ಹೋಗಲ್ಲ ಅಂತ. ಹೀಗೆ ಆಗ್ತಾ ಆಗ್ತಾ ಒಂದಿನ ದೊಡ್ಡ ಜಗಳ ಆಯ್ತು. ಅವತ್ತು ನಾಟ್ಯ ಡಿಸೈಡ್ ಮಾಡಿ ಬಿಟ್ಲು. "ನಂಗೆ ಈ ಲವ್ ಎಲ್ಲಾ ಆಗಿಬರಲ್ಲಾ. ಪ್ಲೀಸ್ ಇನ್ ಈ ವಿಷ್ಯ ತೆಗೀಬೇಡ, you made me feel unworthy" ಅಂತ ಹೇಳಿ ಬಿಟ್ಲು. ಆ ದಿನ ಗಣೇಶ್ ಮನಸ್ಸಿನ ವ್ಯಥೆ...ನಾನ್ ಹೀಗೋದ್ ಬೇಡ ಓದೋವ್ರು ನೀವೇ ಫೀಲ್ ಮಾಡ್ಕೊಳ್ಳಿ ಹೇಗಾಗಿರ್ಬೇಡ ಅಂತ.

ಅವ್ನು ಅವ್ಳನ್ನ ಬಿಟ್ಟು ಹೋದ ದಿನ ಡಿಸೆಂಬರ್ 8. ಅದನ್ನ ಅವ್ರು ಯಾವತ್ತು ಮರೆಯೋದಿಲ್ಲ. ಮೊದ್‌ಮೊದ್ಲು ಮನೇಲಿ ಒಪ್ಪಲ್ಲ ಅಂತಿದ್ದೋರು ಈಗ ಇವ್ರೇ ಡಿಸೈಡ್ ಮಾಡ್ಕೊಂಡು ಎಂಡ್ ಮಾಡಿದ್ರು. ಈಗ ಅವ್ನು ಅವ್ನ career ಮೇಲೆ concentrate ಮಾಡ್ತಾ ಇದ್ದಾನೆ. ಏನೇ ಆದ್ರೂ ಡಿಸೆಂಬರ್ 8, ಅದು ನೆನಪ್ ಹೋಗಲ್ಲ.

ಸುಬ್ಬಯ್ಯನ ಮೂರ್ಖತನ

– ಎ. ರಘುನಂದನ್ ಶೆಣೈ
ದ್ವಿತೀಯ ಬಿ.ಎಸ್ಸಿ.

ಗುಂಡಿನೂರು ಎಂಬ ಒಂದು ಊರಿನಲ್ಲಿ ಸುಮಾರು 50 ಜನಗಳ ಗುಂಪೊಂದು ವಾಸವಾಗಿತ್ತು. ಅದರಲ್ಲಿ ಸುಬ್ಬಯ್ಯ ಎಂಬ 13 ವರ್ಷದ ಬಾಲಕನು ತನ್ನ ತಾಯಿಯೊಂದಿಗೆ ವಾಸವಾಗಿದ್ದನು. ಸುಬ್ಬಯ್ಯನು ಮಂದಬುದ್ಧಿಯವನಾಗಿದ್ದ. ಎಲ್ಲಾ ಕೆಲಸವನ್ನು ಸೊಟ್ಟಗೆ ಮಾಡಿ ಎಲ್ಲಾ ಜನರಿಂದ ಬೈಗುಳವನ್ನು ತಿನ್ನುತ್ತಿದ್ದ.

ಅವರ ಮನೆಯು ಬಾಡಿಗೆ ಮನೆಯಾಗಿತ್ತು. ಒಬ್ಬ ಶ್ರೀಮಂತ ವ್ಯಾಪಾರಿ ಅವರಿಗೆ ಮನೆಯನ್ನು ಬಾಡಿಗೆ ಕೊಟ್ಟಿದ್ದನು. ಶ್ರೀಮಂತನ ಮನೆ ಸುಬ್ಬಯ್ಯನ ಮನೆಯಿಂದ ಸುಮಾರು 3 ಕಿ.ಮೀ. ದೂರದಲ್ಲಿತ್ತು. ಒಂದು ದಿನ ಆ ಶ್ರೀಮಂತನು ಯಾತ್ರೆಗೆ ಹೋಗಿದ್ದನು. ಯಾತ್ರೆ ಎಲ್ಲಾ ಮುಗಿದು ಬಂದ ಮೇಲೆ ಸುಬ್ಬಯ್ಯನ ತಾಯಿ ದಾರಿಯಲ್ಲಿ ಸಿಕ್ಕಾಗ ಸ್ವಲ್ಪ ಪ್ರಸಾದವನ್ನು ಕೊಡುತ್ತೇನೆ ನಿನ್ನ ಮಗನನ್ನು ಮನೆಗೆ ಕಳುಹಿಸು ಎಂದನು.

ಹಾಗೆಯೇ ಸುಬ್ಬಯ್ಯನನ್ನು ಆ ಶ್ರೀಮಂತನ ಮನೆಗೆ ಕಳುಹಿಸುವಾಗ ಅವನ ತಾಯಿ ಹೇಳಿದಳು. ಆತನು ಏನನ್ನು ನೀಡಿದರೂ ತಲೆಯ ಮೇಲಿಟ್ಟುಕೊಂಡು ಬಾ ಎಂದು. ಹಾಗೆಯೇ ಆಗಲಿ ಎಂದು ಹೊರಟ ಸುಬ್ಬಯ್ಯ ಶ್ರೀಮಂತನ ಮನೆ ತಲುಪಿದನು. ಆ ಶ್ರೀಮಂತನು ಪ್ರಸಾದದೊಂದಿಗೆ 1 ಕೆಜಿ ಬೆಣ್ಣೆಯನ್ನೂ ಕೊಟ್ಟನು. ಸುಬ್ಬಯ್ಯ ಪ್ರಸಾದದೊಂದಿಗೆ ಬೆಣ್ಣೆಯನ್ನು ತಲೆಯ ಮೇಲಿಟ್ಟುಕೊಂಡು ಹೊರಟನು. ಆ ಬೇಸಿಗೆಯ ರಣ ಬಿಸಿಲಿಗೆ ಬಂದ ಸುಬ್ಬಯ್ಯನು ಮನೆಗೆ ಬರುವಾಗ ಬೆಣ್ಣೆ ಕರಗಿ ತಲೆಯೆಲ್ಲಾ ಒದ್ದೆಮುದ್ದೆಯಾಗಿತ್ತು. ಆತನ ತಾಯಿ ಆತನಿಗೆ ಸರಿಯಾಗಿ ಬೈದಳು. ಇಂತಹ ವಸ್ತುವನ್ನು ತರುವಾಗ ಭದ್ರವಾಗಿ ಗಟ್ಟಿ ಮುಚ್ಚಿಟ್ಟು ತರಬೇಕು ಎಂದು ಹೇಳಿದಳು.

ಮೂರು ದಿನ ಕಳೆದ ನಂತರ ಪುನಃ ಶ್ರೀಮಂತನು ಸುಬ್ಬಯ್ಯನಿಗೆ ಒದು ಬೆಕ್ಕಿನ ಮರಿಯನ್ನು ನೀಡದನು. ಸುಬ್ಬಯ್ಯನು ಅದನ್ನು ಪೇಪರಿನಲ್ಲಿ ಗಟ್ಟಿಯಾಗಿ ಸುತ್ತಿ ಪ್ಲಾಸ್ಟಿಕ್‌ನೊಳಗೆ ಹಾಕಿ ಮನೆಗೆ ತಂದನು. ಅದನ್ನು ನೋಡಿದ ಅವನ ತಾಯಿ ಬಹಳ ಸಂತೋಷದಿಂದ ತನ್ನ ಮಗನಿಗೆ ಬುದ್ಧಿ ಬಂದಿದೆ ಎಂದು ಸಂತಸ

ಪಟ್ಟಳು. ಆದರೆ ಅದನ್ನು ಬಿಚ್ಚಿದಾಗ ಅದರಲ್ಲಿ ಪ್ರಾಣ ಬಿಟ್ಟ ಬೆಕ್ಕಿನ ಮರಿಯನ್ನು ಕಂಡು ಸುಬ್ಬಯ್ಯನ ಕೆನ್ನೆಗೆ ಬಾರಿಸಿದಳು ಹಾಗೂ ಸರಿಯಾಗಿ ಬೈದಳು. ಇಂತಹ ವಸ್ತುಗಳನ್ನು ತರುವಾಗ ಹಗ್ಗಹಾಕಿ ರಸ್ತೆಯಲ್ಲಿ ಎಳೆದು ತೆಬೇಕೆಂದು ಹೇಳಿದಳು.

ಒಂದು ವಾರ ಬಿಟ್ಟು ಪುನಃ ಶ್ರೀಮಂತನು ಸುಬ್ಬಯ್ಯನಿಗೆ ಒಂದು ದೊಡ್ಡ ಗಾತ್ರದ ಚಿಕನ್ ತುಂಡನ್ನು ನೀಡಿದನು. ಈ ಸಲ ತಾನು ಒಳ್ಳೆಯ ಕೆಲಸ ಮಾಡಿದೆನೆಂದು ಎಲ್ಲರಿಗೂ ತಿಳಿಯಬೇಕು ಎಂದು ಅದನ್ನು ಹಗ್ಗ ಹಾಕಿ ರಸ್ತೆಯಲ್ಲಿ ಎಳೆದುಕೊಂಡು ಬರಲು ಪ್ರಾರಂಭ ಮಾಡಿದನು. ಬರುವ ದಾರಿಯಲ್ಲಿ ಬೀದಿ ನಾಯಿಗಳಿಗೆ ಆ ದಿನ ಭರ್ಜರಿ ಭೋಜನವಾಯಿತು. ಮನೆಗೆ ಬಂದಾಗ ಖಾಲಿ ಎಲುಬಿನ ರಾಶಿಯನ್ನು ಕಂಡ ತಾಯಿ ತನ್ನ ಮಗ ಯಾವುದೇ ಪ್ರಯೋಜನಕ್ಕೆ ಬಾರದವನೆಂದು ತಿಳಿದು ಆತನನ್ನು ಬೈಯದೆ ಹಾಗೇ ಬಿಟ್ಟು ಬಿಟ್ಟಳು. ಹೀಗೆ ಸುಬ್ಬಯ್ಯ ಯಾವ ಪ್ರಯೋಜನಕ್ಕೆ ಬಾರದವನು. ಇದಕ್ಕೆ ಉತ್ತೇಜನ ಕೊಟ್ಟವರೇ ಅವನ ತಂದೆ ತಾಯಿಯರು.

ಹೇಗೆಂದರೆ ಸುಬ್ಬಯ್ಯ ಸಣ್ಣದಿರುವಾಗ ಸುಮಾರು ಐದು ವರ್ಷದಿಂದ ಹನ್ನೆರಡು ವರ್ಷದ ವರೆಗೂ ಹೊರಗಿನ ಪ್ರಪಂಚದ ಜ್ಞಾನವಿಲ್ಲದೇ ಖಾಲಿ ಮೊಬೈಲ್ ಹಾಗೂ ಟಿವಿಯ ಆಮಿಷ ತೋರಿಸಿ ಸುಬ್ಬಯ್ಯನ ಅಳುವನ್ನು ನಿಲ್ಲಿಸುತ್ತಿದ್ದರು. ಅದರ ಪರಿಣಾಮವಾಗಿ ಸುಬ್ಬಯ್ಯನು ಯಾರಿಗೂ ಪ್ರಯೋಜನಕ್ಕೆ ಬಾರದವನಾದನು.

ಇಂದಿನ ಜಗತ್ತಿನಲ್ಲೂ ಇದೇ ರೀತಿ ಜೀವನ ನಡೆಸುವವರೂ ಹಲವರಿದ್ದಾರೆ. ಮಕ್ಕಳು ಐದು ವರ್ಷವಾದ ಕೂಡಲೇ ಶಾಲೆ ಸೇರಿಸುವುದು ವಾಡಿಕೆ. ಆ ಮಕ್ಕಳು ಸಂಜೆ ಮನೆಗೆ ಬಂದು ಆಡುವ ಬದಲು ಟ್ಯೂಶನ್‌ಗೆ ಸೇರಿಸಿ ಅವರಿಗೆ ಹೊರ ಜಗತ್ತಿನ ಜ್ಞಾನವಿಲ್ಲದಂತೆ ಮಾಡುತ್ತಾರೆ.

ಒಂದು ಕಾಲದಲ್ಲಿ ಟ್ಯೂಶನ್‌ಗೆ ಹೋಗುವವರು ದಡ್ಡರು ಎಂಬ ಅಭಿಪ್ರಾಯ ಇತ್ತು. ಆದರೆ ಇಂದು ಟ್ಯೂಶನ್ ಹೋಗದೆ ಇರುವವರು ದಡ್ಡರು. ಇದು ಇಂದಿನ ಪರಿಸ್ಥಿತಿ.

ಸುಮಾರು ಒಂದು ಎರಡು ವರ್ಷದಲ್ಲೇ ಮಗುವಿಗೆ ಹೆತ್ತವರು ಮೊಬೈಲ್ ಪರಿಚಯ ಮಾಡುತ್ತಾರೆ. ಆಟವಾಡುವ ಅಥವಾ ಬೇರೆ ಯಾವುದೇ ವಿಷಯ ತಿಳಿಯದ ಆ ಮಗು ಸುಬ್ಬಯ್ಯನ ಹಾಗೆಯೇ ಬೆಳೆಯಬಹುದು.

ಮರ ಮತ್ತು ಪಾರಿವಾಳಗಳ ನಡುವೆ ನಾನೆಲ್ಲಿ?

– ಗಜೇಂದ್ರ
ತೃತೀಯ ಬಿ.ಎ.

ನಮ್ಮ ಜೀವನವನ್ನು ಯಾವ ರೀತಿಯಲ್ಲಿ ರೂಪಿಸಿ–ಕೊಳ್ಳಬೇಕೆಂಬುವುದೇ ಗೊಂದಲಮಯವಾದಂತಹ ವಿಷಯ. ನಾವು ಒಂದು ಸ್ಥಳಕ್ಕೆ ಹೋಗಬೇಕೆಂದರೆ ನಕ್ಷೆಯ ಸಹಾಯದಿಂದ ಆ ಸ್ಥಳವನ್ನು ತಲುಪುತ್ತೇವೆ ಆದರೆ ನಮ್ಮ ಜೀವನವು ಯಾವ ರೀತಿಯಾಗಿ ಹೋಗಬೇಕೆಂಬುವುದಕ್ಕೆ ಯಾವ ರೀತಿಯ ನಕ್ಷೆಯೂ ಇಲ್ಲ. ಕೆಲವು ಸಮಯದಲ್ಲಿ ನಾವು ಬೇರೆಯವರ ಜೊತೆಗೆ ತಪ್ಪಾಗಿ ವರ್ತಿಸುತ್ತೇವೆ. ಒಂದು ವೇಳೆ ನಾವು ತಪ್ಪು ಮಾಡಿದ್ದರೆ ಆ ತಪ್ಪಿನ ಅರಿವು ನಮಗಾಗುತ್ತದೆ. ಎಲ್ಲದಕ್ಕೂ ಮೂಲ ಕಾರಣ ಸಂದರ್ಭ, ಯಾವ ಸಂದರ್ಭ ಬಂದರೂ ನಮ್ಮ ತಾಳ್ಮೆ ನಾವು ತಪ್ಪಬಾರದು. ಸರಿಯಾಗಿ ಅರ್ಥೈಸಿಕೊಂಡು ನಂತರವೇ ಅದಕ್ಕೆ ಪ್ರತ್ಯುತ್ತರವನ್ನು ನೀಡಬೇಕು.

ನನ್ನ ಜೀವನದಲ್ಲಿ ನಡೆದ ಅಥವಾ ನನ್ನ ಅನುಭವಕ್ಕೆ ಬಂದ ವಿಚಾರಗಳನ್ನು ನಾನಿಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ನನ್ನ ಬಾಲ್ಯದ ದಿನಗಳಲ್ಲಿ ಸಣ್ಣ ಪುಟ್ಟ ವಿಷಯಕ್ಕೆ ಸ್ನೇಹಿತರೊಟ್ಟಿಗೆ ಜಗಳವಾಡಿ ನನ್ನ ಗೆಳೆತನವನ್ನು ಮುರಿದುಕೊಂಡಿದ್ದೆ. ಆ ಸಂದರ್ಭದಲ್ಲಿ ಅದು ಸರಿ ಎನಿಸಿದರೂ ಎದುರಾಳಿಗಳಿಗೆ ಪ್ರತ್ಯುತ್ತರ ತಪ್ಪೆನಿಸಿತು. ಅದಕ್ಕಾಗಿ ಸಂಬಂಧಗಳು ಮುರಿದುಬಿದ್ದವು. ಇದು ಈಗಲೂ ಎಲ್ಲರಿಗೂ ಅನ್ವಯವಾಗುತ್ತದೆ.

ಎಲ್ಲರೂ ನನ್ನ ಕೈಬಿಟ್ಟರೂ ಕೊನೆಗೆ ನನ್ನ ಒಂಟಿತನಕ್ಕೆ ಸಾಕ್ಷಿಯಾದದ್ದು ಪ್ರಕೃತಿ. ಭಗವಂತ ಸೃಷ್ಟಿಸಿದ ಭವ್ಯವಾದ ಪ್ರಕೃತಿಯ ಎದುರೂ ಎಲ್ಲವೂ ನಶ್ವರವೆನಿಸಿತು. ಆಗ ನಾನು ನನ್ನ ಜೀವನವನ್ನು ಪ್ರಕೃತಿಯ ನಡುವೆ ಕಳೆಯಲು ಇಚ್ಛಿಸಿದೆ.

ಹೀಗೆ ನಾನು ಪ್ರಕೃತಿಯ ಮಡಿಲಲ್ಲಿ ನಡೆದಾಗ ನನ್ನ ಕಣ್ಣಿಗೆ ಬಿದ್ದದ್ದು ಬೃಹತ್ತಾದ ಪಾರಿವಾಳಗಳ ಗುಂಪು. ಆ ದೃಶ್ಯವನ್ನು ನೋಡಿದಾಗ ನಾನೂ ಆ ಪಾರಿವಾಳಗಳ ನಡುವೆ ಒಂದಾಗಿದ್ದು ಪ್ರಕೃತಿಯ ಸೌಂದರ್ಯವನ್ನು ಸವಿಯಬಹುದೆನಿಸಿತು. ಆದರೆ ನಾನು ಎಣಿಸಿದ್ದು ಕ್ಷಣಾರ್ಧದಲ್ಲಿ ತಪ್ಪೆನಿಸಿತು.

ಆ ಪಾರಿವಾಳಗಳೂ ಸೌಂದರ್ಯವನ್ನು ಸವಿಯುತ್ತಿರಬೇಕಾದರೆ, ಒಬ್ಬ ಬೇಟರಗಾರ ಹೊಟ್ಟೆಪಾಡಿನ ಬಲೆಗೆ ಬಿದ್ದು ಬೇಟೆಗಾರನ ಜೀವನೋಪಾಯಕ್ಕೆ ದಾರಿಯಾದವು. ಅದರಲ್ಲಿ ಕೆಲವು ಹಾರಿ ತಮ್ಮ ನೆಲೆಯನ್ನು ಮರದ ಮೇಲೆ ಕಂಡುಕೊಂಡವು. ಮರವು ಯಾವುದೇ ಸ್ವಾರ್ಥವಿಲ್ಲದೇ ಎಲ್ಲರಿಗೂ ಸಮಾನವಾಗಿ ನೆರಳು, ಗಾಳಿ, ಆಶ್ರಯವನ್ನು ನೀಡಿ ತಾನೂ ಸುಖವಾಗಿರುತ್ತದೆ ಎಂದು ನಾನು ಆಲೋಚಿಸಿದೆ. ಈಗ ನನಗೆ ಪಾರಿವಾಳಗಳ ಜೀವನವೂ ನಶ್ವರವೆನಿಸಿ ನನ್ನ ಚಿತ್ತ ಮರಕ್ಕೆ ಕೊಟ್ಟೆ.

ಸ್ವಲ್ಪ ಸಮಯದಲ್ಲೇ ಒಬ್ಬ ಮರ ಕಡಿಯುವವನು ಬಂದು

ಮರವನ್ನು ಬುಡಮೇಲು ಮಾಡಿದನು. ಯಾವ ಪ್ರತಿಫಲವನ್ನೂ ಬಯಸದೇ ಎಲ್ಲರಿಗೂ ಗಾಳಿ, ನೆರಳು, ಆಹಾರವನ್ನು ನೀಡುವ ಮರಗಳಿಗೇ ದುರ್ಗತಿ ಬಂದ ಮೇಲೆ ಇನ್ನು ಈ ಮಾನವ ಜನ್ಮಕ್ಕೆ ಏನೇನಾಗಬಹುದು ಎನಿಸಿತು. ಇಲ್ಲಿ ತನಕ ಪಾರಿವಾಳ, ಮರಗಳ ಜೀವನವನ್ನೇ ಲೇಸೆಂದು ಭಾವಿಸಿದ ನನಗೆ ಈ ಎರಡು ದೃಶ್ಯಗಳು ನನ್ನನ್ನು ಮಾನವನನ್ನಾಗಿ ಮಾಡಿದವು. ಯಾರೇ ಆಗಲಿ, ಮರವೋ, ಅಥವಾ ಪಕ್ಷಿಯೋ ಅಥವಾ ಮಾನವನೇ ಇರಲಿ, ಮಾನವನ ಜೀವನೋಪಾಯಕ್ಕೆ ಯಾವುದನ್ನು ಮಾನವ ಲೆಕ್ಕಿಸುವುದಿಲ್ಲ. ಇದೇ ಜೀವನ.

ಈ ಪ್ರಪಂಚದಲ್ಲಿ ಆಯಾ ಜೀವಿಗಳಿಗೆ ತನ್ನದೇ ಆದ ಕಷ್ಟ ಇರುತ್ತದೆ. ಆ ಕ್ಷಣಕ್ಕೆ ಮೂಲ ಕಾರಣ ಮಾನವನೇ ಆಗಿರುತ್ತಾನೆ. ಉದಾಹರಣೆಗೆ ಮರ ಮತ್ತು ಪಕ್ಷಿಯ ಕಥೆ. ಪ್ರಪಂಚದಲ್ಲಿ ದೇವರು ಸೃಷ್ಟಿಸಿರುವ ಎಲ್ಲಾ ಜೀವಿಗಳಿಗೂ ತನ್ನದೇ ಆದ ಕಾರ್ಯ ನಿರ್ವಹಿಸುತ್ತವೆ. ಆದರೆ ಇವುಗಳಿಗೆ ಅಡ್ಡಿಯಾಗುವ ಒಂದೇ ಒಂದು ಜೀವಿಯೆಂದರೆ ಅದು ಮಾನವ. ದುರಾದೃಷ್ಟವೆಂದರೆ ಮಾನವನೇ ವಿನಾಶಕಾರಿಯಾಗಿರುವುದು. ಮಾನವನು ತನ್ನ ಚಿತ್ರವನ್ನು ಸ್ವಲ್ಪ ಪ್ರಕೃತಿಯ ಉಳಿವಿನ ದೃಷ್ಟಿಯಲ್ಲಿ ಬಿಡಿಸಿದರೆ ಸುಮಾರು ವರ್ಷದಿಂದ ಮುಂದುವರಿಯುತ್ತಿರುವ ದೇಶವಾಗಿರುವ ನಮ್ಮ ಭಾರತ ಮುಂದುವರಿದ ದೇಶವಾಗುತ್ತದೆ.

ಮೊಬೈಲ್‌ನ ದುರ್ಬಳಕೆ

– ಉಷಾ
ತೃತೀಯ ಬಿ.ಎಸ್ಸಿ.

ಒಂದು ಕುಟುಂಬ. ಗಂಡ, ಹೆಂಡತಿ, ಇಬ್ಬರು ಮಕ್ಕಳು. ಗಂಡ ಕೆಲಸಕ್ಕಾಗಿ ಹೊರಗೆ ಹೋಗು ದುಡಿಯುತ್ತಿದ್ದ, ಹೆಂಡತಿ ಮನೆಯಲ್ಲಿಯೇ ಮನೆಕೆಲಸ ಮಾಡುತ್ತಿದ್ದಳು. ಮಗ ಮತ್ತು ಮಗಳು ಇಬ್ಬರು ಶಾಲೆಗೆ ಹೋಗುತ್ತಿದ್ದರು.

ಮಗ ಶಾಲೆಗೆ ಹೋಗುತ್ತಾ ಮೊಬೈಲ್ ಮೇಲೆ ಹೆಚ್ಚು ಗಮನ ಕೊಡುತ್ತಿದ್ದ. ತಾಯಿ ಮನೆಯಲ್ಲಿ ಕೆಲಸ ಮಾಡಿದ ನಂತರ ಟಿವಿಯಲ್ಲಿ ಧಾರವಾಹಿಗಳನ್ನು ನೋಡುವುದರಲ್ಲಿಯೇ ಮುಳುಗಿರುತ್ತಿದ್ದಳು.

ಮಗನು ಮನೆಗೆ ಬಂದು ಕೋಣೆ ಒಳಗೆ ಹೋಗಿ ಬಾಗಿಲು ಹಾಕಿಕೊಂಡು ಮೊಬೈಲ್‌ನಲ್ಲಿ ಆಟವಾಡುತ್ತಿದ್ದರೆ ತಾಯಿ ತನ್ನ ಮಗ ಓದುತ್ತಿರುವನೆಂದು ಸುಮ್ಮನೆ ಧಾರವಾಹಿ ನೋಡುತ್ತಾ ಕುಳಿತುಕೊಳ್ಳುತ್ತಿದ್ದಳು.

ಕಾಲ ಕಳೆದಂತೆ ಮಗನು ಮಾನಸಿಕವಾಗಿ ಬದಲಾಗುತ್ತಾ ಹೋಗುತ್ತಾನೆ. ಶಾಲೆಯಲ್ಲಿಯೂ ಕೂಡ ಯಾರ ಜೊತೆಗೂ ಬೆರೆಯುವುದಿಲ್ಲ. ಸುಮ್ಮನೆ ಮಂಕಾಗಿ ಕುಳಿತಿರುತ್ತಿದ್ದ. ಒಂದು ದಿನ ಅಧ್ಯಾಪಕರು ಅವನ ತಂದೆ ತಾಯಿಯನ್ನು ಕರೆಸಿ ಹೇಳುತ್ತಾರೆ. ನಿಮ್ಮ ಮಗ ಯಾವುದರಲ್ಲಿಯೂ ಆಸಕ್ತಿ ತೋರಿಸುತ್ತಿಲ್ಲ. ಯಾರ ಜೊತೆಯೂ ಬೆರೆಯುವುದಿಲ್ಲ ಅಂತ.

ತಂದೆ ತಾಯಿ ಹೇಳುತ್ತಾರೆ, ಇಲ್ಲ. ನಮ್ಮ ಮಗ ಶಾಲೆ ಬಿಟ್ಟು ಬಂದ ಕೂಡಲೇ ಕೋಣೆಗೆ ಹೋಗಿ ಓದುತ್ತಾನೆ ಎಂದು. ಇದಕ್ಕೆ ಅವರ ಜೊತೆಯಲ್ಲಿದ್ದ ಮಗಳು ಹೇಳುತ್ತಾಳೆ, ಇಲ್ಲ ಅಮ್ಮ ಅವನು ಕೋಣೆಯಲ್ಲಿ ಮೊಬೈಲ್‌ನಲ್ಲಿ ಆಟವಾಡುತ್ತಾ ಇರುತ್ತಾನೆ. ಅವನು ನನ್ನ ಜೊತೆಗೂ ಸರಿಯಾಗಿ ಮಾತನಾಡುವುದಿಲ್ಲ ಎಂದು. ಆಗ ಅಧ್ಯಾಪಕರು ತಂದೆ ತಾಯಿಗೆ ಹೇಳುತ್ತಾರೆ, ನೋಡಿ ಅವನ ಬಗ್ಗೆ. ನಾವು ನಿಮಗೆ ಎಲ್ಲಾ ತಿಳಿಸಿದ್ದೇವೆ. ಇನ್ನು ನೀವೇ ನೋಡಿ ಎಂದು.

ನಂತರ ತಂದೆ ತಾಯಿ ಚಿಂತಿಸುತ್ತಾ ಮಗನ ಸ್ಥಿತಿಯನ್ನು ನೋಡಿ ಆಸ್ಪತ್ರೆಗೆ ಹೋಗುತ್ತಾರೆ. ಅಲ್ಲಿ ವೈದ್ಯರು ಅವರ ಮಗನಿಗೆ ಯಾವ ಔಷಧಿಯ ಅಗತ್ಯವಿಲ್ಲವೆಂದು ತಿಳಿಸಿ ಅವನನ್ನು ಫೋನ್‌ನಿಂದ ಮುಕ್ತಗೊಳಿಸಿ ನೀವು ಅವನ ಜೊತೆ ಕಾಲ ಕಳೆಯಬೇಕು. ಹೊರಗೆ ಕರೆದುಕೊಂಡು ಹೋಗಬೇಕು. ಅವನಿಗೆ ಬೇರೆ ಕಾರ್ಯಕ್ರಮಗಳನ್ನು ತೋರಿಸಬೇಕು ಎಂದು ಹೇಳುತ್ತಾರೆ. ತಂದೆ ತಾಯಿ ಇಬ್ಬರೂ ಮರುದಿನ ತಮ್ಮ ಮಕ್ಕಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹೋಗುತ್ತಾರೆ. ಕಾರ್ಯಕ್ರಮ ಮುಗಿಸಿ ಮನೆಗೆ ಹೋಗುವಾಗ ಮಗನಲ್ಲಿ ಏನೋ ಚೇತರಿಕೆ ತೋರುತ್ತದೆ.

ಹೀಗೆ ತಂದೆ ತಾಯಿ ಇಬ್ಬರೂ ಕೂಡ ಮಗನ ಚೇತರಿಕೆಯನ್ನು ಕಂಡು ಖುಷಿ ಪಟ್ಟರು.

ವಿಕೃತಿಂ ನೈವ ಗಚ್ಛಂತಿ ಸಂಗದೋಷೇಣ ಸಾಧವಃ ।
ಆವೇಷ್ಟಿತಂ ಮಹಾಸರ್ಪೈಃ ಚಂದನಂ ನ ವಿಷಾಯತೇ ॥

ದುರ್ಜನರ ಸಹವಾಸವೆಂಬ ದೋಷವುಂಟಾದರೂ ಸಜ್ಜನರು ವಿಕೃತಿಯನ್ನು ಹೊಂದುವುದಿಲ್ಲ. ದೊಡ್ಡ ದೊಡ್ಡ ಸರ್ಪಗಳನ್ನೆ ಸುತ್ತುವರಿಯಲ್ಪಟ್ಟಿದ್ದರೂ ಗಂಧದ ಮರ ಎಂದೂ ವಿಷಮಯವಾಗುವುದಿಲ್ಲ.

ಉನ್ನತ ಶಿಕ್ಷಣದಲ್ಲಿ ನೈತಿಕ ಮೌಲ್ಯಗಳ ಅಳವಡಿಕೆ ಮತ್ತು ಸವಾಲುಗಳು

('ಸಂಸ್ಥಾಪಕರ ದಿನ'ದ ಅಂಗವಾಗಿ ಆಯೋಜಿಸಿದ ಅಂತರ್–ಕಾಲೇಜು ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ.)

– ಕುಮಾರಿ ವಾರುಣಿ ಎಸ್. ಐತಾಳ್
ಶ್ರೀ ವೆಂಕಟರಮಣಸ್ವಾಮಿ ಕಾಲೇಜು, ಬಂಟ್ವಾಳ.
ದ್ವಿತೀಯ ಬಿ.ಕಾಂ.

ಕಾಲೇಜು ಶಿಕ್ಷಣದಲ್ಲಿರುವ ಹಲವಾರು ಸವಾಲುಗಳಲ್ಲಿ ಒಂದು ಸವಾಲೆಂದರೆ ಆಧುನಿಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಮತ್ತು ಆಸಕ್ತಿದಾಯಕವಾಗಿ ಹೇಗೆ ಮಾಡುವುದು ಎಂದು. ಪ್ರಸ್ತುತ ದಿನಗಳಲ್ಲಿ ಪಠ್ಯಕ್ರಮದಲ್ಲಿ ತಂತ್ರಜ್ಞಾನದ ವಿಷಯ ತುಂಬಿದೆ. ಅಂಕಿ ಅಂಶಗಳು, ಸಿದ್ಧಾಂತಗಳು ಮತ್ತು ಕಾನೂನಿನ ವಿಷಯ ಇತ್ಯಾದಿಗಳನ್ನು ಒಳಗೊಂಡಿದೆ. ಇಂದಿನ ಯುವಕರು ಪಠ್ಯಕ್ರಮದ ಸಂಭವನೀಯತೆ ಮತ್ತು ಒಳ್ಳೆಯತನವನ್ನು ಕೇವಲ ಶೈಕ್ಷಣಿಕವಾಗಿ ಕಲಿಯಲು ಕೇಂದ್ರೀಕರಿಸುತ್ತಿದ್ದಾರೆ.

ಶಿಕ್ಷಕ ಹಾಗೂ ಕಲಿಸುವುದು (ಕಲಿಕೆ) ಇವೆರಡು ಶಿಕ್ಷಣ ಕ್ಷೇತ್ರದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ದಶಕಗಳಿಂದಲೂ ಶಿಕ್ಷಣದ ವ್ಯವಸ್ಥೆ ಬದಲಾಗುತ್ತಾ ಬಂದಿದೆ. ಇದರಿಂದ ಅನೇಕ ಸಮಸ್ಯೆಗಳು ಎದುರಾಗಬಹುದು. ಹಾಗಾಗಿ ಶಿಕ್ಷಕರು ಕಷ್ಟಪಡುವಂತಾಗಿದೆ. ಇದು ಶಿಕ್ಷಕರಿಗೆ ಸವಾಲನ್ನು ಒಡ್ಡುತ್ತದೆ. ಸಾಮಾಜಿಕ ಹಿನ್ನೆಲೆ ಹಾಗೂ ಕಲಿಯುವವರ, ಬೋಧಕರ ಸಾಂಸ್ಕೃತಿಕ ದೃಷ್ಟಿಕೋನದ ಭಂಗಿ ಶೈಕ್ಷಣಿಕ ಪ್ರಕ್ರಿಯೆಗೆ ಹೊಸ ಸಮಸ್ಯೆಯಾಗಿದೆ.

ತಂತ್ರಜ್ಞಾನದ ದಾಳಿ ಮತ್ತು ಸಮಾಜದ ಮೇಲೆ ಅದರ ಪರಿಣಾಮ ವ್ಯತಿರಿಕ್ತವಾಗಿದೆ. ಇದು ನಮ್ಮ ಸಮಾಜದ ಮೌಲ್ಯಗಳ ಗಂಭೀರ ನಷ್ಟಕ್ಕೆ ಕಾರಣವಾಗಿದೆ. ಈ ಪ್ರವೃತ್ತಿಯು ಇನ್ನಷ್ಟು ಹರಡದ ಹಾಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಸಂದಿಗ್ಧತೆಯ ಸಮಯದಲ್ಲಿ ನಿರ್ಧಾರ ಮಾಡುವ ಧೈರ್ಯ ತೆಗೆದುಕೊಳ್ಳಬೇಕು. ಎಲ್ಲಾ ಹಂತದ ಕಾಲೇಜುಗಳಲ್ಲಿ ಮೌಲ್ಯ ಆಧಾರಿತ ಶಿಕ್ಷಣ ಅಗತ್ಯವಿದೆ. ಕಾಲೇಜುಗಳಲ್ಲಿ ಸಂಸ್ಕೃತಿ ಮತ್ತು ಗುಣಮಟ್ಟವನ್ನು ನಿರ್ಮಿಸುವ ನೆಲೆಯಲ್ಲಿ ಆಡಳಿತ ಶಿಕ್ಷಕರು ಮತ್ತು ಪೋಷಕ ಸಿಬ್ಬಂದಿಗಳು ಪ್ರಮುಖ ಪಾತ್ರವನ್ನು ವಹಿಸುತ್ತಾರೆ.

ಮುಖ್ಯ ಬೋಧನೆ ಅಥವಾ ಕಲಿಕೆ ತಂತ್ರಗಳನ್ನು ಪೂರ್ವಭಾವಿಯಾಗಿ ಬಳಸಿಕೊಳ್ಳಬೇಕು. ಶಿಕ್ಷಕರಿಂದ ಕಲಿಯುವವರಿಗೆ ಆಯ್ದ ಮಾಹಿತಿ, ಪ್ರಕ್ರಿಯೆ ಮತ್ತು ಅದನ್ನು ಸಂಶ್ಲೇಷಿಸಿ ಹೇಗೆ ಕಲಿಸಬೇಕು ಆ ರೀತಿ ಶಿಕ್ಷಣವನ್ನು ಕೊಡಿಸಬೇಕು. ಶಿಕ್ಷಣ ಮಾನವ ಪ್ರಗತಿಗೆ ಸಾಧನವಾಗಿದೆ. ವ್ಯಕ್ತಿಯಲ್ಲಿ ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ತುಂಬಲು ಕಾಲೇಜು ಪ್ರಮುಖ ಪಾತ್ರ ವಹಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ಮೌಲ್ಯಗಳು ನೆಲೆಸುವಲ್ಲಿ ಕಾಲೇಜು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಕಾಲೇಜಿನ ಖ್ಯಾತಿ ಶಿಕ್ಷಕರ ಮೂಲಕ ರಚಿಸಲ್ಪಟ್ಟಿದೆ, ವಿದ್ಯಾರ್ಥಿಗಳ ನಡವಳಿಕೆ ರೂಪಿಸುವ ನಿಟ್ಟಿನಲ್ಲಿ ಶಿಕ್ಷಕರ ಪಾತ್ರ ಅತ್ಯಮೂಲ್ಯ. ವಾಸ್ತವಾಗಿ ಶಿಕ್ಷಕರು ವಿದ್ಯಾರ್ಥಿಗಳ ಭವಿಷ್ಯದ ವಿನ್ಯಾಸಕರು. ನೇರವಾಗಿ ಅಥವಾ ಪರೋಕ್ಷವಾಗಿ ಅವರು ತಮ್ಮ ವಿದ್ಯಾರ್ಥಿಗಳನ್ನು ಪ್ರಭಾವಿಸುತ್ತಾರೆ. ಹೀಗಾಗಿ ಶಿಕ್ಷಕರು ವಿದ್ಯಾರ್ಥಿಗಳ ಆದರ್ಶ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಬೇಕು.

ಕೇವಲ ಶಿಕ್ಷಕರ ಪಾತ್ರ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಉತ್ತಮ ಬೋಧನಾ ತಂತ್ರಗಳು ಅತ್ಯವಶ್ಯಕ. ವಿದ್ಯಾರ್ಥಿಗಳಲ್ಲಿ ವಿವೇಚನಾಶೀಲತೆಯನ್ನು ಅಭಿವೃದ್ಧಿಪಡಿಸುವುದರಲ್ಲಿ ವಿಮರ್ಶಾತ್ಮಕ ತನಿಖಾ ವಿಧಾನ, ಪಾತ್ರ–ವಹಿವಾಟು, ಮೌಲ್ಯ ಸೃಷ್ಟೀಕರಣ ತಂತ್ರ, ಮೌಲ್ಯ ವಿಶ್ಲೇಷಣೆ ಇವುಗಳ ಪಾತ್ರ ಅಪಾರ. ವಿದ್ಯಾರ್ಥಿಗಳಿಗೆ ಸಮುದಾಯ ಆಧಾರಿತ ಯೋಜನೆಗಳು ಸಹ ಉಪಯುಕ್ತವಾಗಿದೆ. ಅಲ್ಲಿ ವಿದ್ಯಾರ್ಥಿಗಳು ಜನರಲ್ಲಿ ಚರ್ಚಿಸಿ ಮತ್ತು ನೋಡಿ ಅವರ ಜೀವನದ ವಾಸ್ತವತೆಯನ್ನು ಕಲಿತುಕೊಳ್ಳುತ್ತಾರೆ. ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಬೋಧಪ್ರದ ಅರಿವು ಮೂಡಿಸುವುದು. ಬೋಧನಾ ಅರಿವು ಮತ್ತು ಪ್ರಜ್ಞೆ ಅದು ವೈಯಕ್ತಿಕ ಪ್ರಜ್ಞೆ, ಸಾಮಾಜಿಕ ಸಂಬಂಧ, ಜೀವನದ ಪರಿಸ್ಥಿತಿಗಳನ್ನು ವಿವರಿಸುತ್ತದೆ. ಮೌಲ್ಯಗಳನ್ನು ಸಾಹಿತ್ಯದಲ್ಲಿ ವಿಭಿನ್ನವಾಗಿ ಶಾಶ್ವತ ವಿಚಾರಗಳ ವರ್ತನೆಯ ಕಾರ್ಯ ವಿಧಾನಗಳೆಂದು ವ್ಯಾಖ್ಯಾನಿಸಲಾಗಿದೆ. ಹೆಚ್ಚಾಗಿ ಮೌಲ್ಯಗಳು ಒಳ್ಳೆಯತನ ಅಥವಾ ಮಟ್ಟವನ್ನು ನಿರ್ಧರಿಸುವ ಮಾನದಂಡಗಳನ್ನು ಉಲ್ಲೇಖಿಸುತ್ತವೆ. ಮೌಲ್ಯಗಳು ಸಾಮಾನ್ಯವಾಗಿ ಕಲ್ಪನೆಗಳು, ವಸ್ತುಗಳು ನಡವಳಿಕೆ ಇತ್ಯಾದಿ ಮೌಲ್ಯಶಿಕ್ಷಣದ ಬಗ್ಗೆ ಭಾವನಾತ್ಮಕ ಆಲೋಚನೆಗಳನ್ನು ಒಳಗೊಂಡಿದೆ. ಮೌಲ್ಯಗಳು ಭಾರತೀಯ ಸಂಸ್ಕೃತಿಯ ಪ್ರತಿಯೊಂದು ಸಂಪ್ರದಾಯದಲ್ಲಿ ಬೇರೂರಿವೆ. ಮೌಲ್ಯಗಳು ಉತ್ತೇಜನಕ್ಕೆ ಪ್ರಮುಖ ಪಾತ್ರ ವಹಿಸುತ್ತದೆ. ಜೀವನದ ಪ್ರತಿಯೊಂದು ಹಂತದಲ್ಲಿ ಮೌಲ್ಯ ಶಿಕ್ಷಣವು ಮುಖ್ಯವಾಗಿದೆ. ಮೌಲ್ಯ ಆಧರಿತ ಶಿಕ್ಷಣದ ಕೆಲಸ ಮನುಷ್ಯರನ್ನು ಬೆಳೆಸುವುದು, ಮೋಸ ಮಾಡುವುದು, ಕದಿಯುವುದು ಹಾಗೂ ಕೊಲ್ಲದಿರುವಂತೆ ಮಾಡುವುದು. ಸೌಹಾರ್ದದ ಜೀವನ ನಡೆಸಲು ಸಹಾಯ ಮಾಡುವುದು.

ಆರ್.ಡಬ್ಲ್ಯೂ. ಎಮರ್‌ಸನ್ ಹೇಳುತ್ತಾರೆ, "ಚಿನ್ನ ಅಲ್ಲ ಕೇವಲ ಮನುಷ್ಯರು ಮಾತ್ರ ಬದಲಾದ ವ್ಯಕ್ತಿತ್ವವನ್ನು ರೂಪಿಸಬಹುದು" ಎಂದು. ಇದು ಕೇವಲ ಮೌಲ್ಯಭರಿತ ಶಿಕ್ಷಣದಿಂದ ಮಾತ್ರ ಸಾಧ್ಯ. ಮೌಲ್ಯಗಳು ಪ್ರತಿಯೊಬ್ಬ ವ್ಯಕ್ತಿಯ ಘನತೆ ಮತ್ತುಕೆಲಸದ ಮಾನ್ಯತೆ ಸಂರಕ್ಷಿಸಲು ಸಹಾಯ ಮಾಡುತ್ತದೆ. ಮೌಲ್ಯಗಳನ್ನು ಪುನಃಸ್ಥಾಪಿಸಲು ರಾಷ್ಟ್ರಗಳು ತಮ್ಮ ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಕಡೆಗೆ ಗಮನಹರಿಸಬೇಕಾಗಿದೆ. ಜ್ಞಾನ ಮತ್ತು ಮೌಲ್ಯಗಳು,

ಕೌಶಲ್ಯಗಳು ನೀಡುವ ಮೂಲಕ ವಿದ್ಯಾರ್ಥಿಗಳು ಮಾರಾಟ ಮಾಡುವ ಉತ್ಪನ್ನಗಳನ್ನಾಗಿ ಮಾಡಬಹುದು. ಮೌಲ್ಯಗಳನ್ನೊಳಗೊಂಡ ಶಿಕ್ಷಣ ವ್ಯವಸ್ಥೆಯು ಮನುಷ್ಯನ ಅರಿವಿನ ಅಂಶವನ್ನು ಅಭಿವೃದ್ಧಿ ಪಡಿಸಿದೆ ಮತ್ತು ಪರಿಣಾಮಕಾರಿಯಗಿ ಮಾಡಿದೆ.

ಸಾಮಾಜಿಕ ಬದುಕಿನಲ್ಲಿ ಸಾಕಷ್ಟು ಜನ ಆತ್ಮಹತ್ಯೆ ಹಾಗೂ ಇತರ ಚಟಗಳಿಗೆ ಒಳಗಾಗಿ ಬಲಿಯಾಗುತ್ತಿದ್ದಾರೆ. ಅಭದ್ರತೆ, ಅಪನಂಬಿಕೆ, ಸಹನ ಕೊರತೆ, ಅಸಮಾಧಾನ ಮತ್ತು ದುರ್ಬಲತೆಗೆ ಮಾನವನಲ್ಲಿ ಎದುರಾಗುತ್ತಿದೆ. ಇದನ್ನೆಲ್ಲ ನಿವಾರಿಸಲು ಮೌಲ್ಯಶಿಕ್ಷಣದ ಅವಶ್ಯಕತೆ ಇದೆ ಎಂದು ಹಲವರು ಅಭಿಪ್ರಾಯ ಪಟ್ಟಿದ್ದಾರೆ. ಮೌಲ್ಯವನ್ನೊಳಗೊಂಡ ಉನ್ನತ ಶಿಕ್ಷಣದಿಂದ ಜೀವನವನ್ನು ಉತ್ಸಾಹಭರಿತ ಮತ್ತು ಅರ್ಥಪೂರ್ಣಗೊಳಿಸಬಹುದು. ಅಸ್ಪೃಶ್ಯತೆ, ಧಾರ್ಮಿಕ ಮತಾಂಧತೆ, ಹಿಂಸೆ, ಮೂಢನಂಬಿಕೆಯನ್ನು ತೊಡೆದುಹಾಕಲು ಮೌಲ್ಯಗಳನ್ನೊಳಗೊಂಡ ಶಿಕ್ಷಣ ಪ್ರಮುಖ ಪಾತ್ರವನ್ನು ವಹಿಸುತ್ತಿದೆ.

ವಿದ್ಯಾರ್ಥಿಗಳ ಪಾತ್ರರಚನೆಯಲ್ಲಿ ದಕ್ಷತೆ, ಸಮಗ್ರತೆ, ಶಿಸ್ತು, ಸಹಕಾರಗಳ ಜೊತೆಗೆ ನೈತಿಕ ಮೌಲ್ಯಗಳು ಸಹ ಮುಖ್ಯ. ನೈತಿಕ ಮೌಲ್ಯಗಳು ಮನುಷ್ಯನನ್ನು ವಿವಿಧ ಸಂದರ್ಭದಲ್ಲಿ ಉತ್ತಮ ನಡವಳಿಕೆಯಿಂದ ನಡೆದುಕೊಳ್ಳುವಲ್ಲಿ ಸಹಕಾರಿಯಾಗುತ್ತದೆ. ಪರಸ್ಪರ ಗೌರವ, ಪ್ರಾಮಾಣಿಕತೆ, ಸಮಗ್ರತೆ, ಶಿಸ್ತು ಮತ್ತು ಸಾಮಾಜಿಕ ಜವಾಬ್ದಾರಿ ಬೆಳೆಸಲು ಸಹಾಯ ಮಾಡುತ್ತದೆ. ಅಷ್ಟೇ ಅಲ್ಲದೇ ಜವಾಬ್ದಾರಿಯುತ ಕೆಲಸ, ಗೌರವ, ಭವಿಷ್ಯದಲ್ಲಿ ವಿಶ್ವಾಸ, ರಾಷ್ಟ್ರೀಯ ಪ್ರಜ್ಞೆ, ಸಾಮಾಜಿಕ ಮತ್ತು ರಾಷ್ಟ್ರೀಯ ಏಕೀಕರಣವನ್ನು ಉತ್ತೇಜಿಸಲು ನೈತಿಕ ಮೌಲ್ಯಗಳು ಉಪಯುಕ್ತವಾಗಿದೆ.

ಮಾನವರನ್ನು ಒಂದಾಗಿಸಲು ಕೆಲವು ಸಾಮಾನ್ಯ ಮೌಲ್ಯಗಳನ್ನು ಮರು–ಪತ್ತೆ ಮಾಡಬೇಕು. ಹಿಂದಿನ ಕಾಲದಲ್ಲಿ ಇದ್ದ ಶಿಕ್ಷಣ ಪದ್ಧತಿಯನ್ನು ಮತ್ತೆ ಜೀವಂತಗೊಳಿಸಬೇಕು. ಇದನ್ನೆಲ್ಲ ಪ್ರಚಲಿತಗೊಳಿಸುವಾಗ ಹಲವು ಸವಾಲುಗಳನ್ನು ಎದುರಿಸಬಹುದು. ಈ ಮೌಲ್ಯಗಳಿಗೆ ಜೀವ ತುಂಬಿ ಮಾನವರನ್ನು ಸದೃಢವಾಗುವಂತೆ ಮಾಡಬೇಕು. ಈ ಮೌಲ್ಯಗಳ ಬಗ್ಗೆ ನಿರಂತರ ಚಿಂತಿತರಾಗಿದ್ದರೂ ಅದರ ಬಗ್ಗೆ ಇನ್ನೂ ಯಾವುದೇ ಗಂಭೀರ ಕ್ರಮ ಕೈಗೊಳ್ಳಲಾಗುತ್ತಿಲ್ಲ. ಮೌಲ್ಯಗಳನ್ನು ಪುನಃ ಸ್ಥಾಪಿಸಲು ಶಿಕ್ಷಣ ಸಂಸ್ಥೆಯು ಶ್ರಮ ಪಡಬೇಕು ಆಗ ಮಾತ್ರ ಶಿಕ್ಷಣದಲ್ಲಿ ನೈತಿಕ ಮೌಲ್ಯಗಳನು ಅಳವಡಿಸುವಲ್ಲಿ ಸಫಲರಾಗಬಹುದು.

ಕರ್ನಾಟಕದ ಏಕೀಕರಣದಲ್ಲಿ 'ಆಲೂರು ವೆಂಕಟರಾಯ'ರ ಪಾತ್ರ

ಸೂರಾಲು ವಲಯ ಯುವ ಬ್ರಾಹ್ಮಣ ಸಭಾ ಸಹಯೋಗದಲ್ಲಿ ಕಾಲೇಜಿನ ಕನ್ನಡ ವಿಭಾಗ ಆಯೋಜಿಸಿದ ಆಲೂರು ವೆಂಕಟರಾಯರ ಜನ್ಮಶತಮಾನೋತ್ಸವ ಸಂದರ್ಭ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ.

– ಮೇಘನ ಜಿ.ವಿ.
ತೃತೀಯ ಬಿ.ಎಸ್ಸಿ.

ಕರ್ನಾಟಕದ ಏಕೀಕರಣ ಚಳುವಳಿ ಈ ಶತಮಾನದ ಚಾರಿತ್ರಿಕ ಘಟನೆಗಳಲ್ಲಿ ಮುಖ್ಯವಾದುದು. ಕನ್ನಡದ ಸಂದರ್ಭದಲ್ಲಿ ವಸಾಹತು ಸನ್ನಿವೇಶದ ತುಂಡಾಗಿದ್ದ ಭೂ ಪರಿಸರ ಮತ್ತು ಜನತೆ ಒಂದುಗೂಡಲು ಹಾತೊರೆಯುತ್ತಿತ್ತು. ಏಕೆಂದರೆ, ಕನ್ನಡಿಗರು ಪ್ರಮುಖ ಆಡಳಿತ ಘಟಕಗಳಲ್ಲಿ ಹಂಚಿಹೋಗಿ ವಿಭಿನ್ನ ಅವಸ್ಥಾಂತರಗಳಿಗೆ ಗುರಿಯಾಗಿದ್ದರು. ಈ ವಿಂಗಡನೆಯು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಒಂದೆಡೆ ಸೇರುವ ತುಡಿತವನ್ನು ಸೃಷ್ಟಿಸಿತು. ಈ ಹಿನ್ನೆಲೆಯಲ್ಲಿ ಏಕೀಕರಣ ಚಳುವಳಿಗಳು ಪ್ರಾರಂಭವಾದವು.

'ಏಕೀಕರಣ ಎಂದರೆ ಹದೆಗೆಟ್ಟ ಪರಿಸ್ಥಿತಿಯನ್ನು ಬದಲಿಸಿ ನಾಡಿನ ಬೇರೆ ಬೇರೆ ತುಂಡುಗಳನ್ನು ಒಂದುಗೂಡಿಸಿ ಒಂದು ಪ್ರಕಾರದ ರಾಜಕೀಯದ ಏಕತೆಯನ್ನು ತರುವುದು.' ಇಂತಹ ಏಕೀಕರಣ ಸಾಕಾರ ಪಡೆದದ್ದು ಕೇವಲ ರಾಜಕಾರಣಿಗಳಿಂದ ಅಲ್ಲ. ಇದಕ್ಕೆ ಸಾಂಸ್ಕೃತಿಕ ತಳಹದಿ ಹಾಕಿಕೊಟ್ಟದ್ದು ಸಾಹಿತಿ–ಕಲಾವಿದರು ಹಾಗೂ ಅಂದಿನ ಸಮಾಜ. ಇವರು ಛಿದ್ರವಾಗಿದ್ದ ಕನ್ನಡಿಗರನ್ನು ಒಂದು ಮಾಡುವಲ್ಲಿ ಭಾವನಾತ್ಮಕ ಮತ್ತು ತಾತ್ವಿಕ ಪ್ರಯತ್ನಗಳನ್ನು ಮಾಡಿದ್ದರು. ಮತ್ತು ಕನ್ನಡ ನಾಡು, ನುಡಿ ಸಂಸ್ಕೃತಿಗಳೆಲ್ಲವನ್ನು ತನ್ನೊಳಗೆ ಉಳಿಸಿಕೊಂಡಿರುವ ನಮ್ಮ ರಾಜ್ಯಕ್ಕೆ 'ಕರ್ನಾಟಕ' ರಾಜ್ಯ ಎಂಬ ಹೆಸರು ದೊರಕುವುದಕ್ಕೂ ಬಹುಕಾಲ ಪರಿಶ್ರಮ ಹಿಡಿಯಿತು.

ಕನ್ನಡ ಜ್ಯೋತಿಯನ್ನು ಮತ್ತೆ ಬೆಳಗಲು ವಿವಿಧ ರೀತಿಯಲ್ಲಿ ದುಡಿದು ಹೊಸ ರಾಜ್ಯದ ಪ್ರತಿಷ್ಠಾಪನೆಗೆ ಕಾರಣರಾದ ನಮ್ಮ ನಾಡಿನ ಅಭಿಮಾನಿಗಳು, ಸಾಹಿತಿಗಳು, ಕಲಾವಿದರು, ಎಲ್ಲರ ಏಕೈಕ ಗುರಿಯಾದ ಏಕೀಕರಣ ಅಥವಾ ಏಕೀಕೃತ ಕರ್ನಾಟಕ ರಾಜ್ಯ ಬಹುಮಟ್ಟಿಗೆ ಪೂರ್ತಿಗೊಂಡು ಇಂದಿನ ದಿನ ಐತಿಹಾಸಿಕ ಮಹತ್ವ ಹೊಂದಿದೆ. ಕರ್ನಾಟಕವು ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದರಾಸು, ಮೈಸೂರು ಎಂಬೆಲ್ಲಾ ಭಾಗಗಳಾಗಿ ಹಂಚಿಹೋಗಿದ್ದವು. ಇಂದು 'ಕರ್ನಾಟಕ' ಎಂಬುದರಲ್ಲೆ ಸೇರಲು ಈ ಮಹನೀಯರ ಸಾಧನೆ ಅಪಾರ.

ಈ ಹರಿದು ಹಂಚಿದ ಭಾಗದಲ್ಲಿ 'ಸದರ್ನ್ ಮರಾಠ' ಜಿಲ್ಲೆ

ಎಂದೇ ಪ್ರಸಿದ್ಧವಾಗಿರುವ ಮುಂಬಯಿ ಕರ್ನಾಟಕದ ಕನ್ನಡ ಪ್ರದೇಶ ಬಹುಪಾಲು ಮಹಾರಾಷ್ಟ್ರದ ಅಧಿಕಾರದ ಅಡಿಯಲ್ಲಿತ್ತು. ಅಲ್ಲಿನ ನಾಯಕರ ಚಿಂತನೆ ಕನ್ನಡಿಗರ ಮೇಲೆ ಅಪಾರ ಪರಿಣಾಮ ಬೀರಿತು. ಆದ್ದರಿಂದ ರಾಷ್ಟ್ರೀಯ ಚಳುವಳಿ ಬಲವಾಯಿತು. ಇದರಿಂದ ಇನ್ನಷ್ಟು ಪರಿಣಾಮ ಬೀರಿತು. ಅರ್ಥಾತ್, ಇನ್ನು ಹೆಚ್ಚಿನ ಮುಖಂಡರನ್ನು ತಮ್ಮೊಳಗೆ ಸೆಳೆದುಕೊಂಡಿತು. ಅದರಲ್ಲಿ ಪ್ರಮುಖರಾದವರು ಜೋಶಿ ವೆಂಕಟರಾಯರು, ಮುದವೀಡು ವೆಂಕಟರಾಯರು, ಆಲೂರು ವೆಂಕಟರಾಯರು ಮೊದಲಾದವರು.

ಅಖಂಡ ಕರ್ನಾಟಕದ ಚಿಂತನೆ ನಡೆಸುತ್ತಿದ್ದ ಇವರು 'ರೈಟರ್ ಓಣಿ' ಹೊನ್ನಾಪುರಮಠದಲ್ಲಿ ಸಭೆ ಸೇರಿ ಕನ್ನಡಿಗರ ರಾಜಕೀಯ ಸಮಸ್ಯೆಗಳಿಗೆ ಪರಿಹಾರಗಳನ್ನು ದೊರಕಿಸಲು 'ಕರ್ನಾಟಕ ಸಭಾ' ಇದನ್ನು ಹುಟ್ಟು ಹಾಕಿದರು. ಹಾಗೂ 'ಕನ್ನಡಿಗರ ಕರ್ತವ್ಯ' ಎಂಬ ಕೃತಿಯನ್ನು ಪ್ರಕಟಿಸಿ ಏಕೀಕರಣಕ್ಕೆ ಮತ್ತೂ ಚಾಲನೆ ನೀಡಿದರು.

ಹೀಗೆ ಎಲ್ಲೂ ಎದುರುಗಾಣದೆ ಕರ್ನಾಟಕದ ಏಕೀಕರಣದಲ್ಲಿ ಮುಖ್ಯ ಪಾತ್ರವಹಿಸಿದವರಲ್ಲಿ 'ಕನ್ನಡ ಪುರೋಹಿತ' ಎಂದೇ ಪ್ರಸಿದ್ಧವಾಗಿರುವ 'ಆಲೂರು ವೆಂಕಟರಾಯರು' ಒಬ್ಬರು. ಇವರು 1880ರಲ್ಲಿ ಬಿಜಾಪುರದಲ್ಲಿ ಜನಿಸಿದರು. ಇವರು ಪ್ರಾರಂಭಿಕ ಶಿಕ್ಷಣವನ್ನು ಧಾರವಾಡದಲ್ಲಿ ನಡೆಸಿ, ನಂತರ 1903ರಲ್ಲಿ ಪುಣೆಯಲ್ಲಿ 'ಫರ್ಗೂಸನ್' ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು ನಂತರ ಮುಂಬೈನಲ್ಲಿ ಕಾನೂನು ಅಭ್ಯಾಸ ಮಾಡಿ, 1905ರಲ್ಲಿ ವಕೀಲರಾದರು. ಒಮ್ಮೆ ಬೇಸಿಗೆ ರಜೆಯಲ್ಲಿ ನವವೃಂದಾವನ, ಆನೆಗುಂದಿಗಳನ್ನು ಸಂದರ್ಶಿಸಿ, ಅಲ್ಲಿಂದ ಹಂಪಿಗೆ ಹೋದರು. ಅಲ್ಲಿನ ಅವಶೇಷಗಳು, ಅವನ ಮನಸಿನ ಮೇಲೆ ತುಂಬಾ ಪರಿಣಾಮ ಬೀರಿತು. ಅವರ ಮಾತಿನಲ್ಲೇ ಹೇಳುವುದಾದರೆ, "ನಮ್ಮ ವಿಜಯನಗರವು ಅಲ್ಲಿ ಪ್ರತ್ಯಕ್ಷವಾಗಿಯೂ, ವಿಸ್ತಾರವಾಗಿಯೂ ನನ್ನ ಮುಂದೆ ಬಿದ್ದಿದೆ. ಆ ದರ್ಶನವು ನನ್ನ ಮನದಲ್ಲಿ ವಿದ್ಯುತ್ ಸಂಚಾರ ಮೂಡಿಸಿತು. ಚಲನಚಿತ್ರ ಪಟದಲ್ಲಿ ವಿದ್ಯುತ್ ದೀಪದ ಬಲದಿಂದ ಮೂರ್ತಿಗಳು ಮೂಡುವಂತೆ, ನನ್ನ ಹೃದಯದಲ್ಲಿ ಕರ್ನಾಟಕ ದೇವಿಯ ಸುಂದರ ಮೂರ್ತಿ ಒಡಮೂಡುತ್ತಿತ್ತು. ಆ ದರ್ಶನವು ನನ್ನ ತಲೆಯಲ್ಲಿ ನಾನಾ ವಿಧ ತರಂಗಗಳು ಮೂಡಲು ಕಾರಣವಾಗಿತ್ತು. ಹೃದಯ ಸಮುದ್ರ ಅಲ್ಲೋಲ ಕಲ್ಲೋಲವಾದಂತಾಯಿತು. ಆ ದಿವಸವು ನನ್ನ ಜೀವನ ಕ್ರಮದಲ್ಲಿ ಕ್ರಾಂತಿ ಮೂಡಲಿಕ್ಕೆ ಕಾರಣವಾಯಿತು" ಎಂದಿದ್ದರು. ಅಲ್ಲಿಂದ ಪ್ರಾರಂಭವಾದ ಅವರ ಹೋರಾಟ ವಸ್ತುನಿಷ್ಠೆಯಿಂದ ನಿರಂತರವಾಗಿ ಸಾಗುತ್ತಿತ್ತು.

ಕೇವಲ ಖಡ್ಗ ಹಿಡಿದೇ ಜನರ ಮನವೊಲಿಸಬೇಕಾಗಿಲ್ಲ. ಲೇಖನಿಯು ಅದರಂತೆ ಪರಿಣಾಮಕಾರಿ ಎಂಬುದರೊಂದಿಗೆ ಸಾಹಿತ್ಯಕ್ಷೇತ್ರಕ್ಕೆ ಆಗಮಿಸಿದ ಇವರ ಕೊಡುಗೆ ಅನನ್ಯವಾದುದು.

ಇವರು ಆ ಕಾಲದ ಸಾಮಾಜಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದರು. 1921ರಲ್ಲಿ ಮಹಾತ್ಮಾ ಗಾಂಧಿ ಆರಂಭಿಸಿದ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ್ದರು. 'ಕರ್ನಾಟಕ ಏಕೀಕರಣ,' 'ಕರ್ನಾಟಕ ಇತಿಹಾಸ ಮಂಡಲದ ಸ್ಥಾಪನೆ,', ಕರ್ನಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನೆ, ಕರ್ನಾಟಕ ವಿಶ್ವವಿದ್ಯಾಲಯ ಕಲ್ಪನೆ, ವಿಜಯನಗರ ಮಹೋತ್ಸವ ನಾಡಹಬ್ಬ ಯೋಜನೆ, ಕರ್ನಾಟಕ ವಿಶ್ವವರ್ಧಕ ಸಂಘ, ಎಲ್ಲ ಯೋಜನೆಯಲ್ಲೂ ಎವರ ಪಾತ್ರ ಪ್ರಮುಖವಾದುದು.

1907ರಲ್ಲಿ 'ಕನ್ನಡ ಗ್ರಂಥಾಂತರ ಸಮ್ಮೇಳನ' ನಡೆಸುವಲ್ಲಿ ಇವರ ಪಾತ್ರವು ಮುಖ್ಯವಾಗಿತ್ತು.

ನಂತರದ ದಿನಗಳಲ್ಲಿ ವಾಗ್ಭೂಷಣ ಪತ್ರಿಕೆಯ ಸಂಪಾದಕರಾಗಿ ಅದಕ್ಕೆ ಹೊಸ ರೂಪು ರೇಷೆ ನೀಡಿದರು. ಸಾಹಿತ್ಯ ರಚನೆಯನ್ನು ಗಂಭೀರವಾಗಿ ಸ್ವೀಕರಿಸುವ ಆಲೂರರು 'ಶಿಕ್ಷಣ ಮೀಮಾಂಸೆ', 'ಶ್ರೀವಿದ್ಯಾರಣ್ಯ ಚರಿತ್ರೆ', 'ಕರ್ನಾಟಕ ಗತವೈಭವ', 'ಕರ್ನಾಟಕ ವೀರರತ್ನಗಳು', 'ಸ್ವಾತಂತ್ರ್ಯ ಸಂಗ್ರಾಮ', 'ಸ್ವರಾಜ್ಯವೆಂದರೇನು' ಇನ್ನು ಮುಂತಾದ ಕೃತಿಗಳನ್ನು ಪ್ರಕಟಿಸಿದರು.

ಆಲೂರರು ತಮ್ಮ 'ಕರ್ನಾಟಕ ಗತವೈಭವದಲ್ಲಿ' ಹೀಗೆಂದಿದ್ದಾರೆ, "ನಾನು ಕನ್ನಡಿಗನು, ಕರ್ನಾಟಕ ನನ್ನದು ಎಂಬ ಸದ್ವಿಚಾರ ತರಂಗಗಳಿಂದ ಯಾವನ ಹೃದಯವು ಆತ್ಮಾನದಿಂದ ಪುಳಕಗೊಲ್ಲುವುದಿಲ್ಲವೋ, ಕನ್ನಡ ತಾಯಿಗೆ ಈಗ ಬಂದೊದಗಿರುವ ವಿಷಮ ಸ್ಥಿತಿಯಲ್ಲಿ ಯಾವನ ಹೃದಯವೂ ತಲ್ಲಣಿಸುವುದಿಲ್ಲವೋ, ಅದು ಹೃದಯವಲ್ಲ, ಕಲ್ಲಿನ ಬಂಡೆ. ದೇಹವಲ್ಲ ಮೋಟು ಮರ" ಎಂದು ಕೋಪ ತುಂಬಿದ ದುಃಖವನ್ನು ವ್ಯಕ್ತಪಡಿಸುತ್ತಾರೆ.

ಇವರು ಜನರನ್ನು ಪ್ರತೀ ಕ್ಷಣ, ಪ್ರತೀ ನಿಮಿಷ ಹುರಿದುಂಬಿಸುತ್ತಿದ್ದರು. ಅವರ ಮಾತಿನೊಂದಿಗೆ ಸ್ಪಷ್ಟಪಡಿಸುವುದಾದರೆ, "ಯಾವ ದೇಶವು ಒಂದು ಕಾಲಕ್ಕೆ ಶ್ರೀ ರಾಮಚಂದ್ರ, ಚಂದ್ರಗುಪ್ತ, ಅಶೋಕ, ಹರ್ಷವರ್ಧನ, ಪೃಥ್ವೀರಾಜರಂತಹ ಮಹಾ ಧಾರ್ಮಿಕ ರಾಜರಿಗೆ ತವರುಮನೆಯಾಯಿತೋ, ಯಾವ ತಮ್ಮ ದೇಶವು ತುಳಸೀದಾಸ, ಕಬೀರದಾಸರಂಥ ಭಗವದ್ಭಕ್ತರಿಗೆ ಜನ್ಮ ಕೊಟ್ಟಿತೋ, ಆ ರಾಷ್ಟ್ರವು ಎಂದಾದರೂ ಪ್ರಗತಿಯಲ್ಲಿ ಹಿಂದುಳಿದೀತೇ?" ಎಂದು ಹಿಂದೀ ಬಂಧುಗಳು ತಮ್ಮ ಮಂದಿರವನ್ನು ಪ್ರೇರೇಪಿಸುತ್ತಿದ್ದರು.

"ಪ್ರತಾಪಾದಿತ್ಯ ನಂತಹ ಪ್ರತಾಪಿಯ ನಮ್ಮ ರಾಷ್ಟ್ರವನ್ನು ಅಲಂಕರಿಸಲು, ಚೈತನ್ಯನಂತ ಧರ್ಮವೀರನು ನಮ್ಮಲ್ಲಿ ಚೈತನ್ಯವನ್ನು ತುಂಬಿರಲು ನಾವು ತಲೆ ಬಗ್ಗಿಸಿ ಸುಮ್ಮನೆ ಕುಳಿತುಕೊಳ್ಳಬೇಕೇ? ಅಂತಹ ವೀರಪುರುಷರು ಮುಂದೆಯೂ ನಮ್ಮಲ್ಲಿ ಮೈದೋರಲಾರ" ಎಂದು ಮುಂತಾಗಿ ಹೊಗಳಿ, ಬಂಗಾಲಿಯರನ್ನು ಪ್ರೋತ್ಸಾಹಿಸಿದರು.

"ರಾಜರಾಜನರೇಂದ್ರ, ಪ್ರತಾಪರುದ್ರದೇವ, ಕೃಷ್ಣದೇವರಾಯ

ಮುಂತಾದ ರಣವೀರರು ನಮ್ಮ ಪೂರ್ವಜರು ಅಲ್ಲವೇ? ಆಪಸ್ತಂಬ, ಕುಮಾರಿಲಭಟ್ಟ, ಅಪ್ಪಯ್ಯದೀಕ್ಷಿತ ಇವರೇ ಮೊದಲಾದ ವಿದ್ವನ್ಮಣಿಗಳು ನಮ್ಮ ದೇಶದಲ್ಲಿ ಹುಟ್ಟಲಿಲ್ಲವೇ? ಹೀಗಿದ್ದ ಬಳಿಕ ಆಂಧ್ರರಾದ ನಾವು ಅಳುವುದೇತಕ್ಕೆ! ಎಂದು ಆಂಧ್ರರು ತಮ್ಮ ಜನರಲ್ಲಿ ಪರಿಪರಿಯಾಗಿ ಆವೇಶತುಂಬುತ್ತಿದ್ದಾರೆ! ನಮ್ಮದು ಬಹು ಪ್ರಾಚೀನ ಭಾಷೆ, ಚೇರ, ಚೋಳ, ಮುಂತಾದ ಮಹಾವೀರರು, ನಮ್ಮ ಅರಸರು, ರಾಮಾನುಜ ಇಂತಹ ಅಂಶಪುರುಷರ ಹೆಸರೆತ್ತಿ ನಾವು ರಾಷ್ಟ್ರೋದ್ಧಾರವನ್ನು ಮಾಡಲಾರೆವೇ!" ಎಂದಾಗ ತಮಿಳರು ಆಲಸ್ಯವನ್ನು ಬಿಟ್ಟು ತಲೆಯೆತ್ತಲಾರಂಭಿಸಿದರು. ಹೀಗೆ ಅನೇಕ ಜನರ ಮನವೊಲಿಸಿ ಏಕೀಕರಣಕ್ಕೆ ಎಲ್ಲರನ್ನು ಹುರಿದುಂಬಿಸುವ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನೆರವೇರಿಸಿದರು.

ಹೀಗೆ ಹಲವಾರು ರೀತಿಯಲ್ಲಿ ಜನರನ್ನು ಜಾಗೃತಗೊಳಿಸುತ್ತಿದ್ದ ಇವರು 1902ರಲ್ಲಿ 'ವಾಗ್ಭೂಷಣ' ಪತ್ರಿಕೆಯಲ್ಲಿ ಲೇಖನ ಬರೆದರು. ಇದು ಕನ್ನಡಿಗರು ರಾಜಕೀಯ ಏಕೀಕರಣಕ್ಕೆ ವ್ಯಕ್ತಪಡಿಸಿದ ಪ್ರಥಮ ಬೇಡಿಕೆ ಎನ್ನುತ್ತಾರೆ. ಅಂದಿನ ಕರ್ನಾಟಕದ ರಾಜಕೀಯಕ್ಕೆ ತನ್ನದೇ ಆದ ಅಸ್ತಿತ್ವ ಇರಲಿಲ್ಲ. ಅದು ಮಹಾರಾಷ್ಟ್ರದ ಅನುಕರಣೆಯಲ್ಲಿತ್ತು. ದುಡಿಯುವವರು ನಾವಾದರೂ ಶ್ರೇಯಸ್ಸು ಮಾತ್ರ ಬೇರೆಯವರ ಪಾಲಾಗುತ್ತಿತ್ತು. ಈ ಅನ್ಯಾಯವನ್ನು ವಿರೋಧಿಸಿ ಕನ್ನಡ ಅಭಿಮಾನಿಗಳ ತಂಡವೊಂದು ಧಾರವಾಡದಲ್ಲಿ ಕಾರ್ಯಪ್ರವೃತ್ತವಾಗಿತ್ತು. 1917ರಲ್ಲಿ ಸ್ಥಾಪಿತವಾದಂತಹ ಸಂಘ ಆಲೂರು ವೆಂಕಟರಾಯರ ನೇತೃತ್ವದಲ್ಲಿ ಕರ್ನಾಟಕದ ಸರ್ವತೋಮುಖ ಏಳ್ಗೆಗಾಗಿ ಪಣತೊಟ್ಟಿತು. ಕಡಪಾ ರಾಘವೇಂದ್ರರಾಯರು ಕರ್ನಾಟಕ ಸಭೆಯ ಪ್ರಾಣಸ್ವರೂಪರು ಆಗಿದ್ದರು. 'ಹೋಂ ರೂಲ್' ಚಳುವಳಿಯಲ್ಲಿ ಕರ್ನಾಟಕಕ್ಕೆ ಸ್ವತಂತ್ರ್ಯ ಘಟಕವನ್ನು ಪಡೆದ ಶ್ರೇಯಸ್ಸು ಈ ಸಭೆಗೆ ಸೇರಬೇಕು ಎನ್ನುತ್ತಾರೆ.

ಏಕೀಕರಣವು ಚಳುವಳಿಯ ಸ್ವರೂಪ ತಾಳಿ 1920ರಲ್ಲಿ ಧಾರವಾಡದಲ್ಲಿ ಕರ್ನಾಟಕ ರಾಜಕೀಯ ಪರಿಷತ್ತಿನ ಮುಖ್ಯ ವಿಷಯವಾಯಿತು. ಮೈಸೂರಿನ ಹಿಂದಿನ ದಿವಾನರಾಗಿದ್ದ ವಿ.ಪಿ.ಮಾಧವರಾಯರ, ಅಧ್ಯಕ್ಷತೆಯಲ್ಲಿ ಸೇರಿದ್ದ ಆ ಪರಿಷತ್ತು ಸ್ವತಂತ್ರ್ಯ ಕರ್ನಾಟಕ ಪ್ರಾಂತದ ಬೇಡಿಕೆಯನ್ನು ಪ್ರಭಾವಯುತವಾಗಿ ಮೂಡಿಸಿತು. 1924ರಲ್ಲಿ ಕರ್ನಾಟಕ ಏಕೀಕರಣ ಸಂಘವು ಸ್ಥಾಪಿತವಾಗಿ ಚಳುವಳಿಗೆ ಹೆಚ್ಚಿನ ಚಾಲನೆಯನ್ನುಂಟು ಮಾಡಿತು. ಹಲವು ಸಂದರ್ಭಗಳಲ್ಲಿ ಪ್ರಾಂತಿಕ ಪರಿಷತ್ತು ಕರ್ನಾಟಕ ಏಕೀಕರಣ ಪರಿಷತ್ತು ಸೇರಿಯೇ ಸಮ್ಮೇಳನಗಳನ್ನು ನಡೆಸಿ ಜನಜಾಗೃತಿಯನ್ನುಂಟು ಮಾಡಿದವು. ಈ ಎರಡೂ ಸಮಿತಿಯ ಪರವಾಗಿ ದಿವಾಕರ ಅವರು ನೆಹರೂ ಸಮಿತಿಯ ಮುಂದೆ ಕರ್ನಾಟಕ ಏಕೀಕರದ ಸಮರ್ಥನೆಯನ್ನು ಮಾಡಿದರು, "ಏಕಪ್ರಾಂತಕ್ಕೆ ಕರ್ನಾಟಕಸ್ಥರು ಬಾಧ್ಯಸ್ಥರಾಗಿದ್ದಾರೆ. ಅವರಿಗೆ ಏಕ ಪ್ರಾಂತವನ್ನು ಕೊಡುವುದು ಯೋಗ್ಯವೆಂಬುವುದನ್ನು ಕರ್ನಾಟಕಸ್ಥರು ಸಿದ್ಧ ಮಾಡಿದ್ದಾರೆ" ಎಂದು ಆ ಸಮಿತಿಯು ಅಭಿಪ್ರಾಯ ಪಟ್ಟಿತು. ಕರ್ನಾಟಕ ಏಕೀಕರಣವು ಸರ್ವಪಕ್ಷ ಪರಿಷತ್ತಿನ ಒಪ್ಪಿಗೆ ಪಡೆಯಿತು.

ಆದರೂ ಹಿರಿಯ ಸಾಹಿತಿಗಳು ಹೇಳುವ ಪ್ರಕಾರ, "ಭಾವನಾತ್ಮಕವಾಗಿ ಕನ್ನಡಿಗರು ಒಂದಾಗಿರಲಿಲ್ಲ." ಅಂದರೆ ಬಹಳ ಕಾಲ ವಿಭಜಿತ ಪ್ರದೇಶಗಳಲ್ಲಿದ್ದ ಕನ್ನಡಿಗರು ಭಿನ್ನ ಭಾಷಿಕರ ಪ್ರಭಾವಗಳಿಂದ ಹೊರಬರಲು ಸಾಕಷ್ಟು ಸಮಯ ಹಿಡಿಯಿತು. ಆದರೆ ಇದೆಲ್ಲವನ್ನ ಮೀರಿ ಬರುವಾಗಲು ಕನ್ನಡಿಗರು ಎಷ್ಟೆಷ್ಟೋ ಕಂದರಗಳನ್ನು ದಾಟಬೇಕಾಯಿತು. ಪರೀಕ್ಷೆಗೆ ಗುರಿಯಾಗಬೇಕಾಗಿತ್ತು. ಸುಮಾರು 70 ವರ್ಷ ಯಾವ ಧ್ಯೇಯ ಸಾಧನೆಗಾಗಿ ಹೋರಾಡಿದರೋ ಆ ಶುಭಮುಹೂರ್ತ 1–11–56ರಂದು ಒದಗಿ ಬಂದಿತು. ಕರ್ನಾಟಕವು ಮೈಸೂರಿನ ಹೆಸರು ಹೊತ್ತು ಭಾರತದ ಭೂಪಟದಲ್ಲಿ ವಿರಾಜಮಾನವಾಯಿತು. ಇದೆಲ್ಲದಕ್ಕೂ ಸಾಹಿತ್ಯದ ಹಾಗೂ ಹಿರಿಯ ಸಾಹಿತಿಗಳ ಕೊಡುಗೆ ಅಪಾರ. ಜನರಲ್ಲಿ ಬೇಕಾದಂತ ಸಾಮರಸ್ಯದ ಚಿಂತನೆ ಹಾಗೂ ಉದ್ವೇಗವಲ್ಲದ ಸಮಚಿತ್ತವನ್ನು ಕನ್ನಡ ಸಾಹಿತ್ಯವು ಮೂಡಿಸಿತು. ಏಕೀಕರಣದ ಧ್ಯೇಯ ಸಫಲವಾಯಿತು.

ಇದು ಏಕೀಕರಣದ ಬೆಳವಣಿಗೆಯ ರೀತಿಯಾದರೆ ಇದಕ್ಕೆ ಬೆನ್ನೆಲುಬಾಗಿ ನಿಂತಹ ಹಿರಿಯ ಸಾಹಿತಿಗಳನ್ನು ನಾನು ನೆನಪಿಸಿಕೊಳ್ಳದಿರುವುದು ವಿಷಾದನೀಯ ಸಂಗತಿ.

ಕರ್ನಾಟಕ ಏಕೀಕರಣದಲ್ಲಿ ಓರ್ವ ಹಿರಿಯ ನಾಯಕರಾದ ಆಲೂರರ ಬಗ್ಗೆ ದ.ರಾ.ಬೇಂದ್ರೆ ಹೀಗೆ ಉದ್ಗರಿಸಿದ್ದಾರೆ, "ಆಲೂರು ಕರ್ನಾಟಕ ಪ್ರಾಣೋಪಾಸಕರು ಎಂದು ಕರೆದದ್ದು ಅರ್ಥಪೂರ್ಣವಾಗಿದೆ." ಬೇಂದ್ರೆಯು ಆಲೂರರ ವೈಶಿಷ್ಟ್ಯವನ್ನು ಹೀಗೆ ಗುರುತಿಸಿದ್ದಾರೆ, "ಬಹುಮುಖವಾಗಿಯೂ, ಏಕನಿಷ್ಠೆಯಿಂದಲೂ, ಅನನ್ಯ ಬುದ್ಧಿಯಿಂದಲೂ, ಸತತ ಅನುಸಂಧಾನದಲ್ಲಿ ಕರ್ನಾಟಕದ ಸಲುವಾಗಿ ವಿಚಾರ ಮಾಡುವವರು ತದನುಸಾರವಾಗಿಯೂ ಆಚರಿಸಲು ಪ್ರಯತ್ನಿಸುವವರು. ಹಿರಿಯರಾದ ಕನ್ನಡಿಗರಲ್ಲಿ ಇವರೊಬ್ಬರು. ಇದೇ ಅವರ ತಪಸ್ಸು. ಅವರ ಅದ್ವಿತೀಯ ಹೆಸರು ಅದರ ಫಲ" ಎಂದು ನುಡಿದಿದ್ದಾರೆ.

ಕನ್ನಡದ ಜನ ಇವರಿಗೆ "ದೇಶಸೇವಾಧಿಕಾರಿ", "ಸ್ವಭಾಷಾರಕ್ಷಕ" ಎಂದೆಲ್ಲಾ ಹೊಗಳಿದ್ದಾರೆ. ಕನ್ನಡದ ಕುಲಪುರೋಹಿತರಾದ ಇವರು ಬುದ್ಧಿಯ ಏಕಾಗ್ರ ವ್ಯಕ್ತಿಗಿಂತ ವ್ಯಾಪಕ ವೃತ್ತಿ ಹೆಚ್ಚು, ಮೂರ್ತಿ ಪೂಜೆಗಿಂತ ತತ್ವ ಪೂಜೆಯೇ ಅಧಿಕ, ಆಚಾರ ನಿಷ್ಠೆಗಿಂತ ವಿಚಾರ ನಿಷ್ಠೆ ಬಹಳ. ರಾಷ್ಟ್ರೀಯತೆ ದೃಷ್ಟಿ ಹೆಚ್ಚು ರಾಷ್ಟ್ರದರ್ಶನ ಕಡಿಮೆ, ಜನ್ಮೋದೀಪನ ಹೆಚ್ಚು ಜನ ನಿರ್ವಹಣೆ ಕಡಿಮೆ." ಇವರು ಜನನಾಯಕನಾಗದೆ ನೇತೃವಾಗಿದ್ದರು.

ನಾವು ಒಂದಿನಿತು ಕನ್ನಡದ ಅಮೃತಸುಧೆಯನ್ನು ಈಗ ಸವಿಯುತ್ತಿದ್ದೇವೆ ಎಂದರೆ ಅದು ಆಲೂರು ವೆಂಕಟರಾಯರಂತಹ

ಮಹನೀಯರು ನಮಗೆ ನೀಡಿದ ತೀರ್ಥಪ್ರಸಾದ. ಹೀಗೆ ಅನೇಕರು ಕಣ್ಣಿಗೆ ಕಾಣದ ಅನನ್ಯ ಸೇವೆಯನ್ನು ನಮ್ಮ ರಾಜ್ಯ ದೇಶಕ್ಕೆ ನೀಡಿದ್ದಾರೆ. ಆದರೆ ನಾವು ಅವರನ್ನು ಸ್ಮರಿಸದೆ, ಕೃತಜ್ಞತೆ ಸಲ್ಲಿಸದೆ ಕೃತಘ್ನರಾಗಿದ್ದೇವೆ ಎಂಬುದೇ ಬೇಸರದ ಸಂಗತಿ.

ಇಂತಹ ಹಿರಿಯರನ್ನು ಸ್ಮರಿಸುವುದು ಅವಶ್ಯಕ ಹಾಗೂ ಅನಿವಾರ್ಯ ಮತ್ತು ನಮ್ಮ ಕರ್ತವ್ಯ ಕೂಡ. ಈ ಮೂಲಕ ನಾನು ಕೇಳಿಕೊಳ್ಳುವುದೇನೆಂದರೆ ಎಲ್ಲೂ ತಮ್ಮನ್ನು ತಾವು ಮೆರಗುಗೊಳಿಸಿಕೊಳ್ಳದೆ, ರಾಜ್ಯದ ಪ್ರಗತಿಗಾಗಿ ಶ್ರಮಿಸಿದವರನ್ನು ಮನಸಾರೆ ಸ್ಮರಿಸೋಣ ಹಾಗೂ ತುಂಬು ಹೃದಯದಿಂದ ಕೃತಜ್ಞಯೆ ಸಲ್ಲಿಸೋಣ ಎಂಬುದೊಂದು ಪುಟ್ಟ ವಿನಂತಿ.

ಹಾಗೂ ನಮ್ಮ ಕರ್ನಾಟಕ ಮಾತೆಯನ್ನು ಸಂರಕ್ಷಿಸಿ ಕನ್ನಡ ತನವನ್ನು ಬೆಳೆಸಿಕೊಂಡು ಉತ್ತಮ ಕನ್ನಡಿಗರಾಗೋಣ.

"ಕರ್ನಾಟಕಾಂತರ್ಗತ ಮಾತೆಗೆ ನಮಸ್ಕಾರ ಸಲ್ಲಿಸೋಣ."

ಶಿಕ್ಷಣದಲ್ಲಿ ದೇಶಭಕ್ತಿ

(ಸ್ವಾತಂತ್ರ್ಯಾಚರಣೆಯ ಅಂಗವಾಗಿ ಆಯೋಜಿಸಿದ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ.)

– ದಿಶಾ
ತೃತೀಯ ಬಿ.ಕಾಂ. 'ಎ'

ಭಾರತ ಅತ್ಯಂತ ವಿಶಾಲವಾದ ದೇಶವಾಗಿದ್ದು ಹಲವಾರು ಧರ್ಮ, ಭಾಷೆ ಮತ್ತು ಜನಾಂಗದೊಂದಿಗೆ ವೈವಿಧ್ಯ ಇದ್ದರೂ ಎಲ್ಲರೂ ಏಕತೆಯಿಂದ ಬಾಳುವುದು ಭಾರತೀಯ ಸಂಸ್ಕೃತಿಯಾಗಿದೆ. ಬೆಳೆಯುವ ಮಕ್ಕಳಲ್ಲಿ ಅದ್ಭುತ ಶಕ್ತಿಯಿದೆ. ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದರೆ ರಾಷ್ಟ್ರದ ಅಮೂಲ್ಯ ಸಂಪತ್ತು ಅವರಾಗುತ್ತಾರೆ. ದೇಶ ನನ್ನದು ನಾಡು ನನ್ನದು ಎನ್ನದ ಮಾನವನ ಎದೆ ಸುಡುಗಾಡು ಎಂಬ ಡಾ। ಕುವೆಂಪು ಎಚ್ಚರಿಸಿ ಸ್ವಾಭಿಮಾನ ಚಿಂತನೆ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಬೆಳೆಯುವ ಮಕ್ಕಳ ಶಿಕ್ಷಣದಲ್ಲಿ ದೇಶಭಕ್ತಿ ರಾಷ್ಟ್ರಾಭಿಮಾನ ಬೆಳೆಸಬೇಕು.

ದೇಶಭಕ್ತಿ ಎಂದರೇನು?

ದೇಶಭಕ್ತಿ ಎಂಬುದು ಒಂದು ಮನಸ್ಥಿತಿ. ಇಸ್ರೇಲ್ ದೇಶದ ಜನ ತಮ್ಮದು ದೇವರ ನಾಡು ಎಂದು ನಂಬುತ್ತಾರೆ. ಸ್ಕಾಟ್ ಲಾಂಡ್‌ನ ಜನಕ್ಕೆ ತಮ್ಮ ಶತಮಾನಗಳಷ್ಟು ಹಳೆಯ ಸಂಸ್ಕೃತಿಯ ಬಗ್ಗೆ ಅಪರಿಮಿತವಾದ ಹೆಮ್ಮೆಯಿದೆ. ಜಪಾನಿಯರಿಗೆ ತಮ್ಮದು ಸೂರ್ಯ ಉದಯಿಸುವ ನಾಡು ಎಂಬ ಅಭಿಮಾನವಿದೆ. ಟರ್ಕಿಯಂಥ ಪುಟ್ಟ ದೇಶದ ಜನಕ್ಕೂ ತಾವು ನಾಗರೀಕತೆಯ ತೊಟ್ಟಿಲಾಗಿದ್ದ ನಾಡಿನವರೆಂಬ ಬಿಂಕವಿದೆ. ಅಮೇರಿಕನ್ನರ ದೇಶಪ್ರೀತಿಯೋ ಜಗದ್ವಿಖ್ಯಾತ. ಯಾವುದೇ ಫ್ರೆಂಚ್ ಪ್ರಜೆಯನ್ನು ಕೇಳಿ ನೋಡಿ ಏಳೇಳೂ ಜನ್ಮದಲ್ಲೂ ಫ್ರೆಂಚ್ ಮಣ್ಣಿನಲ್ಲಿ ಹುಟ್ಟಿ ಬರುವೆ ಎನ್ನುತ್ತಾರೆ. ಅವೆಲ್ಲ ಯಾಕೆ, ಬನವಾಸಿಯ ಪಂಪವನ್ನೇ ತೆಗೆದುಕೊಳ್ಳಿ. ಮರುಜನ್ಮವೆಂದಿದ್ದರೆ ಮರಿದುಂಬಿಯಾಗಿ ಈ ನಾಡಿನಲ್ಲಿ ಹುಟ್ಟಿ ಬರುತ್ತೇನೆಂಬ ಮಾತು ಹೇಳುತ್ತಾನೆ. ತಾಯಿ ಮತ್ತು ತಾಯ್ನಾಡು ಸ್ವರ್ಗಕ್ಕಿಂತಮಿಗಿಲಾದದ್ದು ಎಂಬ ಮಾತೇ ಇದೆ.

ಉದಾಹರಣೆಗೆ ನನ್ನ ತಂದೆತಾಯಿಯರಿಗೆ ಹುಟ್ಟಿದ್ದೇನೆಂಬ ಕಾರಣಕ್ಕೆ ನನಗೆ ಆ ಇಬ್ಬರು ವ್ಯಕ್ತಿಗಳ ಮೇಲೆ ಪ್ರೀತಿಯಿದೆ. ಹಾಗೆಂದು ಉಳಿದ ಮನುಷ್ಯರನ್ನು ದ್ವೇಷಿಸುತ್ತೇನೆಂದು ಅರ್ಥವಲ್ಲ. ಎಲ್ಲರನ್ನೂ ಗೌರವಿಸುವ ನಾನು ನನ್ನ ತಂದೆತಾಯಿಯನ್ನು ಹೆಚ್ಚು ಗೌರವಿಸುತ್ತೇನೆ. ಯಾವ ಸಂವಿಧಾನದಲ್ಲೂ ಮಕ್ಕಳು ತಮ್ಮ ಹೆತ್ತವರನ್ನು ಪ್ರೀತಿಸಬೇಕೆಂಬ ಕಾನೂನು ಮಾಡಿ ಕಟ್ಟಪ್ಪಣೆ ಕೊಟ್ಟಿರುವುದಿಲ್ಲ. ಆದರೂ ಮಕ್ಕಳು ತಮ್ಮ ಹೆತ್ತವರನ್ನು ನೋಡಿಕೊಳ್ಳುವುದು ಒಂದು ಮೌಲ್ಯ ಎಂದು ಸಮಾಜ ಗುರುತಿಸುತ್ತದೆ. ದೇಶಪ್ರೇಮ ಕೂಡ ಅಂಥಾದ್ದೇ ಒಂದು ಮೌಲ್ಯ ಮತ್ತು ಮನಸ್ಥತಿ.

ದೇಶಭಕ್ತಿಯೆಂಬುದು ತೋರಿಕೆಯಾಗಬಾರದು. ಕೆಲವೊಮ್ಮೆ ಮಗನಿಗೆ ತನ್ನ ಪ್ರೀತಿಯನ್ನು ಸುಪ್ತವಾಗಿಡುವುದಕ್ಕಿಂತಲೂ ಜಗತ್ತಿನೆದುರು ಮೂರ್ತೀಕರಿಸಿ ತೋರಿಸುವುದು ಮುಖ್ಯವಾಗುತ್ತದೆ. ಆಗ ಆತ ತನ್ನ ತಂದೆಯ ತುಲಾಭಾರ ಮಾಡಿಸುತ್ತಾನೆ. ತಂದೆಯ ಹೆಸರಲ್ಲಿ ದಾನಧರ್ಮದ ಕೆಲಸ ಇಟ್ಟುಕೊಳ್ಳುತ್ತಾನೆ. ಹೆತ್ತವರ ಹೆಸರಲ್ಲಿ ಸ್ಕಾಲರ್‌ಶಿಪ್ ಕೊಡಿಸುತ್ತಾನೆ. ಮತ್ತೆ ಹಾಗೆ ಕೊಡಿಸಿದ್ದು ಸಮಾಜಕ್ಕೆ ತಿಳಿಯುವಂತೆ ನೋಡಿಕೊಳ್ಳುತ್ತಾನೆ. ದೇಶಭಕ್ತಿಯ ವಿಷಯದಲ್ಲೂ ಇಂಥ ಅತಿರೇಕಗಳು ಹುಟ್ಟುತ್ತವೆಯೋ ಎಂಬ ಅನುಮಾನ ಆಗಾಗ ಕಾಡುತ್ತದೆ. ಯಾಕೆಂದರೆ ನಮ್ಮಲ್ಲಿ ಹಲವರಿಗೆ ಆಗಸ್ಟ್ ಮತ್ತು ಜನವರಿ ಮಾಸಗಳಲ್ಲಿ ಮಾತ್ರ ದೇಶಭಕ್ತಿಯ ಜ್ವರ ಆವರಿಸಿಕೊಳ್ಳುತ್ತದೆ.

ನಾವು ದೇಶವನ್ನೇಕೆ ಪ್ರೇಮಿಸಬೇಕು? ಅದರ ಹಿರಿಮೆ ಏನು?

ನಾವೇಕೆ ದೇಶಪ್ರೇಮಿಗಳಾಗಬೇಕು ಎಂದು ಕೇಳುವವರು ಅರ್ಥಮಾಡಿಕೊಳ್ಳದ ಒಂದು ಸಂಗತಿಯೆಂದರೆ, ಅವರಿಗಾಗಿ ಈ ದೇಶ ಬಹಳಷ್ಟು ಕೊಟ್ಟಿದೆ. ಎಷ್ಟೆಂದರೆ ಅವರು ತಮ್ಮ ಜೀವಿತದಲ್ಲಿ ಎಂದೆಂದಿಗೂ ಮರಳಿಕೊಡಲಾಗದಷ್ಟನ್ನು ಕೊಟ್ಟಿದೆ. ನಾವು ದಿನಕ್ಕೆ ಸುಮಾರು ಮೂರು ಹೊತ್ತಿನಂತೆ ಉಣ್ಣುವ ಅನ್ನವನ್ನು ಬೆಳೆದುಕೊಟ್ಟ ಮಣ್ಣು ಈ ದೇಶದ್ದು. ಬೆಳೆದವರು ಅನ್ನದಾತರು ನಮ್ಮ ರೈತರು. ದುಡ್ಡು ಕೊಟ್ಟು ಕೊಂಡುಕೊಂಡರೂ ಆಹಾರವೇ ಇಲ್ಲದ ಬಡ ಬರ ಪ್ರದೇಶದಲ್ಲಿ ಹುಟ್ಟಿದರೆ ಅದೂ ಇಲ್ಲದಂತಾಗುತ್ತದೆ. ಆಹಾರದ ಜೊತೆಗೆ ನಿಮಗೆ ಬೇಕಾದ ಬಟ್ಟೆ ಬರೆಯನ್ನು ತಯಾರಿಸಿಕೊಟ್ಟವರು

ಈ ದೇಶವಾಸಿಗಳು. ಮನೆ ಬೆಳಗಲು ಉಪಯೋಗಿಸುವ ಪ್ರಕಾಶ ವಿದ್ಯುತ್ ಎಲ್ಲವೂ ದೇಶದ್ದೇ. ಎಲ್ಲೆಂದರಲ್ಲೂ ತಿರುಗಾಡಲು ಬೇಕಾದ ಸಾರಿಗೆ ವ್ಯವಸ್ಥೆ ದೇಶವು ನೀಡುತ್ತದೆ. ಮನೆ ಕಟ್ಟುವುದಕ್ಕೆ, ಕಾರು ಕೊಳ್ಳುವುದಕ್ಕೆ, ಮಗನ ಶಿಕ್ಷಣಕ್ಕೆ ಸಾಲವನ್ನೂ ಭಾರತೀಯ ಬ್ಯಾಂಕ್‌ಗಳು ಯಾವಾಗಲೂ ನೀಡಿ ಸಹಕರಿಸುತ್ತದೆ. ಅಲ್ಲದೇ ಕೈಯಲ್ಲಿ ಮಿಗುವ ದುಡ್ಡನ್ನು ಹೂಡಲಿಕ್ಕೂ ಅದರಿಂದ ಬಡ್ಡಿ ಎತ್ತಲಿಕ್ಕೂ ನಮಗೆ ಬ್ಯಾಂಕ್‌ಗಳೇ ಬೇಕು. ಒಂದಾನೊಂದು ಕಾಲದಲ್ಲಿ ಈ ದೇಶದಲ್ಲಿ ಟೆಲಿಗ್ರಾಫ್ ಇತ್ತು.ಇಂದು ನಮ್ಮ ಕೈಬೆರಳ ತುದಿಯಲ್ಲಿ 4ಜಿ ಅಂತರ್ಜಾಲವಿದೆ. ಪ್ರಪಂಚದ ಯಾರೊಂದಿಗೆ ಬೇಕಾದರೂ ಕ್ಷಣಮಾತ್ರದಲ್ಲಿ ಸಂಪರ್ಕ ಕಲ್ಪಿಸುವ ಸೌಲಭ್ಯ ನಮಗೆ ಒದಗಿದ್ದೂ ದೇಶದಿಂದ. ನಮಗೆ ಹುಟ್ಟಿದ ಬಳಿಕ ಒಳ್ಳೆಯ ಶಿಕ್ಷಣ ಬೇಕಾಗಿತ್ತು. ಅದನ್ನು ಮುಗಿಸಿ ನಮ್ಮ ಕಾಲಿನಲ್ಲಿ ನಾವು ನಿಲ್ಲಬೇಕಾದಲ್ಲಿ ಒಳ್ಳೆಯದೊಂದು ನೌಕರಿ ಹಿಡಿಯಬೇಕಾಗಿತ್ತು. ಅವೆಲ್ಲವನ್ನು ಸಾಧ್ಯವಾಗಿಸಿದ್ದು ಶಿಕ್ಷಣ ಸಂಸ್ಥೆಗಳು. ಈ ದೇಶದಲ್ಲಿ ಅಂಥ ಸಂಸ್ಥೆಗಳು ತಲೆ ಎತ್ತಲು ಅತ್ಯಂತ ಮುಕ್ತವಾದ ಅವಕಾಶ ಕಲ್ಪಿಸಿದೆ. ಆರೋಗ್ಯ ಹದೆಗೆಟ್ಟರೆ ಕಡಿಮೆ ಖರ್ಚಿನಲ್ಲಿ ಚಿಕಿತ್ಸೆ ಕೊಡಿಸಲು ಸರಕಾರೀ ಮತ್ತು ಖಾಸಗಿ ಆಸ್ಪತ್ರೆಗಳಿವೆ. ಎಲ್ಲೋ ದೂರದ ಅರೇಬಿಯಾದ ಪೆಟ್ರೋಲ್ ಕೂಡ ನಮ್ಮ ಮನೆಯೆದುರಿನ ಪೆಟ್ರೋಲ್ ಬಂಕ್‌ನಲ್ಲಿ ಸಿಗುವಂತಾಗಿದ್ದರೆ ಈ ದೇಶದ ಅಂತಾರಾಷ್ಟ್ರೀಯ ನೀತಿಗಳೇ ಕಾರಣ. ವಿಶ್ವದ ಎಲ್ಲಾ ದೇಶಗಳೊಂದಿಗೆ ಬಾಂಧವ್ಯವಿಟ್ಟುಕೊಂಡು ಕೊಟ್ಟು–ಕೊಳ್ಳುವ ವ್ಯಾಪಾರ ಮಾಡಿಕೊಂಡು ಅಲ್ಲಿನ ವಸ್ತುಗಳು ನಮ್ಮ ಕೈಗೆಟಕುವಂತೆ ದೇಶದ ಸರಕಾರ ನೋಡಿಕೊಂಡಿದೆ. ನಮ್ಮನ್ನು ಯಾರೂ ದೋಚದಂತೆ, ಅನ್ಯಾಯ ಮಾಡದಂತೆ ಕಾಪಾಡುತ್ತಿರುವುದು ಈ ದೇಶದ ಪೋಲೀಸ್ ಮತ್ತು ನ್ಯಾಯ ವ್ಯವಸ್ಥೆ. ಎಲ್ಲಕ್ಕಿಂತ ಮುಖ್ಯವಾಗಿ ನಾವು ನೆಮ್ಮದಿಯಾಗಿ ಬದುಕಲು ಅವಕಾಶ ಕಲ್ಪಿಸಿರುವುದು ಈ ದೇಶದ ಹಗಲು–ಇರುಳು ಎಂದು ಲೆಕ್ಕಿಸದೆ ಕಾವಲು ಕಾಯುತ್ತಿರುವ ಯೋಧರು. ಇಷ್ಟೆಲ್ಲ ನಾವು ದೇಶದಿಂದ ಪಡೆದು ಇದರ ಮೇಲೆ ಪ್ರೀತಿ ಇಲ್ಲವೆನ್ನಲು ಅಸಾಧ್ಯ.

ದೇಶಭಕ್ತಿಯನ್ನು ಉಳಿಸಿಕೊಳ್ಳುವ ಮಾರ್ಗ :

ಇವೆಲ್ಲವನ್ನು ನಮ್ಮ ಶಾಲೆಗಳಲ್ಲಿ ಬೋಧಿಸಬೇಕು. ಕಾಲೇಜುಗಳ ಪಠ್ಯದಲ್ಲಿ ಈ ಸಾಲುಗಳನ್ನು ಬರೆಯಬೇಕಾಗಿತ್ತು. ಅಲ್ಲಿ ಹೇಳದೆ ಬಿಟ್ಟರು ಎಂಬ ಕಾರಣಕ್ಕೆ ಇಂದು ನಮ್ಮಲ್ಲಿ ಕನ್ಹಯಗಳು, ಉಮರ್ ಖಾಲಿದರು ಹುಟ್ಟಿಕೊಂಡಿರುವುದು ವಿಪರ್ಯಾಸ ನೋಡಿ. ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳನ್ನು ಯಾಕೆ ರಚಿಸುತ್ತಾರೆ? ಅವು ಕಾಲೇಜಿನಲ್ಲಿ ನಡೆಯುವಂಥ ಕಾರ್ಯಕ್ರಮಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಲಿ. ಕೈ ಜೋಡಿಸಲಿ ಎಂಬ ಕಾರಣಕ್ಕೆ. ಜೊತೆಗೆ ಕಾಲೇಜಿನ ವಿದ್ಯಾರ್ಥಿಗಳನ್ನು ಸಂಘಟಿಸಿ ಅವರ ಒಕ್ಕೊರಲ ಧ್ವನಿಯನ್ನು ಕಾಲೇಜಿನ ಆಡಳಿತ ಮಂಡಳಿಗೆ ತಲುಪಿಸುವ ಜವಾಬ್ದಾರಿಯೂ ಅವುಗಳ ಮೇಲಿರುತ್ತದೆ. ಮುಖ್ಯವಾಗಿ ವಿದ್ಯಾರ್ಥಿ ಸಂಘ ಎನ್ನುವುದು ಕಾಲೇಜು ಮತ್ತು ವಿದ್ಯಾರ್ಥಿಗಳ ನಡುವಿನ ಸೇತುವೆಯಾಗಿ ಕೆಲಸ ಮಾಡಬೇಕು. ಇದರ ಮುಖ್ಯ ಉದ್ದೇಶ ಕಟ್ಟುವುದು, ಬೆಳೆಸುವುದು, ಬೆಸುಗೆ ಹಾಕುವುದೇ ಹೊರತು ಒಡೆಯುವುದಕ್ಕಲ್ಲ.

ಸಿಸೆರೋ ಹೇಳಿದ ಒಂದು ಮಾತು ಬಹಳ ಪ್ರಸಿದ್ಧ:

"ರಾಜನಾದವನು ದಂಗೆಕೋರರಿಂದ ದೇಶವನ್ನು ರಕ್ಷಿಸಬಹುದು. ಕಳ್ಳರು ದಗಾಕೋರರು ದರೋಡೆ ಮಾಡುವವರನ್ನೆಲ್ಲ ಹದ್ದುಬಸ್ತಿನಲ್ಲಿಡಬಹುದೇ. ಹೊರಗಿನಿಂದ ದಾಳಿ ಮಾಡುವ ಆಕ್ರಮಣಕಾರಿಗಳನ್ನೂ ಧೈರ್ಯವಾಗಿ ಎದುರಿಸಬಹುದು. ಆದರೆ ಒಳಗಿದ್ದುಕೊಂಡೇ ಬೆನ್ನಿಗೆ ಚೂರಿ ಹಾಕುವ ದೇಶದ್ರೋಹಿಗಳಿಂದ ತನ್ನ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳುವುದು ಬಹಳ ಪ್ರಯಾಸದ ಸಂಗತಿ." ಇದೇ ಮಾತು ನಮ್ಮ ಕ್ಯಾಂಪಸ್ಸುಗಳಿಗೂ ಅನ್ವಯವಾಗುತ್ತದೆ. ಇಂದಿನ ಕ್ಯಾಂಪಸ್ಸುಗಳು ಅಳವಡಿಸಬೇಕಾದದ್ದು ಏನನ್ನು? ದೇಶಭಕ್ತಿಯನ್ನೋ? ದೇಶದ್ರೋಹವನ್ನೋ? ಜೀವನ ಮೌಲ್ಯಗಳನ್ನೋ? ಒಡೆಯುವ ಸಂಸ್ಕೃತಿಯನ್ನೋ? ಚಿಂತನ ಪ್ರಬುದ್ಧತೆಯನ್ನೋ? ಅಪ್ರಬುದ್ಧ ರಾಜಕೀಯ ಸಿದ್ಧಾಂತಗಳನ್ನೋ? ಈ ಬೆಳವಣಿಗೆಗಳು ಎಲ್ಲಿಗೆ ಮುಟ್ಟುವುದೆಂದು ತಿಳಿಯುವುದು ಅಸಾಧ್ಯ. ರಾಜಕೀಯ ಪುರಪ್ರವೇಶವೇ ಇದಕ್ಕೆ ಕಾರಣ. ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕೆ ಏನನ್ನಾದರೂ ಮಾಡಬಲ್ಲರು ಈಗಿನ ರಾಜಕಾರಣಿಗಳು. ಬಲಿಯಾಗುತ್ತಿರುವುದು ವಿದ್ಯಾರ್ಥಿಗಳು. ನಷ್ಟ ಯಾರಿಗೆ? ದೇಶಕ್ಕೆ.....

ನಿಷ್ಕರ್ಷ :

ವಿದ್ಯಾರ್ಥಿ ಜೀವನವೆಂಬುದು ಬದುಕಿನ ಒಂದು ಅಮೂಲ್ಯ ಘಟ್ಟ. ನಮ್ಮ ಮುಂದಿನ ಮೂವತ್ತು–ನಲವತ್ತು ವರುಷಗಳ ಜೀವನವನ್ನು ನಿರ್ಧರಿಸುವಂತಹ ಅತ್ಯಂತ ನಿರ್ಣಾಯಕ ಹಂತ ಎಂದರೆ ತಪ್ಪಾಗಲಾರದು. ನಮ್ಮ ಉದ್ಯೋಗ, ವೇತನ ಸಂಸಾರ ಮಾತ್ರವಲ್ಲ, ನಮ್ಮ ಚಿಂತನೆಗಳೂ ನಮ್ಮ ಜೀವನದ ಬಹುಮುಖ್ಯ ಭಾಗವಾದ್ದರಿಂದ ಅಂಥ ಚಿಂತನಾಕ್ರಮಕ್ಕೆ ಬೀಜಕ್ಷೇಪವಾಗುವುದು ಕಾಲೇಜು ದಿನಗಳಲ್ಲಿ.

ಈ ಸಂದರ್ಭದಲ್ಲಿ ಮಾವಿನ ಬೀಜ ಬಿತ್ತಿದರೆ ಮಾವಿನ ಮರ ಬೆಳೆಯುತ್ತದೆ. ಜಾಲಿ ಬೀಜ ಬಿತ್ತಿದರೆ ಜಾಲಿ ಮರವೇ. ನಮಗೆ ಬೇಕಾಗಿರುವುದು ಕಳ್ಳ ಕನ್ಹಯಗಳಲ್ಲ. ರಾಷ್ಟ್ರಭಕ್ತಿಯನ್ನು ನರನಾಡಿಗಳಲ್ಲಿ ಹೊತ್ತಂಥ ರತನ್ ಟಾಟಾಗಳಂಥವರು. 24ನೇ ವಯಸ್ಸಲ್ಲೇ ಕಾರ್ಗಿಲ್ ಕದನದಲ್ಲಿ ವೀರಾವೇಶದಿಂದ ಹೋರಾಡಿ ಸ್ವರ್ಗ ಪಡೆದ ಅನುಜ್ ನಯ್ಯರ್‌ರಂಥ ದೇಶಪ್ರೇಮಿಗಳು. ಅಡಿಗರು ಆರು ದಶಕಗಳ ಹಿಂದೆಯೇ, "ಕಟ್ಟುವೆವು ನಾವು ಹೊಸ ನಾಡೊಂದನು" ಎಂದು ಬಿಸಿರಕ್ತ ಉಕ್ಕಿ ಹರಿಯುತ್ತಿದ್ದ ಹೃದಯದಿಂದ ಭಾವಪೂರ್ಣವಾಗಿ ಹಾಡಿದರು. ಆ ಕಟ್ಟುವ ಕೆಲಸವನ್ನು ಪೂರ್ತಿಗೊಳಿಸಬೇಕಾಗಿರುವುದು ಯುವಕರು, ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ಸಂಘಗಳು. ಇದರ ಪೂರ್ಣತೆ ಬೇಕಾಗುವುದೇ ಶಿಕ್ಷಣದಲ್ಲಿ ದೇಶಭಕ್ತಿ.

ನಾನು ಶಿಕ್ಷಕನಾದರೆ

(ಸಾಂಸ್ಕೃತಿಕ ಸಂಘ ಆಯೋಜಿಸಿದ ಶಿಕ್ಷಕರ ದಿನಾಚರಣೆಯ ಸಂದರ್ಭ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ.)

– ಐಶ್ವರ್ಯ ಕೆ.
ದ್ವಿತೀಯ ಬಿ.ಎ.

ಪ್ರತಿಯೊಬ್ಬ ವ್ಯಕ್ತಿಗೂ ಜೀವನದಲ್ಲಿ ಅವನದೇ ಆದ ಒಂದು ಗುರಿಯಿರಬೇಕಾದದ್ದು ಅಗತ್ಯ. ಆಗ ಮಾತ್ರ ಜೀವನ ಪರಿಪೂರ್ಣವಾಗುತ್ತದೆ. ನಾನೂ ಸಹ, ನನ್ನ ಜೀವನದಲ್ಲಿ ನನ್ನದೇ ಆದ ಒಂದು ಮಹತ್ತರ ಗುರಿಯನ್ನು ಇಟ್ಟುಕೊಂಡಿದ್ದೇನೆ. ಅದೇನೆಂದರೆ, 'ಆದರ್ಶ ಶಿಕ್ಷಕ'ನಾಗುವ ಗುರಿ.

ಇಂದು ಬೇರೆ ಎಲ್ಲಾ ಉದ್ಯೋಗಗಳು ವಾಣಿಜ್ಯಮಯವಾಗಿದ್ದರೆ, ಬೋಧನೆಯು ಮಾತ್ರ ಅತ್ಯಂತ ಗೌರವಾನ್ವಿತ ಉದ್ಯೋಗವೆಂದು ನಾನು ತಿಳಿದುಕೊಂಡಿದ್ದೇನೆ. ಅದರಂತೆ ಎಲ್ಲಾ ವೃತ್ತಿಗಳ ಒಳಿತು–ಕೆಡುಕುಗಳನ್ನು ಮನಗಂಡು ನಾನು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಭಾರತ ಸಂಸ್ಕೃತಿಯಲ್ಲಿ ವೇದಗಳ ಕಾಲದಿಂದಲೂ ಗುರುವಿಗೆ ಅತ್ಯಂತ ಗೌರವದ ಸ್ಥಾನವಿದೆ, ಮಾನ–ಸಮ್ಮಾನವಿದೆ. ಅದಕ್ಕೆ ದಾಸರು 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದಿದ್ದಾರೆ.

ಅಜ್ಞಾನವೆಂಬ ಗಾಢಾಂಧಕಾರದಲ್ಲಿ ನಡೆಯುತ್ತಿರುವ ಶಿಷ್ಯನೊಬ್ಬನ ಕೈಯಲ್ಲಿ ಗುರುವು ಜ್ಞಾನವೆಂಬ ದೀವಿಗೆಯನ್ನು ಬೆಳಗಿಸಿಕೊಡುತ್ತಾನೆ. ತಾನು ಕಲಿಸಿದ ವಿದ್ಯೆ, ತನ್ನ ಶಿಷ್ಯನಲ್ಲಿ ವಿಜೃಂಭಿಸಿದಾಗ ವಿದ್ಯೆ ಕಲಿಸಿದ ಗುರುವು ಆತ್ಮತೃಪ್ತಿಯಿಂದ ತನ್ನ ಶಿಷ್ಯನಿಗೆ ಮನದುಂಬಿ ಆಶೀರ್ವದಿಸುತ್ತಾರೆ.

ಪ್ರತಿಯೊಬ್ಬರ ಜೀವನದಲ್ಲಿಯೂ ಮಹತ್ತರವಾದ ಪ್ರಭಾವ ಬೀರುವ ವ್ಯಕ್ತಿ ಎಂದರೆ ಶಿಕ್ಷಕರು. ಒಬ್ಬ ಆದರ್ಶ ಶಿಕ್ಷಕರು ಭಗವಂತನ ಪುನರಾವತಾರವೆಂದೇ ಹೇಳಬಹುದು. ಅವರು ವ್ಯಕ್ತಿಯ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರುತ್ತಾರೆ. ಭಾರತದಲ್ಲಿ ಸಾಕಷ್ಟು ಶಿಕ್ಷಕರು ಮಕ್ಕಳ ಮನಸ್ಸಿನ ಮೇಲೆ ಅಳಿಸಲಾಗದ ಗುರುತುಗಳನ್ನು ಬಿಟ್ಟು ಹೋಗಿರುತ್ತಾರೆ. ಅಂತವರ ಸಾಲಿನಲ್ಲಿ ಡಾ। ರಾಧಾಕೃಷ್ಣನ್‌ನವರ ಹೆಸರು ಮೊದಲಿಗೆ ಕೇಳಿ ಬರುತ್ತದೆ.

ಆದರ್ಶ ಶಿಕ್ಷಕರು ಶೀಘ್ರಗ್ರಾಹಿಗಳಾಗಿರಬೇಕು. ಜೊತೆಗೆ ಮಕ್ಕಳ ಮನಸ್ಸು ಹಾಗೂ ಭಾವನೆಗಳನ್ನು ಸ್ವಚ್ಛಗೊಳಿಸುವಂತಹ ನಿಷ್ಕಪಟ ಸಾಮರ್ಥ್ಯವನ್ನು ಹೊಂದಿರಬೇಕು. ಅದರಂತೆಯೇ ನಾನಾಗಬಯಸುತ್ತೇನೆ. ವಿದ್ಯಾರ್ಥಿಗಳೊಂದಿಗೆ ತಾಳ್ಮೆಯಿಂದಿದ್ದು, ಬೇಸರ ತರಿಸುವ ಪಾಠವನ್ನೂ ಸಹ ಮನಮೋಹಕವಾಗುವಂತೆ ಮಾಡುತ್ತಾ, ತರಗತಿಯಲ್ಲಿನ ವಾತಾವರಣಕ್ಕೆ ಜೀವಕಳೆ ತುಂಬುತ್ತೇನೆ. 'ನುಡಿದಂತೆ ನಡೆ' ಎಂಬ ಮಾತನ್ನು ಅಕ್ಷರಶಃ ಪಾಲಿಸಿಕೊಂಡು, ಕಲಿಯುವ–ಕಲಿಸುವ ಹಂಬಲ ಹೊಂದಿರುತ್ತೇನೆ. ಕೇವಲ ಪಠ್ಯಕ್ರಮಕ್ಕೆ ನನ್ನ ವೇಳೆಯನ್ನು ಮೀಸಲಾಗಿಡದೆ ಪಠ್ಯೇತರ ಚಟುವಟಿಕೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಪರಿಸರ ಸಂರಕ್ಷಣೆ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸುತ್ತಾ ಇರುತ್ತೇನೆ.

ಇಂತಹ ಚಟುವಟಿಕೆಗಳ ಮುಖಾಂತರ ಮಕ್ಕಳಲ್ಲಿ ದೇಶಪ್ರೇಮ, ಆರೋಗ್ಯಕರ ಸ್ಪರ್ಧಾತ್ಮಕ ಭಾವನೆಗಳು, ತಾಳ್ಮೆ, ಹಿಡಿದ ಕೆಲಸ ನಿಭಾಯಿಸುವ ಛಲ ಮುಂತಾದ ಗುಣಗಳಿಂದ ಮಕ್ಕಳನ್ನು ಶ್ರೇಷ್ಠ ಮೂರ್ತಿಗಳನ್ನಾಗಿ ಮಾಡುವ ಸುಂದರ ಶಿಲ್ಪಿ ನಾನಾಗಬಯಸುತ್ತೇನೆ.

ವಿದ್ಯಾರ್ಥಿಗಳ ಜೊತೆ ವಿದ್ಯಾರ್ಥಿಯಾಗಿದ್ದು, ಅವರನ್ನು ತನ್ನೆಡೆಗೆ ಆಕರ್ಷಿಸಿಕೊಳ್ಳುವ ಕಲೆಯನ್ನು ಮೈಗೂಡಿಸಿಕೊಳ್ಳುತ್ತೇನೆ. ಆಟ–ಪಾಠಗಳಲ್ಲಿ ಅವರ ಜೊತೆ ಸಮರಸಗೊಂಡು, ಒಳ್ಳೆಯದಕ್ಕೆ ಬೆನ್ನು ತಟ್ಟಿ ಉತ್ತೇಜನ ಕೊಡುತ್ತೇನೆ. ಪಾಲಕರೊಡನೆ ಉತ್ತಮ ಸಂಬಂಧ ಇಟ್ಟುಕೊಂಡು ಮಕ್ಕಳ ಪ್ರಗತಿ, ಕುಂದು ಕೊರತೆಗಳಿದ್ದರೆ ತಿಳಿಸುತ್ತಿರುತ್ತೇನೆ. ಕರ್ತವ್ಯದಕ್ಷತೆ, ಸರಳ ಜೀವನ, ಶಿಸ್ತು, ಸಂಯಮ, ಸ್ವಚ್ಛತೆ, ಸಹಕಾರ ಮುಂತಾದ ಗುಣಗಳನ್ನು ಅಳವಡಿಸಿಕೊಂಡಿರುತ್ತೇನೆ.

ಮುಂದೆ ನನ್ನ ವಿದ್ಯಾರ್ಥಿಗಳಿಗೆ ಇತರ ವೃತ್ತಿಗಳಂತೆಯೇ ಬೋಧನಾ ಕ್ಷೇತ್ರದ ಬಗ್ಗೆಯೂ ಒಲವು ಬೆಳೆಸಿಕೊಳ್ಳುವಂತೆ ಮಾಡುತ್ತೇನೆ. ಒಳ್ಳೆಯ ಶಿಕ್ಷಕರಿಗೆ ಅಪಾರ ಬೇಡಿಕೆ ಇದೆ. ಅಂತೆಯೇ ಉನ್ನತ ಸ್ಥಾನಮಾನಗಳೂ ದೊರೆಯುತ್ತವೆ. ಪ್ರಾಮಾಣಿಕತೆಯಿಂದ ತನ್ನ ಹೊಣೆಯನ್ನರಿತ ಶಿಕ್ಷಕ ಜವಾಬ್ದಾರಿಯಿಂದ ತನ್ನ ಕರ್ತವ್ಯಗಳನ್ನು ನಿರ್ವಹಿಸಿದರೆ ಅವರು ದೇವತಾ ಸ್ವರೂಪಿಯೇ ಹೌದು. ದೇಶದ ಭವಿಷ್ಯ ಇಂತಹ ಆದರ್ಶ ಶಿಕ್ಷಕರ ಮೇಲಿದೆ. ಇಂತಹ ಶಿಕ್ಷಕರ ಅವಶ್ಯಕತೆ ತುಂಬಾ ಇದೆ ಎಂದು ಒತ್ತಿ ಹೇಳುತ್ತೇನೆ.

'ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರ' ಎಂದು ಗುರುವಿನ ಮಹತ್ವವನ್ನು ಸಾರುವಂತೆ, 'ಶಾಲೆಯೇ ದೇಗುಲ, ವಿದ್ಯಾರ್ಥಿಗಳೇ ದೇವರು' ಎಂದು ನಾನು ಭಾವಿಸಿ, ಶಾಲೆ ವಿದ್ಯಾರ್ಥಿಗಳೊಂದಿಗೆ ನನ್ನ ಜೀವನವನ್ನು ಮುಡಿಪಾಗಿಡುತ್ತೇನೆ. ಅದಕ್ಕೋಸ್ಕರ ಯಾವಾಗಲೂ ವಿದ್ಯಾರ್ಜನೆಯಲ್ಲಿ ತೊಡಗಿಕೊಂಡಿರುತ್ತೇನೆ. ಸ್ವತಃ ಪಂಡಿತನಾಗದೆ, ವಿಷಯದಲ್ಲಿ ಪ್ರವೀಣನಾಗದೆ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಯಾವಾಗಲೂ ಜ್ಞಾನವನ್ನು ಗಳಿಸುವುದು ಮತ್ತು ಜ್ಞಾನದಾನ ಮಾಡುವ ಕಾರ್ಯದಲ್ಲಿ ತೊಡಗಿಕೊಂಡಿರುತ್ತೇನೆ. ಶಿಕ್ಷಕರು ಸಮಾಜದಿಂದ ಗೌರವನ್ನು ಅಪೇಕ್ಷಿಸಬೇಕಾದರೆ ಅವರು

ಮೊದಲು ಗೌರವಕ್ಕೆ ಅರ್ಹರಾಗಬೇಕು. ಡಾ। ರಾಧಾಕೃಷ್ಣನ್ ತಮ್ಮ ವಿದ್ವತ್ತಿನಿಂದ ಜಗತ್ತಿನಲ್ಲಿ ಮನ್ನಣೆ ಪಡೆಯಲಿಲ್ಲವೇ? ಅಂತೆಯೇ ನಾವು ಯೋಗ್ಯತೆಯನ್ನು ಪಡೆಯದೆ ಜಗತ್ತು ನಮ್ಮನ್ನು ಮನ್ನಿಸಲಾರದು ಎಂಬ ಕಟುಸತ್ಯವನ್ನು ನಾನು ಅರಿತುಕೊಂಡಿರುತ್ತೇನೆ.

ಹೀಗೆ ನಾನು ಅಧ್ಯಾಪನವನ್ನು ಕೇವಲ ವೃತ್ತಿಯನ್ನಾಗಿ ಸ್ವೀಕರಿಸದೆ, ಅದನ್ನು ಆರಾಧನಾ ಭಾವದಿಂದ ವಿದ್ಯಾರ್ಥಿಗಳಿಗೆ ಧಾರೆಯೆರೆಯುತ್ತೇನೆ.

ಕರ್ನಾಟಕಕ್ಕೆ ಪ್ರತ್ಯೇಕ ಧ್ವಜ ಬೇಕೇ?

(ವಿದ್ಯಾರ್ಥಿವೇದಿಕೆ ಆಯೋಜಿಸಿದ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ.)

– ದಿವ್ಯಾ
ದ್ವಿತೀಯ ಎಂ.ಕಾಂ.

"ಹಾರುತಿಹುದು ನಮ್ಮ ಬಾವುಟ
ರನ್ನ, ಪಂಪ, ಪೊನ್ನ, ಹರಿಹರ, ಅಕ್ಕ–ಬುಕ್ಕ
ಪುಲಕೇಶಿ, ವಿಕ್ರಮರ, ಪುರಂದರ, ಕನಕದಾಸರ
ಚೆನ್ನಮ್ಮ, ಅಬ್ಬಕ್ಕ, ವೀರರ ಕನ್ನಡ ಬಾವುಟಾ."

ಆಹಾ! ಅಹೋ ಅದೋ ಗಗನಕ್ಕೆ ಚುಂಬಿಸುತ್ತಾ, ಕನ್ನಡವನ್ನು ಬಾನೆತ್ತರಕ್ಕೂ ಪಸರಿಸುವ ತವಕದಲ್ಲಿ ಹಾರಾಡುತ್ತಿದೆ ನಮ್ಮ ಕನ್ನಡ ಬಾವುಟ.

"ಕರ್ನಾಟಕ ಎಂದರೆ ಬರೀ ಹೆಸರಲ್ಲ
ಶಕ್ತಿ ಕಾಣೋ! ಮಂತ್ರ ಕಾಣೋ!
ಜೀವ ಕಾಣೋ! ಸೌಹಾರ್ದತೆ ಕಾಣೋ!
ಶಾಂತಿ ಕಾಣೋ! ಸಮೃದ್ಧತೆ ಕಾಣೋ! ಮನುಜ!"

ಪ್ರತಿಯೊಂದು ರಾಜ್ಯಕ್ಕೂ ಅದರದ್ದೇ ಆದ ಭಾಷೆ ಇದೆ, ಸಂಸ್ಕೃತಿ ಇದೆ. ಸೌಹಾರ್ದತೆ ಇದೆ. ತನ್ನ ರಾಜ್ಯಕ್ಕೆ ತನ್ನದೇ ಆದ ಬಾವುಟ ಇದೆ. ಈ ಬಾವುಟವು ಆ ರಾಜ್ಯದ ಜನರ ಸೌಹಾರ್ದತೆಯನ್ನು ಬಿಂಬಿಸುವ ಒಂದು ಸಂಕೇತ. ಭಾರತಾಂಬೆಯ ಆ ಸುಂದರ ರೂಪಕ್ಕೆ ಈ ದ್ವಿವರ್ಣ ಬಾವುಟವೂ ಕಳೆಯನ್ನು ನೀಡಿದಂತಿದೆ.

ಸಮತಲದಲ್ಲಿ ಬೇರ್ಪಡಿಸಿದ ಇದರ ಎರಡು ಬಣ್ಣ ಇಡೀ ನಮ್ಮ ಕರ್ನಾಟಕದ ಜನರ ಜೀವನವನ್ನು ಅವರ ಮನೋಭಾವನೆಗೆ ಹಿಡಿದ ಕೈಗನ್ನಡಿಯಾಗಿದೆ.

ಧ್ವಜದ ಹಳದಿ ಬಣ್ಣ ಭಾರತಾಂಬೆಗೆ ಅರಶಿನ ಅಲಂಕಾರದಂತೆ, ಶಾಂತಿ, ದೌಹಾರ್ದತೆಯ ಪ್ರತೀಕ, ಆರೋಗ್ಯಕರ ಸಮಾಜದ ಪ್ರತಿರೂಪವನ್ನು ಬಿಂಬಿಸುವ ಸಾಧನ.

ಧ್ವಜದ ಕೆಂಪು ಬಣ್ಣ ಭಾರತಾಂಬೆಗೆ ಕುಂಕುಮದಿಂದ ಅಲಂಕರಿಸಿದಂತೆ, ಧೈರ್ಯ, ಕ್ರಾಂತಿಯ ಸಂಕೇತ, ಅಭಿವೃದ್ಧಿಶೀಲ ಸಮಾಜದ ಪ್ರತೀಕ, ಸದಾ ಮಂಗಳಕರ ಹಾಗೂ ಸುಮಧುರ ಭಾವನೆಯ ಚಿಂತನೆಯ ಸಾಧಕ, ಪ್ರೇರಕ, ಪೂರಕ ನಮ್ಮೀ ಕನ್ನಡ ಧ್ವಜ.

ಕ್ರಾಂತಿಗೆ, ಅನ್ಯಾಯ, ಮತ್ಸರ, ದ್ವೇಷದ ವಿರುದ್ಧ ಹೋರಾಡಲು ಸದಾ ನಮ್ಮೊಂದಿಗೆ ನಿಲ್ಲುವುದು ನಮ್ಮ ಕನ್ನಡತೆ, ಕನ್ನಡ ಬಾಷೆ. ಬಾವುಟದ ಬಣ್ಣಗಳೇ ಕನ್ನಡಿಗರ ಭಾವನೆಯ ಕುರಿತಾಗಿ ಕೂಗಿ ಹೇಳುತ್ತವೆ. ಕನ್ನಡಿಗರು ಶಾಂತಿಗೂ ಸಿದ್ಧ, ಕ್ರಾಂತಿಗೂ ಸಿದ್ಧ. ಕನ್ನಡದ ಭಾಷೆಯ, ಕನ್ನಡ ಮಣ್ಣಿನ, ಕನ್ನಡ ಧ್ವಜದ ಮಾತು ಬಂದರೆ, ಅದರ ಅವಹೇಳನಗೈದರೆ, ಕನ್ನಡಕ್ಕಾಗಿ ಪ್ರಾಣ ಬಿಡಲೂ ಸಿದ್ಧವಿರುವ ಕನ್ನಡಿಗರ ಜೀವ ಇದು. ಇಷ್ಟೆಲ್ಲಾ ಕಾರ್ಯಕ್ಕೆ ಶಕ್ತಿ ನೀಡಿದ ದೇವತೆ ಈ ಕನ್ನಡತಿ.

1995ರಲ್ಲಿ ಎಂ.ರಾಮಮೂರ್ತಿಯವರಿಂದ ಪ್ರಾರಂಭಿಸಲ್ಪಟ್ಟ ಈ ನಮ್ಮ ದ್ವಿವರ್ಣ ಬಾವುಟ ಅಂದು ಅವರಿಗೆ ತಮಿಳಿನವರಿಂದ ಮುಕ್ತಿ ಕೊಡಿಸಿತು. ಆದರೆ ಇಂದು ಸಂಜೆ ಅದೇ ಬಾವುಟದ ವಿಚಾರ ಜನರ ಮಾತಿನಲ್ಲಿ ಸಿಕ್ಕಿ ಒದ್ದಾಡುತ್ತಿದೆ.

ಕರ್ನಾಟಕಕ್ಕೆ ಪ್ರತ್ಯೇಕ ಧ್ವಜ ಬೇಕೇ?

ರಾಷ್ಟ್ರಗೀತೆಯೊಂದಿಗೆ ನಾಡಗೀತೆ ಹಾಡಲು ಸಿದ್ಧ, ರಾಷ್ಟ್ರ ಭಾಷೆ ಹಿಂದಿಯೊಂದಿಗೆ ರಾಜ್ಯ ಭಾಷೆ ಕನ್ನಡ ಮಾತಾಡಲು ಸಿದ್ಧ, ಆದರೆ ರಾಜ್ಯದ ಸಮಾನತೆಗೆ, ಸಮೃದ್ಧತೆಗೆ, ಸಹೃದಯತೆಗೆ ಹೋರಾಡಿದ, ರಾಜ್ಯದ ಸಂಕೇತವಾದ ಆ ಬಾವುಟವನ್ನು ರಾಷ್ಟ್ರಧ್ವಜದೊಂದಿಗೆ ಹಾರಿಸಲು ಅದ್ಯಾಕೆ ಸಿದ್ಧರಿಲ್ಲ?

ಯಾವ ಸಂವಿಧಾನವೂ ರಾಜ್ಯಧ್ವಜವನ್ನು ಹಾರಿಸುವ ಸಲುವಾಗಿ ನಿರ್ಬಂಧ ಹೇರಿಲ್ಲ. ಬದಲಾಗಿ ನಾವೇ ನಮ್ಮಲ್ಲೇ ಮಾಡಿಕೊಂಡ ಕಟ್ಟುಪಾಡು. ಹೌದು, ರಾಷ್ಟ್ರ ದೊಡ್ಡದು, ರಾಷ್ಟ್ರ ಧ್ವಜಕ್ಕೆ ಗೌರವ ಸಲ್ಲಿಸಬೇಕಾದದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಆದರೆ, ನಮ್ಮ ರಾಜ್ಯ ಧ್ವಜವನ್ನು ಅವಹೇಳನ ಮಾಡಿ, ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುವುದು ಅದೆಷ್ಟು ಸರಿ. ರಾಷ್ಟ್ರ ಧ್ವಜ, ರಾಜ್ಯ ಭಾಷೆ, ರಾಜ್ಯ ಧ್ವಜ ಇವು ತಾಯಿ ತಂದೆ ಮಕ್ಕಳಂತೆ. ಒಂದು ರಾಷ್ಟ್ರದ ಏಳ್ಗೆಯು ಪ್ರತಿಯೊಂದು ರಾಜ್ಯದ ಅಭಿವೃದ್ಧಿಯ ಮೇಲೆ ನಿಂತಿದೆ. ಹಾಗಿದ್ದಲ್ಲಿ ರಾಜ್ಯಗಳಲ್ಲಿ ಒಂದಾಗಿರುವ ಕರ್ನಾಟಕಕ್ಕೆ ಪ್ರತ್ಯೇಕ ಧ್ವಜವನ್ನು ನೀಡಲು ನಮ್ಮ ರಾಷ್ಟ್ರ ಸಿದ್ಧವಿಲ್ಲವೇ?

ರಾಜ್ಯದ ಧ್ವಜದಿಂದಲೇ ರಾಜ್ಯದ ಬೆಳವಣಿಗೆ ಸಾಧ್ಯ ಎಂದಲ್ಲಾ.....ಬದಲಾಗಿ, ಒಂದು ರಾಜ್ಯಕ್ಕೆ ಅದರದ್ದೇ ಆದ ಧ್ವಜ

ಇದ್ದೂ, ಆ ಧ್ವಜಕ್ಕೂ ಉತ್ತಮ ಮನ್ನಣೆ, ಸ್ಥಾನಮಾನ ದೊರೆಯುವುದಾದರೆ ಅದಕ್ಕಿಂತ ಮಿಗಿಲಾದ ಕನ್ನಡ ಪ್ರೇಮ ಮತ್ತೆಲ್ಲಿದೆ?

ಒಂದು ರಾಜ್ಯವು ಅಭಿವೃದ್ಧಿ ಪಥದಲ್ಲಿ ಸಾಗಿತು ಎಂದರೆ, ಅದು ಎಲ್ಲಕ್ಕಿಂತಲೂ ಮಿಗಿಲಾಗಿ ನಮಗೆ ಕಾಣ ಸಿಗುವುದು ಆ ರಾಜ್ಯದ ಬಾವುಟದಲ್ಲಿ. ಒಬ್ಬ ವ್ಯಕ್ತಿ ಆತ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ಎಂದರೆ, ಆದಾಗ ಆತ ಅವನ ದೇಶವನ್ನು, ರಾಜ್ಯವನ್ನು ರಾಜ್ಯದ ಬಾವುಟದೊಂದಿಗೆ ವಿಜೃಂಭಿಸುವಂತಾಗಬೇಕು. ಹಾಗಿದ್ದಲ್ಲಿ ಆ ರಾಜ್ಯದ ಹೆಸರು, ಘನತೆ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಪಸರಿಸುತ್ತದೆ.

ಕನ್ನಡ ಭಾಷೆ ನುಡಿಯಲು ಚೆನ್ನ, ಕನ್ನಡ ನಾಡು ನಲಿದಾಡಲು ಚೆನ್ನ, ಕನ್ನಡಾಂಬೆಯ ಜೋಗುಳದ ಹಾಡು ಕೇಳಲು ಚೆನ್ನ. ಹಾಗಿದ್ದರೆ ಈ ನಮ್ಮ ಕರ್ನಾಟಕ ಧ್ವಜ ಬಾನೆತ್ತರ ಹಾರಾಡುವುದು ನೋಡಲು ಅದೆಷ್ಟು ಚೆನ್ನ.

ಮನುಷ್ಯನ ಜೀವನ ಅತ್ಯಂತ ಅತ್ಯಂತ ವಿಚಿತ್ರವಾದದ್ದು. ಅವನ ಸ್ವಭಾವಗಳನ್ನು ತಿಳಿಯುವುದು ಅಷ್ಟು ಸುಲಭವಲ್ಲ. ಭಗವಂತ ಪ್ರಪ್ರಥಮವಾಗಿ ಮಂಗ ಮತ್ತು ನರಿ ಎನ್ನುವ ಎರಡು ಪ್ರಾಣಿಗಳನ್ನು ನಿರ್ಮಿಸಿದ್ದನಂತೆ. ಆಮೇಲೆ ಭಗವಂತನಿಗೇ ಒಂದು ಕುತೂಹಲವುಂಟಾಗಿ ಎರಡೂ ಪ್ರಾಣಿಗಳನ್ನು ಸೇರಿಸಿದನಂತೆ. ಅವನೇ ಮಾನವ. ಹಾಗಾಗಿ ಮನುಷ್ಯನಲ್ಲಿ ಮಂಗನ ಚೇಷ್ಟೆಗಳು ನರಿಯ ಕುತಂತ್ರಗಳು ಎರಡೂ ಬೆರೆತು ಹೋಗಿವೆ. ನಮ್ಮ ಪ್ರಕಾರ ನಾವು ಜೀವನದಲ್ಲಿ ಎಂದೂ ತಪ್ಪನ್ನು ಮಾಡುವುದೇ ಇಲ್ಲ. ತಪ್ಪೇನಿದ್ದರೂ ಬೇರೆಯವರದು. ಇನ್ನೊಬ್ಬರನ್ನು ದೂರಲು ತೋರುಬೆರಳು ಸಿದ್ಧವಾಗಿರುತ್ತದೆ. ಆದರೆ ಉಳಿದ ಮೂರು ಬೆರಳುಗಳು ನಮ್ಮನ್ನೇ ತೋರಿಸುತ್ತಿರುತ್ತವೆ ಎನ್ನುವ ಜ್ಞಾನವೇ ಇರುವುದಿಲ್ಲ. ಇನ್ನು ಕೆಲವರು ಮಾತು ಮಾತಿಗೂ ಭಗವಂತನನ್ನು ದೂರುವುದರಲ್ಲಿಯೇ ಮಗ್ನರಾಗಿರುತ್ತಾರೆ. ತಮಗೆ ಬಂದಿರುವ ಕಷ್ಟಕ್ಕೋ, ಬಡತನಕ್ಕೋ, ರೋಗರುಜಿನಕ್ಕೋ, ಭಗವಂತನಿಗೆ ಬಾಯಿಗೆ ಬಂದಹಾಗೆ ಬೈಯುತ್ತಾ, "ಅಯ್ಯೋ ಹೀಗೇಕೆ ಮಾಡಿದೆ?" ಎಂದು ಅಳುತ್ತಾ ಕುಳಿತರೆ ಮುಗಿಯಿತು ಅವರ ಕೆಲಸ.

ತಮಗಿರುವ ಚಿಕ್ಕ ಕಷ್ಟವನ್ನೇ ನೆನೆದು ಕೊರಗುತ್ತಿರುವವರಿಗೆ ಮಾದರಿಯಾಗಿ ನಿಲ್ಲಬಲ್ಲ ವ್ಯಕ್ತಿ ಎಂದರೆ ಆರ್ಥರ್ ಆ್ಯಷ್. ಬಹುಷಃ ಆತನ ಜೀವನ ನಮಗೆ ಬಹುಡೊದ್ದ ದಾರಿದೀಪವಾಗಿ ನಿಲ್ಲಬಲ್ಲದು. ಆತ ಹೆಸರಾಂತ ಟೆನ್ನಿಸ್ ಆಟಗಾರ. ಅವನು ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ, ಫ್ರೆಂಚ್ ಓಪನ್ ಪ್ರಶಸ್ತಿಗಳನ್ನಲ್ಲದೆ ವಿಶ್ವಮಾನ್ಯ ವಿಂಬಲ್ಡನ್ ಪ್ರಶಸ್ತಿಯನ್ನು ಗಳಿಸಿದ ಮೊಟ್ಟಮೊದಲ ಆಫ್ರಿಕಾ ಮೂಲದ ಅಮೇರಿಕನ್ ವ್ಯಕ್ತಿ. ಆತನ ಹೆಸರು ಅಂತಾರಾಷ್ಟ್ರೀಯ ಅಗ್ರಮಾನ್ಯ ಟೆನ್ನಿಸ್ ಆಟಗಾರರ ಪಂಕ್ತಿಯಲ್ಲಿ ಸೇರಿದೆ.

ಆಟದಲ್ಲಿ ಯಶಸ್ಸು ಬದುಕಿನಲ್ಲಿ ಬೇಕಾದಷ್ಟು ಹಣ, ಕೀರ್ತಿ ಎಲ್ಲವನ್ನೂ ಗಳಿಸಿದ ಯಶಸ್ಸಿನ ಉತ್ತುಂಗ ಶಿಖರದಲ್ಲಿ ವಿಹರಿಸುತ್ತಿದ್ದ ಆತನಿಗೆ ಎರಡು ಬಾರಿ ಹೃದಯಾಪಘಾತವಾಗಿ ಶಸ್ತ್ರ ಚಿಕಿತ್ಸೆಗೆ ಒಳಪಡಬೇಕಾಯಿತು. ಇನ್ನೇನು ಸುಧಾರಿಸಿಕೊಳ್ಳುತ್ತಿದ್ದಾನೆ ಎನ್ನುವಷ್ಟರಲ್ಲಿ ಆತನಿಗೆ ಏಡ್ಸ್ ರೋಗ ತಗುಲಿದೆ ಎಂದು ಗೊತ್ತಾಯಿತು. ಈ ಆಪತ್ಕಾರಿ ಸುದ್ದಿಯಿಂದ ಆತನಿಗಿಂತ ಹೆಚ್ಚಾಗಿ ಆತನ ಅಸಂಖ್ಯ ಅಭಿಮಾನಿಗಳಿಗೆ ತುಂಬಾ ನೋವಾಯಿತು. ಪ್ರತಿದಿನ ಸಾವಿರಾರು ಸಹಾನುಭೂತಿ ತೋರಿಸುವ ಪತ್ರಗಳು ಆತನಿಗೆ ಬರುತ್ತಿದ್ದವು. ಸಾಧ್ಯವಾದಮಟ್ಟಿಗೆ ಆತ ಉತ್ತರಿಸುತ್ತಿದ್ದ. ಒಂದು ದಿನ ಬಂದ ಪತ್ರವೊಂದರಲ್ಲಿ "ಓ ದೇವರೇ, ಹೀಗೇಕೆ ಮಾಡಿದೆ ಎಂದು ದೇವರನ್ನು ಗದರಿಸಿ ಕೇಳಬೇಕು ಎಂದು ನಿಮಗೆ ಅನಿಸುವುದಿಲ್ಲವೇ? ಎಂದು ಅಭಿಮಾನಿ ಒಬ್ಬಾತ ಕೇಳಿದ್ದ. ಅದಕ್ಕೆ ಆರ್ಥರ್ ಬರೆದ ಉತ್ತರ ತುಂಬಾ ಅರ್ಥಪೂರ್ಣವಾಗಿತ್ತು.

"ಪ್ರಿಯ ಮಿತ್ರ, ನಾನು ಟೆನ್ನಿಸ್ ಆಡಲು ಪ್ರಾರಂಭ ಮಾಡಿದ ವರ್ಷದಲ್ಲಿ ಪ್ರಪಂಚದಾದ್ಯಂತ ಸುಮಾರು 5 ಕೋಟಿ ಹದಿಹರೆಯದ ಯುವಕರು ಟೆನ್ನಿಸ್ ಆಡಲು ಆರಂಭಿಸಿದ್ದರು. ಅದರಲ್ಲಿ ಸುಮಾರು ಐವತ್ತು ಲಕ್ಷ ಯುವಕರು ಜಿಲ್ಲಾ ಮಟ್ಟದ ಆಟಗಾರರಾಗಿ ತೇರ್ಗಡೆ ಹೊಂದಿರಬಹುದು. ಅವರಲ್ಲಿ ಐವತ್ತು ಲಕ್ಷ ಯುವಕರು ರಾಜ್ಯಮಟ್ಟದ ಆಟಗಳಲ್ಲಿ ಭಾಗವಹಿಸಿರಬಹುದು. ಅವರುಗಳ ಪೈಕಿ ಐವತ್ತು ಸಾವಿರ ಯುವಕರು ವಿವಿಧ ರಾಷ್ಟ್ರಮಟ್ಟದ ಆಟಗಳಲ್ಲಿ ಭಾಗವಹಿಸಿರಬಹುದು. ಅವರುಗಳ ಪೈಕಿ ಐವತ್ತು ಜನ ವಿಂಬಲ್ಡನ್‌ನ ಪ್ರಾಥಮಿಕ ಸುತ್ತಿಗೆ ಆಯ್ಕೆಯಾಗಿರಬಹುದು.

ಕೊನೆಗೆ ಕೇವಲ ಎಂಟು ಜನ ಕ್ವಾರ್ಟರ್ ಫೈನಲ್ ತಲುಪುತ್ತಾರೆ. ಅವರಲ್ಲಿ ನಾಲ್ಕು ಜನ ಸೆಮಿಫೈನಲ್‌ಗೆ ಬರುತ್ತಾರೆ. ಇಬ್ಬರು ಮಾತ್ರ ಅಂತಿಮ ಸುತ್ತಿಗೆಬರುತ್ತಾರೆ. ಅದೃಷ್ಟವಶಾತ್ ಹಾಗೆ ಬಂದ ಇಬ್ಬರಲ್ಲಿ ನಾನೂ ಒಬ್ಬನಾಗಿದ್ದೆ.

ಕಟ್ಟಕಡೆಯಲ್ಲಿ ನಾನೊಬ್ಬನೇ ವಿಂಬಲ್ಡನ್ ಸ್ಪರ್ಧೆಯಲ್ಲಿ ವಿಜಯಿಯಾದೆ. ಬಹುಮಾನದ ಬೆಳ್ಳಿಯ ಕರಂಡಕವನ್ನು ಕೈಯಲ್ಲಿ ಹಿಡಿದು ನಿಂತಾಗ ಆನಂದದ ತುತ್ತತುದಿಯಲ್ಲಿ ಇದ್ದಾಗ ನಾನು ಆಕಾಶದತ್ತ ನೋಡಿ, ಓದೇವರೇ, ಹೀಗೇಕೆ ಮಾಡಿದೆ? ಎಂದು ಕೇಳಲಿಲ್ಲ! ಹೀಗಿರುವಾಗ ಆ ಪ್ರಶ್ನೆಯನ್ನು ಇಂದೇಕೆ ಕೇಳಲಿ?"

ಆರ್ಥರ್ ಲೌಕಿಕ ಪ್ರಪಂಚದ ಯಶಸ್ಸಿನ ಮೆಟ್ಟಲೇರಿದ್ದರೂ ಆತನಿಗೆ ಅಲೌಕಿಕವಾದ ಮಾನಸಿಕ ಸಮತೋಲನದ ಬೋಧೆಯಾಗಿತ್ತು. ಹಾಗಾಗಿ ಅಂತಹ ಕಷ್ಟದಲ್ಲೂ ಆತ ನಿರ್ಲಿಪ್ತನಾಗಿ ಜೀವನ ನಡೆಸುತ್ತಿದ್ದ.

ಆತ ಎದುರಿಸಿದ ಕಷ್ಟಗಳ ಮುಂದೆ ನಮ್ಮ ಕಷ್ಟಗಳೆಲ್ಲ ಯಾವ ಲೆಕ್ಕ. ನಾವು ಮಾಡಬೇಕಾದುದು ಇಷ್ಟೇ, "ಬಂದದ್ದು ಬರಲಿ ಗೋವಿಂದನ ದಯೆಯೊಂದಿರಲಿ" ಎಂದು ಮುನ್ನಡೆಯುತ್ತಾ ಇರುವುದು. ದೇವರು ನಮ್ಮ ಕಷ್ಟ ಪರಿಹರಿಸುತ್ತಾನೆಂದರೆ ನಮಗೆ ದೇವರ ಶಕ್ತಿಯ ಮೇಲೆ ನಂಬಿಕೆ ಇದೆ ಎಂದರ್ಥ. ಪರಿಹರಿಸಲಿಲ್ಲ ಎಂದರೆ ನಮ್ಮ ಶಕ್ತಿಯ ಮೇಲೆ ದೇವರಿಗೆ ನಂಬಿಕೆ ಇದೆ ಎಂದರ್ಥ ಅಷ್ಟೇ. ಅದನ್ನು ಬಿಟ್ಟು ಸಮಾಜವನ್ನು, ದೇವರನ್ನು ದೂರುತ್ತ ಕೂತರೆ ಏನೂ ಆಗುವುದಿಲ್ಲ. ಅದಕ್ಕೆ ಆಂಗ್ಲ ಕವಿ ಹೇಳಿದ್ದು, "ಜೀವನ ಪೂರ್ತಿ ಕನ್ನಡಿ ಒರೆಸುವುದರಲ್ಲಿ ಕಳೆದೆ, ಧೂಳು ನನ್ನ ಮುಖದ ಮೇಲೆಯೇ ಇತ್ತು."

ಎಷ್ಟು ಅರ್ಥಪೂರ್ಣವಾದ ಮಾತು! ನಾವೆಲ್ಲ ನಮ್ಮ ತಪ್ಪನ್ನು ತಿದ್ದಿಕೊಂಡು ಹೋಗುವುದನ್ನು ರೂಢಿಸಿಕೊಂಡರೆ ಜೀವನವೇ ಸುಂದರವಾಗುತ್ತದೆ. ಕನ್ನಡಿ ಒರೆಸುವ ಕೆಲಸ ನಂತರ ಮಾಡೋಣ. ಮೊದಲು ಮುಖ ಒರೆಸಿಕೊಳ್ಳೋಣ, ಅಲ್ಲವೇ.....?

ನಗುವಿನ ಮಹತ್ವ

– ಪವಿತ್ರ
ದ್ವಿತೀಯ ಬಿ.ಕಾಂ.

'ನಗು' ಎಂಬುದು ಶ್ರೇಷ್ಠವಾದದ್ದು. ನಗುವಿನ ಬಗ್ಗೆ ಹಲವಾರು ಕವಿಗಳು ತಮ್ಮದೇ ಆದ ಅಭಿಪ್ರಾಯಗಳನ್ನು ಹೇಳಿದ್ದಾರೆ. ಅದರಂತೆ,

'ನಗುವುದ ಸಹಜಧರ್ಮ, ನಗಿಸುವುದು ಪರಧರ್ಮ,

ನಗುವ ಕೇಳುತ ನಗುವುದತಿಶಯದ ಧರ್ಮ' ಎಂದು ಡಿ.ವಿ.ಜಿ.ಯವರು ನಗುವಿನ ಮಹತ್ವದ ಕುರಿತಾಗಿ ಹೇಳಿರುವ ಮಾತಾಗಿದೆ. ಯಾರೇ ಆಗಲಿ ನಗುವುದಕ್ಕೆ ಒಂದು ಕಾರಣ ಬೇಕು. ನಗಲು ಒಂದು ಸಂಸ್ಕಾರ ಕೂಡ ಬೇಕು. ನಾವು ನಗುವಾಗ ಬೇರೆಯವರಿಗೆ ತೊಂದರೆಯಾಗದ ರೀತಿಯಲ್ಲಿ ನಗಬೇಕು. ನಾವು ನಗುವಾಗ ಬದಲಾಗುವ ಮುಖದ ಭಾವನೆಯಿಂದ ಬೇರೆಯವರು ನಗುವಂತಿರಬೇಕು.

ನಗುವುದು ದೇವರು ಕೊಟ್ಟ ಒಂದು ವರವಾಗಿದೆ. ಆ ವರವನ್ನೇ ನಾವು ಉಪಯೋಗಿಸಿಕೊಳ್ಳಬೇಕು. ನಮ್ಮ ಮನದಾಳದಿಂದ ಬರುವ ನಗುವಿನಿಂದ ನಮ್ಮ ದೇಶ ಹಾಗೂ ಮಾನಸಿಕ ಬದಲಾವಣೆಗಳು ಆಗುತ್ತವೆ. ನಾವು ಬೇರೆಯವರಿಗೆ ತೊಂದರೆಯಾದಾಗ ನಗಬಾರದು. ಅದು ನಗುವಿನ ಲಕ್ಷಣವಲ್ಲ. ನಾವು ಯಾವ ಉದ್ದೇಶಕ್ಕೆ ನಗುತ್ತೇವೆ ಎನ್ನುವುದು ಬಹಳ ಮುಖ್ಯವಾಗಿದೆ.

ಆದ್ದರಿಂದ ಸರ್ವಜ್ಞ ಕವಿ 'ನಕ್ಕು ನಗಿಸುವ ನಗೆ ಲೇಸು' ಎಂದು ಹೇಳಿದ್ದಾರೆ. ಜೀವನದಲ್ಲಿ ನಗುವುದು ತನ್ನದೇ ಆಸ ಮಹತ್ವವಾದ ಪಾತ್ರವನ್ನು ವಹಿಸುತ್ತದೆ. ನಾವು ಕೊಡುವ ಒಂದು ಮುಗುಳುನಗೆಯಿಂದ ಬೇರೆಯವರಿಗೆ ಹಾಗೂ ನಮಗೂ ಕೂಡ ಸಂತೋಷವಾಗುತ್ತದೆಂದರೆ ನಾವು ಯಾಕೆ ನಗಬಾರದು?

ಆದ್ದರಿಂದಲೇ ಪ್ರಸಿದ್ಧ ಕವಿ ಬೀಚಿಯವರು, 'ನಗಿಸುವನು ತಿಮ್ಮಪ್ಪ, ನಗುವನು ನನ್ನಪ್ಪ, ನಕ್ಕು ನಗಿಸುವವನು ಎಲ್ಲರಪ್ಪ' ಎಂದು ಹೇಳಿದ್ದಾರೆ.

ಕಿಮತ್ರ ಚಿತ್ರಂ ಯತ್ಸಂತಃ ಪರಾನುಗ್ರಹತತ್ಪರಾಃ ।
ನಹಿ ಸ್ವದೇಹಶೈತ್ಯಾಯ ಜಾಯಂತೇ ಚಂದನದ್ರುಮಾಃ ॥

ಒಳ್ಳೆಯ ವ್ಯಕ್ತಿಗಳು ಇನ್ನೊಬ್ಬರನ್ನು ಮೇಲೆತ್ತುವುದಕ್ಕಾಗಿಯೇ ಇರುತ್ತಾರೆ. ಅದರಲ್ಲಿ ಏನಾಶ್ಚರ್ಯ? ಗಂಧದ ಮರಗಳು ತಮ್ಮ ಶರೀರವನ್ನು ತಣ್ಣಗೆ ಮಾದಿಕೊಳ್ಳಲು ಹುಟ್ಟಿಕೊಳ್ಳುವುದಲ್ಲ ತಾನೇ?

ಸಂತ ಏವ ಸತಾಂ ನಿತ್ಯಮಾಪದುದ್ಧರಣಕ್ಷಮಾಃ ।
ಗಜಾನಾಂ ಪಂಕಮಗ್ನಾನಾಂ ಗಜಾ ಏವ ಧುರಂಧರಾಃ ॥

ಯಾವಾಗಲೂ ಒಳ್ಳೆಯವರೇ ಒಳ್ಳೆಯವರನ್ನು ಮೇಲೆತ್ತುವುದರಲ್ಲಿ ಸಮರ್ಥರಾಗುತ್ತಾರೆ. ಆನೆ ಕೆಸರಿನಲ್ಲಿ ಮುಳುಗುತ್ತಿದ್ದರೆ ಅದನ್ನು ಮೇಲೆತ್ತಲು ಆನೆಗಳು ಮಾತ್ರ ಸಮರ್ಥಗಳು.

ಯಥಾ ಹ್ಯನುದಕಾ ವಾಪೀ ಯಥಾ ಕಾನನಮತೃಣಮ್ ।
ಅಗೋಪಾಲಾ ಯಥಾ ಗಾವಸ್ತಥಾ ರಾಷ್ಟ್ರಮರಾಜಕಮ್ ॥

ನೀರಿಲ್ಲದಿರುವ ಕೋಳ, ಹುಲ್ಲುಗಳಿಲ್ಲದಿರುವ ಕಾಡು, ಗೋಪಾಲಕನಿಲ್ಲದಿರುವ ಹಸುಗಳು ಹೇಗೆ ಮಾನ್ಯತೆಯನ್ನು ಹೊಂದುವುದಿಲ್ಲವೋ ಹಾಗೆ ರಾಜನಿಲ್ಲದಿರುವ ರಾಷ್ಟ್ರವೂ ಕೂಡಾ ಮಾನ್ಯತೆಯನ್ನು ಹೊಂದುವುದಿಲ್ಲ.

ಎಂಥವರ ಮಿತ್ರತ್ವ ಮಾಡಬೇಕು?

– ನಮಿತಾ
ಪ್ರಥಮ ಬಿ.ಕಾಂ. 'ಬಿ1'

ಅವಲಿಪ್ತೇಷು ಮೂರ್ಖೇಷು ರೌದ್ರ ಸಾಹಿಸಿಕೇಷು ಚ ।
ತಥೈವಾಪೇತ ಧರ್ಮೇಷುನ ಮೈತ್ರೀ ಮಾ ಚರೇತ ಬುಧಃ ॥

ದುರಹಂಕಾರಿಗಳು, ಮೂರ್ಖರು, ಕ್ರೂರ ಸ್ವಭಾವದವರು, ಗೂಂಡಾ ವರ್ತನೆಯವರು, ನೀತಿಭ್ರಷ್ಟರು – ಇಂಥವರ ಮಿತ್ರತ್ವವನ್ನು ಮಾಡಬಾರದು ಎಂದು ವಿದುರ ನೀತಿಯೇ ಹೇಳುತ್ತದೆ.

ಶುದ್ಧ ಅಪರಂಜಿ ಬಂಗಾರದಂಥವರ ಮಿತ್ರತ್ವವನ್ನು ಮಾಡಬೇಕು ಎಂದು ಹೇಳುವ ಈ ಉಪದೇಶವೇನೋ ಸರಿಯೇ, ಆದರೆ ಇಂದಿನ ಜೀವನದಲ್ಲಿ ಆಫೀಸುಗಳಲ್ಲಿ, ಸಂಘಸಂಸ್ಥೆಗಳಲ್ಲಿ, ಸಾಮಾಜಿಕ ಕಾರ್ಯಗಳಲ್ಲಿ, ಅಕ್ಕಪಕ್ಕದ ಮನೆಗಳಲ್ಲಿ ಕೂಡ ನಮಗೆ ಬೇಕಾದಂಥ ಮಿತ್ರರನ್ನು ಆರಿಸಿಕೊಳ್ಳು ಸ್ವಾತಂತ್ರ್ಯವು ಇರುವುದಿಲ್ಲ. ನಮ್ಮಿಂದ ಪ್ರಯೋಜನವಾಗಬೇಕಾದರೆ ಅವರೇ ಅಟ್ಟಿಸಿಕೊಂಡು ಬರುವರು. ನಮ್ಮಿಂದ ಪ್ರಯೋಜನವಿಲ್ಲದಿದ್ದರೆ ಒಳ್ಳೆಯವರೂ ಕೈಬಿಡುವರು. ಇಂಥವರನ್ನೇ ಮಿತ್ರರನ್ನಾಗಿ ಆಯ್ದುಕೊಳ್ಳಬೇಕೆಂಬ ಉಪದೇಶ ಸುಭಾಷಿತಗಳಲ್ಲಿ ಮಾತ್ರ ಉಳಿಯುವುದು.

ಸಹವಾಸವೆಂಬುದು ತುಂಬಾ ಮುಖ್ಯ. ನಾವು ಯಾರೊಂದಿಗೆ ಸ್ನೇಹ ಬೆಳೆಸುತ್ತೇವೆನ್ನುವುದರ ಮೇಲೆ ನಮ್ಮ ವ್ಯಕ್ತಿತ್ವದ ಬೆಳವಣಿಗೆ ಅವಲಂಬಿಸಿರುತ್ತದೆ. ಸ್ನೇಹ ಎಂಬ ಎರಡಕ್ಷರದ ಪದ ನಮ್ಮ ವ್ಯಕ್ತಿತ್ವವನ್ನೇ ಬದಲಿಸುವ ಶಕ್ತಿ ಮಿತ್ರತ್ವಕ್ಕೆ ಇದೆ. ಹಾಗಂತ ನಾವು ಕೆಟ್ಟವರನ್ನು ದೂರಬೇಡಿ, ಒಳ್ಳೆಯವರ ಸ್ನೇಹ ಮಾತ್ರ ಮಾಡಿ ಎಂದು ಹೇಳುವುದಿಲ್ಲ. ಕೆಟ್ಟವರು ಕೆಟ್ಟವರಾಗಿಯೇ ಇರುವುದಿಲ್ಲ. ಹಾಗಾಗಿ ಮಿತ್ರತ್ವ ಮಾಡಿಕೊಳ್ಳುವಾಗ ಒಳ್ಳೆಯವರು ಮತ್ತು ಕೆಟ್ಟವರು ಎಂಬ ಭೇದ ಮಾಡದೆ, ಒಳ್ಳೆಯವರ ಸ್ನೇಹದಿಂದ ಒಳ್ಳೆ ಗುಣ ಕಲಿಯಬೇಕು ಹಾಗೆಯೇ ದುರಹಂಕಾರಿಗಳು, ಕ್ರೂರ ಸ್ವಭಾವದವರನ್ನು ಬದಲಾಯಿಸುವ ಪ್ರಯತ್ನ ಮಾಡಬೇಕು. ಇಂಥವರನ್ನೇ ಮಿತ್ರರನ್ನಾಗಿ ಆಯ್ದುಕೊಳ್ಳಬೇಕೆಂಬ ಒತ್ತಾಯವಿಲ್ಲ. ನಮ್ಮ ಇಚ್ಛೆಯಂತೆ ಮಿತ್ರತ್ವವನ್ನು ಆರಿಸಬೇಕು. ಆದರೆ ನಿಜವಾದ ಮಿತ್ರತ್ವ ಅಪರಂಜಿ ಇದ್ದಂತೆ. ಹಾಗಾಗಿ ಸ್ನೇಹದ ಬೆಲೆ ತಿಳಿದವರಿಗೆ ಅವರ ಗೆಳೆತನವು ಶಾಶ್ವತವಾಗಿರುವುದು.

ತಾಯಿಯ ಮಮತೆಯ ಮಡಿಲು

– ಹರ್ಷಿತಾ ಆಚಾರ್ಯ
ಪ್ರಥಮ ಬಿ.ಎಸ್ಸಿ.

ಅಮ್ಮಾ ಎಂದಾಕ್ಷಣ ಮೈಯಲ್ಲಿ ರೋಮಾಂಚನ ಉಂಟಾಗುತ್ತದೆ. ಏಕೆಂದರೆ ಅಮ್ಮಾ ಎಂಬ ಶಬ್ದವೇ ಅಂತದ್ದು. ಯಾರೇ ಆಗಲಿ ಅಮ್ಮಾ ಎಂದಾಕ್ಷಣ ಅವರಿಗೆ ರೋಮಂಚನವಾಗುವುದು ಸಹಜ. ಮಗು ಜನಿಸಿದಾಗ, ಮೊದಲು ಹೇಳುವ ಮಾತೇ ಅಮ್ಮಾ. ಆ ಮಗು ದೊಡ್ಡದಾಗಿ ಕೊನೆಯವರೆಗೂ ಹೇಳುವ ಮಾತು ಅಮ್ಮ.

ಒಂದು ತಾಯಿ ತನ್ನ ಮಗುವನ್ನು ಒಂಭತ್ತು ತಿಂಗಳು ಗರ್ಭದಲ್ಲಿ ಧರಿಸಿ, ಆ ಮಗುವಿಗೆ ಅನ್ನವನ್ನು ನೀಡುತ್ತಾಳೆ. ಜನ್ಮ ನೀಡಿದ ಕ್ಷಣದಿಂದ ಆ ಮಗುವೇ ತನ್ನ ಸರ್ವಸ್ವವೆಂದು ಬದುಕುತ್ತಾಳೆ. ಆ ತಾಯಿಗೆ ತನ್ನ ಮಗುವೇ ಪ್ರಪಂಚ. ಅದು ಸವಲ್ಪ ಅತ್ತರೂ ಆಕೆಗೆ ಅದನ್ನು ಸಹಿಸುವ ಶಕ್ತಿ ಇಲ್ಲ. ಆಕೆ ಮಗುವಿಗಾಗಿ ತನ್ನ ಸರ್ವಸ್ವವನ್ನೇ ಮುಡಿಪಾಗಿಡುತ್ತಾಳೆ.

ಆ ಮಗುವಿನ ಜೀವನವೇ ತನ್ನ ಜೀವನವೆಂದು ಭಾವಿಸಿ, ತನ್ನ ಖುಷಿಯನ್ನು ತ್ಯಾಗ ಮಾಡುತ್ತಾಳೆ. ತನ್ನ ಮಗುವಿನ ಸಣ್ಣ–ಸಣ್ಣ ಖುಷಿಯನ್ನೂ ಆಕೆ ಅದ್ದೂರಿಯಾಗಿ ಸಂಭ್ರಮಿಸುತ್ತಾಳೆ. ತನ್ನ ಮಗುವಿಗೆ ಸ್ವಲ್ಪ ನೋವಾದರೂ ಆಕೆ ದಿನವಿಡೀ ಅದರ ಬಗ್ಗೆಯೇ ಕೊರಗುತ್ತಾಳೆ. ತನ್ನ ಮಗುವಿನ ಜೀವನವನ್ನೂ ರೂಪಿಸುವುದೇ ಆಕೆಯ ಜೀವನದ ಗುರಿಯಾಗಿರುತ್ತದೆ. ಅದಕ್ಕೋಸ್ಕರ ಆಕೆ ಎಷ್ಟು ಶ್ರಮ ಬೇಕಾದರೂ ಪಡಲು ಸಿದ್ಧಳಿರುತ್ತಾಳೆ. ತನ್ನ ಮಗು ಶಾಲೆಗೆ ಸೇರಿದ ಕೂಡಲೇ ಆಕೆಗೆ ಮಗುವನ್ನು ಶಾಲೆಗೆ ಕಳುಹಿಸುವುದೊಂದೇ ಖುಷಿ. ಆ ಮಗುವಿನೊಂದಿಗೆ ಆಕೆಯು ಎಂದೂ ಮಗುವಾಗಿ ಶಾಲೆಗೆ ಹೊರಡುತ್ತಾಳೆ. ಮಗುವನ್ನು ಶಾಲೆಗೆ ಬಿಟ್ಟು ಬಂದ ಮೇಲೆ, ಮಗು ಯಾವಾಗ ಬರುತ್ತೋ ಅಂತ ಕುಳಿತು, ಅದಕ್ಕೆ ಇಇಷ್ಟವಾದ ತಿಂಡಿ ತಯಾರು ಮಾಡಿ ಕಾಯುತ್ತಾಳೆ. ಹೋಮ್ ವರ್ಕ್ ಮಾಡಿಸುತ್ತಾಳೆ. ಹೀಗೆ ತನ್ನ ಜೀವನವನ್ನು ಮಗುವಿನ ಜೊತೆಯಲ್ಲಿ ಕಳೆಯುತ್ತಾಳೆ.

ಮಗು ದೊಡ್ಡದಾಗುತ್ತೆ ಅಂದರೆ ಸುಮಾರು 15–16 ವರ್ಷಕ್ಕೆ ಬಂದಾಗ, ಅದು ತಾಯಿಯ ತಿಂಡಿಗಾಗಿ ಕಾಯುವುದಿಲ್ಲ. ತಾಯಿಯ ಬಳಿ ಬಂದು ಹೋಮ್ ವರ್ಕ್ ಮಾಡಿಸೆಂದು ಹೇಳುವುದಿಲ್ಲ. ಆದರೆ ತಾಯಿ ಮಾತ್ರ ಅದೇ ರೀತಿಯಲ್ಲಿ ಕಾಯುತ್ತಿರುತ್ತಾಳೆ. ಯಾವಾಗ ತನ್ನ ಮಗ/ಮಗಳು ಬರುತ್ತಾರೋ ಅಂತ. ಆದರೆ ಆಗ ಮಕ್ಕಳು ತಾಯಿಗೆ ಸರಿಯಾಗಿ ಉತ್ತರಿಸುವುದಿಲ್ಲ. 'ಅಮ್ಮ ನನಗೆ ತುಂಬಾ ಕೆಲಸ ಇದೆ. ನನಗೆ ನಿನ್ನ ತಿಂಡಿ ತಿನ್ನೋ ಅಷ್ಟು ಸಮಯವಿಲ್ಲ!' ಆದೆ ತಾಯಿ ಅದೇ ತಿಂಡಿಯನ್ನು

ತಿಂದುಕೊಂಡು, ಮಕ್ಕಳ ಹಿಂದೇನೇ ಸುತ್ತಾಡುತ್ತಾಳೆ, ನಮಗೆ ತಿನ್ನಿಸುತ್ತಾಳೆ.

ಅದೇ ತಾಯಿಯ ಪ್ರೀತಿ. ಆ ಪ್ರೀತಿಯನ್ನು ಎಲ್ಲಾ ಮಕ್ಕಳೂ ಅರ್ಥಮಾಡಿಕೊಳ್ಳಬೇಕು. ಎಷ್ಟೇ ಕೆಲಸ ಇದ್ರೂ, ನೀವು ನಿಮ್ಮ ತಾಯಿಗಾಗಿ ಕನಿಷ್ಠ 10 ನಿಮಿಷ ಕೊಟ್ಟರೆ ಅವಳು ಬೆಳಗ್ಗೆಯಿಂದ ನಿಮಗಾಗಿ ಕಾದದಕ್ಕೆ ಅವಳಿಗೂ ಒಂಥರ ಖುಷಿ ಸಿಗುತ್ತದೆ. ನಂತರ ಮಕ್ಕಳು ದೊಡ್ಡವರಾದ ಮೇಲೆ ಅವರಿಗೆ ಕೆಲಸ ಸಿಗುತ್ತದೆ. ಮದುವೆಯೂ ಆಗುತ್ತದೆ. ಆಗಿನ ಹೊಸ ಬದುಕಿನಲ್ಲಿ ಎಲ್ಲಾ ಮಕ್ಕಳು ಹೆಚ್ಚಿನವರು ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಹಾಕುತ್ತಾರೆ. ಯಾಕೆ ಅಂತ ಇನ್ನೂ ಸರಿಯಾದ ಉತ್ತರ ಸಿಕ್ಕಿಲ್ಲ.

ಕೆಲವರಿಗೆ ಅವರನ್ನು ನೋಡಿಕೊಳ್ಳುವಷ್ಟು ಸಮಯ ಇಲ್ಲ. ಇನ್ನು ಕೆಲವರಿಗೆ ಹಿರಿಯರು ನಮ್ಮ ಜೊತೆಗೆ ಇದ್ರೆ ನಮ್ಮ ಖುಷಿಗೇನೂ ಅಡಚಣೆ ಅಂತಾ ಅವರನ್ನು ದೂರ ತಳ್ಳುತ್ತಾರೆ. ಆದರೆ ಒಂದು ಬಾರಿ ಯೋಚಿಸಿ, ಇದೇ ರೀತಿ ನೀವು ಹುಟ್ಟಿದಾಗಲೂ ನಿಮ್ಮ ತಂದೆ–ತಾಯಿ ನನಗೆ ಮಗುವನ್ನು ನೋಡಿಕೊಳ್ಳುವಷ್ಟು ಸಮಯ ಇಲ್ಲ, ಈ ಮಗು ಏನಪ್ಪಾ ಇಡೀ ದಿನ ಅಳ್ತಾ ಇರುತ್ತೆ ಅಂತ ನಮ್ಮನ್ನು ಅನಾಥಾಶ್ರಮಕ್ಕೆ ಹಾಕಿದ್ರೆ, ಇವತ್ತು ನಿಮ್ಮ ಪರಿಸ್ಥಿತಿ ಕೂಡ ಅನಾಥಾಶ್ರಮದಲ್ಲಿ ತಂದೆ–ತಾಯಿಗಳಿಲ್ಲದ ಮಕ್ಕಳಂತೆ ಬದುಕಬೇಕಾಗಿತ್ತು.

ದಯಮಾಡಿ ಯಾವ ಮಕ್ಕಳೂ ಕೂಡ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಹಾಕಬೇಡಿ. ವೃದ್ಧರಾದಾಗ ವೃದ್ಧರ ಮನಸ್ಸು ಮಕ್ಕಳಂತೆ ತನ್ನವರಿಗಾಗಿ ಹಾತೊರೆಯುತ್ತದೆ. ಆ ಮನಸ್ಸನ್ನು ಮಕ್ಕಳಂತೆ ಪ್ರೀತಿಸಿ. ಎಲ್ಲರೂ ಒಂದಲ್ಲ ಒಂದು ದಿನ ನಿಮ್ಮ ತಂದೆ–ತಾಯಿಗೆ ಎದುರು ಮಾತನಾಡಬಹುದು. ಆದರೆ ಅದರಿಂದ ಅವರಿಗೆ ನೋವಾಗಬಹುದು. ಇಂದೇ ಹೋಗಿ ನೀವು ಅವರಲ್ಲಿ, **"ನನ್ನನ್ನು ಕ್ಷಮಿಸಿ"** ಎಂದು ಕೇಳಿ. ಅವರು ಅದನ್ನು ನಿಮ್ಮಿಂದ ನಿರೀಕ್ಷಿಸದೇ ಇದ್ದರೂ ನೀವು ಅದನ್ನು ಹೇಳಿ. ಅದರಿಂದ ಅವರಿಗೆ ತುಂಬಾ ಸಂತೋಷವಾಗುತ್ತದೆ.

ಅದೇ ರೀತಿ, ನೀವು ಇವತ್ತೇ ನಿಮ್ಮ ತಂದೆ–ತಾಯಿಗೆ ಬಂದು ಧನ್ಯವಾದವನ್ನು ಹೇಳಿ, ಏಕೆಂದರೆ ನೀವು ತಿಳಿದೋ ತಿಳಿಯದೆಯೋ, ಅವರಿಂದ ತುಂಬಾ ಸಹಾಯ ಪಡೆದಿರುತ್ತೀರಾ. ಅದಕ್ಕೋಸ್ಕರ ಒಂದು **"ಧನ್ಯವಾದ"** ಹೇಳಿ. ಅವರಿಗೆ ತುಂಬಾ ಸಂತೋಷವಗುತ್ತದೆ. ತಂದೆ–ತಾಯಿಯನ್ನು ಯಾವತ್ತಿಗೂ ಪ್ರೀತಿಸಿ. ಅವರಿಗೆ ಯಾವತ್ತೂ ನೋವನ್ನು ಕೊಡಬೇಡಿ. ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಅವರನ್ನು ಖುಷಿಯಾಗಿಡಲು ಪ್ರಯತ್ನಿಸಿ.

ಸಾಧ್ಯವೆಂದರೆ ಎಲ್ಲವೂ ಸಾಧ್ಯ

– ಅನುಷಾ ಎ. ಶೆಟ್ಟಿ
ಪ್ರಥಮ ಬಿ.ಕಾಂ. 'ಬಿ1'

ಮಾದಪ್ಪ ಬಡ ಶ್ರಮಿಕ. ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಹಗಲು ರಾತ್ರಿ ಕಷ್ಟಪಟ್ಟು ದುಡಿಯುವ ಪ್ರಾಮಾಣಿಕ ವ್ಯಕ್ತಿ. ಅವನ ಕನಸು ಒಂದೇ. ತನ್ನ ಮಗ ವಿದ್ಯಾವಂತನಾಗಿ ದೊಡ್ಡ ಕೆಲಸಕ್ಕೆ ಸೇರಬೇಕೆಂಬುದು. ಅಲ್ಲಿಯ ತನಕ ಮಾದಪ್ಪನಿಗೆ ಅವನ ಕುರಿತು ಆಲೋಚನೆಯೇ ಇಲ್ಲ. ಅವನ ಚಿತ್ತದ ತುಂಬೆಲ್ಲಾ ಅವನ ಮಗನದ್ದೇ ಚಿಂತನೆ. ಮುಂದೆ ಮಗ ತಂದೆಯ ಆಸೆಯಂತೆ ವಿದ್ಯಾವಂತನಾಗಿ ಉದ್ಯೋಗಸ್ಥನೂ ಆದ. ಹಣದ ಹಿಂದೆ ಹೊರಟ ಮಗನಿಗೆ ಅಪ್ಪನನ್ನು ವಿಚಾರಿಸುವಷ್ಟು ಸಮಯವೇ ಇಲ್ಲ.

ಗೌರಮ್ಮ ಸಂಸಾರದ ಭಾರ ಹೊತ್ತ ಬಡ ವಿಧವೆ. ಹತ್ತಾರು ಮನೆಕೆಲಸ ಮಾಡಿ ಆ ಸಂಪಾದನೆಯಲ್ಲಿ ಮನೆಖರ್ಚು ನೋಡಿಕೊಂಡು ಮಗಳನ್ನು ಓದಿಸುತ್ತಾಳೆ. ಆಕೆಗೆ ಆಕೆಯ ಕುರಿತು ಯಾವುದೇ ಆಸೆ ಆಕಾಂಕ್ಷೆಗಳಿಲ್ಲ. ಅವಳ ಗುರಿ, ಅವಳ ಮಗಳು ಎಂದೂ ಕಷ್ಟಪಡಬಾರದು. ಅವಳೆಣಿಕೆಯಂತೆ ಮಗಳೂ ಕೂಡ ಉದ್ಯೋಗಸ್ಥೆಯಾದಳು. ಆದರೆ ಅವಳು ತನ್ನ ಕೆರಿಯರ್ ಬಿಲ್ಡ್ ಮಾಡುವ ಆಲೋಚನೆಯಲ್ಲಿ ತನ್ನ ಅಮ್ಮನನ್ನೇ ಮರೆತಿದ್ದಾಳೆ.

ಮೇಲಿನ ಮೇಲಿನ ಎರಡೂ ಉದಾಹರಣೆಗಳಲ್ಲಿ ಅಪ್ಪ–ಅಮ್ಮ ತಮ್ಮ ಮಕ್ಕಳಿಗಾಗಿ ತಮ್ಮ ಸುಖವನ್ನೇ ಮರೆತಿರುತ್ತಾರೆ. ಪ್ರಪಂಚದ ಬೇರೆಲ್ಲ ಸಂಬಂಧಗಳಿಗಿಂತಲೂ ಉತ್ಕೃಷ್ಟವಾದ ಸಂಬಂಧವೆಂದರೆ ಅದು. ಅಪ್ಪ–ಅಮ್ಮ ಎನ್ನುವ ಅನುಬಂಧ. ಈ ಬಾಂಧವ್ಯದಲ್ಲಿ ಅಡಗಿದೆ ಅದೇನೋ ಅದ್ಭುತ ಶಕ್ತಿ. ನಮ್ಮನ್ನು ಈ ಜಗತ್ತಿಗೆ ಕರೆತರುವವಳು ಅಮ್ಮ. ಅಮ್ಮನ ಆ ತಾಯ್ತನಕ್ಕೆ ಕಾರಣೀಕರ್ತ ಅಪ್ಪ. ಜೀವನದ ಜಂಜಾಟದಲ್ಲಿ ಅದೇನೇ ತಾಪತ್ರಯಗಳಿದ್ದರೂ, ಅದೆಲ್ಲವನ್ನ ಸಹಿಸಿ ಸಂಸಾರದ ತಕ್ಕಡಿಯನ್ನು ಸರಿದೂಗಿಸುವ ವ್ಯಕ್ತಿಗಳೆಂದರೆ ಅಪ್ಪ–ಅಮ್ಮ. ಪ್ರತಿಯೋರ್ವರ ಜೀವನದಲ್ಲಿಯೂ ಇವರ ಪಾತ್ರ ಮಹೋನ್ನತ. ಮಕ್ಕಳಿಗೊಂದು ಉಜ್ವಲ ಭವಿಷ್ಯ ರೂಪಿಸುವ ತಂದೆ ತಾಮಯಿಯರ ಆ ಪರಿಶ್ರಮಕ್ಕೆ ಬೆಲೆ ಕಟ್ಟಲಸಾಧ್ಯ. ತಮ್ಮ ಮಕ್ಕಳಿಗಾಗಿ ತಮ್ಮ ಸುಖ ಸಂತೋಷವನ್ನೇ ಮರೆಯುವ ತ್ಯಾಗಜೀವಿಗಳೆಂದರೆ ಅದು ತಂದೆ–ತಾಯಿ. ತಮ್ಮೆಲ್ಲ ಆಸೆ ಆಕಾಂಕ್ಷೆಗಳನ್ನು ತಮ್ಮಲ್ಲೇ ಇದುಮಿಟ್ಟು, ತಮ್ಮ ಮಕ್ಕಳೇ ತಮ್ಮ ಸರ್ವಸ್ವವೆಂದು, ಪ್ರತಿಕ್ಷಣ ಮಕ್ಕಳ ಕುರಿತು ಚಿಂತಿಸಿ, ಅವರ ಆಗುಹೋಗುಗಳನ್ನು ಪೂರೈಸುತ್ತಿದ್ದ ತಂದೆ ತಾಯಿ, ಇಂದಿನ ಮಾಡರ್ನ್ ಮಕ್ಕಳಿಗೆ ಹೊರೆಯಾಗುತ್ತಿದ್ದಾರೆ. ಜನ ಇಂದು ತುಂಬಾ ಬ್ಯುಸಿಯಾಗಿದ್ದಾರೆ. ಅಪ್ಪ–ಅಮ್ಮನ ಬಳಿ ಮನಸ್ಸು ಬಿಚ್ಚಿ

ಮಾತಾಡುವಷ್ಟು ವ್ಯವಧಾನ ಇಂದಿನ ಮಕ್ಕಳಲ್ಲಿ ಮಾಯವಾಗುತ್ತಿದೆ. ಕಂಡ ಕಂಡಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣ ಯಾರೋ ಅಲ್ಲ. ನಮ್ಮಲ್ಲಿ ಆಸೆ, ಆಕಾಂಕ್ಷೆಗಳನ್ನು ಕನಸುಗಳ ಪೂರೈಕೆಗೆ ಅಪ್ಪ ಅಮ್ಮ ಬೇಕು. ಮುಂದೆ ಇಳಿ ವಯಸ್ಸಿನ ತಂದೆ ತಾಯಿ ನಮ್ಮನ್ನು ಅವಲಂಬಿಸಿದರೆ ಅದು ತಪ್ಪಾಗುತ್ತೆ. ಸಂಕುಚಿತ ಬುದ್ಧಿ ಅಂದ್ರೆ ಇದೆ ತಾನೇ?

ದೊಡ್ಡ ದೊಡ್ಡ ಸಭೆ ಸಮಾರಂಭಗಳಲ್ಲಿ ತಂದೆ ತಾಯಿಯರ ಕುರಿತು ಸಾಲು ಸಾಲು ಭಾಷಣ ಮಾಡುತ್ತೇವೆ. "ಮಗ ಹೇಗಿದ್ದೀಯಾ? ಈ ಕಡೆ ಬರಲೇ ಇಲ್ಲ, ನಿನ್ನನ್ನು ಮೊಮ್ಮಗುವನ್ನು ನೋಡಬೇಕು" ಅಂತ ಆ ತಂದೆ ತಾಯಿ ಒಂದು ಕಾಲ್ ಮಾಡಿದ್ರೆ, "ಅಪ್ಪಾ, ಸೋ ಸಾರಿ. ಟೈಮ್ ಸಿಗ್ತಿಲ್ಲ. ಬೇಕಿದ್ದರೆ ಸ್ಕೈಪ್ ಆನ್ ಮಾಡಿ, ಅಲ್ಲೇ ಸಿಗ್ತೀನಿ" ಅಂತ ಹೇಳಿ ಬಿಡ್ತೇವೆ. ಹಿಂದೆ ಅಪ್ಪ ಅಮ್ಮನಿಗೆ ಇದೇ ಮಕ್ಕಳನ್ನು ಸಾಕಿ ಬೆಳೆಸುವಾಗಲೂ ಇದ್ದದ್ದು, ಇಂದಿನಂತೆಯೇ ದಿನಕ್ಕೆ 24 ಗಂಟೆ. ಅವರಿಗೆ ಅಂದು ಸರಿಹೊಂದುತ್ತಿದ್ದ ಆ 24 ಗಂಟೆ, ಇಂದು ನಮಗೇಕೆ ಚಿಕ್ಕದಾಗಿ ಹೋಗುತ್ತಿದೆ? ಬಿಡುವು ಮಾಡಿಕೊಳ್ಳಲು, ಅಪ್ಪ ಅಮ್ಮನನ್ನು ನೋಡಿಕೊಳ್ಳಲು ಬೇಕಾಗಿರುವುದು ಟೈಮ್ ಅಲ್ಲ, ನಮ್ಮ ಮನಸ್ಸು. ಸಾಧ್ಯವಾದರೆ ಮೊದಲು ಅದನ್ನು ದೊಡ್ಡದು ಮಾಡಿಕೊಳ್ಳೋಣ. ಸಾಧ್ಯವೆಂದರೆ ಎಲ್ಲವೂ ಸಾಧ್ಯ. ಅಪ್ಪ ಅಮ್ಮ ಅಗಲಿದ ನಂತರ ದೊಡ್ಡದಾಗಿ ತಿಥಿ ಮಾಡಿ, ನೆಂಟರಿಷ್ಟರಿಗೆ ಊಟ ಹಾಕಿ ಸಾರ್ಥಕ ಪ್ರಜ್ಞೆ ಮೂಡಿಸಿಕೊಳ್ಳುವ ಮುನ್ನ, ಜೀವಂತ ಇರುವಾಗಲೇ ಅಪ್ಪ ಅಮ್ಮನನ್ನು ತೃಪ್ತಿ ಪಡಿಸೋಣ. ಅವರಿಗೆ ಬೇಕಾಗಿರುವುದು ಮಕ್ಕಳ ವಾತ್ಸಲ್ಯ ಭರಿತ ನಾಲ್ಕು ಮಾತು, ಹಿಡಿಯಷ್ಟು ಪ್ರೀತಿ. ಅದನ್ನು ಅವರಿಗೆ ಸರಿಯಾದ ರೀತಿಯಲ್ಲಿ ನೀಡಲು ಪ್ರಯತ್ನಿಸೋಣ. ಹತ್ತು ಹಲವು ದೇವಸ್ಥಾನ ಸುತ್ತಿ ಅಲ್ಲಿರುವ ದೇವರನ್ನು ಒಲಿಸಿಕೊಳ್ಳುವ ಮುನ್ನ, ನಮ್ಮ ಸುತ್ತ ಇರುವ ನಮ್ಮ ಅಪ್ಪ ಅಮ್ಮನಲ್ಲೇ ದೇವರನ್ನು ಕಾಣೋಣ. "ಮಾತೃದೇವೋಭವ, ಪಿತೃದೇವೋಭವ" ಪುಸ್ತಕದಲ್ಲಿನ ಸಾಲುಗಳಿಗಷ್ಟೇ ಮೀಸಲಾಗದಿರಲಿ. ಪ್ರತಿಯೊಬ್ಬನ ಬದುಕು ಅವರ ಅಪ್ಪ ಅಮ್ಮನ ಕೊಡುಗೆ. ಇದನ್ನು ಅರಿತು ಬಾಳೋಣ. ಸಾಧ್ಯವಾದಷ್ಟು ವೃದ್ಧಾಶ್ರಮಗಳ ಸಂಖ್ಯೆಯನ್ನು ಕಡಿಮೆಗೊಳಿಸುವ ಕಿರುಪ್ರಯತ್ನ ಮಾಡೋಣ ಅಲ್ಲವೇ?

ಸ್ನೇಹ ಅನ್ನೋ ಎರಡಕ್ಷರದ ಮುಂದೆ.....

– ಸಹನಾ
ದ್ವಿತೀಯ ಬಿ.ಕಾಂ. 'ಬಿ1'

ಸ್ನೇಹ ಅನ್ನೋ ಎರಡಕ್ಷರದ ಮುಂದೆ ಸಾವಿರಕ್ಕೂ ಮಿಕ್ಕಿದ ಸ್ನೇಹಿತರು ಶಾಲೆಯಲ್ಲಿ, ಹೈಸ್ಕೂಲಿನಲ್ಲಿ, ಕಾಲೇಜಿನಲ್ಲಿ ನೂರಾರು ಜನ ಬಂದು ಹೋದರು.

ಸ್ನೇಹ–ಸ್ನೇಹ! ಏನೀ ಅನುಬಂಧ. ಪ್ರಪಂಚದಲ್ಲಿ ಜೀವಂತವಾಗಿರುವುದರಲ್ಲಿ ಈ ಸ್ನೇಹ ಕೂಡ ಒಂದು. ಸ್ನೇಹದ ಸವಿಯೇ ಬೇರೆ. ಎಂತಹ ಘೋರವಾದ ವಿಷಯವನ್ನಾದರೂ ಕರಗಿಸಬಲ್ಲ ಶಕ್ತಿ ಈ ಸ್ನೇಹಕ್ಕಿದೆ.

ಸ್ನೇಹ ಎಂದರೆ ಕೇವಲ ಗೆಳೆತನ ಎಂದರ್ಥವಲ್ಲ. ಇದಕ್ಕೂ ಮಿಗಿಲಾದ ಒಂದು ಅರ್ಥವಿದೆ. ನಂಬಿಕೆಯನ್ನು ಉಳಿಸಿಕೊಳ್ಳುವ ಒಂದು ಸುದೀರ್ಘವಾದ ಅರ್ಥವಿದೆ. ಸ್ನೇಹದಲ್ಲಿ, ಸಂತೋಷದಲ್ಲಿ ಒಂದಾಗುವ ದುಃಖದಲ್ಲಿ ಪಾಲ್ಗೊಂಡು ಆತ್ಮಸ್ಥೈರ್ಯ ಕಳೆದುಕೊಂಡು ಕೂತಾಗ ಬೆನ್ನುತಟ್ಟಿ 'ನಾನಿದ್ದೀನಿ ಕಣೇ' ಎಂಬ ಬೆಂಬಲದ ಮಾತೇ ನಿಜವಾದ ಸ್ನೇಹವಾಗುತ್ತದೆ. 'ಸ್ನೇಹ ಎನ್ನುವುದು ನಗು ತುಂಬಿದ ಮಗುವಿನಂತಹ ಮುಖ.' ಸ್ನೇಹ ಎನ್ನುವುದು ಹಾಲಿನಂತೆ ಪರಿಶುದ್ಧವಾದುದು. ಪ್ರತಿಯೊಬ್ಬರಿಗೂ ದಿನಕ್ಕೊಬ್ಬ ಹೊಸ ಫ್ರೆಂಡ್ ಸಿಗುತ್ತಾರೆ. ನಮ್ಮ ಮನಸ್ಸನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುವಂತಹ ಅಥವಾ ಒಂಟಿಯಾಗಿರಲು ಬಿಡದೇ ಸದಾ ಪಕ್ಕದಲ್ಲೇ ಕುಳಿತು ನಕ್ಕು ನಗಿಸುವಂತಹ ಫ್ರಂಡ್ ಇದ್ರೆ ಎಷ್ಟು ಚೆನ್ನಾಗಿರುತ್ತದೆ? ಪರಿಚಯವಿಲ್ಲದ ಯಾರೋ ಒಬ್ಬರಿಗೆ ನಾವು ಫ್ರೆಂಡ್ ಆಗಿ ಬಿಡುತ್ತೇವೆ. ಗೊತ್ತಿಲ್ಲದೆ ಬಂದ ಮೊಬೈಲ್ ಫೋನ್ ಮೆಸೇಜಿನಿಂದ 'ಅವಳೊಬ್ಬ' ಬೆಸ್ಟ್ ಫ್ರೆಂಡ್ ಆಗ್ತಾಳೆ.

ಕಣ್ಣುಗಳು ಒಂದೇ ಸಮನೆ ಹುಡುಕುತ್ತವೆ ಬೆಸ್ಟ್ ಫ್ರೆಂಡ್‌ನ ಆಗಮನಕ್ಕಾಗಿ...ಖುಷಿ ಹಂಚಿಕೊಳ್ಳಲು, ನೋವು ಹಂಚಿಕೊಳ್ಳಲು, ಮನಸಾರೆ ಕಷ್ಟ, ಸುಖಗಳನ್ನು ಆಂತರಿಕ ಭಾವನೆಗಳನ್ನು ತಿಳಿಸಲು ಒಬ್ಬ ಬೆಸ್ಟ್ ಫ್ರೆಂಡ್ ಬೇಕೇ ಬೇಕು. ಕಾಲೆಳೆದು ಬದುಕುವ ಈ ಜಗತ್ತಿನಲ್ಲಿ ಸ್ನೇಹಕ್ಕೆ ಬೆಲೆಯಿಲ್ಲ ಅನ್ನುವಹಾಗಿಲ್ಲ. ಸ್ನೇಹಕ್ಕಾಗಿ ಪ್ರಾಣ ನೀಡಿದಂತಹ ಘಟನೆಗಳ ಬಗ್ಗೆ ಕೇಳಿರುತ್ತೇವೆ. ಸ್ನೇಹಿತರಾಗಿ ಸ್ನೇಹಿತರಿಗೋಸ್ಕರ 'ಫ್ರೆಂಡ್‌ಶಿಪ್ ಡೇ' ಅನ್ನುವ ದಿನವನ್ನು ಆಚರಿಸುತ್ತೇವೆ. ಸ್ನೇಹದಲ್ಲಿ ಮಾತಾಡೋ ಮಾತೇ ಮಧುರವಾದ ಸಂಗೀತವಾಗಿರುತ್ತದೆ. "ಸ್ನೇಹ ಅನ್ನೋದು ಜೀವನದ ಅಮೂಲ್ಯವಾದ ರತ್ನ. ಸ್ನೇಹವಿಲ್ಲದೆ ಜೀವನ ಹಕ್ಕಿಯಿಲ್ಲದ ಗೂಡಿನ ತರಹ."

ಅಮ್ಮ

– ದಿವ್ಯಾ ಎಚ್. ಡಿ.
ದ್ವಿತೀಯ ಬಿ.ಕಾಂ. 'ಬಿ1'

ಪುಟ್ಟ ಮಗು ತನ್ನ ತಾಯಿಯ ಮಡಿಲಲ್ಲಿ ಮಲಗಿ ತಾಯಿ ಎದೆಹಾಲನ್ನು ಸವಿಯುವ ಆನಂದದಿಂದ ತಾಯಿಯ ಉದರಕ್ಕೆ ತನ್ನ ಪುಟ್ಟ ಕಾಲುಗಳಿಂದ ಒದೆಯುತ್ತದೆ. ಇತ್ತ ತಾಯಿ ಸಾರ್ಥಕತೆಯ ಮನೋಭಾವದಿಂದ ಮಗುವಿನ ತಲೆ ನೇವರಿಸುತ್ತಾ ತನ್ನ ಪ್ರೀತಿಯನ್ನು ಮರೆಯುತ್ತಾಳೆ. ಹೆಣ್ಣು ತಾಯಿಯಾಗಬೇಕೆಂದರೆ ಹಡೆಯಲೇಬೇಕೆಂದೇನಿಲ್ಲ. ಈ ಜಗತ್ತಿಗೆ ಹೆಣ್ಣಾಗಿ ಹುಟ್ಟಿದಾಗಲೇ ತಾಯಿಯ ಸ್ಥಾನವನ್ನು ಪಡೆಯುತ್ತಾಳೆ. ಮನುಷ್ಯನೊಬ್ಬ ತನ್ನ ಜೀವಮಾನದಲ್ಲಿ ಅನುಭವಿಸುವ ನೋವನ್ನು ಹೆಣ್ಣು ತನ್ನ ಹೆರಿಗೆಯ ಸಮಯದಲ್ಲಿ ಅನುಭವಿಸುತ್ತಾಳೆ. ಆದರೂ ಅಂತಹ ನೋವಿನಲ್ಲಿಯೂ ಜನ್ಮತಾಳಿದ ಮಗುವಿನ ಅಳುವಿನ ಶಬ್ದ ಕೇಳಿದಾಗ ಅವಳಿಗೆ ಆನಂದವಾಗುತ್ತದೆ. ತನ್ನೆಲ್ಲಾ ನೋವನ್ನು ಮರೆಯುತ್ತಾಳೆ. ಅಮ್ಮ ಎಂಬ ಶಬ್ದಕ್ಕೆ ಎಂತವರನ್ನು ಸೆಳೆಯುವ ಶಕ್ತಿ ಇದೆ. ಹುಟ್ಟಿದ ಮಗು ಮೊದಲು ಕಲಿಯುವ ಶಬ್ದ ಅಮ್ಮ. ಒಬ್ಬ ವ್ಯಕ್ತಿಯ ಜೀವನದಲ್ಲಿ ಅಮ್ಮನ ಪಾತ್ರ ತುಂಬ ಮಹತ್ವವಾದುದು. ಹುಟ್ಟಿನಿಂದ ಸಾಯುವವರೆಗೂ ಅಮ್ಮ ಇಲ್ಲದೆ ಬದುಕಿಲ್ಲ. ಹಾಗೇ ಹೆಂಡತಿಯಲ್ಲಿ, ಮಗಳಲ್ಲಿ, ಅತ್ತಿಗೆ, ಅಕ್ಕ, ತಂಗಿಯರಲ್ಲೂ ತಾಯಿಯನ್ನು ಕಾಣಬಹುದು. ಭಾರತೀಯರಾಗಿ ಹುಟ್ಟಿದ ನಾವು ಪುಣ್ಯವಂತರು. ಏಕೆಂದರೆ ನಮ್ಮ ದೇಶ, ನೆಲ, ಜಲ, ಅನ್ನ, ಧರ್ಮ, ಭಾಷೆ ಎಲ್ಲವೂ ಅಮ್ಮನ ಸಮಾನವೇ.

ಅಮ್ಮನ ಪ್ರೀತಿಯನ್ನು ಪದಗಳಲ್ಲಿ ಹೇಳಲು ಸಾಧ್ಯವಿಲ್ಲ. ಅವಳು ಬೈದರೂ ಅದರಲ್ಲಿ ಪ್ರೀತಿ ಇರುತ್ತದೆ. ಮಕ್ಕಳ ವಿಚಾರದಲ್ಲಿ ದ್ವೇಷ ಎಂಬುದು ಅವಳಿಗೆ ಇರುವುದಿಲ್ಲ.

'ಮಾತೃದೇವೋಭವ' ಪಿತೃದೇವೋಭವ' ಆಚಾರ್ಯದೇವೋಭವ' ಎಂದು ತಾಯ್ತಂದೆ ಗುರುಹಿರಿಯರಲ್ಲಿ ಕಾಣುತ್ತೇವೆ. ಇಲ್ಲಿ ಎಲ್ಲದಕ್ಕೂ ಪ್ರಥಮ ಸ್ಥಾನ ತಾಯಿಗೆ. ಅಮ್ಮನ ಋಣವನ್ನು ಆದೆಷ್ಟು ಜನ್ಮವೆತ್ತಿದರೂ ತೀರಿಸಲು ಅಸಾಧ್ಯ.

ಕತ್ತಲೆಯಿಂದ ಬೆಳಕಿನೆಡೆಗೆ

– ಭವ್ಯಾ ಎಂ. ಭಟ್
ದ್ವಿತೀಯ ಬಿ.ಕಾಂ. 'ಬಿ1'

ಮರದ ಕೊಂಬೆಯ ಮೇಲೆ ಕೂತ ಹಕ್ಕಿಗೆ ಕೊಂಬೆ ಮುರಿಯುವ ಭಯವಿರದು. ಏಕೆಂದರೆ ಅದು ನಂಬಿರುವುದು ಅದರ ರೆಕ್ಕೆಯನ್ನೇ ಹೊರತು ಕೊಂಬೆಯನ್ನಲ್ಲ. ಹಾಗೆಯೇ ನಾವು ಕೂಡಾ ನಮ್ಮ ಸಾಮರ್ಥ್ಯದ ಮೇಲೆ ಸದಾ ಆತ್ಮವಿಶ್ವಾಸ ಹೊಂದಿರಬೇಕು.

ಸುಂದರ ಪ್ರಪಂಚವನ್ನು ಕಣ್ಣಿನಿಂದ ನೋಡಲು ಅಸಾಧ್ಯವಾದ ಕುರುಡನೇ ಐ.ಎ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣನಾಗುವಾಗ, ಕುಂಟನೇ ಒಲಿಂಪಿಕ್ಸ್ ಓಟದ ಸ್ಪರ್ಧೆಯಲ್ಲಿ ಪದಕ ಗೆಲ್ಲುವಾಗ ದೇಹದ ಎಲ್ಲಾ ಅಂಗಾಂಗಗಳು ಸರಿ ಇರುವ ನಾವು ನಮ್ಮ ಸಾಮರ್ಥ್ಯದಲ್ಲಿ ವಿಶ್ವಾಸವುಳ್ಳವರಾಗಬೇಕು.

ನಾವು ಇರುವುದು 21ನೇ ಶತಮಾನದಲ್ಲಾದರೂ ನಮಗೆ ನಮ್ಮ ಬಗ್ಗೆ ತಿಳಿಯುವುದಕ್ಕಿಂತ ಉಚ್ಚಸ್ಥಾನಕ್ಕೆ ಏರಿರುವ ಇತರರ ಬಗ್ಗೆ ತುಂಬಾ ಆಸಕ್ತಿ. ಇಂದಿನ ಕಾಲದಲ್ಲಿ ಅದೆಷ್ಟೋ ಆವಿಷ್ಕಾರಗಳನ್ನು, ಚಮತ್ಕಾರಿ ವಸ್ತುಗಳನ್ನು ನೋಡಿರಬಹುದು. ಇವುಗಳಲ್ಲಿ ವಿಮಾನ, ದೂರದರ್ಶನ, ಟೆಲಿಫೋನ್, ಮೈಕ್ರೋಸ್ಕೋಪ್‌ಗಳನ್ನು ನೋಡಿದ್ದೇವೆ. ಆದರೆ ಇವೆಲ್ಲಾ ವಿದೇಶೀ ಆವಿಷ್ಕಾರಗಳು ಎನ್ನಲು ಸಾಕ್ಷಿಗಳಿರಬಹುದು. ಆದರೆ ಸಾಕ್ಷಿ ಕೊಡಲಾಗದಷ್ಟು ಹಿಂದಿನ ಕಾಲದಲ್ಲಿಯೇ ವಿಮಾನ, ಟೆಲಿಸ್ಕೋಪ್‌ಗಳು ನಮ್ಮ ನೆಲದಲ್ಲಿ ಆವಿಷ್ಕಾರಗೊಂಡವು ಎನ್ನಲು ಪುರಾಣ ಕಥೆಗಳಲ್ಲಿ ಉಲ್ಲೇಖವಿದೆ.

ಪುರಾತನ ಸಂಸ್ಕೃತಿ ನಮ್ಮದು. ಭವ್ಯ ಸಂಸ್ಕೃತಿಯ ಜನಗಳು ನಾವು. ಪ್ರತಿಯೊಂದು ಭಾಷೆಯ ಜನನಿ ನಮ್ಮ ಸಂಸ್ಕೃತ ಭಾಷೆ. ಸಂಸ್ಕೃತದಲ್ಲಿ ಸಾವಿರಾರು ಶಾಸ್ತ್ರಗಳು ರಚನೆಗೊಂಡಿದೆ. ಪುರಾತನ ಮುನಿಗಳಿಂದ ರಚಿಸಲ್ಪಟ್ಟ ಅದೆಷ್ಟೋ ಮಂತ್ರಗಳು ಅಭಿವೃದ್ಧಿಯಾಗಿ, ಇಂದು ತಂತ್ರವಾಗಿ ದೈನಂದಿನ ಜೀವನದಲ್ಲಿ ಅಡಕವಾಗಿದೆ – ಉದಾಹರಣೆಗೆ 'ಪುಷ್ಪಕ ವಿಮಾನ.' ಇದರಲ್ಲಿನ ವಿಮಾನ ಎಂದರೆ ಇದು ಒಂದು ಅದ್ಭುತವಾದ ವಾಹನ. ಇದನ್ನು ಎಷ್ಟೋ ಯುಗಗಳ ಹಿಂದೆಯೇ ನಿರ್ಮಾಣ ಮಾಡಿ ಸಾಕಾರಗೊಂಡು ಅದರ ಉಪಯೋಗ ಪಡೆದವರು ಭಾರತೀಯರು. ಇದು ಸೂರ್ಯನ ಕಿರಣಗಳಿಂದ ವಿದ್ಯುತ್ ಉತ್ಪಾದಿಸಿಕೊಂಡು ಹಾರುವ ವಾಹನವಾಗಿತ್ತು. ಇಂದು ಇದನ್ನೇ ಪುನಃ ಆವಿಷ್ಕರಿಸಿ 'ಸೋಲಾರ್ ಎನರ್ಜಿ' ಎಂಬ ಆಂಗ್ಲಪದ ಬಳಸಿ ಉಪಯೋಗಿಸಲಾಗುತ್ತಿದೆ.

ಇನ್ನೊಂದು ಉದಾಹರಣೆಯೆಂದರೆ, ಟೆಲಿಸ್ಕೋಪ್‌ಗಳು. ನಮಗೆ ತಿಳಿದ ಹಾಗೆ ಇದನ್ನು ವಿದೇಶೀಯರು ಕಂಡುಹಿಡಿದರು. ಆದರೆ ರಾಮಾಯಣ ಕಾಲದಿಂದಲೇ ಭಾರತದಲ್ಲಿ ಅದು ಚಾಲ್ತಿಯಲ್ಲಿದೆ. ಹೇಗೆಂದರೆ ರಾಮಾಯಣದ ಒಂದು ಸನ್ನಿವೇಶ. ವಾನರ ಸೇನೆಗೂ ದಶಕಂಠ ರಾವಣನಿಗೂ ಯುದ್ಧ. ರಾಮನು ಲಂಕೆಯಲ್ಲಿ ರಣರಂಗದಲ್ಲಿ ಯುದ್ಧ ಮಾಡುವುದನ್ನು ರಾವಣನು ತನ್ನ ಅರಮನೆಯಲ್ಲಿಯೇ ನೋಡುತ್ತಿದ್ದ. ಹೇಗೆಂದರೆ ರಾವಣನು ಕೆಲವು ವಜ್ರಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಸೂಕ್ತ ರೀತಿಯಲ್ಲಿ ಜೋಡಿಸಿ ಮೈಲು ಗಟ್ಟಲೆ ದೂರದ ಸನ್ನಿವೇಶವನ್ನು ಕೋಣೆಯ ಕಿಟಕಿಯಿಂದ ವೀಕ್ಷಿಸುತ್ತಿದ್ದ.

ಇವೆಲ್ಲಾ ಕೇಳಲು, ಓದಲು ಬಹಳ ಸಾಧಾರಣ ವಿಷಯ ಎಂದೆನಿಸಬಹುದು. ಆದರೆ ಇವುಗಳ ಆಂತರಿಕ ವಿಷಯ ಬಹಳ

ಸೂಕ್ಷ್ಮ, ಅಮೋಘ, ಆವರ್ಣೀಯ.

ಇದಕ್ಕೆ ಇನ್ನೊಂದು ಅದ್ಭುತ ಉದಾಹರಣೆಯೆಂದರೆ ಡಿಸ್ಕೋಲೈಟ್. ಇದನ್ನು ನಮ್ಮ ಪೂರ್ವಜರು 500 ವರ್ಷಗಳ ಹಿಂದೆಯೇ ಉಪಯೋಗಿಸಿರುವುದಕ್ಕೆ ದೃಷ್ಟಾಂತವೆಂದರೆ ವಿಜಯನಗರ ಸಾಮ್ರಾಜ್ಯ ರಾಜಧಾನಿ ಹಂಪೆ. ಅಲ್ಲಿರುವ ಕಲ್ಲಿನ ಕೆತ್ತನಗಳು, ಕಲ್ಲಿನ ರಥ, ವಿರೂಪಾಕ್ಷ ದೇವಾಲಯ, ಹಂಪೆಯಲ್ಲಿನ ರಂಗಮಂಚದ ಮೇಲೆ ಬಣ್ಣ ಬಣ್ಣದ ಬೆಳಕನ್ನು ಹೊರಹೊಮ್ಮಿಸುತ್ತಿದ್ದ ರೀತಿಯನ್ನು ನೋಡಿದರೆ ನಿಜವಾಗಿಯೂ ಆಶ್ಚರ್ಯವಾಗುವುದು. ರಂಗಮಂಚದ ಎರಡು ಬದಿಗಳಲ್ಲಿ ಕಲ್ಲಿನಲ್ಲಿ ಪ್ರಾಣಿಗಳ ಕೆತ್ತನೆಗಳಿವೆ. ಅದರಲ್ಲಿ ಪ್ರಾಣಿಯ ಬಾಯಿಗಳಲ್ಲಿ ಒಂದು ಬೃಹದಾಕಾರದ ದೀಪವನ್ನು ಇಟ್ಟು ಬಣ್ಣದ ವಜ್ರಗಳನ್ನು ಒಂದರ ನಂತರ ಒಂದು ಎನ್ನುವ ಹಾಗೆ ಅಳವಡಿಸಿಕೊಂಡು ದೀಪದ ಬೆಳಕಿಗೆ ಬಣ್ಣಹಾಕಿ ವೇದಿಕೆಯ ಪ್ರದರ್ಶನವನ್ನು ವರ್ಣರಂಜಿತವಾಗಿ ಮಾಡುತ್ತಿದ್ದರು.

ಹೀಗೆ ಹೇಳುತ್ತಾ ಹೋದರೆ ಪುಟಗಳು ಸಾಲವು. ಆವಿಷ್ಕಾರಗಳು ರೂಪವನ್ನು ಬದಲಿಸಿರಬಹುದು. ಆದರೆ ಅದರ ಹಿಂದಿನ ಮರ್ಮವನ್ನು ಮಾತ್ರ ಮರೆಯಬಾರದು. ನಾವು ಅನ್ಯದೇಶದ ಸಂಸ್ಕೃತಿಗೆ ಮರುಳಾಗಿ ಬಿಡುತ್ತೇವೆ. ನಮ್ಮದು ಮಂತ್ರ, ಅದರಲ್ಲಿ ತಂತ್ರ. ಮಂತ್ರ–ತಂತ್ರಗಳಿಂದ ಕೂಡಿದ ಜ್ಞಾನವೇ ವಿಜ್ಞಾನ. ಇದನ್ನು ಅರಿಯುವುದೇ ನಮ್ಮೆಲ್ಲರ ಸುಜ್ಞಾನ!

ಭೂಲೋಕ – ಹೆಚ್ಚು ಕಡಿಮೆ ನರಕ

– ಶ್ರೀವಾಸುಕಿ ಕೆ. ಎಸ್.
ದ್ವಿತೀಯ ಬಿ.ಕಾಂ. 'ಬಿ'

ತಾಯಿ, ಕರುಣಾ ಸಾಗರ, ಭೂಮಿತಾಯಿಗೆ ಇರುವಷ್ಟು ತಾಳ್ಮೆ. ಒಂಭತ್ತು ತಿಂಗಳು ಹೊತ್ತು, ತನ್ನ ಎಲ್ಲ ಶಕ್ತಿಯನ್ನು ನೀಡಿ ಮಗುವನ್ನು ಹೆರುತ್ತಾಳೆ. ಆಕೆಯ ನಿಷ್ಕಲ್ಮಶ ಪ್ರೀತಿಯ ಮುಂದೆ ವಿಶ್ವವೇ ನಶ್ವರ. ಅವಳು ತನ್ನ ಎಲ್ಲಾ ಕಾರ್ಯಗಳನ್ನೂ ಬಿಟ್ಟು ಮಗುವನ್ನು ಏಳಿಗೆಯತ್ತ ಒಯ್ಯುತ್ತಾಳೆ. ಚಿಕ್ಕಂದಿನಲ್ಲಿ ಅವಳು ಚಂದಮಾಮನನ್ನು ತೋರಿಸುತ್ತಾ, ಗುಮ್ಮ ಬಂದಾನೆಂದು ಹೆದರಿಸುತ್ತಾ ಊಟ ಮಾಡಿಸುವ ಬಗೆಯನ್ನೊಮ್ಮೆ ನೆನೆದರೆ ಕಣ್ಣು ತುಂಬುವುದರಲ್ಲಿ ವಿಶೇಷತೆ ಏನಿಲ್ಲ. ಅವಳು ತನ್ನ ಸರ್ವಸ್ವವನ್ನೂ ಮಕ್ಕಳಿಗಾಗಿ ಧಾರೆ ಎರೆಯುತ್ತಾಳೆ. ಅವಳಿಗೆ ಮಗುವೊಂದೇ ಸರ್ವಸ್ವ. ಅವಳು ಕೈಹಿಡಿದು ತಿದ್ದಿದ ಅಕ್ಷರಗಳೆಲ್ಲ ಇಂದಿನ ನೆನಪಿನ ಸರಮಾಲೆ. ಶ್ರೀರಾಮ ತನ್ನ ಮಡದಿ ಸೀತೆಯನ್ನು ರಾವಣನ ಸೆರೆಯಿಂದ ಬಿಡಿಸಿ ತರುವಾಗ, ಲಕ್ಷ್ಮಣ ಹೇಳುತ್ತಾನೆ, "ನೀವೇಕೆ ಅಯೋಧ್ಯೆಗೆ ಹೋಗುತ್ತೀರಿ? ಇಲ್ಲಿನ ಇಷ್ಟು ಸುಂದರ ನಗರ ಬಿಟ್ಟು ಹೋಗಲು ಹೇಗೆ ಮನಸ್ಸಾಗುತ್ತದೆ?" ಎಂದು ಆಗ ಪ್ರಭು ಶ್ರೀರಾಮ ಹೇಳುತ್ತಾನೆ, "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ" ಎಂದು. ಅರ್ಥಾತ್, ತಾಯಿ ಹಾಗೂ ತಾಯ್ನಾಡಿನ ಎದುರು ಸ್ವರ್ಗವೂ ಶೂನ್ಯ. ಅಂದರೆ ತಾಯಿಯ ಮಹತ್ವ ಅಷ್ಟು. ಆಕೆಯ ಋಣವನ್ನು ತೀರಿಸಲು ಏಳೇಳು ಜನ್ಮ ತಾಳಿದರೂ ಸಾಧ್ಯವಿಲ್ಲ.

ಹಾಗೆ ಗೋವು. ಇದೊಂದು ದೇವ ಸೃಷ್ಟಿಯ ವಿಶೇಷ. ಅಂತಹ ಸೃಷ್ಟಿ ಇನ್ನೊಂದಿರದು. ತನಗೆ ಏನನ್ನೂ ಇಟ್ಟುಕೊಳ್ಳದೆ ಸರ್ವವನ್ನೂ, ತನ್ನನ್ನೂ ಸಾಕಿದವನಿಗೆ ಧಾರೆಯೆರೆಯುತ್ತದೆ. ಮನುಜ ಉಳಿದದನೆಲ್ಲಾ ಸೇರಿಸಿ ಕಲಗಚ್ಚನ್ನು ಮಾಡಿ ಕೊಡ್ತಾನೆ. ಗೋವು ಅದನ್ನೆ ಕುಡಿಯುತ್ತೆ. ಉಳಿದ ಕಸಗಳನ್ನೆಲ್ಲಾ, ಯಾರಿಗೂ ಬೇಡವಾದುದನ್ನು ತಿಂದು ಅಮೃತ ಸ್ವರೂಪಿ ಹಾಲನ್ನು ತನ್ನ ಕರುವಿಗೂ ನೀಡದೇ, ಕರೆದ ಮನುಜನನ್ನು ತನ್ನ ಕರುವೆಂದು ಭಾವಿಸಿ ಹರಸುವಂತಹ ಮಹತಾಯಿ ಅವಳು. ಓರ್ವ ಸದ್ಗುರುವಿನ ಮಾತುಗಳಿವು, " ಈ ವಾತಾವರಣದಲ್ಲಿ ಸೂಕ್ಷ್ಮವಾಯು, ಸ್ಥೂಲವಾಯು ಎಂಬ ಎರಡು ಬಗೆಯಿದೆ. ಸ್ಥೂಲವಾಯು ಎಂದರೆ ನಮಗೆ ಭೀತಿ ತರುವ ಗಾಳಿ. ಸೂಕ್ಷ್ಮವಾಯು ಎಂದರೆ ಅದು ಯಾರಿಗೂ ಭೀತಿ ಉಂಟುಮಾಡುವುದಿಲ್ಲ. ಅವರು ಹೇಳುವ ಪ್ರಕಾರ, ಈಗಿನ ಮಳೆಯ ಕೊರತೆ ಎಲ್ಲವೂ ಸೂಕ್ಷ್ಮವಾಯುವಿನ ಮಲಿನದಿಂದಲೆ." ಮುಂದುವರಿದು ಹೇಳುತ್ತಾರೆ, "ಸೂಕ್ಷ್ಮವಾಯು ಎನ್ನುವುದು ನಮ್ಮ ಮನಸ್ಸಿನ ಆಲೋಚನೆ ಮುಂತಾದ ಕಾರಣಗಳಿಂದ ಕಲುಶಿತಗೊಳ್ಳುತ್ತದೆ. ಅಂತಹ ಒಂದು ಕಲುಶಿತದಿಂದಾಗಿ ಸಣ್ಣಪುಟ್ಟ ಪಕ್ಷಿಗಳೆಲ್ಲಾ ಸಾಯುತ್ತವಂತೆ. ಸೂಕ್ಷ್ಮವಾಯು ಶುದ್ಧವಾಗಲು ಸುವಿಚಾರಗಳ ಅವಶ್ಯಕತೆ ಅಗಾಧ. ಅಂತಹ ಪ್ರಾಣವಾಯುವನ್ನೇ ಶುದ್ಧವಾಗಿಸುವಂತಹ ಅಘೋರ ಶಕ್ತಿ ಗೋವಿನಲ್ಲಿದೆ. ಸೂಕ್ಷ್ಮವಾಯುವನ್ನು ಶುದ್ಧ ಮಾಡಲು ಗೋವಿನ ಉಸಿರಾಟದಿಂದ ಹೊರಬಂದ ಗಾಳಿ ಸಾಕು. ಅಂತಹ ಶ್ರೇಷ್ಠ ಸೃಷ್ಟಿ ಗೋವು. ಕೇವಲ ಒಂದು ಸ್ಪರ್ಶದಿಂದಲೇ ನಮ್ಮ ಪಾಪವನ್ನು ಕಳೆಯುವಂತಹ ಅಮೃತತ್ವ ಗೋವಿಗಿದೆ."

ಇಂತಹ ಶ್ರೇಷ್ಠ ಸ್ಥಾನ ಗಳಿಸಿರುವ ತಾಯಿ ಮತ್ತು ಗೋವಿನ ಇಂದಿನ ಪರಿಸ್ಥಿತಿ ನೋಡಿದರೆ.....ಅಯ್ಯೋ ರಾಮ! ಒಂದೆಡೆ ವೃದ್ಧಾಶ್ರಮಗಳು, ಇನ್ನೊಂದೆಡೆ ನರಕ. ತನ್ನ ಅಮೃತವನ್ನು ನೀಡಿ ಸಾಕಿದ ತಾಯಿ, ವೃದ್ಧಾಶ್ರಮದ ಪಾಲಾದರೆ, ಇತ್ತ ನಾವು ಸಾಯುವ ತನಕ ತನ್ನ ಮಗುವಂತೆ ಸಾಕುವ ತಾಯಿ ಗೋವು ಕಸಾಯಿಖಾನೆಯ ಪಾಲಾಗುತ್ತಾಳೆ. ಇಂತಹ ಸನ್ನಿವೇಶ ನೋಡಿದಾಗಲೇ ಅರ್ಥ

ಆಗುತ್ತದೆ ನಾವಿರುವುದು ಭೂಲೋಕದಲ್ಲಲ್ಲ, ನರಕದಲ್ಲಿ ಎಂದು.

ಹೌದು, ನಾವು ಇರುವುದು ನರಕದಲ್ಲಿಯೇ. ಅದರಲ್ಲಿ ಅನುಮಾನ ಬೇಡವೇ ಬೇಡ. ಇಂತಹ ನರಕವನ್ನು ಸ್ವರ್ಗ ಮಾಡುವುದು ನಮ್ಮ ಕೈಯಲ್ಲಿದೆ. ಆದ್ದರಿಂದ ದಯಮಾಡಿ ತಾಯಿ ಹಾಗೂ ತಾಯಿಯ ಸ್ವರೂಪಿ ಗೋವನ್ನು ಉಳಿಸೋಣ. ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಶುದ್ಧಗೊಳಿಸೋಣ. ದಯಮಾಡಿ.....ಇಂದೇ ಇಂತಹ ಕಾರ್ಯಗಳಿಗೆ ನಾವೆಲ್ಲಾ ಕೈಜೋಡಿಸಿ ನಾಂದಿ ಹಾಡೋಣ.

ಚೆಂದದ ಮೊಬೈಲಿನಲ್ಲೂ ಕೆಡುಕಿದೆಯಂತೆ

–ಸುಷ್ಮಾ ಬಡಿಕೇರಿ
ದ್ವಿತೀಯ ಬಿ.ಕಾಂ.

ನಮ್ಮ ಮನೆಯಲ್ಲಿ ಅಮ್ಮನಿಗೊಂದು ಅಪ್ಪನಿಗೊಂದು ಮೊಬೈಲ್ ಇದೆ. ಆದರೆ ಎಷ್ಟು ಕೇಳಿದರೂ ನನಗೆ ಸ್ವಂತಕ್ಕೆಂದು ಮೊಬೈಲ್ ಕೊಡಿಸಿರಲಿಲ್ಲ. ಬೇಕಾದಾಗ ಅಮ್ಮಂದು ತಗೊಂಡು ಹೋಗು ಎನ್ನುತ್ತಿದ್ದರು ಅಪ್ಪ. ಆದರೆ ನನಗೆ ನನ್ನದೇ ಆದ ಮೊಬೈಲ್ ಬೇಕೆಂಬ ಆಸೆ. ಒಂದು ದಿನ ಹಠಮಾಡಿ ಗಲಾಟೆ ಮಾಡಿಕೊಂಡೆ. ಆಗ ಅವರು "ನೋಡು ಮೊಬೈಲ್ ಕೊಡ್ಸೋದು ದೊಡ್ಡದಲ್ಲ. ಆದ್ರೆ ಈಗ್ಲೇ ಕೊಡ್ಸಿದ್ರೆ ಅದರಿಂದ ಏನೇನು ತೊಂದರೆಯಾಗುತ್ತೆ ಅಂತ ಕೂಡಾ ನಿಂಗೆ ಗೊತ್ತಿರೋದಿಲ್ಲ. ಗೊತ್ತಾದ್ಮೇಲೆ ತೆಕ್ಕೊಡ್ತೀನಿ" ಎಂದರು. ನನಗೆ ಕೋಪ ಬಂತು. ನನ್ನ ಕೆಲವು ಸ್ನೇಹಿತರೆಲ್ಲ ತರಗತಿಯಲ್ಲಿ ದಿನವಿಡೀ ಮೊಬೈಲ್‌ನಲ್ಲಿ ಎಸ್.ಎಮ್.ಎಸ್. ಮಾಡುತ್ತ ಹಲೋ ಹಲೋ ಎನ್ನುತ್ತಾ ಜೇಬಿನ ಒಳಗೆ ಇಟ್ಟುಕೊಂಡು ಖುಷಿ ಪಡುವಾಗ ಈ ಅಪ್ಪ ನನಗೆ ಮಾತ್ರ ಹೀಗೆ ಹೇಳುತ್ತಿದ್ದಾರೆ ಎನಿಸಿತು. ಮೊಬೈಲ್ ಇದ್ದರೆ ಹೊರಗೆ ಹೋದಾಗ ನಾನು ಎಲ್ಲಿದ್ದೇನೆಂದು ತಿಳಿಸಬಹುದು, ವಿಡಿಯೋ ಗೇಮ್ಸ್ ಆಡಬಹುದು, ಎಸ್.ಎಮ್.ಎಸ್. ಕಳುಹಿಸಬಹುದು, ಫೋಟೋ ತೆಗೆಯಬಹುದು, ಹಾಡು ಕೇಳಬಹುದು, ಇನ್ನೂ ಏನೇನೊ ಉಪಯೋಗವಿದೆ. ಅದರಿಂದ ತೊಂದ್ರೆ ಏನಿದೆ? ನನ್ನ ಎಲ್ಲಾ ಸ್ನೇಹಿತರಲ್ಲಿ ಮೊಬೈಲ್ ಇರುವಾಗ ನಾನು ಮಾತ್ರ ಏಕೆ ಉಪಯೋಗಿಸಬಾರದು? ಎಂದು ನಿರಾಸೆಯಾದೆ.

ಆಗ ಅಪ್ಪ ನನ್ನ ಕೈ ಹಿಡಿದು ಹೇಳಿದರು. " ನೋಡು ಪುಟ್ಟ, ಇಷ್ಟು ಸಣ್ಣ ಪ್ರಾಯದಲ್ಲಿ ಮೊಬೈಲ್ ಉಪಯೋಗಿಸೋದ್ರಿಂದ ಶರೀರಕ್ಕೆ ನಾನಾ ತೊಂದರೆಗಳಾಗುತ್ತೆ. ಅದು ನಿಮಗೆ ಗೊತ್ತಾಗ್ದೆ ಅದನ್ನು ಉಪಯೋಗಿಸ್ತೀರಿ. ನಾನಂತೂ ನಿನಗೆ ಮೊಬೈಲ್ ತೆಗೆದುಕೊಡಲ್ಲ. ಬೇಕಾದರೆ ನಾಳೆ ನಿನ್ನ ವಿಜ್ಞಾನ ಶಿಕ್ಷಕನಲ್ಲಿ ಕೇಳಿ ನೋಡು ಎಂದರು. ಕೇಳಿ ನನಗೆ ಕೋಪ ಮತ್ತು ಬೇಸರವಾಯಿತು. ಮರುದಿನ ತರಗತಿಯಲ್ಲಿ ಪಾಠ ಮಾಡುತ್ತಿರುವಾಗ ಅಪ್ಪ ಹೇಳಿದ್ದು ತಟಕ್ಕನೆ ನೆನಪಾಗಿ ಸರ್ ಬಳಿ "ಸರ್ ಮೊಬೈಲ್ ಬಳಸುವುದರಿಂದ ತೊಂದರೆ ಆಗುತ್ತಾ?" ಎಂದು ಕೇಳಿದೆ. "ಗುಡ್, ಒಳ್ಳೆ ಪ್ರಶ್ನೆ ಕೇಳ್ದೆ. ಮೊಬೈಲ್‌ನಿಂದ ಎಷ್ಟು ಉಪಯೋಗವಿದೆಯೋ ಅಷ್ಟೆ ಹಾನಿಯೂ ಇದೆ. ದಿನಕ್ಕೆ 2 ಗಂಟೆಗಿಂತ ಹೆಚ್ಚಿಗೆ ಅದರಲ್ಲಿ ಮಾತಾಡಿದ್ರೆ ಮೆದುಳಿನ ಕ್ಯಾನ್ಸರ್ ಬರುವ ಸಾಧ್ಯತೆಯಿದೆ, ಅಂತ ತಜ್ಞರು ಹೇಳುತ್ತಾರೆ. ಮೊಬೈಲ್‌ಅನ್ನು ತಲೆಯ ಹತ್ತಿರ ಇಟ್ಟುಕೊಳ್ಳಬಾರದು, ಅದು ಕೈಯಲ್ಲಿದ್ರೆ ಅದರಲ್ಲಿ ಆಡೋ ಮನಸ್ಸಾಗುತ್ತೆ, ಹಾಗೆಯೇ ಇಡೀ ದಿನ ಜೇಬಿನಲ್ಲಿ ಮೊಬೈಲ್‌ಅನ್ನು ಇಟ್ಟುಕೊಳ್ಳುವುದು ಒಳ್ಳೆಯದಲ್ಲ. ಇದರಿಂದ ವಿದ್ಯಾಭ್ಯಾಸದಲ್ಲಿ ಆಸಕ್ತಿ ಬರುವುದಿಲ್ಲ. ಆದ್ದರಿಂದ ಸರ್ಕಾರ ಶಾಲೆಗೆ ಮೊಬೈಲ್ ತರಬಾರದು ಎಂದು ಕಾನೂನು ಮಾಡಿದೆ. ನೀನು ಕೇಳಿದ್ದು ಒಳ್ಳೆಯದೇ ಆಯಿತು. ನಿನ್ನಿಂದ ಎಲ್ಲಾ ಮಕ್ಕಳಿಗೂ ಅದು ತಿಳಿಯೋ ಹಾಗಾಯ್ತು. ಮೊಬೈಲ್ ಅಂತಲ್ಲ ಟಿ.ವಿ., ಕಂಪ್ಯೂಟರ್ ಇತ್ಯಾದಿಗಳಿಂದ ನಮ್ಮ ಕಣ್ಣಿಗೆ ಶರೀರಕ್ಕೆ ತೊಂದರೆ ಆಗುತ್ತೆ. ಅವುಗಳನ್ನೆಲ್ಲಾ ಎಷ್ಟು ಬೇಕೋ ಅಷ್ಟು ಮಾತ್ರ ಉಪಯೋಗಿಸಿ ಅದರ ಲಾಭವನ್ನು ಪಡೆಯಬೇಕು. ಇದನ್ನೆಲ್ಲಾ ಕೇಳಿ ಇನ್ನು ಅಗತ್ಯ ಬಿದ್ದಾಗ ಮಾತ್ರ ಅಮ್ಮನ ಮೊಬೈಲ್ ಬಳಸುತ್ತೇನೆ ವಿನಹ ನಾನು ಸ್ವಂತಕ್ಕೆ ಬೇಕೆಂದು ಹಠ ಮಾಡುವುದಿಲ್ಲ ಎಂದು ಎನಿಸಿಕೊಂಡೆ

ಮರೆಯದಿರಿ:

ಯಾವಾಗಲೂ ಮೊಬೈಲ್‌ಗಳನ್ನು ಶರೀರಕ್ಕೆ ತಾಗುವಂತೆ ಇಟ್ಟುಕೊಳ್ಳದೆ ಅಗತ್ಯ ಇರುವಷ್ಟು ಮಾತ್ರ ಉಪಯೋಗಿಸಬೇಕು. ಅನಾವಶ್ಯಕವಾಗಿ ಅದಕ್ಕೆ ಹಣ ಸುರಿದು ನಮ್ಮ ಬುದ್ಧಿವಂತಿಕೆಯನ್ನು ಅದನ್ನು ಬಳಸುವುದರಲ್ಲಿಯೇ ಕಳೆಯಬಾರದು.

ನಾರಾಜಕೇ ಜನಪದೇ ಸ್ವಕಂ ಭವತಿ ಕಸ್ಯಚಿತ್ ।
ಮತ್ಸ್ಯಾ ಇವ ಜನಾ ನಿತ್ಯಂ ಭಕ್ಷಯಂತಿ ಪರಸ್ಪರಮ್ ॥

ಅರಾಜಕವಾದ ದೇಶದಲ್ಲಿ ಯಾರಿಗೂ ತಮ್ಮವ ಎನ್ನುವುದೇ ಇಲ್ಲ. ಎಲ್ಲರೂ ಕೂಡಾ ಮೀನುಗಳು ಮೀನುಗಳೆಂಬಂತೆ ತಮ್ಮ ತಮ್ಮವರನ್ನೆ ನುಂಗಲು ಪ್ರಯತ್ನಿಸುವವರೇ ಆಗಿರುತ್ತಾರೆ.

–: ಸಾಹಿತ್ಯ ವಿಮರ್ಶೆ :– ಅಮ್ಮ ಹೇಳಿದ ಎಂಟು ಸುಳ್ಳುಗಳು

– ಎ. ಆರ್. ಮಣಿಕಾಂತ್

(ವಿದ್ಯಾರ್ಥಿವೇದಿಕೆ ಆಯೋಜಿಸಿದ ವಿಮರ್ಶೆ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಲೇಖನ.)

– ರಸಿಕ್ ಕುಮಾರ್
ತೃತೀಯ ಬಿ.ಎ.

ನಮಸ್ಕಾರ. ವಿಮರ್ಶೆ ಬರೀಬೇಕು, ಸ್ಪರ್ಧೆ ಇದೆ ಅಂದಾಗ ಭಾಗವಹಿಸಲೇ ಬೇಕು ಅನ್ಸುತ್ತೆ. ಆದರೆ, ಯಾವ ಪುಸ್ತಕದ ಮೇಲೆ ವಿಮರ್ಶೆ ಬರೆಯುವುದು ಅನ್ನುವುದು ಮೊದಲ ಪ್ರಶ್ನೆಯಾಗಿ ಮೂಡುತ್ತೆ. ಅಂತೂ ತಡಕಾಡಿ ತಡಕಾಡಿ ಕೊನೆಗೆ ಒಪ್ಪಿಗೆಯಾಗಿದ್ದು, "ಅಮ್ಮ ಹೇಳಿದ ಎಂಟು ಸುಳ್ಳುಗಳು." 80 ದಿನಗಳಲ್ಲಿ 90,000 ಹೆಚ್ಚು ಪ್ರತಿಗಳ ಮುದ್ರಣವನ್ನು ಕಂಡ ಪುಸ್ತಕ ಅಂತ ಕ್ಲಾಸಿನಲ್ಲಿ ಮೇಡಂ ಹೇಳುವುದು ಕೇಳಿದ್ದು. ಅದಕ್ಕೆ ತಂದು ಓದ್ದೆ. ಮನ್ಸಿಗ್ ತುಂಬಾ ಹಿಡಿಸ್ತು ಪುಸ್ತಕ. ಈ ಸಣ್ಣ ಸಣ್ಣ ಕಥೆಗಳಲ್ಲಿ ಬರುವ ಎಲ್ಲಾ ಪಾತ್ರಗಳು ಮನಸ್ಸಿನಲ್ಲಿ ಆಳವಾಗಿ ಉಳಿಯುವುದರಲ್ಲಿ ಬೇರೆ ಮಾತಿಲ್ಲ. ಆ ಮಟ್ಟಿಗೆ ಎ.ಆರ್.ಮಣಿಕಾಂತ್ ಅವರು ಗೆದ್ದಿದ್ದಾರೆ ಅಂತ ಹೇಳ್ಬಹುದು.

ಎಂಥ ಕಥೆ, ಎಂಥ ಸಾಹಿತ್ಯ, ಎಂಥ ನಿರೂಪಣೆ ಸ್ನೇಹಿತ್ರೆ! ಸುಮ್ನೆ ಬೇಜಾರಾಗುತ್ತಂತ ಪುಸ್ತಕ ಹಿಡ್ಕೊಂಡ್ ಕೂತ್ರೆ ಪೂರ್ತಿ ಮುಗಿಸ್ದೇ ಮೇಲೆ ಏಳೋ ಹಾಗೇ ಇಲ್ಲ ನೀನು, ಅಂತ ಪುಸ್ತಕ ಹೇಳುತ್ತೆ. ಅಂಥ ವಿಶೇಷತೆ ಮಣಿಕಾಂತ್‌ರವರದ್ದು. ಅದಕ್ಕೆ ಉದಾಹರಣೆ ಪ್ರಕಾಶ್ ರೈ ಅವರು ಪುಸ್ತಕ ಓದಿಕೊಂಡು ಮಣಿಕಾಂತ್‌ರವರಿಗೆ ಕರೆ ಮಾಡಿ, "ಪುಸ್ತಕ ಓದಿದೆ. ತುಂಬಾ ಚೆನ್ನಾಗಿದೆ. ಏನ್ ಬರ್ದೀರಿ ಸಾರ್. ಈ ಪುಸ್ತಕ ಬಿಡುಗಡೆ ಮಾಡೋಕೆ ನಾನೇ ಬರ್ತೀನಿ" ಅಂದಿದ್ರಂತೆ. ಈ ಪುಸ್ತಕದಲ್ಲಿ ಬರುವ ಎಲ್ಲಾ ಕಥೆಗಳನ್ನೂ ನಾವು ಹೇಳುವುದು ಕೇಳಿದ್ದೇವೆ, ವಾಟ್ಸಪ್ ಮೆಸೇಜ್‌ಗಳಲ್ಲಿ ಓದಿ ತಿಳ್ಕೊಂಡಿದೇವೆ. ಆದ್ರೆ ಅದಕ್ಕೊಂದು ವಿಶೇಷ ರೂಪ ಕೊಟ್ಟು, ಬೇರೆಯವರ ಬದುಕಿನಲ್ಲಿ ದಾರಿ ದೀಪ, ಸ್ಫೂರ್ತಿ, ಶ್ರದ್ಧೆ ನೀಡುವಲ್ಲಿ ಮಣಿಕಾಂತ್‌ರವರು ಎಲ್ಲೂ ಸೋತಿಲ್ಲ.

ಕಥೆ ಓದಿದ್ ತಕ್ಷಣ, ಕಣ್ಣಂಚಲ್ಲಿ ನೀರ್ ಬರ್ತಾ ಇದ್ರೂ ಮುಖ ಸಪ್ಪೆಯಾಗಲ್ಲ, ಕಿವಿ ಗಂಟಿಕ್ಕುದಿಲ್ಲ, ಪುಸ್ತಕ ಓದುವುದು ನಿಲ್ಸಿ ಬಿಡುವ ಅನ್ಸುದೇ ಇಲ್ಲ. ಯಾಕೆಂದ್ರೆ, ಅವರ ಫಾತ ಅಷ್ಟಿದೆ. ನಮ್ಮ ಅಕ್ಕ ಪಕ್ಕವೇ ನಡೆದ ಕೆಲವು ಘಟನೆಗಳನ್ನೋ ಅಥವಾ ಅಂತರ್ಜಾಲದಲ್ಲಿ ಸಿಗುವ ಕೆಲವು ಸ್ಫೂರ್ತಿಯನ್ನೋ ಬಳಸಿ ಅದಕ್ಕೆ ಹಾವ, ಭಾವ, ಕರುಣೆ ನೀಡುವಲ್ಲಿ ನಿಜವಾಗಿಯೂ ಕವಿ ಅಚ್ಚೈಯನ್ನು ಹಾಕಿದ್ದಾರೆ.

"ಕನ್ನಡ ಸಾಹಿತ್ಯದಲ್ಲಿ ಪುಸ್ತಕ ಓದುವುದು ಕಡಿಮೆಯಾಗ್ತಾ ಇದ್ದರೆ, ಬರ್ತಾ ಬರ್ತಾ ಇಂಗ್ಲೀಷ್ ಓದುವವ್ರು ಜಾಸ್ತಿಯೂ ಆಗ್ತಾ ಇದ್ದಾರೆ" ಅನ್ನೋ ಮಾತುಗಳು ಸಾಮಾನ್ಯವಾಗಿ ಕೇಳಿ ಬರುತ್ತೆ. ಈ ಕಾರಣಕ್ಕೋಸ್ಕರವೇ ಅನೇಕರು ಇಂಗ್ಲೀಷ್ ಭಾಷೆಯನ್ನು ಕನ್ನಡಕ್ಕೆ ಅನುವಾದಿಸಿದ್ದೂ ಹಾಗೇ ಅದರಲ್ಲೂ ಕೂಡ ಸೋಲು ಕಂಡಿದ್ದೂ ಆಗಿದೆ. ಕಾರಣ ಇಷ್ಟೇ, 'ಯಾರದೋ ಪಕ್ಕದ ರಾಜ್ಯದಲ್ಲಿಯೋ, ಅಥವಾ ತಮಗೆ ಸಂಬಂಧ ಪಡೆದ ಕಥೆಯನ್ನೇ ಆಧರಿಸಿ ಪುಸ್ತಕ ಬರೆದರೆ ಅದು ನಮ್ಮ ಜನರ ಮನಸ್ಸಿಗೆ ತಟ್ಟುವುದು ಹೇಗೆ.....? ಅಕ್ಕ–ಪಕ್ಕ ನಡೆಯುವ, ಅಥವಾ ನಾವು ದಿನನಿತ್ಯ ನೋಡುವ ಘಟನೆಗಳಿಗೆ ಭಾವಸ್ಪರ್ಶ ಕೊಟ್ಟು ಬರೆದರೆ ಖಂಡಿತವಾಗಿಯೂ ನಮ್ಮ ಜನ ಓದುತ್ತಾರೆ.' ಇದಕ್ಕೆ ಎ.ಆರ್. ಮಣಿಕಾಂತ್ ಈ ಪುಸ್ತಕವೇ ಸಾಕ್ಷಿ.

ಶ್ರೀಯುತರು ಯಾವ ಸನ್ನಿವೇಷದಲ್ಲಿ ಅಳಬೇಕೋ ಅಲ್ಲಿ ಅತ್ತು, ಎಲ್ಲಿ ನಗಬೇಕೋ ಅಲ್ಲಿ ನಕ್ಕು, ಎಲ್ಲ ಸಮಯಕ್ಕೊಂದು ಸಂದೇಶ ಕೊಡ್ಬೇಕೋ ಅಲ್ಲಿ ಕೊಟ್ಟು ಕಥೆಯನ್ನು ಹಾಗೂ ಪುಸ್ತಕವನ್ನು ಗೆಲ್ಲಿಸಿದ್ದಾರೆ. "ಈ ಒಂದು ವಿಷಯವನ್ನು ನಾನು ಹೇಳಲೇ ಬೇಕು" ಅಂತ ಉದ್ದೇಶಪೂರ್ವಕವಾಗಿ ಎಲ್ಲೂ ಅನಾವಶ್ಯಕವಾಗಿ ವಿಷಯವನ್ನು ತುರುಕಿಲ್ಲ. ಕಥೆಯೊಳಗೆ ಒಂದು ಪಾತ್ರವಾಗಿ ಅದರ ಅನುಭವ ಓದುಗರಿಗೆ ಹತ್ತಿರವಾಗುವಂತಿದೆ ಈ ಪುಸ್ತಕ.

ಮಣಿಕಾಂತರ ಪುಸ್ತಕದ ಕಥೆಗಳು ನಮ್ಮ ಅಕ್ಕಪಕ್ಕದಲ್ಲಿ ಇವೆ ಅನ್ಸುತ್ತೆ. ಇಲ್ಲೆ ಪಕ್ಕ ಉಡುಪಿ ಕುಂದಾಪುರದಲ್ಲೋ, ಅಥವಾ ಇಲ್ಲೇ ಬಾರ್ಕೂರಿನ ಏಳು ಕೇರಿಗಳಲ್ಲೋ, ಅಥವಾ ಬಸ್ರೂರು ಪೇಟೆಯಲ್ಲೋ ನಡೆದ ಘಟನೆಗೆ ಪೂರಕವಾಗಿರುತ್ತದೆ. ಉದಾಹರಣೆಗೆ, 'ಮೀನಾಕ್ಷಿ ಹಾಗೂ ಆಕೆಯ ಗಂಡನ ತ್ಯಾಗ' (ನಮ್ಮದೂ ಆಗಬಹುದಾದ ಕಥೆ) ಇದರಲ್ಲಿ ಸೊಗಸಾಗಿ ಗಂಡ ಹೆಂಡಿರ ಸಂಬಂಧ ಹೇಗಿರಬೇಕು!! ತಮಗಿಲ್ಲದಿದ್ದರೂ ಒಬ್ಬರನ್ನೊಬ್ಬರು ತಮ್ಮ ಸಂತೋಷವನ್ನು ಬದಿಗಿಟ್ಟು ಪರಸ್ಪರ ಇಬ್ಬರೂ ಅನ್ಯೋನ್ಯದಿಂದಿರಬೇಕು ಎನ್ನುವ ಸಂದೇಶವನ್ನು ಬಹಳ ಸೊಗಸಾಗಿ ನೀಡಿದೆ ಸ್ನೇಹಿತ್ರೆ.

ಎಲ್ಲಾ ಕಥೆಗಳ ಉಲ್ಲೇಖವನ್ನು ಖಂಡಿತವಾಗ್ಲೂ ನಾನಿಲ್ಲಿ ಮಾಡ್ಲಿಕ್ಕೆ ಹೋಗುವುದಿಲ್ಲ. ನಾವು–ನೀವು ದಿನನಿತ್ಯ ನೋಡುತ್ತಿರುವಂತ ಸನ್ನಿವೇಶಗಳನ್ನು ಮಾತ್ರ ಹೇಳ್ತೇನೆ. ಉದಾಹರಣೆಗೆ, 'ಟ್ರಾಫಿಕ್ ಪೋಲೀಸ್‌ಗೊಂದು ಪತ್ರ' ಮತ್ತು ರಾಜಕಾರಣಿಗಳು ಹೇಗೆ ಚುನಾವಣೆ ವೇಳೆ ಮಾತ್ರ ಜನರನ್ನು ಪುಸಲಾಯಿಸಿ ಯಾಮಾರಿಸುತ್ತಾರೆ ಎನ್ನುವ ಸಾಮಾನ್ಯದ ವಿಷಯ ಖಂಡಿತವಾಗಿಯೂ ಇಷ್ಟವಾಗದೇ ಇರುವುದಿಲ್ಲ.

ವಿಶೇಷ ಏನಂತ ಹೇಳಿದ್ರೆ ಹೆಚ್ಚಿನ ಕಥೆಗಳನ್ನು ಇವ್ರು ಪತ್ರದ

ಮೂಲಕ ವಿವರಿಸಿದ್ದಾರೆ. ಬಹುಷಃ ಇವರು ಪತ್ರಿಕೋದ್ಯಮದಲ್ಲಿದ್ದಿದ್ರೆ ಪತ್ರ ಬರೆಯುವ ಕಾರ್ಯದಲ್ಲಿ ತೊಡಗಿರ್ತಿದ್ರೋ ಏನೋ. ಪತ್ರ ಬರೆಯುವ ವಿಷಯದಲ್ಲಿ ಅಥವಾ ಪ್ರೀತಿ ಪ್ರೇಮ ಪ್ರಣಯದ ವಿಷಯಕ್ಕೆ ಬಂದರೆ ಇವರೆ ರೋಮಿಯೋ, ಮಜ್ನು, ರಾಂಝಾ ಎಲ್ಲವೂ ಆಗಿ ಬಿಡ್ತಾರೆ. ಅಷ್ಟು ನಾಜೂಕು ಹಾಗೂ ಅಷ್ಟು ನಿರ್ದಿಷ್ಟತೆ ಇದೆ.

ಬರೀ ಕಥೆಯ ಮೂಲಕ ಜನರನ್ನು ಭಾವಲೋಕಕ್ಕೆ ಕೊಂಡೊಯ್ಯದೇ ಜನರನ್ನು ವಿಜಯದತ್ತ ಕೊಂಡೊಯ್ಯುವ ಅನೇಕ ಸೂತ್ರಗಳು ಹಾಗೆ ಅದರ ಸ್ಫೂರ್ತಿಯ ಕಥೆಯನ್ನು ಹೇಳಿದ್ದಾರೆ ಸ್ನೇಹಿತ್ರೆ. ಉದಾಹರಣೆಗೆ: ಕೈ ಕಾಲು ಎರಡೂ ಇಲ್ಲ, ಇನ್ನೇನು ಜೀವನ ಮುಗ್ದೇ ಹೋಯ್ತು ಅನ್ನುವಷ್ಟರಲ್ಲಿ ನಿಕ್ ಜೆಸಿಕ್ ಮಾಡಿದ ಸಾಧನೆ (ಕೈ ಇಲ್ಲ, ಕಾಲಿಲ್ಲ, ಚಿಂತೆಯೂ ಇಲ್ಲ), ರಿಕ್ಷಾ ಡ್ರೈವರ್ ಮಗ ಐ.ಎ.ಎಸ್. ಪಾಸ್ ಮಾಡಿದ್ದು. ಬಸೇ ಗೌಡ ಕುರುಡನಾಗಿದ್ದರೂ ನಾಟ್ಯವನ್ನು ತನ್ನೆಡೆಗೆ ಒಲಿಸಿಕೊಂಡದ್ದು (ಅವನ ಕಣ್ಣಿಗೆ ನಾಟ್ಯ ಒಲಿಯಿತು) ಹಾಗೂ ಆ್ಯಕ್ಸಿಡೆಂಟ್‌ನಲ್ಲಿ ಸುಟ್ಟು ಹೋದ ಮಗಳನ್ನು ಅಮೆಂಡೋನಾ ಎನ್ನುವ ತಂದೆ ಉಳಿಸಿಕೊಂಡದ್ದು – ಇವೆಲ್ಲ ಖಂಡಿತವಾಗಿಯೂ ಸ್ಫೂರ್ತಿದಾಯಕ ಕಥೆಗಳು. ಇವರೆಲ್ಲ ನಿಜವಾದ ಬದುಕಿನ ಹೀರೋಗಳು. ಬದುಕನ್ನು ಎದುರಿಸಿ ನಿಲ್ಲಲು ಸ್ಫೂರ್ತಿದಾಯಕರು.

ಎಲ್ಲದರಲ್ಲೂ ನ್ಯಾಚುರಾಲಿಟಿ ಅಥವಾ ರಿಯಾಲಿಟಿ ತೋರಿಸಿರುವ ಮಣಿಕಾಂತ್‌ರವರು ಅಮ್ಮನ ವಿಷಯದಲ್ಲಿ ಯಾಕೋ ಸ್ವಲ್ಪ ಮೆಲೊಡ್ರಮಾಟಿಕ್ ಆಗಿ ನಾಚುರಾಲಿಟಿಯನ್ನು ಕಳೆದುಕೊಂಡಿದ್ದಾರೆ ಎನ್ನಬಹುದು. ಕಥೆ ಬ್ಲಾಕ್ ಆಂಡ್ ವೈಟ್ ಆದಾಗ ಅದು ಜನರ ಮನಸ್ಸಿಗೆ ತಲುಪುವುದು ಕಷ್ಟ. ಅಮ್ಮ ಎಂದಾಕ್ಷಣವೇ ಕಣ್ಣಲ್ಲಿ ಕೈಯಾಡಿಸುವಷ್ಟು ರೋಮಾಂಚನವಾಗಬೇಕು. ಅಮ್ಮನ ವಿಷಯದಲ್ಲಿ ಇನ್ನೂ ಸ್ವಲ್ಪ ನಾಚುರಾಲಿಟಿ ಇದ್ದರೆ ಪುಸ್ತಕ ಇನ್ನೂ ಉತ್ತಮವಾಗಿರುತ್ತಿತ್ತು. ಆದರೂ ಕನ್ನಡದ ಮಟ್ಟಿಗೆ ಇದೊಂದು ಒಳ್ಳೆ ಪುಸ್ತಕ.

ಮಣಿಕಾಂತ್‌ರವರು 'ಡಿಯರ್ ರೀಡರ್' ಎಂದು ಹೆಚ್ಚಿನ ಸಂದರ್ಭದಲ್ಲಿ ಹೇಳುವುದು ಕಂಡು ಬರುತ್ತದೆ. ಕಥೆ ಚೆನ್ನಾಗಿಲ್ಲ, ಓದುಗರಿಗೆ ಇಷ್ಟವಾಗುವುದಿಲ್ಲ ಅನ್ನುವ ಯಾವ ಅಂಶವೂ ಪುಸ್ತಕದಲ್ಲಿಲ್ಲ. ಖಂಡಿತವಾಗಿಯೂ ಇದು ಮನಸ್ಸಿಗೆ ಮುಟ್ಟುತ್ತದೆ. ಆದ್ರೂ ಯಾಕೆ ಅನ್ನುವುದು ಪ್ರಶ್ನೆ. ಬಹುಶಃ ಓದುಗರಿಗೆ ಹತ್ತಿರವಾಗುವ ಒಂದು ಪ್ರಯತ್ನ ಇರಬೇಕು. ಇದಕ್ಕೆ ಅವರೇ ಉತ್ತರ ಕೊಡಬೇಕು.

ಹರಿಚಿತ್ತಸತ್ಯ – ವಸುಧೇಂದ್ರ

– ಪಲ್ಲವಿ
ಪ್ರಥಮ ಬಿ.ಎಸ್ಸಿ.

ನಾನು ಕಾದಂಬರಿಯ ವಿಮರ್ಶೆಯನ್ನು ವಸುಧೇಂದ್ರರವರ 'ಹರಿಚಿತ್ತಸತ್ಯ' ಎನ್ನುವ ಕಾದಂಬರಿಯ ಮೂಲಕ ಬರೆಯಲಿಚ್ಛಿಸುತ್ತೇನೆ. ವಸುಧೇಂದ್ರ ಅವರು 1969ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಜನಿಸಿದರು. ಈ ಕಾದಂಬರಿಯನ್ನು ಅವರು ಬಿಜಾಪುರ ಮತ್ತು ಬೆಂಗಳೂರಿನಲ್ಲಿ ಬರೆದಿದ್ದರು. ಈ ಕಾದಂಬರಿಯು ಛಂದ ಪುಸ್ತಕ, ಮಂತ್ರಿ ಪ್ಯಾರಡೈಸ್, ಬನ್ನೇರು ಘಟ್ಟ ರಸ್ತೆ, ಬೆಂಗಳೂರು–76ರಲ್ಲಿ ಪ್ರಕಟಗೊಂಡಿದೆ.

ಕಾದಂಬರಿಯ ಮೊದಲನೆಯ ಭಾಗದಲ್ಲಿ ಬಳ್ಳಾರಿಯ ವಾತಾವರಣದ ಬಗ್ಗೆ ಹೇಳಿದ್ದಾರೆ. ಅಲ್ಲಿನ ರಣಬಿಸಿಲು ಮೈಸುಡುವಂಥದ್ದು. ರಸ್ತೆಯ ಕಡೆಗೆ ಮ್ಯಾಂಗನೀಸ್ ಅದಿರಿನ ಬೆಟ್ಟಗಳು, ಕಣಿವೆಯ ಕಡೆಯಲ್ಲಿ ಸ್ಥಗಿತಗೊಂಡು ನಿಂತ ಕೆಂಪು ನೀರು. ನೀರಿನ ಆಚೆ ಮತ್ತಷ್ಟು ಮ್ಯಾಂಗನೀಸ್ ಅದಿರಿನ ಬೆಟ್ಟಗಳು.

ಈ ಕಾದಂಬರಿಯಲ್ಲಿ ನಾನು ಎಲ್ಲಾ ಪಾತ್ರಗಳನ್ನು ಇಷ್ಟಪಡುತ್ತೇನೆ. ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರದ ಸನ್ನಿವೇಶಗಳು ಅರ್ಥಗಾಂಭೀರ್ಯವಾಗಿ, ಸರಳವಾದ ಭಾಷೆಯ ರೀತಿಯಲ್ಲಿ ಕಥೆ ಮೂಡುವುದಲ್ಲದೇ ಅಲ್ಲಿ ಬಳಸಿದ ಭಾಷೆಯ ಶೈಲಿ, ಕೆಲವೊಮ್ಮೆ ಓದುವ ಮಧ್ಯದಲ್ಲಿ ತಮಾಷೆ ಅನಿಸುತ್ತದೆ. ವಸುಧೇಂದ್ರರು ಕಣ್ಣಿಗೆ ಕಟ್ಟುವ ಹಾಗೆ ಕಾದಂಬರಿಯನ್ನು ಸೊಗಸಾಗಿ ವಿಶ್ಲೇಷಿಸಿದ್ದಾರೆ.

ಈ ಕಾದಂಬರಿಯಲ್ಲಿ ಪದ್ದಿ ಎನ್ನುವ ಪಾತ್ರ ಬಹಳ ಮುಖ್ಯವಾಗಿ ಎದ್ದು ಕಾಣುತ್ತದೆ. ಹಿಂದಿನ ಕಾಲದಲ್ಲಿ ಹೆಣ್ಣುಳಿಗೆ ಶಿಕ್ಷಣ ಕಲಿಯುವುದಿರಲಿ, ಮನೆಯಿಂದ ಹೊರಗೆ ಕಾಲಿಡಲು ಸ್ವಾತಂತ್ರ್ಯ ನೀಡುತ್ತಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಮ್ಮ ಪದ್ದಿಯು ಎಸ್.ಎಸ್.ಎಲ್.ಸಿ. ತನಕ ಓದುವುದು ದೊಡ್ಡ ಸಂಗತಿಯೇ ಆಗಿದೆ.

ನಮ್ಮ ಕಡೆಗಳಲ್ಲಿ ಹೆಣ್ಣನ್ನು ನೋಡಲು ಹುಡುಗನ ಕಡೆಯವರು ಮನೆಗೆ ಬಂದರೆ ಬಳ್ಳಾರಿಯಲ್ಲಿ ಮಾತ್ರ ಹುಡುಗನನ್ನು ನೋಡಲು ಹೆಣ್ಣಿನ ಕಡೆಯವರು ಬರುವುದು ಸಂಪ್ರದಾಯ. ಇಲ್ಲಿ ಪದ್ದಿಯು ಹುಡುಗನನ್ನು ನೋಡುವ ಸಲುವಾಗಿ ಸಂಡೂರಿಗೆ ಬಂದು ಅಲ್ಲಿಯ ಪ್ರಕೃತಿಯ ಸೌಂದರ್ಯವನ್ನು ಅನುಭವಿಸುತ್ತಾ ಅಲ್ಲಿನ ರಣಬಿಸಿಲಿನ ನಡುವೆಯೂ ಹಳ್ಳದ ಮೇಲಿಂದ ಬೀಸುತ್ತಿದ್ದ ಸಂಗಾತಿ ಮೈಗೆ ಹಿತವನ್ನು ನೀಡುತ್ತಿದ್ದುದನ್ನು ವಿಶ್ಲೇಷಿಸಿದ್ದಾರೆ.

ಪದ್ದಿಯು ಹುಡುಗನ ಮನೆಯಲ್ಲಿ ಒಡ್ಡಿದ ಎಲ್ಲಾ ಪರೀಕ್ಷೆಗಳಲ್ಲಿ ಗೆದ್ದು ಇನ್ನೇನು ಹುಡುಗನನ್ನು ನೋಡಬೇಕೆಂದು ತಲೆ ಎತ್ತಿದ ಪದ್ದಿ ಒಮ್ಮೆಲೆ ಆತನ ತಲೆಯಲ್ಲಿದ್ದ ಬಿಳಿಕೂದಲನ್ನು ನೋಡಿ ತನಗೆ ಹುಡುಗ ಬೇಡವೆಂದು ನಿರಾಕರಿಸಿಬಿಟ್ಟ ಘಟನೆಯು ಆಕೆಯ ಕೇವಲ ಆತನ ತಲೆಯಲ್ಲಿದ್ದ ಬಿಳಿಕೂದಲನ್ನು ನೋಡಿ ನಿರಾಕರಿಸಿದಳೆ ವಿನಃ ಆತನ ಭಾವನೆಗಳನ್ನು ಆಕೆ ಅರ್ಥಮಾಡಿಕೊಳ್ಳಲಿಲ್ಲ.

ನನಗೆ ಈ ಕಾದಂಬರಿಯಲ್ಲಿ ಹೆಚ್ಚಾಗಿ ಆಸಕ್ತಿ ಮೂಡಿಸಿದ ಸಂಗತಿಯೆಂದರೆ ಪದ್ದಿಯ ಜೀವನದಲ್ಲಿ ಬರುವ ಅಪರಿಚಿತ ವ್ಯಕ್ತಿ. ಆತನು ಪದ್ದಿಯ ಜೀವನದ ದಿನನಿತ್ಯದ ಚಟುವಟಿಕೆಗಳನ್ನು ಚಿತ್ರದ ಮೂಲಕ ರಚಿಸಿ ಅವಳಿಗೆ ಸಿಗುವ ಹಾಗೆ ಮಾಡುವ ರೀತಿ ಬಹಳ ಕುತೂಹಲದಾಯಕವಾಗಿದೆ. ಮೊದಲು ಅವಳಿಗೆ ಅಪರಿಚಿತನ ನಡವಳಿಕೆಯಿಂದ ಭಯವಾದರೂ ನಂತರ ಆತನ ಮೇಲೆ ಏನೋ ಆಸಕ್ತಿ ಬೆಳೆಯುವ ಭಾವನೆಯನ್ನು ನೋಡಬಹುದು. ಅವನನ್ನು ನೋಡಲೇಬೇಕೆಂಬ ಆಸಕ್ತಿಯಿಂದ ಆತನು ಹೇಳಿದ ಬೆಟ್ಟದ ಕಡೆಯ ಜಾಗಕ್ಕೆ ಹೋಗಿ ಅವನ ಬರುವಿಕೆಗಾಗಿ ಕಾದೂ ಕಾದೂ ಕೊನೆಗೆ ಅವಳ ಕೈಗೆ ಒಂದು ಆಕೆ ಆ ಬೆಟ್ಟದದಲ್ಲಿ ಕೂತ ದೃಶ್ಯದ ಚಿತ್ರವನ್ನು ಬರೆಯಲಾಗಿತ್ತು. ಅವಳಿಗೆ ಆದ ಆ ಭಯದ ಅನುಭವವು ಅವಳಿಗೆ ಅದೆಷ್ಟೋ ದಿನಗಳ ಕಾಲ ನಿದ್ದೆ ಮಾಡುವುದನ್ನೇ ನಿಲ್ಲಿಸಿ ಬಿಟ್ಟಿತು.

ಆದರೂ ಈ ಕಾದಂಬರಿಯಲ್ಲಿ ಬರುವ ಆ ಅಪರಿಚಿತ ವ್ಯಕ್ತಿ ಯಾರೆಂದು ಕೊನೆಯತನಕ ಗೊತ್ತಾಗದೇ ಇರುವುದು ಪ್ರಶ್ನೆಯಾಗಿಯೇ ಉಳಿದಿದೆ. ಈ ಕಥೆಯಲ್ಲಿ ಬರುವ ಆ ಅಪರಿಚಿತ ವ್ಯಕ್ತಿ ಯಾರೆಂದು ತಿಳಿಯಬೇಕಾಗಿತ್ತು ಎನ್ನುವುದು ನನ್ನ ಒಂದು ಅಭಿಪ್ರಾಯ. ಇದು ನನ್ನ ಪ್ರಶ್ನೆ ಮಾತ್ರವಲ್ಲ ಈ ಕಾದಂಬರಿಯನ್ನು ಓದುವ ಪ್ರತಿಯೊಬ್ಬ ಓದುಗರ ಪ್ರಶ್ನೆ ಆಗಿರುತ್ತದೆ ಎನ್ನುವುದು ನನ್ನ ಭಾವನೆ.

ಈ ಕಾರಣದಿಂದಾಗಿ ಪದ್ದಿಯನ್ನು ನೋಡಲು ಬರುವ ಬೇರೆ ಹುಡುಗನ ಮನೆಯವರು ಆಕೆಯನ್ನು ಮದುವೆಯಾಗಲು ಒಪ್ಪದೆ ಅವಳು ಹಾಗೆ ಉಳಿಯುತ್ತಾಳೆ. ಆ ಒಂದು ನೋವಿನ ಸ್ಥಿತಿಯಲ್ಲಿ ಖಾಯಿಲೆಯಿಂದಾಗಿ ಪದ್ದಿಯು ತನ್ನ ತಾಯಿಯನ್ನು ಕಳೆದುಕೊಂಡು ಒಬ್ಬಂಟಿಯಾಗುವ ಸನ್ನಿವೇಶವು ಮನಃಕಲಕುವಂತಿದೆ. ನಂತರ ಸರಿಯಾದ ಚಿಕಿತ್ಸೆಯಿಂದಾಗಿ ಅವಳು ಕೊನೆಗೆ ಗುಣಮುಖಳಾಗುತ್ತಾಳೆ.

ಕಾದಂಬರಿಯ ಕೊನೆಯಲ್ಲಿ ಎಲ್ಲಾ ಧಾರವಾಹಿ, ಸಿನಿಮಾಗಳಲ್ಲಿ ಬರುವ ಕೊನೆಯ ದೃಶ್ಯದಂತೆ ಅವಳು ಮೊದಲು ಬಿಳಿ ಕೂದಲು ಇದೆ ಎನ್ನುವ ಕಾರಣದಿಂದ ಯಾವ ಹುಡುಗನನ್ನು ನಿರಾಕರಿಸಿರುತ್ತಾಳೋ ಅದೇ ಹುಡುಗನನ್ನು ಮದುವೆಯಾಗಿ ಸುಖದಿಂದ ಆತನ ಜೊತೆ ಜೀವನ ನಡೆಸುತ್ತಾಳೆ. ಹಾಗಾಗಿ ಈ ಕಾದಂಬರಿಯ ಕೊನೆಯ ದೃಶ್ಯವು ಖುಷಿಯ ದೃಶ್ಯವಾಗಿ ಮುಗಿಯುವುದನ್ನು ನಾನು ಇಷ್ಟಪಡುತ್ತೇನೆ. ಏಕೆಂದರೆ ಇಲ್ಲಿ ಪದ್ದಿ ಎನ್ನುವ ಪಾತ್ರದ ಮೂಲಕ ಬರುವ ಹುಡುಗಿಯ ಜೀವನದಲ್ಲಿ ಆಕೆ ಒಬ್ಬಂಟಿಯಾಗಿ ಉಳಿಯದೆ ಕೊನೆಗೂ ಅವಳ ಜೀವನದಲ್ಲಿ ಅವಳ ಸಂಗಾತಿಯಾಗಿ ಆತನ ಗಂಡ ಇರುವುದು ಅವಳ ಒಬ್ಬಂಟಿತನವನ್ನು ದೂರ ಮಾಡಿದೆ. ಹಾಗಾಗಿ ಈ ಕಾದಂಬರಿಗೆ ಒಂದು ಒಳ್ಳೆಯ ಮುಕ್ತಾಯ ಸಿಕ್ಕಿರುವುದು ಓದುಗರ ಪಾಲಿಗೆ ಖುಷಿಯ ವಿಚಾರ ಎನಿಸಿದೆ.

ಹುತ್ತದ ಸುತ್ತಮುತ್ತ – ಗುರುರಾಜ್ ಸನಿಲ್

– ಪ್ರೀತಿಕಾ

ದ್ವಿತೀಯ ಬಿ.ಎಸ್ಸಿ. 'ಎ'

ಭಾರತ ದೇಶದ ಮೂಢನಂಬಿಕೆ, ಅಂಧಶ್ರದ್ಧೆಗಳ ಆಚರಣೆಯನ್ನು ಬಣ್ಣಿಸಬೇಕಾಗಿದೆ. ಇದಕ್ಕೆ ಕಾರಣ ಹುತ್ತದ ಸುತ್ತಮುತ್ತ ಎನ್ನುವ ಪುಸ್ತಕ. ಉಡುಪಿ ಜಿಲ್ಲೆಯ ಉರಗ ತಜ್ಞ ಎಂದೇ ಪ್ರಸಿದ್ಧರಾಗಿರುವ ಗುರುರಾಜ್ ಸನಿಲ್ ಇದರ ಲೇಖಕರು.

ಸಾಮಾನ್ಯವಾಗಿ ಶಾಂತಿ ದೊರಕುವುದು ಒಂದು ಪುಸ್ತಕವನ್ನು ಓದು ಮುಗಿಸಿದ ನಂತರವೆ. ಆದರೆ ಗುರುರಾಜ್ ಸನಿಲ್ ಅವರ ಪುಸ್ತಕಗಳನ್ನು ಓದಿದವರಿಗೆ ಶಾಂತಿ ಎನ್ನುವುದು ದೂರದ ಮಾತು. ಹೊಸ ಹೊಸ ವಿಚಾರಗಳನ್ನು ಹುಟ್ಟು ಹಾಕುವ ಅವರ ಕೃತಿಗಳು ಓದುಗರನ್ನು ಕೂಡ ಅನ್ವೇಷಣೆಯೆಡೆಗೆ ಕೊಂಡೊಯ್ಯುತ್ತದೆ.

ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯದಿದ್ದರೂ, ಉರಗಗಳ ಮತ್ತು ಅರಣ್ಯಗಳ ಸಂರಕ್ಷಣೆಯಲ್ಲಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ವಿಶಾಲ ಹೃದಯ ಹೊಂದಿದ ಲೇಖಕರು. ಗುರುರಾಜ್ ಸನಿಲ್ ಇವರ ಕೃತಿಗಳಲ್ಲಿ ಮುಖ್ಯವಾಗಿ ನಾಗಾರಾಧನೆಯ ಹೆಸರಿನಲ್ಲಿ ನಡೆಯುವ ಅಂಧಶ್ರದ್ಧೆ, ಮೂಢನಂಬಿಕೆ, ದಂಧೆಗಳು ಹಾಗೂ ಅದರೊಂದಿಗೆ ನಡೆಯುವ ಪರಿಸರದ ಮೇಲಿನ ಅತ್ಯಾಚಾರಗಳೆಲ್ಲವೂ ಬೆಳಕಿಗೆ ಬರುತ್ತದೆ.

ಮೂಢನಂಬಿಕೆಗಳ ಪ್ರಪಂಚದಲ್ಲಿ ಸಂಚಲನ ಎಬ್ಬಿಸಿರುವ ಅವರ ಇನ್ನೊಂದು ಕೃತಿಯೇ 'ಹುತ್ತದ ಸುತ್ತಮುತ್ತ.' ಹಾವುಗಳೇ ಕೇಂದ್ರವಾಗಿರುವ ಈ ಕೃತಿಯು ಪರಿಸರದ ಮೇಲಿನ ಕಾಳಜಿಯಿಂದ ಕೂಡಿದೆ. ನಾಗಾರಾಧನೆಯ ಮೂಲ ಆಶಯದಿಂದ ಹಿಡಿದು ಆಧುನಿಕ ಕಾಲ 'ಹೈಟೆಕ್ ನಾಗಾರಾಧನೆ'ವರೆಗೂ ಲೇಖಕರು ಈ

ಕೃತಿಯಲ್ಲಿ ಚರ್ಚಿಸಿದ್ದಾರೆ.

ಗುರುರಾಜ್ ಸನಿಲ್ ಅವರ ಸುಮಾರು ಮೂವತ್ತೈದು ವರ್ಷಗಳ ಉರಗಗಳ ಜೊತೆಗಿನ ಒಡನಾಟದ ಅನುಭವವನ್ನು ಈ ಕೃತಿಯಲ್ಲಿ ಬಿಂಬಿಸಿದ್ದಾರೆ. ಒಂದೊಮ್ಮೆ ಗುರುರಾಜರು ಹಾವು ಹಿಡಿಯಲು ಹೋದ ಸಂದರ್ಭದಲ್ಲಿ ಆ ಹಾವು ಕೈಗೆ ಸಿಗದೆ ತಪ್ಪಿಸಿಕೊಂಡಿತು, ಗಾಬರಿಯಾಗಬೇಕಾದ ಮನೆಮಂದಿಯೆಲ್ಲ ಯಾವ ಆತಂಕವನ್ನೂ ತೋರ್ಪಡಿಸದೆ, 'ಅದು ದಲಿತರ ಕೇರಿಯ ನಾಗರಹಾವು. ಹೋದರೆ ಹೋಗಲಿ. ಆ ಹಾವುಗಳು ಮಾತ್ರ ಕಪ್ಪು ಬಣ್ಣದಲ್ಲಿರುತ್ತದೆ. ಆದರೆ ಮೇಲ್ಜಾತಿಗೆ ಸೇರಿದ ನಾರಗಹಾವುಗಳು ಚಿನ್ನದ ಬಣ್ಣದಲ್ಲಿರುತ್ತದೆ' ಎಂದು ತಮ್ಮ ಮೇಲ್ಜಾತಿಯನ್ನು ತೋರಿಸಿಕೊಳ್ಳುತ್ತಾ ಹೇಳುತ್ತಾರೆ. ಇಲ್ಲಿ ಓದುಗರಿಗೆ ದಲಿತರ ಕೇರಿಯ ನಾಗರಹಾವಿನ ಪರಿಚಯವಾಗುತ್ತದೆ. ಜನರು ಹಾವುಗಳಲ್ಲಿಯೂ ಜಾತಿಭೇದ ಮಾಡಿರುವುದು ಅತಿರೇಕವೆನಿಸುತ್ತದೆ.

ತಮ್ಮ ಕುಟುಂಬದ ದೈವಾರಾಧನೆ ಮತ್ತು ನಾಗಾರಾಧನೆಯ ಬಗ್ಗೆಯೂ ಹೇಳಿರುವ ಲೇಖಕರು ಇಂದಿನ ಜನರು ನಾಗಬನಗಳ ಜೀರ್ಣೋದ್ಧಾರದ ಹೆಸರಲ್ಲಿ ಅರಣ್ಯಗಳ ಮೇಲೆ ನಡೆಸುವ ಅತ್ಯಾಚಾರದ ಬಗ್ಗೆಯೂ ಒತ್ತಿ ತಿಳಿಸಿದ್ದಾರೆ. ಅನೇಕ ಸಾಮಾಜಿಕ, ಆರ್ಥಿಕ ಮತ್ತು ದೈಹಿಕ ಸಮಸ್ಯೆ, ಕಷ್ಟಕಾರ್ಪಣ್ಯಗಳ ಪರಿಹಾರಕ್ಕೆ ಹೊರಟ ಶ್ರೀಮಂತ ಜನರು ಕೇವಲ ಜ್ಯೋತಿಷ್ಯರು ಮತ್ತು ಕೃತ್ರಿಮ ಮಂತ್ರವಾದಿಗಳ ಬಲೆಗೆ ಬಿದ್ದು, ಅನಾದಿ ಕಾಲದಿಂದಲೂ ನಿಸರ್ಗದ ಮಡಿಲಲ್ಲೇ ಆರಾಧನೆಗೊಳ್ಳುತ್ತಿದ್ದ ದೈವ ಸಂಕೇತಗಳಾದ ಮುರಕಲ್ಲು, ಶಿಲೆಗಳನ್ನು ಕಿತ್ತು ಪ್ರಕೃತಿಯಿಂದ ಬೇರ್ಪಡಿಸಿ, ಕಾಂಕ್ರೀಟ್ ಕಟ್ಟಡದೊಳಗೆ ಬಂಧಿಸಿ, ಲಕ್ಷಾಂತರ ವೆಚ್ಚದಲ್ಲಿ ನಾಗಸ್ಥಾನ, ಜೀರ್ಣೋದ್ಧಾರ ಮಾಡುವುದಿದೆ. ದುರಂತವೆಂದರೆ ಮೂಲ ನಾಗಾರಾಧನೆಗೆ ಸಂಬಂಧವೇ ಇಲ್ಲದ ಅನೇಕ ಮೌಢ್ಯಾಚರಣೆಗಳನ್ನು ಮಂತ್ರವಾದಿಗಳ ಆಜ್ಞೆಯಂತೆ ಪಾಲಿಸುವುದು ಕೆಡುಕೆನಿಸುವ ವಿಚಾರ.

ಆರಂಭದಲ್ಲಿ ನಾಗಾರಾಧನೆಯನ್ನು ಅಂದಿನ ಪುರೋಹಿತರೆಲ್ಲರೂ ನಾಟಕೀಯ ಆಡಂಬರದಾಚರಣೆಗಳಿಲ್ಲದೆ ಕೇವಲ ನಾಗವೆಂಬ ನೈಸರ್ಗಿಕ ಶಕ್ತಿಯ ಮೇಲಿನ ನಿರ್ಮಲ ಭಯಭಕ್ತಿಯಿಂದಲೇ ಉಪಾಸನೆ ಮಾಡುತ್ತಿದ್ದರು. ಇಂದಿನ ಹಾಗೆ ಸಹಜವಾಗಿ ಸಂಭವಿಸುತ್ತಿದ್ದ ರೋಗರುಜಿನ, ಆರ್ಥಿಕ ಅಥವಾ ಇನ್ನಿತರ ಸಮಸ್ಯೆಗಳಿಗೆಲ್ಲಾ ಆ ಪುರೋಹಿತರು ನಾಗದೋಷ, ನಾಗನಡೆ, ನಾಗಬೀದಿ ಕಾರಣ ಎಂಬ ಅಸಂಬದ್ಧವನ್ನು ನುಡಿಯುತ್ತಿರಲಿಲ್ಲ.

ಗುರುರಾಜರ ಪ್ರಕಾರ ನಾಗಾರಾಧನೆ ಮೂಲತಃ ನಿಸರ್ಗಾರಾಧನೆಯ ಸಂಕೇತ. ಅಂದರೆ ನಾಗರಹಾವಿನೊಂದಿಗೆ ಅನೇಕ ಕ್ರೂರವನ್ಯಪ್ರಾಣಿಗಳನ್ನು, ಪವಿತ್ರ ವೃಕ್ಷಗಳನ್ನು ಪೂಜಿಸುವ ಒಂದು ಮಹತ್ವದ ಪ್ರಕ್ರಿಯೆ ಈ ಆಚರಣೆಯಲ್ಲಡಗಿದೆ. ಭಾರತವೇ ಈ ವಿಶಿಷ್ಟಾಚರಣೆಯ ತವರೂರು. ಬೇರೆಲ್ಲಾ ವಿಷಕಾರಿ, ಅಪಾಯಕಾರಿ ಹಾವುಗಳನ್ನು ಬಿಟ್ಟು ನಾಗರಹಾವನ್ನೇ ಪೂಜಿಸಲು ಕಾರಣವೂ ಇದೆ. ನಾಗರಹಾವಿನ ಮುಖ್ಯ ವಿಶೇಷತೆ ಎಂದರೆ ಇತರೆಲ್ಲಾ ಹಾವುಗಳಿಗಿಂತಲೂ ಇದು ಬಹು ಸುಂದರವಾದ ನಯನಮನೋಹರ ಉರಗ. ಕಣ್ಣರೆಪ್ಪೆ ಮುಚ್ಚಿ ತೆಗೆಯುವಷ್ಟರಲ್ಲಿ ತೀಕ್ಷ್ಣವಾಗಿ ಕಡಿದು, ವಿಷ ಉಣಿಸಿ, ಕಡಿತಕ್ಕೊಳಗಾದ ಜೀವಿ ಮರುಘಳಿಗೆಯಲ್ಲಿ ವಿಲವಿಲ ಒದ್ದಾಡಿ ಇಹಲೋಕ ತ್ಯಜಿಸುವಂತೆ ಮಾಡಬಲ್ಲ ಸಾಮರ್ಥ್ಯದ ವಿಷವಿರುವ ನಾಗರಹಾವೆಂಬ ಉರಗಕ್ಕೂ, ಆ ಕಾಲದಲ್ಲಿ ಔಷಧೋಪಚಾರವಿರಲಿಲ್ಲ. ತಮ್ಮ ಕಲ್ಪನೆಗೂ ನಿಲುಕದ ಭಯಾನಕ ಭವ್ಯಶಕ್ತಿ ನಾಗರಹಾವೆಂದೂ ಪೂಜಿಸಲು ಶುರುವಿಟ್ಟರು. ಬೆಳೆ ಸಂರಕ್ಷಣೆಯಲ್ಲೂ ಇದರ ಪಾತ್ರ ಅಪಾರ. ಬೆಳೆ ನಾಶಗೊಳಿಸುವ ಕ್ರಿಮಿ–ಕೀಟ ಇಲಿ–ಹೆಗ್ಗಣಗಳನ್ನು ನಾಶಗೊಳಿಸಿ ಶೇಕಡಾ 30ರಷ್ಟು ಬೆಳೆಯನ್ನು ಸಂರಕ್ಷಿಸಿ ರೈತನಿಗೆ ನೆರವಾಗುತ್ತದೆ.

ಗುರುರಾಜರು ಪ್ರಶ್ನಿಸುವ ಹಾಗೆ ನಾರಗಹಾವು 'ಕೃಷಿ ಸಮೃದ್ಧಿ ದೇವತೆ' ಆದರೆ ಅದು ಮೃತ್ಯುದೇವತೆಯಾಗಲು ಹೇಗೆ ಸಾಧ್ಯ? ನಾಗನೆಂದರೆ 'ಆಸ್ತಿ, ಹಣ, ಅಂತಸ್ತು ಮತ್ತು ರೋಗರುಜಿನ ತರುವ ಭಯೋತ್ಪಾದಕ ದೇವತೆ' ಎಂದು ಇಂದಿನ ಧಾರ್ಮಿಕ ವಲಯ ಸಾರುತ್ತಿದೆ. 'ಸೋರಿಯಾಸಿಸ್, ಸರ್ಪಸುತ್ತು ಎಂಬ ವ್ಯಾಧಿಗಳು ನಾಗದೋಷದಿಂದಲೇ ಬರುವುದು ಎಂದು ಕೆಲವು ಪುರೋಹಿತವರ್ಗ ಪ್ರಚಾರ ಮಾಡುವುದು ಹೇಯಕರ ಸಂಗತಿ. ಸೋರಿಯಾಸಿಸ್ ಎನ್ನುವುದು ಚರ್ಮಕ್ಕೆ ಸಂಬಂಧಪಟ್ಟ ವ್ಯಾಧಿ. ಅದು ಚಳಿಗಾಲದಲ್ಲಿ ಉಲ್ಬಣಗೊಂಡು ಬೇಸಿಗೆಗಾಲದಲ್ಲಿ ತನ್ನ ಚಟುವಟಿಕೆಯನ್ನು ನಿಲ್ಲಿಸುತ್ತದೆ. ಅಂತೆಯೇ ಸರ್ಪಸುತ್ತು ಕೂಡ ಚಿಕನ್ ಪಾಕ್ಸ್ ಅನ್ನು ಹರಡುವ 'ಹರ್ಪೆಸ್ ಝೂಸ್ಟರ್' ಎಂಬ ವೈರಾಣುವಿನಿಂದಲೇ ಬರುವುದು. ಇದಕ್ಕೂ ನಾಗರಹಾವಿಗೂ ಯಾವ ಕೊಂಡಿಯೂ ಇಲ್ಲ. ಅದರಂತೆಯೇ ನಾಗನಡೆ, ನಾಗಬೀದಿಗಳೆಂಬುದು ಕೂಡ ಪುರೋಹಿತವರ್ಗದ ಲಾಭದಾಯಕ್ಕಾಗಿ ಕಂಡುಕೊಂಡ ಕುಂಟುನೆಪಗಳಷ್ಟೆ.

'ಮಹಿಳೆ ಮತ್ತು ನಾಗಾರಾಧನೆ' ಈ ಕುರಿತಾಗಿಯೂ ಗುರುರಾಜರು ಚರ್ಚಿಸಿದ್ದಾರೆ. ನಮ್ಮ ಪೂರ್ವಜರ ಕಾಲದಲ್ಲಿ ಧಾರ್ಮಿಕಾಚರಣೆಗಳಲ್ಲಿ ಮಹಿಳೆಗೆ ಎಲ್ಲಾ ಆಚರಣೆಗಳು ಪೂರಕವಾಗಿದ್ದವು. ಆದರೆ ಬರಬರುತ್ತಾ ಅದು ವಿಕೃತಗೊಂಡು ಮಹಿಳೆಯನ್ನೇ ಶೋಷಿಸುವ ಮಾರಕ ಆಚರಣೆಯಾಗಿ ಪರಿಣಮಿಸಿದೆ.

ನಂಬಿಕೆ, ಮೂಢನಂಬಿಕೆಗಳ ಹಿಂದಿರುವ ಅಜ್ಞಾನ, ಭಯ, ಆ ಕಾರಣದಿಂದಲೇ ನಂಬಿಕೆ ಮೌಢ್ಯತೆಗಳು ಹುಟ್ಟುವುದು. ಕೆಲವು ದುರಾಸೆ ಪೀಡಿತ ಮುಗ್ಧರ, ದುರ್ಬಲರ ಮೇಲೆ ಮೂಢನಂಬಿಕೆ, ದ್ವಂದ್ವ ಗೊಂದಲಗಳನ್ನು ಹೊರಿಸುತ್ತಾ ಶ್ರೀಮಂತರಾಗುತ್ತಾರೆ. 'ನಾಗರಹಾವು ನಿಧಿ ಕಾಯುತ್ತದೆ, ಹಾವನ್ನು ದಾಟಬಾರದು,

ಗರ್ಭಿಣಿಯರು ಹಾವನ್ನು ನೋಡಲೇಬಾರದು, ನಾಗರಹಾವಿಗೆ ಕೈ ತೋರಿಸಬಾರದು, ನಾರಗ ಹಾವಿನ ನೆತ್ತಿಯಲ್ಲಿ ನಾಗಮಣಿ, ಮಾಣಿಕ್ಯವಿರುತ್ತದೆ. ಕೊಳಕುಮಂಡಲದ ಹಾವು ಕಚ್ಚಿದರೆ ಅದರ ಮೈಮೇಲಿನ ಕಟ್ಟು ಎಣಿಸುವಷ್ಟರಲ್ಲಿ ಕಚ್ಚಿಸಿಕೊಂಡ ವ್ಯಕ್ತಿ ಸಾಯುತ್ತಾನೆ, ಕೇರೆ ಹಾವು ಬಾಲದಿಂದ ಹೊಡೆದರೆ ಜೀವಿಯ ಮೂಳೆಯೇ ಮುರಿಯುತ್ತದೆ. ಇನ್ನೂ ನೂರಾರು ಕೆಟ್ಟ ನಂಬಿಕೆಗಳು ಪ್ರಚಲಿತದಲ್ಲಿವೆ ಎಂದು ಗುರುರಾಜ್ ಸನಿಲ್ ಹೇಳುತ್ತಾರೆ.

ಗುರುರಾಜರು ಹಾವು ಕಡಿತಕ್ಕೂ ಪ್ರಥಮ ಚಿಕಿತ್ಸೆ ವಿಧಾನವನ್ನು ತಿಳಿಸಿಕೊಟ್ಟು ಕೊನೆಯದಾಗಿ ಶಾಸ್ತ್ರವಿಧಿಗಳಿಂದ ಅಪಾಯದ ಅಂಚಿಗೆ ನಿಲುಕಿರುವ ಹುತ್ತ ಮತ್ತು ವೃಕ್ಷಪ್ರಭೇದಗಳ ರಕ್ಷಣೆಯ ಸಲುವಾಗಿ ಓದುಗರೊಂದಿಗೆ ಮನವಮುಟ್ಟುವಂತೆ ವಿನಂತಿಸಿಕೊಂಡಿದ್ದಾರೆ.

ಹಾವುಗಳನ್ನು ಹೂವುಗಳಂತೆ ಸಲೀಸಾಗಿ ಹಿಡಿಯುವ ಗುರುರಾಜ್ ಸನಿಲ್‌ರವರು ತಮ್ಮ ನಿಸ್ವಾರ್ಥ ಸ್ವಭಾವದಿಂದ ಇಂದಿನ ಯುವಜನತೆಗೆ ಮಾದರಿಯಾಗಿದ್ದಾರೆ.

ಅಬ್ದುಲ್ ಕಲಾಂರವರ ಆತ್ಮಕಥನ "ಅಗ್ನಿಯ ರೆಕ್ಕೆಗಳು" ಪುಸ್ತಕದ ವಿಮರ್ಶೆ

– ಅಯ್ಯಪ್ಪ ಹೊಸಮನಿ
ಪ್ರಥಮ ಬಿ.ಎ.

ನಾನು ಈಗ ಬರೆಯಲು ಹೊರಟಿರುವುದು ರಾಮೇಶ್ವರ ದ್ವೀಪದ ಮಸೀದಿ ರಸ್ತೆಯಲ್ಲಿ ಹುಟ್ಟಿ ನೂರು ಕಾಲ ಬಾಳಿ ಮನುಷ್ಯನಾಗಿ ಮಡಿದ ಜೈನುಲಾಬ್ದಿನ್ ಮಗನ ಕುರಿತು. ಅಯ್ಯಾ ದೊರೈ, ಸೊಲೇಮಾನ್ ಮತ್ತು ಶಿವ ಸುಬ್ರಹ್ಮಣ್ಯಂ ಅಯ್ಯರ್ ತಿದ್ದಿದ್ದ ಒಬ್ಬ ಹುಡುಗನ ಬಗ್ಗೆ ಪಾಂಡಲೈಯವರಂಥ ಶಿಕ್ಷಕರು ಬೋಧಿಸಿದ ಒಬ್ಬ ವಿದ್ಯಾರ್ಥಿಯದ್ದು. ಪ್ರೊ॥ ಸಾರಾಬಾಯಿ ಅವರಿಂದ ಕಲಿತ ಒಬ್ಬ ಇಂಜಿನಿಯರ್‌ನ ಕಥೆ. ಸೋಲನ್ನು ಮತ್ತು ಯಶಸ್ಸುಗಳನ್ನು ಸಮಾನವಾಗಿ ಸ್ವೀಕರಿಸಿ ಓರ್ವ ವಿಜ್ಞಾನಿಯ ಯಶೋಗಾಥೆಯ ಬಗ್ಗೆ.

ತನ್ನ ಸಹೋದರನಿಗೆ ನೆರವು ನೀಡಲು ದಿನಪತ್ರಿಕೆ ಹಂಚಿದ ಓರ್ವ ಬಾಲಕ ಅವರೆ ನಮ್ಮೆಲ್ಲರ ಪ್ರೀತಿಯ ಡಾ॥ ಎ. ಪಿ. ಜೆ. ಅಬ್ದುಲ್ ಕಲಾಂ. ಇವರ ಪೂರ್ಣ ಹೆಸರು ಅವುಲ್ ಫಕೀರ್ ಜೈನಿಲಬ್ದೀನ್ ಅಬ್ದುಲ್ ಕಲಾಂ. ಇವರು ತಮಿಳುನಾಡು ರಾಜ್ಯದ ರಾಮೇಶ್ವರಂನಲ್ಲಿ 15 ಅಕ್ಟೋಬರ್ 1931ರಂದು ತಮಿಳು ಮುಸ್ಲಿಮ್ ಕುಟುಂಬದಲ್ಲಿ ಜಿನಿಸಿದರು. ಅವರ ತಂದೆಯ ಹೆಸರು ಜೈನುಲಾಬ್ದೀನ್. ಅವರು ದೋಣಿ ಮಾಲೀಕರಾಗಿದ್ದರು. ತಾಯಿ ಆಶಿಮಾ ಗೃಹಿಣಿಯಾಗಿದ್ದರು. ಕಲಾಂ ಅವರ ತಂದೆ ಈಗ ನಿರ್ನಾಮವಾದ ಧನುಷ್ಕೋಡಿ ಮತ್ತು ರಾಮೇಶ್ವರಂ ನಡುವೆ ತಮ್ಮ ದೋಣಿಯಲ್ಲಿ ಹಿಂದೂ ಭಕ್ತಾದಿಗಳನ್ನು ಕರೆದುಕೊಂಡು ಹೋಗುತ್ತಿದ್ದರು. ಕಲಾಂ ಅವರು ಕುಟುಂಬದ ನಾಲ್ಕು ಜನ ಸಹೋದರರು ಮತ್ತು ಒಬ್ಬ ಸಹೋದರಿಯಲ್ಲಿ ಅತ್ಯಂತ ಕಿರಿಯರಾಗಿದ್ದರು. ಅವರು ಬಡ ಹಿನ್ನೆಲೆಯಿಂದ ಬಂದವರು ಮತ್ತು ತಮ್ಮ ಕುಟುಂಬಕ್ಕೆ ಆರ್ಥಿಕವಾಗಿ ಬೆಂಬಲಿಸುವ ಸಲುವಾಗಿ ಕಿರಿಯ ವಯಸ್ಸಿನಲ್ಲೇ ಕೆಲಸ ಆರಂಭಿಸಿದರು. ಅವರು ಶಾಲೆಯ ನಂತರ ತಮ್ಮ ಸಂಸೂದ್ದಿನ್ ಕಲಾಂ ಜೊತೆಗೆ ಪತ್ರಿಕೆಗಳನ್ನು ವಿತರಣೆ ಮಾಡುತ್ತಿದ್ದರು. ಹೀಗೆ ತಮ್ಮ ಎಳೆಯ ವಯಸ್ಸಿನಲ್ಲಿಯೇ ಕಠಿಣ ಪರಿಶ್ರಮದಿಂದ ಕೆಲಸ ಮಾಡುತ್ತಾ ವಿದ್ಯಾಭ್ಯಾಸಕ್ಕೆ ಗಮನ ಹರಿಸುತ್ತಿದ್ದರು. ಅಬ್ದುಲ್ ಕಲಾಂ ಅವರು ಬರೆದ 'ವಿಂಗ್ಸ್ ಆಫ್ ಫಯರ್' ಎಂಬ ಆತ್ಮಕಥನದ ಕುರಿತು ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳುತ್ತೇನೆ.

ಈ ಆತ್ಮಕಥೆಯನ್ನು ಶ್ರೀ ಜಯಪ್ರಕಾಶ್ ಪುತ್ತೂರವರು ಕನ್ನಡಕ್ಕೆ ಅನುವಾದಿಸಿದರು. ಅದುವೆ 'ಅಗ್ನಿಯ ರೆಕ್ಕೆಗಳು.' ಈ ಆತ್ಮಕಥನದ ಬಗ್ಗೆ ವಿಮರ್ಶೆ ಬರೆಯಲು ತುಂಬಾ ಸಂತೋಷವಾಗುತ್ತಿದೆ. ಮತ್ತು ಕುತೂಹಲ ಕಲಾಂರವರ ಆತ್ಮಕಥನ ಬರೆಯುವೆನಲ್ಲ, ನಾನೇ ಪುಣ್ಯವಂತ.

ಒಬ್ಬ ಬಡವನು ಕಷ್ಟ–ಸುಖ, ದುಃಖ–ನೋವು–ನಲಿವುಗಳಲ್ಲಿದ್ದುಕೊಂಡು ತಾನು ಕೂಡ ಕನಸು, ಆಸೆ, ಆಕಾಂಕ್ಷೆಗಳು, ಶ್ರದ್ಧೆ, ಭಕ್ತಿ, ವಿನಯತೆ, ಪ್ರಾಮಾಣಿಕತೆಯಿಂದ ತಮ್ಮ ತಮ್ಮ ಗುರಿಯನ್ನು ಅವಲಂಬಿಸಿ ಕಾರ್ಯ ನಿರತರಾದರೆ ಗುರಿ, ಯಶಸ್ಸು ಕಾಣಲು ಯಾವುದೇ ಅಡೆ–ತಡೆಗಳಿಲ್ಲದೆ ನಾವು ನಮ್ಮ ಬದುಕಿನಲ್ಲಿ ಯಶಸ್ಸು ಕಾಣಬಹುದು ಎಂದು ನಿರೂಪಿಸಿ ತೋರಿಸಿದ ಮಹಾವೀರ ಅಬ್ದುಲ್ ಕಲಾಂ ಅವರು.

ಮಹಾತ್ಮಾ ಗಾಂಧೀಜೀಯವರು ಬಡತನವೇ ಶಿಸ್ತನ್ನು ಕಲಿಸುವ ಪಾಠ ಎಂದು ಹೇಳಿದ್ದರು. ಹಾಗೆಯೇ, ಬಡತನ ಎನ್ನುವುದು, ಶಿಕ್ಷೆಯಾಗಲಿ, ನಮ್ಮ ದೌರ್ಬಲ್ಯವಾಗಲಿ, ಪಾಪವಾಗಲಿ ಅಲ್ಲ. ಅದು ನಮ್ಮ ಜೀವನವನ್ನು ರೂಪಿಸುವ ಒಂದು ಅಪರೂಪದ ಯಶಸ್ಸಿನ ಸೂತ್ರ ಎಂದು ಅಬ್ದುಲ್ ಕಲಾಂ ಅವರು ಜಗತ್ತಿಗೆ ಸಾರಿದರು.

ಕಲಾಂ ಅವರು ಬಡ ಕುಟುಂಬದಲ್ಲಿ ಹುಟ್ಟಿದ್ದು ಬಡತನ ಕಷ್ಟ ಎಂಬುದನ್ನು ತೊರೆದು ಕೇವಲ ಕನಸಿನಲ್ಲಿ ತಲ್ಲೀನರಾದರು. ಯಶಸ್ಸಿನ ಮೂಲ ಯಾವುದು ಎಂದು ಹುಡುಕುತ್ತಾ ಯಶಸ್ಸು ಹೇಗಿರುತ್ತೆ, ಏನೆಲ್ಲಾ ಮಾಡಿದರೆ ಯಶಸ್ಸು ಕಾಣಣಬಹುದು. ಅದರ ಮೂಲ ಸತ್ವ, ಸೂತ್ರವನ್ನು ಅರಿತುಕೊಂಡು ಉತ್ತರಿಸುವುದರ

ಜೊತೆಗೆ ಜಗತ್ತಿಗೆ ಮಾದರಿಯಾಗಿ ಜೀವನವನ್ನು ಪಾವನ ಮಾಡಿಕೊಂಡು ಆನಂದ ಸಾಗರದಲ್ಲಿ ನೆಮ್ಮದಿಯ ಜೀವನ ನಡೆಸಿದರು. ತಮ್ಮ ಬದುಕಿನಲ್ಲಿ ಎಂದಿಗೂ ಜಾತಿ–ಭೇದ–ಭಾವವಿಲ್ಲದೆ ಸೌಹಾರ್ದತೆಯಿಂದ ಸಂಯಮದಿಂದ ಎಲ್ಲರನ್ನು ಸಂತೋಷ ಪಡಿಸುತ್ತಾ ಗೆಳೆತನ ಎಂತಹದು ಎಂಬುದನ್ನು ತೋರಿಸಿ ಕೊಟ್ಟವರಲ್ಲಿ ಮೊದಲಿಗರು ಕಲಾಂ.

ಮದ್ರಾಸ್ ರಾಜ್ಯದ ಹಿಂದೂ ದ್ವೀಪಪಟ್ಟಣವಾದ ರಾಮೇಶ್ವರಂನ ಮಧ್ಯಮವರ್ಗ ತಮಿಳು ಕುಟುಂಬದಲ್ಲಿ ಜನಿಸಿದ ಕಲಾಂ ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಅಧ್ಯಾತ್ಮಿಕ ವಿಚಾರ ಕ್ಲಿಷ್ಟತೆಯನ್ನು ಮನದಟ್ಟು ಆಗುವಂತೆ ತೀರಾ ಸರಳ ತಮಿಳು ಭಾಷೆಯಲ್ಲಿ ಹೇಳುವ ಕಲೆ ಅವರಿಮದ ಸಿದ್ಧಿಸಿದ್ದರು. ಮನುಷ್ಯ ಎಲ್ಲಿದ್ದರೂ ಈ ಅನಂತ ವಿಶ್ವದ ಒಂದು ಅವಿಭಾಜ್ಯ ಅಂಗ. ಹೀಗಾಗಿ ಕಷ್ಟ, ಸಂಕಷ್ಟ, ಕೋಟಲೆಗಳ ಭಯವೇಕೆ. ಬಹು ಭವಿಷ್ಯದತ್ತ ಹೊಂದಿರುವುದು ಭಯ ಹಾಗೆ ಸಾಧನೆ ಹೊಂದಲು ಬೇಕಾಗಿರುವ ಆತ್ಮಶಕ್ತಿ ಅವುಗಳ ನಡುವಿನ ಅಂತರಂಗವನ್ನು ತಿಳಿಯಲು ನಾವು ಪರಯತ್ನಿಸಬೇಕೆಂಬುದನ್ನು ತಿಳಿಸಿದರು.

ಸಮುದ್ರ ಸಮೀಪದಲ್ಲಿ ಕೊಕ್ಕರೆ ಮತ್ತು ಇತರ ಹಕ್ಕಿಗಳು ನೆಲದಿಂದ ಹಾರುತ್ತಾ ಪಟಪಟನೆ ರೆಕ್ಕೆ ಹೊಡೆದು ಒಂದು ಕ್ಷಣ ಹಾಗೆಯೇ ತೇಲುತ್ತಾ ಮತ್ತೆ ಕೆಳಗೆ ಬಂದವು. ಹೀಗೆ ಕೆಳಗೆ ಬರುವುದು ಎಷ್ಟೊಂದು ಸುಂದರವಾದದ್ದು, ಅದನ್ನು ನೋಡುತ್ತಾ ನಿಂತಿದ್ದ ತೀರ ಪ್ರದೇಶದ ಹಳ್ಳಿಯ ಸಾಧಾರಣ ಹುಡುಗನಾದ ಕಲಾಂ ಅವರು ಯೋಚಿಸಿದ್ದು ಮುಂದೊಂದು ದಿನ ಖಂಡಿತ ಆಕಾಶಕ್ಕೇರುತ್ತೇನೆ ಎಂದು ಕನಸು ಕಂಡಿದ್ದೇ ಒಂದು ವಿಸ್ಮಯದ ಸಂಗತಿ.

ಹೀಗೆ ತಮ್ಮ ಬಾಲ್ಯದಲ್ಲಿ ಕಂಡ ಕನಸು ಮುಂದೊಂದುದಿನ ನನಸಾಗುತ್ತದೆ. ತಮಗೆ 'ಯಾವ ವಿಷಯಗಳು ಫಾಸಿಗೊಳಿಸುವುದೋ, ಅವು ನಮಗೆ ಶಿಕ್ಷಣ ನೀಡುತ್ತವೆ' ಎಂಬುದನ್ನು ಮೊದಲಿಗೆ ಜೀವನದಲ್ಲಿ ಅರಿತುಕೊಂಡರು ಕಲಾಂ.

ಅಬ್ದುಲ್ ಕಲಾಂರವರು ಕೇವಲ ವಿಜ್ಞಾನ ತಂತ್ರಜ್ಞಾನಗಳಲ್ಲಿ ಆಸಕ್ತಿ ವಹಿಸದೆ, ದೇಶ ಪ್ರೇಮ ಬೆಳೆಸಿಕೊಂಡು ಒಬ್ಬ ಶಿಕ್ಷಕನಾಗಿ, ಪ್ರಜೆಗಳಿಗೆ ಅತ್ಯುತ್ತಮ ರಾಷ್ಟ್ರಪತಿಯಾಗಿ, ಜಗತ್ತಿಗೆ ಯಶಸ್ಸಿನ ಮೂಲ ಸತ್ವವನ್ನು ತಿಳಿಸಿದ ಮಹಾನ್ ವ್ಯಕ್ತಿ. ಪ್ರಜೆಗಳೆ ದೇವರೆಂದು ನಾಡಿನ ಮತ್ತು ನಾಡಿನ ಜನತೆಯ ಬಗ್ಗೆ ಕಾಳಜಿ ವಹಿಸಿ ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಂಡರು. ರಾಷ್ಟ್ರಪತಿ ಅಬ್ದುಲ್ ಕಲಾಂರು.

ಕೊನೆಯವರೆಗೆ ತಮ್ಮ ಜೀವನವನ್ನು ಸಾರ್ಥಕ ಬದುಕು ನಡೆಸುವ ಮೂಲಕ ಹಲವಾರು ಯೋಜನೆಗಳು ಕೈಗೊಂಡು ಪ್ರತಿ ನಿಮಿಷವು ಕಾರ್ಯದಲ್ಲಿ ಮಗ್ನರಾಗಿ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ ಕಲಾಂರವರು ಈ ವೃತ್ತಿಯಿಂದ ಹೊರಬಂದು ತಮ್ಮ ಮುದ್ದು ಮಕ್ಕಳಿಗೆ ಪಾಠವನ್ನು ಜೀವನದ ಸಾರವನ್ನು ಹೇಳಿಕೊಟ್ಟು ಮಹಾತ್ಮ, ಅಧ್ಯಾಪಕನಾಗಿ ಕೊನೆಯವರೆಗೆ ಮಕ್ಕಳಿಗೆ ಅಧ್ಯಯನ ಭೋದಿಸುತ್ತಾ, ಮುಗ್ಧ ಮಕ್ಕಳ ಜೀವನವನ್ನು ಹಿಂದು ಸನ್ಮಾರ್ಗದಲ್ಲಿ ನಡೆಸಿದ. ಸಾಗರವೆಂಬ ಜೀವನದಲ್ಲಿ ತಿಳಿದುಕೊಂಡು ಬಾಳಿನಲ್ಲಿ ಕೊಂಡೊಯ್ದ ಪ್ರೀತಿಯ ನೇತಾಜಿ ಕಲಾಂ.

ಸಾಧನೆ: ಅಬ್ದುಲ್ ಕಲಾಂ ಅವರು ಮಾಡಿದ ಸಾಧನೆ ಅಪಾರ. ತಮ್ಮ ಎಳೆವಯಸ್ಸಿನಲ್ಲೆ ಯಶಸ್ಸನ್ನು ತಮ್ಮದಾಗಿಸುತ್ತಾ ಬಂದವರು. ಇವರ ಪ್ರಬಲವಾದ ಸಾಧನೆಗಳಲ್ಲಿ ಕೆಲವು ಪ್ರಶಸ್ತಿ, ಗೌರವವನ್ನು ಇಲ್ಲಿ ನಾವು ಗುರುತಿಸಬಹುದು.

ಡಿ.ಆರ್.ಡಿ.ಒ. ಹಾಗೂ ಇಸ್ರೋಗಳಲ್ಲಿ ವಿಜ್ಞಾನಿಯಾಗಿ ಕಾರ್ಯನಿರ್ವಹಿಸಿರುವ ಇವರು ಭಾರತದ ಅಣುಬಾಂಬ್ ಹಾಗೂ ಕ್ಷಿಪಣಿಗಳ ಜನಕ ಎಂದೇ ಪ್ರಸಿದ್ಧರಾದರು. ಸನ್ 1998ರಲ್ಲಿ ಪೋಖ್ರನ್–2 ನ್ಯೂಕ್ಲಿಯರ್ ಪರೀಕ್ಷೆಯಲ್ಲಿ ತಾಂತ್ರಿಕವಾಗಿ, ರಾಜಕೀಯವಾಗಿ ಪ್ರಧಾನ ಪಾತ್ರವನ್ನು ವಹಿಸಿದರು. ಆದರೂ ಇವರು ಅಪವಾದಗಳಿಂದ ದೂರವಿರಲಿಲ್ಲ. ಇವರು ರಾಷ್ಟ್ರಪತಿ ಆಗುವುದಕ್ಕೂ ಮುನ್ನ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆಯಲ್ಲಿ ವೈಮಾನಿಕ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದರು. ಇವರು ಭಾರತಕ್ಕೆ ಕ್ಷಿಪಣಿ ಹಾಗೂ ರಾಕೇಟ್ ತಂತ್ರಜ್ಞಾನವನ್ನು ತಯಾರಿಸಿರುವ ಕಾರಣ ಕ್ಷಿಪಣಿಗಳ ಜನಕ ಎಂದೇ ಕರೆಯಲ್ಪಟ್ಟಿದ್ದಾರೆ ಮತ್ತು ಜೆ.ಎಸ್.ಎಸ್. ವಿಶ್ವವಿದ್ಯಾಲಯ ಮತ್ತು ಅನೇಕ ಸಂಶೋಧನಾಲಯದಲ್ಲಿ ವೈಮಾನಿಕ ಪಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ. ಕಲಾಂ ಅವರು ಒಬ್ಬ ವಿಜ್ಞಾನಿಯಾಗಿ, ಓರ್ವ ಪ್ರಾಧ್ಯಾಪಕರಾಗಿ, ತಮಿಳು ಕವಿಯಾಗಿ ಹಾಗೆಯೇ ಒಬ್ಬ ಸಾಹಿತಿಗಾರನಾಗಿ, ವೀಣಾವಾದಕರು ಆಗಿದ್ದರು. ಹೀಗೆ ಹತ್ತು ಹಲವು ಉನ್ನತ ಹುದ್ದೆಗಳಲ್ಲಿ ಭಾಗವಹಿಸುವುದರ ಜೊತೆಗೆ ಕಾರ್ಯನಿರ್ವಹಿಸಿ ಅನೇಕ ಪ್ರಶಸ್ತಿಗಳಿಗೆ ಭಾಜನೆರಾಗಿದ್ದರು.

ಪ್ರಶಸ್ತಿಗಳು: ಯು.ಕೆ.2000ರಲ್ಲಿ ರಾಮಾನುಜನ್ ಪ್ರಶಸ್ತಿ, ಅಲ್ವಾಲ್ ಸಂಶೋಧನೆ ಕೇಂದ್ರ, ಚೆನ್ನೈ. 1998ರಲ್ಲಿ ವೀರ್ ಸಾವರ್ಕರ್ ಪ್ರಶಸ್ತಿ, ಭಾರತ ಸರ್ಕಾರ, 1997ರಲ್ಲಿ. ದೇಶದ ಐಕ್ಯತೆಯ ಇಂದಿರಾ ಗಾಂಧಿ ಪ್ರಶಸ್ತಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್. ಹಾಗೆಯೇ, 1997ರಲ್ಲಿ ಭಾರತರತ್ನ ಪ್ರಶಸ್ತಿಯನ್ನು ಪಡೆದುಕೊಂಡರು. ಈ ಪ್ರಶಸ್ತಿಯು ಭಾರತ ಸರ್ಕಾರವು ನೀಡಿತು. ಮತ್ತು ಯು.ಎಸ್.ಎ. 2008ರಲ್ಲಿ ಡಾಕ್ಟರ್ ಆಫ್ ಇಂಜಿನಿಯರಿಂಗ್ ತಾಂತ್ರಿಕ ವಿಶ್ವವಿದ್ಯಾನಿಲಯ, ಸಿಂಗಾಪುರ. 1990ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿಯು ಭಾರತ ಸರ್ಕಾರವು ನೀಡಿತು. ಹಾಗೆಯೇ 1983ರಲ್ಲಿ ಪದ್ಮಭೂಷಣ ಪ್ರಶಸ್ತಿ ಭಾರತ ಸರ್ಕಾರ. ಹೀಗೆ ಅನೇಕ ಪ್ರಸಿದ್ಧವಾದ ಪ್ರಶಸ್ತಿಗಳು ಅಬ್ದುಲ್ ಕಲಾಂ ಅವರು ಭಾಜನರಾಗಿದ್ದರು.

ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಕಲಾಂ: ಹೀಗೆ ಸಾಧನೆಯ ಹಾದಿಯಲ್ಲಿ ಬೆಳೆದು ಬಂದ ಕಲಾಂ ಅವರು ಭಾರತದ 11ನೆಯ

ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು. 2002ರಲ್ಲಿ ರಾಷ್ಟ್ರಪತಿ ಚುನಾವಣೆಯಲ್ಲಿ ಲಕ್ಷ್ಮೀ ಸೆಹಗಲ್ ವಿರುದ್ಧ 107,366 ಮತಗಳ ಮುನ್ನಡೆಯಲ್ಲಿ ಗೆದ್ದರು. 25ಜುಲೈ 2002ರಿಂದ 25ಜುಲೈ 2007ವರೆಗೆ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದರು. ಸರಳತೆ ಪ್ರಾಮಾಣಿಕತೆ ಮತ್ತು ಮೇಧಾವಿ ಆತನ ಸಾಕಾರದಂತಿರುವ ಕಲಾಂ ಅವರು ರಾಷ್ಟ್ರಪತಿ ಹುದ್ದೆಯ ಘನತೆಯನ್ನು ಹೆಚ್ಚಿಸದರು. ಜನಸಾಮಾನ್ಯರ ರಾಷ್ಟ್ರಪತಿ ಎಂಬ ಕೀರ್ತಿಗೆ ಪಾತ್ರರಾದರು. ಸ್ವತಃ ಬ್ರಹ್ಮಚಾರಿ ಆದ ಇವರಿಗೆ ಮಕ್ಕಳೆಂದರೆ ಬಲು ಪ್ರೀತಿ. ಮಕ್ಕಳೊಂದಿಗೆ ಬೆರೆತು ಉಪಯುಕ್ತ ಸಲಹೆ ಸೂಚನೆ ನೀಡುವುದು ಇವರ ಪ್ರೀತಿಯ ಹವ್ಯಾಸ.

ಹೀಗೆ ಒಬ್ಬ ಬಡಕುಟುಂಬದಿಂದ ಬಂದ ಹುಡುಗನು ಎಷ್ಟು ಎತ್ತರ ಬೆಳೆದು ಘನತೆ ಗೌರವ ಹೆಚ್ಚಿಸಿಕೊಂಡು ದೇಶದ ಒಳ್ಳೆಯ ಪ್ರಜೆಯಾಗಿ ದೇಶಸೇವೆ ಮಾಡಿ ದೇಶದ ಜನಜನಿತರಾಗಿದ್ದರು.

27 ಜುಲೈ 2015ರಲ್ಲಿ ಶಿಲ್ಲಾಂಗ್ ವಿದ್ಯಾಪೀಠ ಸೇಂಟ್ ಜೋಸೆಫ್ ಕಾಲೇಜ್, ತಿರುಚಿರಾಪಳ್ಳಿ, ಮದ್ರಾಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲೊಜಿ ಉದ್ಯೋಗ ಉಪನ್ಯಾಸಕ, ಲೇಖಕ, ವಿಜ್ಞಾನಿ, ರಾಷ್ಟ್ರಪತಿಯಾಗಿ ಕೊನೆಗೆ ಮಕ್ಕಳಿಗೆ ಪಾಠ ಮಾಡುತ್ತಲೇ ಒಬ್ಬ ಮಹಾತ್ಮ ಗುರುವಾಗಿ ತಾಯ್ನೆಲೆಯಲ್ಲಿ ಮಡಿದ ಮೇಧಾವಿ ಅಬ್ದುಲ್ ಕಲಾಂರವರು.

ಪ್ರೀತಿಯ ಗೆಳೆಯರೆ, ನಾವು ಪ್ರತಿಯೊಬ್ಬರ ಜೀವನವನ್ನು ಆಳವಾಗಿ ವೀಕ್ಷಿಸಿದರೆ ಒಂದಲ್ಲಾ ಒಂದು ನೋವು ನಲಿವಿನಲ್ಲಿ ಸಾಧನೆ ಮಾಡಿದ ಮಹಾಮೇಧಾವಿಗಳನ್ನು ನೋಡುತ್ತೇವೆ. ಯಾರಿಂದಲೂ ಆ ಕೆಲಸ ಆಗುವುದಿಲ್ಲ ಅನ್ನುವಹಾಗಿಲ್ಲ. ಪ್ರತಿಯೊಬ್ಬನ ಕೈಯಿಂದ ಸಾಧ್ಯ ಆದರೆ ಅದಕ್ಕೆ ತಾಳ್ಮೆ, ಗುರಿ, ಪರಿಶ್ರಮ, ಪ್ರಯತ್ನ ಮಾಡಿದರೆ ಪ್ರತಿಯೊಬ್ಬನಿಂದ ಸಾಧನೆಮಾಡಲು ಸಾಧ್ಯವಿದೆ.

ಹೀಗೆ ಬಡ ಕುಟುಂಬದಲ್ಲಿ ಸಾಧನೆ ಮಾಡಿದವರನ್ನು ನೆನಪಿಸಿಕೊಂಡರೆ ಸಾವಿರಾರು ಜನ ನಮ್ಮ ಕಣ್ಣೆದುರಿಗೆ ಬರುತ್ತಾರೆ. ಡಾ॥ ಬಿ.ಆರ್. ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ಎ.ಪಿ.ಜೆ.ಅಬ್ದುಲ್ ಕಲಾಂ, ಹಾಗೆಯೇ ನಮ್ಮ ಇಂದಿನ ಪ್ರಧಾನಿ ನರೇಂದ್ರ ಮೋದಿ, ಅಮೇರಿಕಾದ ಅಧ್ಯಕ್ಷ ಬರಾಕ್ ಒಬಾಮಾ, ಹೀಗೆ ಹಲವಾರು ಮೇಧಾವಿಗಳ ಆತ್ಮ ಚರಿತ್ರೆ ಓದಿದರೆ ನಾವೆಲ್ಲರೂ ಸಾಧನೆ ಮಾಡಲು ಸಾಧ್ಯವಿದೆ ಎನ್ನುವುದು ನನ್ನ ಅನಿಸಿಕೆ.

ವಂಶವೃಕ್ಷ

– ಎಸ್. ಎಲ್. ಭೈರಪ್ಪ

– ಪ್ರೀತಿಕಾ
ದ್ವಿತೀಯ ಬಿ.ಎಸ್ಸಿ. 'ಎ'

ಕನ್ನಡದ ಹಿರಿಮೆಯನ್ನು ಸದಾಕಾಲ ಸಮೃದ್ಧಗೊಳಿಸುತ್ತಿರುವವರು ಹಲವಾರು ಕವಿಗಳು. ಮಳೆಗಾಲದಲ್ಲಿ ಮುನ್ನುಗ್ಗುವ ಜಲಪಾತದಂತೆ ಓದುಗರಿಗೆ ರಸದ ಔತಣ ಕೊಡುವಂತಹ ಕಾದಂಬರಿಕಾರರು. ಹೀಗೆ ಹತ್ತು ಹಲವು ವೈವಿಧ್ಯತೆಗಳೊಂದಿಗೆ ಏಕತೆಯನ್ನು ಹೊಂದಿದ ಕನ್ನಡ ಸಾಹಿತ್ಯದ ಉಚ್ಛ್ರಾಯ ಸ್ಥಿತಿಯ ಬಗ್ಗೆ ತಿಳಿಸಬೇಕಿದೆ. ಕಾದಂಬರಿ ಕ್ಷೇತ್ರದಲ್ಲಿ ಅಪಾರ ಜನಮನ್ನಣೆಗಳಿಸಿದ ಕಾದಂಬರಿಯನ್ನೂ, ಆ ಕಾದಂಬರಿ ಪ್ರಕಾರವನ್ನೂ ಇನ್ನೊಂದು ಸ್ತರಕ್ಕೆ ಕೊಂಡೊಯ್ದವರು ಎಂದರೆ ಡಾ॥ ಎಸ್.ಎಲ್.ಭೈರಪ್ಪನವರು. ಅವರ ಕಾದಂಬರಿಗಳೆಂದರೇ ಹಾಗೆ, ಒಂದು ಸಲ ಅದನ್ನು ಹಿಡಿದರೆ ಸಾಕು. ಮತ್ತೆ ಆ ಕಾದಂಬರಿಯೇ ನಮ್ಮನ್ನು ಬಿಡುವುದಿಲ್ಲ. ವಾಸ್ತವತೆಯನ್ನು ಕೂಲಂಕುಷವಾಗಿ ವಿಮರ್ಶಿಸಿ ಸ್ಫುಟವಾಗಿ, ಸೂಚ್ಯವಾಗಿ ಅಕ್ಷರಗಳ ರೂಪದಲ್ಲಿ ಸ್ಖಲಿಸುತ್ತಾರೆ. ಅವರ ಕಾದಂಬರಿಗಳು ಎಷ್ಟರ ಮಟ್ಟಿಗೆ ವಾಸ್ತವತೆಗೆ ಹೊಮದುತ್ತವೆ ಎಂದರೆ, ಕಾದಂಬರಿಗಳನ್ನು 500 ವರ್ಷ ಮುಂದೆ ತೆಗೆದುಕೊಂಡು ಹೋದರೂ ಅದು ಸತ್ಯವಾಗಿರುತ್ತದೆ. 500 ವರ್ಷಗಳ ಹಿಂದೆ ತೆಗೆದುಕೊಂಡು ಹೋದರೂ ಸತ್ಯ ಆಗಿರುತ್ತದೆ.

ವಂಶವೃಕ್ಷ, ನೆಲೆ, ಅಂಚು, ದಾಟು, ಮುಂತಾದ ಭೈರಪ್ಪನವರ ಕಾದಂಬರಿಗಳಲ್ಲಿ ನನಗೆ ಅತ್ಯಂತ ಪ್ರಿಯವಾದದ್ದೆಂದರೆ ವಂಶವೃಕ್ಷ. ಏಕೆಂದರೆ, ಸನಾತನ ಮೌಲ್ಯಗಳನ್ನು ತ್ಯಜಿಸುತ್ತಿರುವ ಈ ಕಾಲದಲ್ಲಿ ಸಂಸ್ಕಾರ, ಸಂಸ್ಕೃತಿ, ಸತ್ಕಾರ ಎಂಬಿತ್ಯಾದಿ ಮೌಲ್ಯಗಳ ಕುರಿತು ಸಾದ್ಯಂತವಾಗಿ ವಿವರಿಸಿದ್ದಾರೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಉಕ್ತಿಯಂತೆ ಜೀವನ ಮಾಡಿದರೆ ತನಗೂ ನೋವಾಗದೆ, ಇತರರಿಗೂ ನೋವಾಗದಂತೆ ಬಾಳಬಹುದು ಎಂದು ಈ ಕಾದಂಬರಿಯ ಮೂಲಕ ತೋರಿಸಿದ್ದಾರೆ. ವಂಶದ ವೃಕ್ಷ ಬೆಳೆಯುವ ಪರಿ, ಕಾಪಾಡುವ ಪರಿಯ ಬಗ್ಗೆ ಭೈರಪ್ಪನವರು ಬಹಳ ಭಾವಪೂರ್ಣರಾಗಿ ಬರೆದಿದ್ದಾರೆ.

"ಒಂದು ವಂಶದ ಬೀಜವು ಮುಂದುವರಿಯುವುದಕ್ಕಾಗಿಯೇ ಒಂದು ಕ್ಷೇತ್ರವನ್ನು ಬೇರೊಂದು ವಂಶದವರು ದಾನ ಮಾಡುತ್ತಾರೆ. ಆ ವಂಶದ ಬೀಜವನ್ನು ತನ್ನಲ್ಲಿ ಬೆಳೆಸಿ ವೃಕ್ಷವನ್ನಾಗಿ ಮಾಡಿದ ಮೇಲೆ ಆ ಕ್ಷೇತ್ರವು ತನ್ನ ಸಾರ್ಥಕ್ಯವನ್ನು ಪಡೆಯುತ್ತದೆ" ಎಂಬ ಈ ಪ್ರಕೃತಿ ಪುರುಷ ಸಮಾಗಮದ ತತ್ತ್ವವು ಹೆಣ್ಣು, ಗಂಡಿನ ಜವಾಬ್ದಾರಿಯನ್ನು ತೋರಿಸುತ್ತದೆ. ಇಲ್ಲಿ ಅಕ್ರಮಕ್ಕೆ ಜಾಗವಿಲ್ಲ. ಹೀಗೆ ಕುಡಿಯಿಂದ ಕುಡಿಯುವ ಯಾವುದೇ ಅಕ್ರಮ ಮಾಡದೇ

ವಂಶದ ಗೌರವ ಕಾಪಿಟ್ಟುಕೊಂಡು ಹೋಗಬೇಕು ಎನ್ನುವುದು ವಂಶವೃಕ್ಷದ ತಾತ್ಪರ್ಯ.

ಈ ವಂಶವೃಕ್ಷ ಕಾದಂಬರಿಯಲ್ಲಿ ಬರುವ ಶ್ರೀನಿವಾಸ ಶ್ರೋತ್ರಿಗಳು ತಮ್ಮ ವಂಶದ ಗೌರವ ಕಾಪಿಟ್ಟುಕೊಳ್ಳುವ ದೃಷ್ಟಿಯಿಂದಲೇ ಜೀವನ ಸಾಗಿಸುತ್ತಾರೆ. ಶ್ರೋತ್ರಿಗಳ ಸೊಸೆ, ಕಾತ್ಯಾಯಿನಿ ತನ್ನ ಗಂಡ ಸತ್ತನಂತರ ಕಾಲೇಜು ಶಿಕ್ಷಣ ಮುಂದುವರೆಸುತ್ತಿರುವಾಗ ಪ್ರೀತಿಯಲ್ಲಿ ಬಿದ್ದು ಶ್ರೋತ್ರಿಗಳ ಬಳಿ, ಅವರ ಮದುವೆಗೆ ಒಪ್ಪಿಗೆಯನ್ನು ಕೇಳಿದಾಗ, ಶ್ರೋತ್ರಿಗಳು "ಒಮ್ಮೆ ತಾಯಿಯಾದವಳು ಎಂದೆಂದಿಗೂ ತಾಯಿಯೇ. ಪುನಃ ಕನ್ಯೆಯಂತೆ ಹೊಸ ಪಕ್ಷಿತ್ವವನ್ನು ಪ್ರಾರಂಭಿಸುವುದು ಹೇಗೆ? ವಿಕಾಸದ ಓಟದಲ್ಲಿ ಒಂದು ಘಟ್ಟದಿಂದ ಹಿಂದಿನ ಘಟ್ಟಕ್ಕೆ ಅನುಭವವು ಹಿಂದಿರುಗುವುದು ಸೃಷ್ಟಿಯ ನಿಯಮಕ್ಕೇ ವಿರೋಧವಾದುದು. ವಿಕಾಸಪಥದಲ್ಲಿ ಒಮ್ಮೆ ಕಳೆದ ಸ್ತರವನ್ನು ಪುನಃ ಬಯಸುವುದು ಪಾಪವಾಗುತ್ತದೆ" ಎಂದು ತಿಳಿವಳಿಕೆ ಹೇಳುತ್ತಾರೆ. ಆದರೂ ಮದುವೆ ಆಗುತ್ತಾಳೆ. ಮುಂದೆ ಮೊದಲನೇ ಗಂಡನಿಂದ ಹುಟ್ಟಿದ ಮಗುವನ್ನು ಕಾತ್ಯಾಯಿನಿ ಕೇಳಲು ಬಂದಾಗಲೂ ಅಷ್ಟೇ ನಿರ್ಲಕ್ಷಿಸಿ, ನಿಷ್ಠುರ ಭಾವದಿಂದ 'ಕೊನೆ ನಿರ್ಣಯದ ಸ್ವಾತಂತ್ರ್ಯ ನಿನ್ನದೇ. ಮಗುವನ್ನು ಕೈ ಎತ್ತಿ ನಿನಗೆ ಕೊಡುವ ಅಧಿಕಾರ ನನಗಿಲ್ಲ. ವಂಶದ ಒಂದು ಕೊಂಬೆಯನ್ನು ಛೇದಿಸಿ ದಾನಮಾಡುವ ಅಧಿಕಾರ ಮತ್ತೊಂದು ಕೊಂಬೆಗಿಲ್ಲ. ಒಂದು ಪಕ್ಷ ನೀನೇ ಮಗೂನ ಕರೆದುಕೊಂಡು ಹೋದೆ ಅನ್ನು, ಮುಂದೆ ಅದು ಅಭಿಮಾನದಿಂದ ಶ್ರೋತ್ರಿಯ ವಂಶದ ಹೆಸರು ಹೇಳುವಂತೆ ನೀನು ಬೆಳೆಸಬಲ್ಲೆಯಾ? ತಾನು ಹುಟ್ಟಿದ ವೀರ್ಯದ ಪ್ರಜ್ಞೆ ಅದಕ್ಕಿರಬೇಡವೇ? ತನ್ನ ತಂದೆಗೂ ಇತರ ಪಿತೃಗಳಿಗೂ ಶ್ರಾದ್ಧ ಮಾಡಿ ಋಣ ಸಲ್ಲಿಸುತ್ತೆಯೇ?" ಎಂದು ಕೇಳುತ್ತಾರೆ. ಹೀಗೆ ಕಾದಂಬರಿ ಸಾಗುತ್ತಾ ಹೋಗುತ್ತದೆ. ಕೊನೆಗೆ ತಾನು ಇಷ್ಟು ದಿನ ಅಂದುಕೊಂಡಿದ್ದ ತಂದೆ ಅಲ್ಲವೇ ಅಲ್ಲ ಎಂದು ತಿಳಿದಾಗ ಭೂಮಿಯ ಆಳವರಿಯದ ಗರ್ಭದಿಂದ ಹುಟ್ಟಿ ಮುಗಿಲಿನವರೆಗೂ ಬೆಳೆಯುತ್ತಿರುವ ವೃಕ್ಷ ಒಂದರಲ್ಲಿ ತಾವು ಒಂದು ಕೊನೆ, ಈಗ ಯಾರೋ ಆ ಕೊನೆಯನ್ನು ಕತ್ತರಿಸಿ ಹಾಕಿದ ಅನುಭವವಾಗಿ ನಿರ್ಲಿಪ್ತತೆಯು ವೈರಾಗ್ಯಕ್ಕೆ ತಿರುಗಿ ಸನ್ಯಾಸತ್ವಕ್ಕೆ ಮನ ಮಾಡುತ್ತದೆ.

ಜೀವನದ ಆದರ್ಶ ಡೋಲಾಯಮಾನವಾದಾಗ ಜೀವನವೇ ಬರಡಾಗುತ್ತದೆ. ಯಾವ ವಿಚಾರಕ್ಕೂ ಕೋಪಗೊಳ್ಳದೇ, ದುಃಖ ಪಡದೇ ಸಹನೆಯೇ ಮೂರ್ತಿವೆತ್ತಂತಿರುವ ಶ್ರೋತ್ರಿಗಳ ಸಾರ್ವಕಾಲಿಕ, ಸರ್ವರಿಗೂ ಆದರ್ಶಪ್ರಾಯರು ಅಲ್ಲವೇ? ಬದುಕಿನ ಸೂಕ್ಷ್ಮ, ಸಂಕೀರ್ಣ ನೆಲೆಗಳ ಆಳಕ್ಕಿಳಿದು ಪ್ರಖರವಾದ ವೈಚಾರಿಕ, ತಾತ್ವಿಕ, ಮಾನವೀಯ ಅಂಶಗಳನ್ನು ಸಂವೇದನಾಶೀಲತೆಯಿಂದ ಶೋಧಿಸುವ ಕಾದಂಬರಿ ವಂಶವೃಕ್ಷ.

ನ ಚಿರಂ ಪಾಪಕರ್ಮಾಣಃ ಕ್ರೂರಾ ಲೋಕಜುಗುಪ್ಸಿತಾಃ ।
ಐಶ್ವರ್ಯಂ ಪ್ರಾಪ್ಯ ತಿಷ್ಠಂತಿ ಶೀರ್ಣಮೂಲಾ ಇವ ದ್ರುಮಾಃ ॥

ಕೆಟ್ಟ ಕೆಲಸವನ್ನು ಮಾಡುತ್ತಿರುವ, ಕ್ರೂರರಾಗಿರುವ ಪಾಪೀಷ್ಠವ್ಯಕ್ತಿಗಳು ಅಧಿಕಾರ ಸಂಪತ್ತು ಮೊದಲಾದವುಗಳನ್ನು ಹೊಂದಿದರೂ ಸತ್ತು ಹೋದ ಬೇರುಗಳುಳ್ಳ ಮರಗಳಂತೆ ಬಹಳಕಾಲ ಅವರು ಉಳಿಯುವುದಿಲ್ಲ.

ನೂನಂ ದುಗ್ಧಾಬ್ಧಿಮಂಥೋತ್ಥಾವಿಮೌ ಸುಜನದುರ್ಜನೌ ।
ಕಿಂತ್ವಿಂದೋಃ ಸೋದರಃ ಪೂರ್ವಃ ಕಾಲಕೂಟಸ್ಯ ಚೇತರಃ ॥

ನಿಶ್ಚಯವಾಗಿಯೂ ಸಜ್ಜನ ಮತ್ತು ದುರ್ಜನ ಇವರಿಬ್ಬರು ಕ್ಷೀರಸಾಗರದ ಮಥನದಿಂದ ಹುಟ್ಟಿದವರು. ಆದರೆ ಅವರಲ್ಲಿ ಮೊದಲಿನವನು ಅದರಿಂದಲೇ ಹುತ್ತಿದ ಚಂದ್ರನ ಸಹೋದರನು ನಂತರದವನು ಅದರಿಂದಲೇ ಹುಟ್ಟಿದ ಕಾಲಕೂಟದ ಸಹೋದರ.

ಉತ್ತಮಃ ಕ್ಲೇಶವಿಕ್ಷೋಭಂ ಕ್ಷಮಃ ಸೋಢುಂ ನಹೀತರಃ ।
ಮಣಿರೇವ ಮಹಾಶಾಣಘರ್ಷಣಂ ನ ತು ಮೃತ್ಕಣಃ ॥

ಯೋಗ್ಯನು ಮಾತ್ರ ದುಃಖದಿಂದ ಉಂಟಾಗುವ ಕ್ಷುಬ್ಧತೆಯನ್ನು ಸಹಿಸಲು ಸಮರ್ಥನಾಗಿತ್ತಾನೆ. ಸಾಧಾರಣ ವ್ಯಕಿಯಲ್ಲ. ದೊಡ್ಡದಾದ ಒರೆಗಲ್ಲಿನ ಘರ್ಷಣೆಯನ್ನು ಮಣಿ ಸಹಿಸಬಹುದೇ ಹೊರತು ಮಣ್ಣಿನ ಹೆಂಟೆಯಲ್ಲ.

ಸ್ವಭಾವಂ ನೈವ ಮುಂಚಂತಿ ಸಂತಃ ಸಂಸರ್ಗತೋ ನೃಣಾಮ್ ।
ನ ತ್ಯಜಂತಿ ರುತಂ ಮಂಜು ಕಾಕಸಂಪರ್ಕತಃ ಪಿಕಾಃ ॥

ಒಳ್ಳೆಯವರು ದುರ್ಜನರ ಸಂಪರ್ಕವಾದರೂ ತಮ್ಮ ಸ್ವಭಾವವನ್ನು ಬಿಡುವುದಿಲ್ಲ. ಕಾಗೆಗಳ ಸಂಪರ್ಕವಾದರೂ ಕೋಗಿಲೆಗಳು ತಮ್ಮ ಮನೋಹರವಾದ ಕೂಗನ್ನು ಬಿಡುವುದಿಲ್ಲ.

ಸ್ವಭಾವಂ ನ ಜಹಾತ್ಯೇವ ಸಾಧುರಾಪದ್ಗತೋಽಪಿ ಸನ್ ।
ಕರ್ಪೂರಃ ಪಾವಕಸ್ಪೃಷ್ಟಃ ಸೌರಭಂ ಲಭತೇತರಾಮ್ ॥

ವಿಪತ್ತಿನಲ್ಲಿದ್ದರೂ ಸಜ್ಜನನು ತನ್ನ ಸ್ವಭಾವವನ್ನು ಬಿಡುವುದಿಲ್ಲ. ಕರ್ಪೂರವು ಬೆಂಕಿಯಿಂದ ಸ್ಪರ್ಶಿಸಲ್ಪಟ್ಟರೂ ಪರಿಮಳವನ್ನು ಹೊರಸೂಸಿಯೇ ಸೂಸುತ್ತದೆ.

ಮಹತಾಂ ತಾದೃಶಂ ತೇಜೋ ಯತ್ರ ಶಾಮ್ಯತ್ಯನೌಜಸಃ ।
ಅಸ್ತಂ ಯಾಂತಿ ಪ್ರಕಾಶೇನ ತಾರಕಾ ಹಿ ವಿವಸ್ವತಃ ॥

ಮಹಾತ್ಮರ ಪ್ರತಾಪವೆಂದರೆ ಅಂತಹದು ಎಲ್ಲಿ ಪ್ರತಾಪಶೂನ್ಯರ ಕಾಂತಿ ಶಮನವಾಗಿ ಬಿಡುತ್ತದೆ. ಸೂರ್ಯನ ಪ್ರಾಕಶವುಂತಾದರೆ ಸಾಕು ನಕ್ಷತ್ರಗಳ ಪ್ರಕಾಶವು ಅಸ್ತವನ್ನು ಹೊಂದುತ್ತವೆ.

ಪ್ರಾದೇಶಿಕ ಅಧ್ಯಯನ, ಕುಂದಗನ್ನಡ, ತುಳು, ಜನಪದ

ಐತಿಹಾಸಿಕ ಮಹತ್ವದ 'ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ' ಬಗೆಗಿನ ಒಂದು ಅಧ್ಯಯನ

ಪವಿತ್ರ ಎನ್, ದೀಪಾ ದಿವಾಕರ ಪೂಜಾರಿ,
ಸುಶೀಲ ಆರ್. ಶೇಟ್– ಪ್ರಥಮ ಬಿ.ಎ.

ಪೀಠಿಕೆ :

ಸುಬ್ರಹ್ಮಣ್ಯ ನಮ್ಮ ನಾಡಿನಲ್ಲಿ ಭಕ್ತಜನಪ್ರಿಯ ದೇವರಲ್ಲಿ ಅಗ್ರಗಣ್ಯ. 'ದೇವಸೇನಾ'! ಅವನು ಸಂತಾನಕಾರಕನೂ, ದೇಹಪೀಡೆಗಳ ನಿವಾರಕನೂ, ರಾಕ್ಷಸಪ್ರವೃತ್ತಿಗಳ ಸಂಹಾರಕನೂ, ಸುಖದಾಯಕನೂ ಆಗಿದ್ದಾನೆ. ಹಾಗಾಗಿಯೇ ಈ ತುಳುನಾಡಿನಲ್ಲಿ ಅಲ್ಲಲ್ಲಿ ಸ್ಕಂದ ಮಂದಿಗಳಿವೆ. ಅವುಗಳಲ್ಲಿ ಪುರಾತನ ಸ್ಕಂದ ಆರಾಧನಾ ಕೇಂದ್ರವೆಂದೇ ಪ್ರಸಿದ್ಧವಾದ ಪುರಾಣ, ಜಾನಪದ, ಇತಿಹಾಸಗಳ ಹಿನ್ನೆಲೆಯುಳ್ಳ ದೇವರು ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ, ಸುಖ, ಸಮೃದ್ಧಿ, ಕೃಷಿ ಅತಿಶಯತೆಯೊಂದಿಗೆ ಸತ್‌ಸಂತಾನವನ್ನು ಅನುಗ್ರಹಿಸುವ ಹಾಗೂ ಮಹಾವ್ಯಾಧಿಗಳನ್ನು ನಿವಾರಿಸುವ ಸುಬ್ರಹ್ಮಣ್ಯ ದೇವರು ಪಾದೆಬೆಟ್ಟಿನಲ್ಲಿ ಸುಬ್ರಾಯ ದೇವೆರ್ ಎಂದೇ ಪ್ರಸಿದ್ಧರು. ಭಕ್ತರ ಪಾಲಿನ ಅನನ್ಯ ರಕ್ಷಕ, ನಂಬಿದ ಭಕ್ತರಿಗೆ ಒಲಿಯುವ ದೇವರು, ಇಷ್ಟಾರ್ಥ ಸಿದ್ಧಿಸುವ ಒಡೆಯ, ಪಾತಾಳಕ್ಕಿಳಿದವರನ್ನು ಮೇಲಕ್ಕೆತ್ತುವ ಸಂರಕ್ಷಕ ಮುಂತಾದ ಅನ್ವರ್ಥ ನಾಮಗಳಿಂದ ಇಂದೂ ಪೂಜಿಸಲ್ಪಡುವ ಅಪೂರ್ವ ದೇವರು.

ಪಾದೆಬೆಟ್ಟು ಗ್ರಾಮಸ್ಥರು ಸುಮಾರು 1200 ವರ್ಷಗಳಿಂದ ಆರಾಧಿಸಿಕೊಂಡು ಬಂದಿರುವ ಶ್ರೀ ಸುಬ್ರಹ್ಮಣ್ಯ ದೇವಳದ ಆಡಳಿತವನ್ನು ಮಧ್ಯಯುಗೀನ (ತುಳುನಾಡಿನ) ಇತಿಹಾಸ ಕಾಲದಿಂದ ಪಡುಬಿದ್ರಿ ಬೀಡಿನ ಬಲ್ಲಾಳರ ಮನೆತನವು ನೋಡಿಕೊಳ್ಳುತ್ತಿದ್ದು ಮುಂದೆ ಕಾಲಾಂತರದಲ್ಲಿ ಅನೇಕ ಮನೆತನದವರಿಂದ ಆಡಳಿತ ಮುಂದುವರೆಯಿತು. ಈ ದೇವಳ ಯಾರಿಂದ ನಿರ್ಮಿಸಲ್ಪಟ್ಟಿತು ಎಂಬ ಕುರಿತು ಸ್ಪಷ್ಟ ಮಾಹಿತಿಗಳು ಲಭಿಸುವುದಿಲ್ಲ. ಆದರೆ ಇತಿಹಾಸ ಸಂಶೋಧಕರು ವ್ಯಕ್ತಪಡಿಸಿರುವ ಅಭಿಪ್ರಾಯ ಮತ್ತು ಎಲ್ಲೂರು ವಿಶ್ವನಾಥ ದೇವಾಲಯದ ವತಿಯಿಂದ ಮುದ್ರಣಗೊಂಡ ಎಲ್ಲೂರು ಮಹಾತ್ಮೆ ಎಂಬ ಸ್ಕಾಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿರುವ ಉಲ್ಲೇಖದಂತೆ ಇದು ಭಾರ್ಗವ ಮಹರ್ಷಿಯಿಂದ ಸ್ಥಾಪಿತವಾಗಿದೆ ಎಂದು ಹೇಳಲಾಗಿದೆ. ಉಡುಪಿ ತಾಲೂಕು, ಕಾಪು ಹೋಬಳಿಯಲ್ಲಿರುವ ಪಾದೆಬೆಟ್ಟು ದೇವಾಲಯವು ಪಡುಬಿದ್ರಿ–ಕಾರ್ಕಳ ಮಾರ್ಗವಾಗಿ ಒಂದು ಕಿ.ಮೀ. ಸಾಗಿ ಉತ್ತರಕ್ಕೆ ತಿರುಗಿದರೆ ಅಲ್ಲಿ ಸುಮಾರು 2 ಕಿ.ಮೀ. ದೂರದಲ್ಲಿದೆ. ಪಾದೆಬೆಟ್ಟಿನ ಒಂದು ಸುತ್ತು ಸುತ್ತಿದಾಗ ಲಭಿಸುವ ಸ್ಥಳನಾಮಗಳು, ಶಿಲಾಶಾಸನಗಳು, ಸ್ವಾರಸ್ಯಕರ ಕಥೆಗಳು, ದೇವಸ್ಥಾನಗಳು, ಬ್ರಹ್ಮಸ್ಥಾನಗಳು, ದೈವಸ್ಥಾನಗಳು, ನಾಗಬನಗಳು ಇವುಗಳ ಆಧಾರದಲ್ಲಿ ಪಾದೆಬೆಟ್ಟಿನ ಇತಿಹಾಸಕ್ಕೆ ಮರುವಿವರಣೆಯೊಂದನ್ನು ಬರೆಯಲು ಪ್ರಯತ್ನಿಸುತ್ತಿದ್ದೇವೆ.

ಕರ್ನಾಟಕದ ಕರಾವಳಿಯಲ್ಲಿ ನಾಗಾರಾಧನೆಯೊಂದಿಗೆ ಸುಬ್ರಹ್ಮಣ್ಯ ದೇವರ ಆರಾಧನೆ ತಳಕು ಹಾಕಿಕೊಂಡಿರುವುದು ಇಲ್ಲಿನ ವೈಶಿಷ್ಟ್ಯತೆ. ಇಲ್ಲಿ ವಿಶಿಷ್ಟ ನಂಬಿಕೆ ನಡವಳಿಕೆಯಿಂದ ಪೂಜೆಗೊಳ್ಳುವ ನಾಗಸುಬ್ರಹ್ಮಣ್ಯ ಸಮೀಕರಣವನ್ನು ಸಾಧಾರಣವಾಗಿ ವಿವರಿಸಲು ಪುರಾವೆಗಳು ಲಭಿಸುತ್ತದೆ. ಸುಬ್ರಹ್ಮಣ್ಯ ದೇವರು ಮತ್ತು ನಾಗದೇವರು ಇಬ್ಬರೂ ಸಂತಾನಕಾರಕ ದೇವರಾಗಿರುವುದರಿಂದ ಈ ಸಮೀಕರಣ ನಡೆದಿರಬಹುದು. ಈ ಊಹೆಗಿಂತಲೂ ಖಚಿತವಾದ ಆಧಾರವೊಂದು ಸ್ಕಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿದೆ. ಅದರ ಸಾರಾಂಶವೆಂದರೆ

ಕಾಶ್ಯಪನ ಮಗ ಗರುಡನು ಭಯದಿಂದ, ಮಾತೃಶಾಪದಿಂದಾಗಿ ಸರ್ಪಗಳನ್ನು ಕೊಂದು ತಿನ್ನುತ್ತಿದ್ದನು. ಗರುಡನ ಭಯದಿಂದ ಸರ್ಪಗಳು ಗಿರಿಗುಹೆಗಳಲ್ಲಿ ಅಡಗಿಕೊಂಡವು. ವಾಸುಕಿಯನ್ನು ಕಂಡ ಗರುಡನು ಅವನನ್ನು ಕೊಲ್ಲಲು ಹೋದಾಗ ಕಾಶ್ಯಪನು ತಡೆದನು. ಅಲ್ಲದೆ ವಾಸುಕಿಗೆ ಶಿವನನ್ನು ಕುರಿತ ತಪಸ್ಸು ಮಾಡಲು ತಿಳಿಸಿದನು. ಹೀಗೆ ವಾಸುಕಿಗೆ ಶಿವನೊಲಿದಾಗ ಗರುಡನಿಂದ ತನ್ನನ್ನು ರಕ್ಷಿಸು ಎಂದು ಬೇಡಿಕೊಂಡನು. ಆಗ ಶಿವನು 'ಕುಮಾರ ಪರ್ವತದಲ್ಲಿ ನನ್ನನ್ನು ಭಜಿಸಿಕೊಂಡಿರು. ಗರುಡನಿಂದ ನಿನಗೆ ತೊಂದರೆಯಾಗುವುದಿಲ್ಲ.

ಮುಂದೆ ನಮ್ಮ ಮಗ ಸ್ಕಂದನು ಹುಟ್ಟಿ ರಾಕ್ಷಸನನ್ನು ಕೊಂದು, ಇಂದ್ರನ ಮಗಳನ್ನು ಮದುವೆಯಾಗಿ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಬರುತ್ತಾನೆ. ಆಗ ತನ್ನ ಒಂದು ಅಂಶವನ್ನು ನಿನಗೆ ನೀಡುತ್ತಾನೆ' ಎಂದು ವಾಸುಕಿಗೆ ಅಭಯವನ್ನು ನೀಡುತ್ತಾನೆ. ಈ ರೀತಿಯಾಗಿ ವಾಸುಕಿಯು ಧಾರಾನದಿಯ ತೀರದಲ್ಲಿ ತಪಸ್ಸು ಮಾಡಿಕೊಂಡಿದ್ದು ಮುಂದೆ ಸುಬ್ರಹ್ಮಣ್ಯನ ಒಂದು ಅಂಶವನ್ನು ಪಡೆದು ಪೂಜೆಗೊಳ್ಳತೊಡಗುತ್ತಾನೆ.

ತುಳುನಾಡಿನ ಪ್ರಸಿದ್ಧ ಸ್ಕಂದ ಆರಾಧನಾ ಕೇಂದ್ರಗಳಲ್ಲಿ ಒಂದು ಪಾದೆಬೆಟ್ಟು ಸುಬ್ರಹ್ಮಣ್ಯ ದೇವಸ್ಥಾನ. ಇದು ಅತ್ಯಂತ ಪುರಾತನ ಮಾತ್ರವಲ್ಲ ಇದರಲ್ಲಿ ಹಲವಾರು ನಾಗದೇವರ ಕಲ್ಲುಗಳು ಇವೆ. ಹಾಗಾಗಿ ಸುಬ್ರಹ್ಮಣ್ಯನ ಆರಾಧನೆಯಲ್ಲಿ ಸ್ಥಳೀಯವಾದ

ನಾಗಾರಾಧನೆಯೂ ದಕ್ಷಿಣ ಭಾರತದಲ್ಲೆಲ್ಲಾ ಜನಪ್ರಿಯವಾದ ಕಾನನ ದೇವ ಸ್ಕಂದನ ಆರಾಧನೆಯೂ ಅಭೇದವೆಂಬಂತೆ ಸಮೀಕರಣಗೊಂಡಿರುವುದಕ್ಕೆ ಸ್ಪಷ್ಟ ಸಾಕ್ಷಿಗಳು ಸಿಗುತ್ತವೆ. ಸುಬ್ರಹ್ಮಣ್ಯ ದೇವಾಲಯಗಳ ಜೊತೆಗೆ ನಾಗಾರಾಧನೆಯ ಹುತ್ತವೂ, ನಾಗಪ್ರತಿಮೆಯೂ ಇರುತ್ತದೆ.

ಪಾದೆಬೆಟ್ಟು ಸುಬ್ರಹ್ಮಣ್ಯ ದೇವರ ವಿಗ್ರಹವನ್ನು ದಕ್ಷಿಣಭಾರತದ ಅತ್ಯಂತ ಪ್ರಾಚೀನ ಸ್ಕಂದವಿಗ್ರಹಗಳಲ್ಲಿ ಒಂದು ಎಂದು ಹೇಳಲಾಗಿದೆ. ಈ ವಿಗ್ರಹದ ಲಕ್ಷಣವನ್ನು ಆಧರಿಸಿ ಕ್ರಿ.ಶ. 9ನೇ ಶತಮಾನದ ನಿರ್ಮಿತ ಇರಬೇಕೆಂದು ಡಾ. ಪಿ. ಗುರುರಾಜ ಭಟ್ಟರು ಉಲ್ಲೇಖಿಸಿದ್ದಾರೆ. ಇದರಿಂದ ದಕ್ಷಿಣ ಭಾರತದಲ್ಲಿ ಸ್ಕಂದಾರಾಧನೆಯು ಅಷ್ಟು ಹಿಂದಿನಿಂದಲೂ ಇತ್ತೆಂದು ತಿಳಿಯುತ್ತದೆ. ಕರಾವಳಿಯ ಕಾಸರಗೋಡು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಲ್ಲಲ್ಲಿ ಸುಬ್ರಹ್ಮಣ್ಯ ದೇವಾಲಯಗಳು ಬಹಳ ಹಿಂದಿನಿಂದಲೂ ಭಕ್ತರ ಪೂಜೆಯ ಅನುಕೂಲಕ್ಕಾಗಿ ನಿರ್ಮಿಸಲ್ಪಟ್ಟಿರುವುದು ಕಂಡುಬರುತ್ತದೆ.

ತುಳುನಾಡಿನ ಇತರ ಪ್ರಸಿದ್ಧ ಸ್ಕಂದಾರಾಧನೆಯು ಕ್ಷೇತ್ರಗಳೆಂದರೆ; ಕಂದಾವರ, ಕುಡುಪು, ಸಾಂತೂರು, ಸೂಡ, ಪಲಿಮಾರು, ಮುಚ್ಚಿಲಕೋಡು, ಮಂಜೇಶ್ವರ, ಅನಂತೇಶ್ವರ, ಪೊಳಲಿ, ಬಾರಕೂರು ವಡಭಾಂಡೇಶ್ವರ ಇತ್ಯಾದಿ.

ದೇವಾನುದೇವತೆಗಳ ಗಡಾಣದಲ್ಲಿ ಕೌಮಾರ್ಯವನ್ನು ಮೆರೆಯುತ್ತಾ ಪರಾಕ್ರಮ–ಪ್ರಣಯರಸಿಕನೆಂಬ ಖ್ಯಾತಿಗೆ ಪಾತ್ರನಾದ ಸಂತಾನ, ದಾಂಪತ್ಯ ಸಾಮರಸ್ಯದ ಅಧಿದೇವತೆ ಸುಬ್ರಹ್ಮಣ್ಯನ ವೇದಪೂರ್ವ ಮತ್ತು ವೇದೋತ್ತರ ಕಾಲಗಳ ಇತಿಹಾಸ ರೋಚಕವಾದುದು. ಸ್ಕಂದನಾಗಿ ಉತ್ತರ ಭಾರತದಲ್ಲಿ ಜನಪ್ರಿಯವಾಗಿದ್ದು ದಕ್ಷಿಣ ಭಾರತದಲ್ಲಿ 'ಮುರುಗ'ನೆಂದು ಪೂಜಾರ್ಹನಾದ 'ಆರ್ಮುಗ' ಪ್ರಸ್ತುತ ಸುಬ್ರಹ್ಮಣ್ಯನೆಂದೇ ಪ್ರಸಿದ್ಧನಾಗಿ ಶಿಷ್ಟ–ಜನಪದ ಸಂಸ್ಕೃತಿಗಳನ್ನು ಬೆಸೆದ ಅಪೂರ್ವ ಪ್ರತಿಮೆ. ದಕ್ಷಿಣ ಭಾರತದ, ವಿಶೇಷವಾಗಿ ತಮಿಳುನಾಡಿನ ದೇವರೆಂದೇ ಗುರುತಿಸಲ್ಪಡುವ ಷಣ್ಮುಖ, ಸ್ಕಂದನೆಂದು ಕ್ರಿಸ್ತಶಕಾರಂಭದ ವೇಳೆ ಉತ್ತರ ಭಾರತದಲ್ಲಿ ಪೂಜೆಗೊಳ್ಳುತ್ತಾ ಇದ್ದ ದಾಖಲೆಗಳಿವೆ. ತಮಿಳುನಾಡಿನ ಮುರುಗ, ಉತ್ತರದ ಸ್ಕಂದ ಸಮಾಗಮವೇ ಸುಬ್ರಹ್ಮಣ್ಯವೆಂಬುವುದು ಒಂದು ವಾದವಾಗಿಯೇ ಇದೆಯಾದರೂ ಇವೆರಡರ ಮೂಲವಸ್ತು ವಿಕಾಸವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸಾಮ್ಯವನ್ನು ಗುರುತಿಸಬಹುದಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಕ್ರಿ.ಶ.7–8ನೇ ಶತಮಾನದಿಂದ ಸ್ಕಂದ–ಸುಬ್ರಹ್ಮಣ್ಯ ಆರಾಧನೆ ಆರಂಭವಾಗಿರಬಹುದೆಂದು ಐತಿಹಾಸಿಕ ಉಲ್ಲೇಖ. ಸುಬ್ರಹ್ಮಣ್ಯ ಪ್ರತಿಮೆಗಳು ಮೂಲಸ್ಥಾನ ಮೂರ್ತಿಯಾಗಿ ದೇವಾಲಯಗಳಲ್ಲಿ ಪೂಜೆಗೊಂಡಿವೆ. ಸುಂದರ ಹೆಡೆ ಅರಳಿಸಿದ ನಾಗ ಪ್ರತೀಕಗಳನ್ನು ಪಾಣಿಪೀಠದಲ್ಲಿ ಸ್ಥಾಪಿಸಿರುವುದು ಇದೆ. ಕೆಲವೆಡೆ ವಲ್ಮೀಕವೇ ಮೂಲ ಸಾನಿಧ್ಯವಾಗಿರುವುದನ್ನು ಗಮನಿಸಲಾಗಿದೆ. ಸುಂದರ ಮನಮೋಹಕ ಪ್ರತಿಮೆಗಳು, ಬಲಿಮೂರ್ತಿಗಳು ಉಭಯ ಜಿಲ್ಲೆಯ ಸುಬ್ರಹ್ಮಣ್ಯ ದೇವಾಲಯಗಳಲ್ಲಿ ಇವೆ. ಹೆಚ್ಚಿನ ಸುಬ್ರಹ್ಮಣ್ಯ ದೇವಳಗಳಲ್ಲಿ ಮಾರ್ಗಶಿರ ಶುದ್ಧ ಪರ್ವದಿನದಂದೇ ವಾರ್ಷಿಕ ಉತ್ಸವ ಕಾಲವಾಗಿರುತ್ತದೆ. ಕೆಲವೆಡೆ ಪರ್ವದಿನವಾಗಿ ಸಂಭ್ರಮದ ಆಚರಣೆ ಇರುತ್ತದೆ. ವಿವಿಧ ಹರಕೆ, ಮಡೆಸ್ನಾನ, ಅಭಿಷೇಕ, ಅರ್ಚನೆ, ಬೆಳ್ಳಿಯ ನಾಗಪ್ರತಿಮೆ, ವಿವಿಧ ಆಕಾರದ ದೇಹದ ಭಾಗಗಳ ಪ್ರತಿಕೃತಿಯನ್ನು ಆಯಾಯ ಭಾಗದ ವ್ಯಾಧಿಗೆ ಅಥವಾ ವೈಕಲ್ಯದ ನಿವಾರಣೆಗೆ ಸಮರ್ಪಿಸುವ ರೂಢಿ ಇದೆ. ಈ ರೀತಿ ಮಾಡುವುದರಿಂದ ಪಾಪಗಳು ಪರಿಹಾರವಾಗುತ್ತದೆ ಎಂದು ಭಕ್ತರು ನಂಬುವರು. ಹಾಗಾಗಿ ಇಂತಹ ಎಲ್ಲ ಪರಿಕರಗಳನ್ನು ದೇವರಿಗೆ ಅರ್ಪಿಸುತ್ತಾರೆ.

ಸ್ಕಂದ ಪುರಾಣ :

ಮಹರ್ಷಿ ವೇದವ್ಯಾಸರು ಸಂಪಾದಿಸಿದ ಹದಿನೆಂಟು ಪುರಾಣಗಳಲ್ಲಿ ಸ್ಕಂದ ಅಥವಾ ಸ್ಕಾಂದ ಪುರಾಣವೂ ಒಂದು. ಸ್ಕಂದ ಎಂದರೆ ಅಸುರರ ಶೋಷಣೆ ಮಾಡುವುದು. ಸ್ಕಾಂದ ಅಂದರೆ ಸ್ಕಂದನಿಗೆ ಎಂಬ ಅರ್ಥ. ಹಾಗಾಗಿ ಎರಡೂ ಹೆಸರು ಸರಿಯಾಗಿವೆ. ಸ್ಕಂದ ಪುರಾಣದಲ್ಲಿ ಏಳು ಖಂಡಗಳಿವೆ. ಈ ಏಳು ಖಂಡಗಳು ಸ್ಕಂದ ಪುರಾಣದ ಒಂದು ಭಾಗವಾದರೆ, ಸಂಹಿತೆಗಳೆಂಬ ಇನ್ನೊಂದು ಭಾಗದಲ್ಲಿ ಆರು ಸಂಹಿತೆಗಳಿವೆ. ಶಂಕರ ಸಂಹಿತೆಯೆಂಬುದು ಇವುಗಳಲ್ಲಿ ಒಂದು. 'ಸಹ್ಯಾದ್ರಿಖಂಡವೆಂದು ನಮ್ಮ ಜಿಲ್ಲೆಯಲ್ಲಿ ಪ್ರಸಿದ್ಧವಾಗಿರುವ ಗ್ರಂಥವು ಸ್ಕಂದಪುರಾಣದ ಇನ್ನೊಂದು ಸಂಹಿತೆಯಾದ ಸನತ್ಕುಮಾರ ಸಂಹಿತೆಯ 25 ಖಂಡಗಳಲ್ಲಿ ಒಂದು ಪರಶುರಾಮ ಕ್ಷೇತ್ರದ ದೇವಾಲಯಗಳ ಸ್ಥಳಪುರಾಣ ಇದರಲ್ಲಿದೆ. ಒಟ್ಟಿನಲ್ಲಿ ಸ್ಕಂದಪುರಾಣವು ಬಹಳ ವಿಸ್ತಾರವುಳ್ಳ ಮತ್ತು ಪೂರ್ಣ ಪ್ರಮಾಣದಲ್ಲಿ ಲಭ್ಯವಾಗದ ಗ್ರಂಥವಾಗಿದೆ.

ಮಹಾಕವಿ ಕಾಳಿದಾಸ ಬರೆದಿರುವ 'ಕುಮಾರ ಸಂಭವ' ಮಹಾಕಾವ್ಯವು ಸ್ಕಾಂದ ಪುರಾಣದಲ್ಲಿರುವ ಕಥೆಗಳನ್ನು ಆಧರಿಸಿದೆ. ಕ್ರಿಸ್ತಶಕರಾಂಭದಲ್ಲಿ ಸ್ಕಂದನ ಉಪಾಸನೆ ಉತ್ತರಭಾರತದಲ್ಲಿ ಬಳಕೆಯಲ್ಲಿತ್ತು. ಕುಶಾನರು ಇದಕ್ಕೆ ಪ್ರೋತ್ಸಾಹ ನೀಡಿದ್ದರು. ಅವರು ಸ್ಕಂದ–ಕಾರ್ತಿಕೇಯನ ಭಕ್ತರಾಗಿದ್ದು ತಮ್ಮ ನಾಣ್ಯಗಳಲ್ಲಿ ಪುರುಷಾಕೃತಿಯನ್ನೋ, ಲಾಂಛನವನ್ನೋ ಮೂಡಿಸುತ್ತಿದ್ದರು. ಹುವಿಷ್ಕನ ಕಾಲದ ನಾಣ್ಯಗಳಲ್ಲಿ ಮಹಾಸೇನ ಮತ್ತು ಸ್ಕಂದ ಎಂಬ ಎರಡು ಚಿತ್ರಣವೂ ಇದೆ.

ಕ್ರಿ.ಶ. ಎರಡನೇ ಶತಮಾನದಲ್ಲಿ ಯೌಧೇಯ ಜನಾಂಗದ ಅರಸರು ಟಂಕಿಸಿದ ನಾಣ್ಯಗಳಲ್ಲಿ 'ಭಗವತಸ್ವಾಮಿನೋ ಬ್ರಹ್ಮಣ್ಯ ದೇವಸ್ಯ ಕುಮಾರಸ್ಯ' ಎಂಬ ಬರಹಗಳಿವೆ. ಇವರು ಇಡೀ

ರಾಜ್ಯವನ್ನೇ ಈ ದೇವತೆಗೆ ಸಮರ್ಪಿಸಿ ಅವನ ಪ್ರತಿನಿಧಿಯಾಗಿ ಆಡಳಿತ ನಡೆಸಿದರಂತೆ. ಉತ್ತರಭಾರತದಲ್ಲಿ ಸ್ಕಂದಾರಾಧನೆ ವಿರಳವಾಗುವುದನ್ನು ಗುರುತಿಸಬಹುದಾಗುತ್ತದೆ.

ಸ್ಕಂದ ಪುರಾಣದ ಏಳು ಖಂಡಗಳೆಂದರೆ,

1. ಮಾಹೇಶ್ವರ ಖಂಡ 2. ವೈಷ್ಣವ ಖಂಡ
3. ಬ್ರಹ್ಮಖಂಡ 4. ಕಾಶೀ ಖಂಡ
5. ಅವಂತೀಖಂಡ 6. ನಾಗರಖಂಡ
7. ಪ್ರಭಾಸಖಂಡ

ಈ ಏಳು ಖಂಡಗಳು ಸುಬ್ರಹ್ಮಣ್ಯನ ಬಗೆಗಿನ ಮಾಹಿತಿ ನೀಡುತ್ತವೆ.

ಪಾದೆಬೆಟ್ಟು ದೇವಾಲಯದ ಪ್ರಾಚೀನತೆ :

ಸುಮಾರು ಒಂದು ಸಾವಿರದ ಇನ್ನೂರು ವರ್ಷಗಳ ಇತಿಹಾಸವನ್ನು ಹೊಂದಿರುವ ದೇವಾಲಯ ಪಾದೆಬೆಟ್ಟು ಸುಬ್ರಹ್ಮಣ್ಯ. ಈ ಸಂದರ್ಭದಲ್ಲಿ ಪಡುಬಿದ್ರಿಯನ್ನು ರಾಜಧಾನಿಯಾಗಿಸಿಕೊಂಡಿದ್ದ ಪಡುಬಿದ್ರಿ ಬಲ್ಲಾಳರು ಆಳುತ್ತಿದ್ದರೆಂದು ಚರಿತ್ರೆಯಲ್ಲಿ ಹೇಳಲಾಗುತ್ತದೆ. ಈ ಕಾರಣದಿಂದಲೇ ಪಾದೆಬೆಟ್ಟು ಪಡುಬಿದ್ರಿಯೊಂದಿಗೆ ಸಂಬಂಧವನ್ನು ಹೊಂದಿ ಕೂಡುಕಟ್ಟು ಮುಂತಾದವುಗಳಿಗೆ ಒಳಪಟ್ಟಿದೆ. ಇತಿಹಾಸದ ಮೂಲಕ ಪಡುಬಿದ್ರಿ ಬಲ್ಲಾಳರು ತಮ್ಮ ಕುಲದೇವತೆಯಾದ ಪಡುಬಿದ್ರಿ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದೊಂದಿಗೆ ಪಾದೆಬೆಟ್ಟು ದೇವಸ್ಥಾನದ ಉತ್ಸವಾದಿಗಳನ್ನು ನಡೆಸುತ್ತಿದ್ದಿರಬೇಕು ಎಂದು ತಿಳಿಯಬಹುದು. ಇತ್ತೀಚಿನವರೆಗೂ ಈ ಸಂಪ್ರದಾಯವಿತ್ತು ಎಂದು ಪಡುಬಿದ್ರಿ ಬೀಡಿನ ಮೂಲಗಳು ಹೇಳುತ್ತವೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಕೇವಲ 12 ವೃತ್ತಾಕಾರದ ಗರ್ಭಗೃಹಗಳಿರುವ ದೇವಾಲಯಗಳಲ್ಲಿ ಪಾದೆಬೆಟ್ಟು ಸುಬ್ರಹ್ಮಣ್ಯ ದೇವಸ್ಥಾನ ಒಂದು.

ಪೌರಾಣಿಕ ಹಿನ್ನೆಲೆ :

ಸ್ಕಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿರುವ ವಿಷಯವನ್ನು ಪಾದೆಬೆಟ್ಟು ಕ್ಷೇತ್ರಕ್ಕೆ ಪೌರಾಣಿಕ ಹಿನ್ನೆಲೆಯಾಗಿ ನೀಡಬಹುದಾಗಿದೆ. ಆದರೆ ದಾಖಲೆಯಾಗಿ ನೀಡಬಲ್ಲ ಯಾವುದೇ ಪೌರಾಣಿಕ ಉಲ್ಲೇಖನಗಳು ಪಾದೆಬೆಟ್ಟು ಸುಬ್ರಹ್ಮಣ್ಯ ಸಂಬಂಧಿಯಾಗಿ ಲಭಿಸುವುದಿಲ್ಲ. ಸ್ಕಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿದೆ ಎಂದು ಹೇಳಲಾಗುವ ಎಲ್ಲೂರು ಮಹಾತ್ಮೆ ಎಂಬ 30 ಪುಟಗಳ 1979ರಲ್ಲಿ ಯೆಲ್ಲೂರು ದೇವಸ್ಥಾನದ ವತಿಯಲ್ಲಿ ಪ್ರಕಟವಾದ ಪುಸ್ತಕದಲ್ಲಿ ಒಂದು ವಾಕ್ಯದ ಉಲ್ಲೇಖವೊಂದಿದೆ. ಅದೇನೆಂದರೆ ಗ್ರಾಮ ಕ್ಷೇತಂತು ಕೌಮಾರಂ ಎಂಬುದಾಗಿದೆ. ಭಾರ್ಗವ ನಾಮಕನಾದ ಮಹರ್ಷಿಯು ಪಿಲಾರಕಾನದಲ್ಲಿ ವಾಸಿಸುತ್ತಿದ್ದು, ಲೋಕ ಕಲ್ಯಾಣಾರ್ಥವಾಗಿ ಹತ್ತು ಕ್ಷೇತ್ರಗಳನ್ನು ಸಂಕಲ್ಪಿಸಿದರು. ಮುಂದೆ ಈ ಹತ್ತು ಕ್ಷೇತ್ರಗಳ ಮಧ್ಯೆ ಯೆಲ್ಲೂರು ವಿಶ್ವನಾಥ ದೇವಳ ನಿರ್ಮಾಣವಾಯಿತೆಂಬುದು ಈ ಪುಸ್ತಕದ ಸಾರಾಂಶ. ಹಾಗಾಗಿ ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ ಕ್ಷೇತ್ರ ಭಾರ್ಗವ ಋಷಿಯಿಂದ ಸಂಕಲ್ಪಿಸಲ್ಪಟ್ಟಿತೆಂದು ದೊರೆಯುವ ಮಾಹಿತಿಯನ್ನು ಪ್ರಸ್ತುತ ಸ್ವೀಕರಿಸಬಹುದಾಗಿದೆ. ಏಕೆಂದರೆ ಪರಶುರಾಮ ಸೃಷ್ಟಿ ಇದೆಂಬುದು ಒಂದು ನಂಬಿಕೆ ಭಾರ್ಗವ ಗೋತ್ರಜರೆಲ್ಲರೂ ಭಾರ್ಗವ ನಾಮಕರಾಗಿಯೇ ಗುರುತಿಸಲ್ಪಡುತ್ತಿದ್ದರೆಂಬುದು ಪೌರಾಣಿಕ ಸತ್ಯ. ಈ ಹಿನ್ನಲೆಯಲ್ಲಿ ಭಾರ್ಗವ ಗೋತ್ರಜನಾದ ಪರಶುರಾಮನ ಸೃಷ್ಟಿಯಲ್ಲಿ ಕಾಲಾಂತರದಲ್ಲಿ ಭಾರ್ಗವ ಗೋತ್ರದವರು ಬಂದು ದೇವಳಗಳು ಸಂಕಲ್ಪವಾಗಿದ್ದಿರಬಹುದು.

ದೇವಾಲಯದ ಗರ್ಭಗೃಹ :

ಅತ್ಯಂತ ಪುರಾತನ ದೇವಸ್ಥಾನಗಳಲ್ಲಿ ಒಂದಾದ ಈ ದೇವಸ್ಥಾನದ ಗರ್ಭಗುಡಿ ವೃತ್ತಾಕಾರದಲ್ಲಿದೆ. ಸಮಗ್ರ ದೇವಸ್ಥಾನವು ಮಧ್ಯಮಗಾತ್ರದ ರಚನೆ, ಸುತ್ತುಪೌಳಿ ಮುಂತಾದ ಹೊರ ಆವರಣಗಳ ರಚನೆಗಳು ಚೌಕಾಕಾರವಾಗಿದೆ. ವಾಸ್ತುಸಮೇತ ಈ ಗರ್ಭಗುಡಿ ಎರಡು ಮೇಲ್ಪ್ಪಯನ್ನು ಹೊಂದಿದ್ದು ಅತ್ಯಂತ ಸುಂದರ ತಾಮ್ರದ ಹೋದಿಕೆ ಎಲ್ಲಾ ದೇವಸ್ಥಾನಗಳಲ್ಲಿ ಇರುವಂತೆ ಮುಂದುಗಡೆ ಆಕರ್ಷಕ ತೀರ್ಥ ಮಂಟಪ, ಕಲಾತ್ಮಕ ಸುತ್ತು ಪೌಳಿ ಗರ್ಭಗುಡಿಯು ಒಳಗಡೆ ಕಾರ್ತಿಕೇಯು ವಿರಾಜಮಾನವಾಗಿದ್ದಾನೆ. ಪ್ರಧಾನ ಬಲಿಪೀಠವು ಚಿಕ್ಕದಾಗಿದ್ದು, ತಾಮ್ರಹೊಂದಿಸಿದ ಧ್ವಜಸ್ತಂಭ, ಇತ್ತೀಚೆಗೆ ಶಿಲಾಮಯವಾಗಿ ಜೀರ್ಣೋದ್ಧಾರಗೊಂಡ ಹೊರಗಿನ ಗೋಪುರ ಮುಂತಾದ ನಿರ್ಮಾಣಗಳು ಅಚ್ಚುಕಟ್ಟಾಗಿದೆ.

ದೇವಾಲಯದ ತೀರ್ಥಮಂಟಪ :

ದೇವಾಲಯದ ಮೂರ್ತಿ :

ಆಡಂಬರ ರಹಿತ ಒಪ್ಪ ಓರಣ ದೇವಳದ ವೈಶಿಷ್ಟ್ಯ ಮೂಲಸ್ಥಾನ ಸುಬ್ರಹ್ಮಣ್ಯ ಪ್ರತಿಮೆಯು ಕರಿಶಿಲೆಯಿಂದ ನಿರ್ಮಿಸಲ್ಪಟ್ಟುದುದು, ಸುಮಾರು 3 ಅಡಿ ಎತ್ತರದ ದ್ವಿಬಾಹು ಪ್ರತಿಮೆ. ದೃಷ್ಟಿ, ಆಭರಣ ರಹಿತವಾಗಿರುವ ವೇಳೆ ಗಮನಿಸಿದರೆ ಸರಳ ಸುಂದರ ರಚನೆಯಾಗಿದೆ. ಎಡಕೈಯನ್ನು ಕಟಿಯಲ್ಲಿಟ್ಟು ಬಲ ಕೈಯಲ್ಲಿ ಆಯುಧ (ವಜ್ರ)ವನ್ನು ಧರಿಸುವ ಸಮಭಂಗದಲ್ಲಿ ನಿಂತಿರುವಂತೆ ಇರುವ ಈ ಪ್ರತಿಮೆಯ ಲಕ್ಷಣವನ್ನು ಆಧರಿಸಿ ಕ್ರಿ.ಶ. 9ನೇ ಶತಮಾದ ನಿರ್ಮಿತ ಇರಬೇಕೆಂದು ಗುರುರಾಜ ಭಟ್ಟರು ಉಲ್ಲೇಖಿಸಿದ್ದಾರೆ.

ಜಿಲ್ಲೆಯಲ್ಲಿ ಸ್ಕಂದ ಆರಾಧನೆ ಪ್ರಾರಂಭವಾಗುವ ವೇಳೆಯ ರಚನಾ ಶೈಲಿಯನ್ನು ಹೊಂದಿರುವ ಈ ಮೂರ್ತಿಯನ್ನು ವಿಶೇಷವಾಗಿ ಗುರುತಿಸುತ್ತಾರೆ. ಸುಮಾರು ಕ್ರಿ.ಶ. 15ನೇ

ಶತಮಾನದಷ್ಟು ಪ್ರಾಚೀನವಾದ ಮಯೂರ ವಾಹನ ಸುಬ್ರಹ್ಮಣ್ಯ ಕಂಚಿನ ಪ್ರತಿಮೆ ಬಲಿ ಮೂರ್ತಿಯಾಗಿದೆ.

ದೇವಾಲಯದ ಒಳ ಸುತ್ತಿನಲ್ಲಿ ಕಾರಣಿಕದ ಅಣ್ಣಪ್ಪಪಂಜುರ್ಲಿ ದೈವದ ಸಾನಿಧ್ಯವಿದೆ. ಈ ಅಣ್ಣಪ್ಪ ಪಂಜುರ್ಲಿಯನ್ನು ಇತ್ತೀಚಿನ ವರ್ಷಗಳಲ್ಲಿ ಸ್ಥಾಪಿಸಲಾಗಿದೆ.

ಪಾದೆಬೆಟ್ಟಿನ ಪ್ರಾಚೀನತೆಯನ್ನು ಸಾರುವ ಸಾಕ್ಷ್ಯಗಳು :
ಪ್ರಾಗಿತಿಹಾಸ ಕಾಲದ್ದೆಂದು ನಂಬಲಾದ ಸಾಕ್ಷ್ಯಗಳು :

ಪಾದೆಬೆಟ್ಟಿನ ಇತಿಹಾಸವು ಸರಿಸುಮಾರು ಎರಡುಸಾವಿರ ವರ್ಷಗಳಿಗಿಂತಲೂ ಹಿಂದಿನದ್ದು, ಅಷ್ಟು ವರ್ಷಗಳ ಹಿಂದೆಯೇ ಈ ಪ್ರದೇಶದಲ್ಲಿ ಜನರು ವಾಸಿಸುತ್ತಿದ್ದರು, ವಿಶಿಷ್ಟವಾದ ಬದುಕನ್ನು ಸಾಗಿಸುತ್ತಿದ್ದರು ಎಂಬುದನ್ನು ದೃಢಿಪಡಿಸುವುದಕ್ಕೆ ಈ ಸಾಕ್ಷ್ಯಗಳು ಸಹಕಾರಿಯಾಗಿದೆ. ಈ ಕಾಲದಲ್ಲಿ ಜನರು ಬೆಟ್ಟಗುಡ್ಡಗಳಲ್ಲಿ, ನೀರಾಶ್ರಯವಿರುವ ಸ್ಥಳದಲ್ಲಿ ವಾಸಿಸುತ್ತಿದ್ದರು. ತುಳುನಾಡಿನ ಇತರ ಕಡೆಗಳಲ್ಲಿ ಹೊಳೆಗಳು, ಕೆರೆಗಳು, ಉದ್ಭವತೀರ್ಥಗಳು, ಬಂಡೆಕಲ್ಲುಗಳಿಂದ ಆವೃತವಾದ ಬೆಟ್ಟಗುಡ್ಡಗಳ ಸಮೀಪದಲ್ಲಿ ಪ್ರಾಗಿತಿಹಾಸ ನೆಲೆಗಳು ಕಂಡುಬರುತ್ತವೆ. ಪಾದೆಬೆಟ್ಟಿನಲ್ಲಿಯೂ ಇದೇ ರೀತಿಯಾದ ರಚನೆ ಕಂಡುಬರುತ್ತದೆ.

ಈ ಊರಿನಲ್ಲಿ ಕಂಡುಬಂದ ಕಾಮಿನೀ ನದಿ, ಸೂರ್ಯಾಸ್ತಮಾನವನ್ನು ನೋಡಬಹುದಾದಷ್ಟು ಎತ್ತರವಾಗಿದ್ದ ಕೆಂಕಣ್ಣಪಾದೆ, ಪಾಂಡ್ಯಾರು, ದೈವಸ್ಥಾನಗಳು ಹಾಗೇ ಇನ್ನಿತರ ಆಧಾರಗಳಿಂದ ಪಾದೆಬೆಟ್ಟಿನಲ್ಲಿ ಆ ಕಾಲದಲ್ಲಿಯೇ ಜನವಸತಿ ಇದ್ದಿರಬಹುದು ಎಂಬುದನ್ನು ಊಹಿಸಲಾಗಿದೆ.

ಕಾಮಿನೀ ನದಿ :

ದೇವಳದ ಎಡಭಾಗದಲ್ಲಿ ಪೂರ್ವದಿಂದ ಹರಿದು ಬಂದು ವಾಯುವ್ಯ ದಿಕ್ಕಿನಿಂದಾಗಿ ಮುಂದೆ ಗಮಿಸುವ ತೊರೆಯೊಂದಿದೆ. ಇದು ಎಲ್ಲೂರಿನಲ್ಲಿ ಹುಟ್ಟಿ ಕುಂಜೂರಿನಲ್ಲಿ ಹರಿದುಬಂದು ಪಡುಬಿದ್ರಿಯಲ್ಲಿ ಸಮುದ್ರ ಸೇರುವ ವಾರುಣಿ ಎಂಬ ನದಿಗೆ ಎರ್ಮಾಳಿನಲ್ಲಿ ಸೇರಿಕೊಳ್ಳುತ್ತದೆ. ಕೃಷಿ ಭೂಮಿಯ ಮಧ್ಯೆ ತೊರೆಯ ಬದಿಯಲ್ಲಿ ದೇವಳ ನಿರ್ಮಾಣವಾದಂತಿದೆ. ಈ ನದಿಯನ್ನು ಹೊಂದಿಕೊಂಡು ಇಲ್ಲಿನ ಜನರು ಕೃಷಿಯನ್ನು ನಡೆಸುತ್ತಿದ್ದರು.

ಪಾಂಡ್ಯಾರು :

ಪಾಂಡ್ಯಾರು ಎಂಬ ಸ್ಥಳವನ್ನು ನಾವು ಇಲ್ಲಿ ಗುರುತಿಸಬೇಕಾಗಿದೆ. ಪಾಂಡಿ+ಆರ್ ಎಂದು ವಿಂಗಡಿಸಬಹುದಾದ ಈ ಶಬ್ದ ಪ್ರಾಚೀನ ನೆಲೆಯೊಂದನ್ನು ಹೆಸರಿಸುತ್ತದೆ. ಪಾಂಡಿ ಎಂದರೆ ಸಮುದ್ರದಲ್ಲಿ ಹಾಗೂ ಆಳ ಅಗಂದ ನದಿಗಳಲ್ಲಿ ಸಂಚರಿಸುವ ದೊಡ್ಡ ಗಾತ್ರದ ದೋಣಿ. ಅಂತಹ ಪಾಂಡಿಗಳು ಬಂದು ನಿಲ್ಲುತ್ತಿದ್ದ ಸ್ಥಳವೆಂದು ಪಾಂಡ್ಯಾರನ್ನು ಗುರುತಿಸಬಹುದಾಗುತ್ತದೆ. ಬೌಗೋಳಿಕ ಸ್ವರೂಪ ಪರಿವರ್ತನೆ ಪೂರ್ವದಲ್ಲಿ ಈಗಿರುವ ತೊರೆ ಬಹಳ ವಿಸ್ತಾರವಾಗಿದ್ದು ಪಶ್ಚಿಮ ಸಮುದ್ರದೊಂದಿಗೆ ಸಂಬಂಧವನ್ನು ಪಡೆದು ವ್ಯಾಪಾರದ ಮಂಜಿ, ಪಾಂಡಿಗಳು ಇಲ್ಲಿಯವರೆಗೂ ಬಂದಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಐತಿಹಾಸಿಕ ಆಧಾರಗಳು :
ದೇವಾಲಯದಲ್ಲಿ ದೊರಕಿದ ಶಾಸನ :

ದೇವಳದ ಗರ್ಭಗುಡಿಯ ಈಶಾನ್ಯ ಮೂಲೆಯಲ್ಲಿ ಓದುವ ಸ್ಥಿತಿಯಲ್ಲಿ ಇಲ್ಲದ ಶಿಲಾಶಾಸನ ನಮಗೆ ದೊರಕಿದೆ. ನವಿಲು ಅಥವಾ ಕುಕ್ಕುಟವೆಂದು ಹೇಳಬಹುದಾದ ಚಿತ್ರದ ಸಹಿತ ಶಿವಲಿಂಗ, ವೃಷಭ, ದೀಪ ಹಾಗೂ ಸೂರ್ಯ ಚಂದ್ರ ಸಂಕೇತಗಳು ಇದರಲ್ಲಿವೆ. ದೇವಸ್ಥಾನದ ಒಳಗೆ ಸಾಮಾನ್ಯವಾಗಿ ಇರುವ ಶಾಸನಗಳಂತೆ ಇದೊಂದು ದಾನ ಶಾಸನವಾಗಿರಬೇಕೆಂದು ಗ್ರಹಿಸಬಹುದು.

ಕಲಾಯಿಗುತ್ತು ಸ್ಥಳದಲ್ಲಿ ದೊರಕಿದ ಶಾಸನ :

ಪಾದೆಬೆಟ್ಟಿನ ಕಲಾಯಿಗುತ್ತು ಎಂಬ ಸ್ಥಳದಲ್ಲಿ ಗದ್ದೆಯ ಸಮೀಪ ದೊರಕಿದ ಶಾಸನವನ್ನು ನಾವು ಓದಿದರೆ ಸುಬ್ರಹ್ಮಣ್ಯ ದೇವರ ಇತಿಹಾಸದ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಆದರೆ ಈ ಶಾಸನದಲ್ಲಿ ದೇವಾಲಯದ ಪ್ರಾಚೀನತೆಯನ್ನು ಸಮರ್ಥಿಸಬಲ್ಲ ಆಧಾರಗಳು ಲಭಿಸದು ಎನಿಸುತ್ತದೆ. ಈ ಶಾಸನವು ಮುಳ್ಳು ಪೊದೆಗಳ ನಡುವೆ ನಮಗೆ ಕಂಡುಬಂದಿದ್ದು ಅದರಲ್ಲಿರುವ ಸಂಕೇತಗಳನ್ನು ಕಾಣಲು ಸರಿಯಾಗಿ ಇಲ್ಲದೆ ಅಸ್ಪಷ್ಟವಾಗಿ ಕಂಡುಬಂದಿದೆ. ಆದ್ದರಿಂದ ಊಹೆಯ ಮೇರೆಗೆ ಈ ಶಾಸನವು ಯುದ್ಧದ ಸಂಕೇತವಾಗಿಯೂ ಇರಬಹುದಾಗಿದೆ. ಈ ಶಾಸನವು ಪಾದೆಬೆಟ್ಟಿನ ಚಾರಿತ್ರಿಕ ಹಿನ್ನಲೆಯನ್ನು ಗುರುತಿಸುತ್ತದೆ.

ಬೃಹತ್ ಗಾತ್ರದ ಅಶ್ವತ್ಥ ಮರ :

ದೇವಾಲಯದ ಉತ್ತರ ದಿಕ್ಕಿನಲ್ಲಿರುವ ಬೃಹತ್ ಗಾತ್ರದ. ಅಶ್ವತ್ಥ ಮರದಿಂದಲೂ ಪಾದೆಬೆಟ್ಟಿನ ಪ್ರಾಚೀನತೆಯನ್ನು ಅಳೆಯಬಹುದು. ಸಾಮಾನ್ಯವಾಗಿ ಮರಗಳು ಬಹಳ ವರ್ಷ ಬದುಕಿರುತ್ತವೆ. ಪ್ರತಿ ಶನಿವಾರ ಈ ಮರಕ್ಕೆ ಭಕ್ತಾದಿಗಳು ಬಂದು ಪ್ರದಕ್ಷಿಣೆ ಹಾಕಿ ಅನೇಕ ದೇವರ ಕಾರ್ಯ ಮಾಡುತ್ತಾರೆ. ಈ ಅಶ್ವತ್ಥ ಮರಕ್ಕೆ ಕಟ್ಟೆಯನ್ನು ಕಟ್ಟಿದ್ದು ಪ್ರದಕ್ಷಿಣೆಗೆ ಅನುಕೂಲ ಮಾಡಿಕೊಡಲಾಗಿದೆ. ಈ ಅಶ್ವತ್ಥ ಮರವು ಕಾಮಿನೀ ನದಿಯ ಸಮೀಪದಲ್ಲಿಯೇ ಕಂಡುಬರುತ್ತದೆ. ಈ ಅಶ್ವತ್ಥ ಮರದಲ್ಲಿ ಅನೇಕ ಜನರು ದೇವರ ಚಿತ್ರಣಗಳನ್ನು ತಂದು ಇಡುತ್ತಾರೆ. ಮನೆಯಲ್ಲಿದೆ ಎಂಬ ಭಾವನೆಯಲ್ಲದೆ ಅಂದರೆ ವೃಕ್ಷಗಳು ಮನೆಯ ಹತ್ತಿರ ಇದ್ದರೂ ದೇವಾಲಯದ ವೃಕ್ಷಕ್ಕೆ ಪ್ರದಕ್ಷಿಣೆ ಹಾಕುವುದು ವಾಡಿಕೆ. ಮನೆಯಲ್ಲಿ ಬೇಡವಾದ ದೇವರ ಚಿತ್ರಗಳನ್ನು ಇಲ್ಲಿಗೆ ತಂದು ಇಡುತ್ತಾರೆ.

ದೇವರ ಸ್ನಾನ ಘಟ್ಟ :

ಪಾದೆಬೆಟ್ಟಿನ ರಾಯರಕೆರೆ ಎಂಬ ಸ್ಥಳದಲ್ಲಿ ಸುಬ್ರಹ್ಮಣ್ಯ ದೇವರು ಅವಭೃತ ಸ್ನಾನಕ್ಕೆ ಹೋಗುವ ಕೆರೆಯೊಂದು ನಮ್ಮ ಗಮನ ಸೆಳೆಯಿತು. ಈ ಕೆರೆ ಪವಿತ್ರವಾದುದಾಗಿದ್ದು ಭಾರೀ ನೀರಿನ

ಮೂಲವಾಗಿತ್ತು ಎಂಬ ಪುರಾವೆಗಳು ಸಿಗುತ್ತವೆ. ಹಾರೆ, ಪಿಕ್ಕಾಸು ಮುಂತಾದವುಗಳನ್ನು ಬಳಸದೆ ಪ್ರತಿವರ್ಷ ದೇವರು ಸ್ನಾನಕ್ಕೆ ಬರುವ ವೇಳೆ ಕೆಸರನ್ನು ಬದಿಗೆ ಸರಿಸಿ ಅವಭೃತಕ್ಕೆ ಅವಕಾಶ ಮಾಡಿ ಕೊಡುತ್ತಿದ್ದುದನ್ನು ಸ್ಥಳೀಯ ಹಿರಿಯರು ನೆನಪಿಸುತ್ತಾರೆ. ಪೂರ್ವದಲ್ಲಿ ಈ ಕೆರೆಯು ಊರಿನ ಜನರಿಗೆ ಜಲಾಶ್ರಯವಾಗಿತ್ತು.

ದೇವಾಲಯದ ಪರಿಸರ :

ದೇವಸ್ಥಾನವು ಸರಳ ಸುಂದರವಾಗಿ ಕಂಗೊಳಿಸುತ್ತಿದ್ದು ಇನ್ನೊಂದು ಕಡೆ ದೇವಸ್ಥಾನದ ಪರಿಸರ ಹಚ್ಚ ಹಸುರಿನಿಂದ ವಿಸ್ತಾರವಾದ ಬಯಲು ಗದ್ದೆಗಳಿಂದ ಕೂಡಿ ಮನೋಹರ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಎದುರಿನಲ್ಲಿ ಪಡುಬಿದ್ರಿಯಿಂದ ಎಲ್ಲೂರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಹಾದು ಹೋಗಿದೆ. ಇಡೀ ಹಳ್ಳಿಗೆ ಮುಕುಟವಿದ್ದಂತೆ ದೇವಸ್ಥಾನ ಊರಿನ ಮಧ್ಯದಲ್ಲಿ ವಿರಾಜಮಾನವಾಗಿದೆ. ದೇವಸ್ಥಾನದ ಸುತ್ತಮುತ್ತಲೂ ಮನೆಗಳಿದ್ದು ಸಮಾಜದಲ್ಲಿ ಎಲ್ಲರೂ ಒಂದಾಗಿ ಬಾಳುತ್ತ ಒಟ್ಟಿನಲ್ಲಿ ದೇವಸ್ಥಾನದ ಪರಿಸರ ಪ್ರಶಾಂತಮಯವಾಗಿದೆ.

ದೇವಸ್ಥಾನದ ವೈಶಿಷ್ಟ್ಯ :

ಅತ್ಯಂತ ಪುರಾತನ ದೇವಸ್ಥಾನಗಳಲ್ಲಿ ಒಂದಾದ ಪಾದೆಬೆಟ್ಟಿನ ದೇವಸ್ಥಾನದ ಗರ್ಭಗುಡಿ ವೃತ್ತಾಕಾರದಲ್ಲಿದೆ. ಗರ್ಭಗುಡಿಯ ಮುಂದುಗಡೆ ತೀರ್ಥಮಂಟಪ, ಕಲಾತ್ಮಕ ಸುತ್ತು ಪೌಳಿ, ಗರ್ಭಗುಡಿಯ ಒಳಗಡೆ ಸುಬ್ರಹ್ಮಣ್ಯ ವಿರಾಜಮಾನನಾಗಿದ್ದಾನೆ. ಉತ್ತರದಲ್ಲಿ ಬಾವಿ, ಪೂರ್ವದಲ್ಲಿ ದೈವಸ್ಥಾನ ಭಂಡಾರ ಕೋಣೆ, ತಂತ್ರಿಗಳ ಕೋಣೆ, ತುಳಸಿಕಟ್ಟೆ ಸಹಿತ ಗೋಪುರವಿದೆ. ಸುತ್ತುಪೌಳಿ ಅತ್ಯಾಕರ್ಷವಾಗಿದ್ದು ಗ್ರಾನೈಟ್ ಕಲ್ಲಿನಿಂದ ಹೊದೆದುಕೊಂಡಿದೆ. ಪೂರ್ವದಲ್ಲಿ ಎತ್ತರವಾದ ಗೋಪುರ ಆಕರ್ಷಕವಾಗಿ ಕೆತ್ತಲ್ಪಟ್ಟಿದೆ.

ದೇವಾಲಯದ ಹೊರಗಿನ ಸುತ್ತುಪೌಳಿ ದಕ್ಷಿಣ ಆಗ್ನೇಯದಲ್ಲಿ ದೈವಸ್ಥಾನಕ್ಕೆ ಹೊಂದಿಕೊಂಡಂತೆ ಗೋಪಾಲಕೃಷ್ಣ ಅಡುಗೆ ಕೋಣೆ ಇದೆ. ಇದಕ್ಕೆಲ್ಲ ಮುಕುಟವಿದ್ದಂತೆ ಉತ್ತರಕ್ಕೆ ಒಂದು ಅತ್ಯಾಕರ್ಷಕ ನಾಗಬನವಿದೆ. ಗೋಪಾಲಕೃಷ್ಣ ಪಾಕಶಾಲೆ ಅತ್ಯಂತ ನವೀನ ರೀತಿಯಲ್ಲಿ ಅಡುಗೆ ತಯಾರಿಸಲು ಸನ್ನದ್ಧವಾಗಿದೆ. ಮುಖ್ಯವಾಗಿ ನೀರಿನ ಸೌಕರ್ಯವಿದ್ದು ದೇವರ ಪ್ರತಿ ಕೆಲಸಕ್ಕೆ ಅನ್ನದಾನಕ್ಕೆ ಪಾಕಶಾಲೆ ಪ್ರಾಮುಖ್ಯವಾಗಿದೆ. ದೇವರ ಷಷ್ಠಿ ಉತ್ಸವ ಸಂದರ್ಭ, ವಾರ್ಷಿಕ ಬ್ರಹ್ಮ ರಥೋತ್ಸವದ ಸಂದರ್ಭ ಇಲ್ಲಿಂದಲೇ ಅನ್ನದಾನ ನೀಡಲಾಗುತ್ತದೆ. ಅಲ್ಲದೇ ಚಿಕ್ಕ ಸಮಾರಂಭಗಳಿಗೆ ಬ್ರಾಹ್ಮಣರಿಗೆ ಅಡುಗೆ ಮಾಡಲು ದೇವಾಲಯದ ಒಳಗೆ ಇನ್ನೊಂದು ಚಿಕ್ಕ ಅಡುಗೆ ಕೋಣೆ ಇದೆ. ದೇವರ ನೈವೇದ್ಯ ಮಾಡಲು ದೇವಾಲಯದ ಒಳಗೆ ಒಂದು ಕೋಣೆಯಿದೆ.

ಗೋಪಾಲಕೃಷ್ಣ ಪಾಕಶಾಲೆಗೆ ಹೊಂದಿಕೊಂಡಂತೆ ಎದುರುಗಡೆ ವಸಂತ ಮಂಟಪವಿದೆ. ಇದರಲ್ಲಿ ವಾರ್ಷಿಕ ಉತ್ಸವದ ಸಂದರ್ಭದಲ್ಲಿ ದೇವರನ್ನು ಇಟ್ಟು ತಂತ್ರಿಗಳು, ಅರ್ಚಕರು ದೇವರನ್ನು ಪೂಜಿಸುತ್ತಾರೆ. ದೇವಸ್ಥಾನದ ಎದುರುಗಡೆ ಭವ್ಯ ಗೋಪುರವಿದೆ. ಹಿಂದಿನ ಕಾಲದ ವಾಸ್ತು ಶಿಲ್ಪ ಎದ್ದು ಕಾಣುತ್ತದೆ. ಮರದ ಅಪೂರ್ವ ಕೆತ್ತನೆಗಳು ಮನಸೂರೆಗೊಳ್ಳುತ್ತದೆ. ದೇವಸ್ಥಾನದ ಉತ್ತರದಲ್ಲಿ ಸೇವಾ ಆಫೀಸು ಇದ್ದು ಅದಕ್ಕೆ ಹೊಂದಿಕೊಂಡಂತೆ ಉಗ್ರಾಣ ಇದೆ. ಇದರಲ್ಲಿ ಪ್ರಸ್ತುತ ದೇವಸ್ಥಾನದ ಟೇಬಲ್ ಕುರ್ಚಿಗಳನ್ನು ಒಪ್ಪ ಓರಣವಾಗಿ ಜೋಡಿಸಿ ಇಟ್ಟಿದ್ದಾರೆ. ಹಾಗೇ ಇತರ ಸಾಮಾನುಗಳನ್ನು ಇಟ್ಟಿದ್ದಾರೆ.

ದೇವಾಲಯದಲ್ಲಿರುವ ಶ್ರೀ ನಾಗದೇವರ ಸನ್ನಿಧಿ :

ದೇವಸ್ಥಾನದ ಉತ್ತರ ಬಾಗಿಲಿನಿಂದ ಹೊರಗೆ ಬಂದಾಗ ಕಾಣಸಿಗುವ ಶ್ರೀ ನಾಗದೇವರ ಸನ್ನಿಧಿಗೆ ಸಹಸ್ರಾರು ಭಕ್ತರು ಆಗಮಿಸುತ್ತಾರೆ. ವಿಶೇಷವಾಗಿ ನಾಗರಪಂಚಮಿಯಂದು. ನಾಗದೇವರ ಸನ್ನಿಧಿಯು ಬ್ರಹ್ಮಕಲಶದ ಸಂದರ್ಭದಲ್ಲಿ ಜೀರ್ಣೋದ್ಧಾರಗೊಂಡಿದೆ. ಅತ್ಯಂತ ಸುಂದರ ಸರಳ ನವೀನ ರೀತಿಯಲ್ಲಿ ಇದರ ಕಾಮಗಾರಿ ನಡೆದಿದೆ. ಈ ನಾಗದೇವರ ಸನ್ನಿಧಿಯು ಅತ್ಯಂತ ಪುರಾತನ ಮಾತ್ರವಲ್ಲ ಇದರಲ್ಲಿ ಹಲವಾರು ನಾಗದೇವರ ಕಲ್ಲುಗಳು ಇದೆ. ಇಲ್ಲಿಗೆ ಬಂದು ನಾಗದೇವರಿಗೆ ಪೂಜೆ (ತನು–ತಂಬಿಲ) ಸೇವೆ ನೀಡಿದರೆ ನಿಮ್ಮ ಇಷ್ಟಾರ್ಥಗಳು ನೆರವೇರುತ್ತದೆ. ಮುಖ್ಯವಾಗಿ ಚರ್ಮವ್ಯಾಧಿ ಅಲ್ಲದೆ ಸಂತಾನ ಭಾಗ್ಯದಂತಹ ಪ್ರತಿಫಲಗಳು ಇಲ್ಲಿ ದೊರೆಯುತ್ತವೆ ಎಂಬ ಬಲವಾದ ನಂಬಿಕೆಯಿದೆ. ಅತ್ಯಂತ ಪ್ರಶಾಂತವಾದ ಈ ಪರಿಸರದಲ್ಲಿ ನಾಗದೇವರು ಆಸೀನರಾಗಿದ್ದಾರೆ. ಉತ್ತರದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ನೀರು ಹರಿವು ಇದ್ದು, ಕಾರ್ತಿಕೇಯ ಎಡಭಾಗದಲ್ಲಿ ಇಷ್ಟಾರ್ಥ ಸರ್ವಭಕ್ತರನ್ನು ಹರಸುತ್ತಾ ಶ್ರೀ ನಾಗದೇವರು ಕೃತಾರ್ಥರಾಗಿದ್ದಾರೆ.

ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಂದರ್ಭದಲ್ಲಿ ನಾಗದೇವರಿಗೆ ನಾಗಮಂಡಲ ಸೇವೆ ಜರುಗಿದ್ದು ಕ್ಷೇತ್ರದ ಕಳೆ ಇನ್ನಷ್ಟು ಹೆಚ್ಚಿದೆ. ಈ ರೀತಿಯಾಗಿ ಸುಬ್ರಹ್ಮಣ್ಯನ ಒಂದು ಅಂಶವಾಗಿ ನಾಗದೇವರು ಪಾದೆಬೆಟ್ಟು ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ನೆಲೆಸಿದ್ದಾರೆ.

ಪಾದೆಬೆಟ್ಟು ಸ್ಥಳನಾಮಕ್ಕೆ ಸಂಶೋಧಕರು ನೀಡುವ ವ್ಯಾಖ್ಯಾನಗಳು

* ಕಂದಾಯ ದಾಖಲೆಯಂತೆ ಪಡುಬಿದ್ರಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸೇರುವ ಪಾದೆಬೆಟ್ಟು ಒಂದು ಸಣ್ಣ ಗ್ರಾಮ. ಮೂರು ನಾಲ್ಕು ದಶಕಗಳಷ್ಟು ಹಿಂದೆ ಸೂರ್ಯಾಸ್ತಮಾನವನ್ನು ನೋಡಬಹುದಾದಷ್ಟು ಎತ್ತರವಾಗಿದ್ದ 'ಕೆಂಕಣ್ಣಪಾದೆ' ಈ ಊರಿನಲ್ಲಿ ಎದ್ದು ಕಾಣುತ್ತಿದ್ದ ಪ್ರದೇಶವಾಗಿತ್ತು. ಈ ಬಂಡೆಯನ್ನು ಒಡೆದು ದೇವಳ ನವೀಕರಣಕ್ಕೆ ಬಳಸಲಾಗಿದೆ. ಆದರೆ ಹಿಂದಿನ ಎತ್ತರ ಇದೀಗ ಕಾಣಸಿಗದು. ಈ ಕಾರಣದಿಂದಾಗಿ ಪಾದೆಯಬೆಟ್ಟು, 'ಪಾದೆಬೆಟ್ಟು' ಎಂದಾಗಿ ಪಾದೆಟ್ಟು ಎಂಬ ರೂಪ ಪಡೆದು

ಜನಜನಿತವಾಗಿರಬೇಕು. ಭಾಷೆ ಯಾವಾಗಲೂ ಕಠಿಣದಿಂದ ಸುಲಭ'ದ ಕಡೆಗೆ ಮುಖವಾಡಿರುತ್ತದೆ ಹಾಗೂ ಸೌಲಭ್ಯಾಕಾಂಕ್ಷಿಯಾಗಿರುತ್ತದೆ.

* ಬಹುತೇಕ ಸ್ಥಳನಾಮಗಳು ಆ ಪ್ರದೇಶದ ಭೌಗೋಳಿಕ, ಪ್ರಾಕೃತಿಕ ಸ್ವರೂಪಗಳ ನೆಲೆಯಲ್ಲಿ ಬಂದವುಗಳು ಎಂಬುದು ಸ್ಥಳನಾಮ ಸಂಶೋಧಕರ ಅಭಿಪ್ರಾಯ. ಈ ಅಭಿಪ್ರಾಯವನ್ನು ಬಹಳ ಸರಿಯಾದುದೆಂದು ಪರಿಗ್ರಹಿಸಬಹುದಾಗುತ್ತದೆ. ಆಧಾರಗಳನ್ನು ನೀಡಿಯೂ ಪ್ರತಿಪಾದಿಸಬಹುದು. ಅವುಗಳೆಂದರೆ ಪಾದೆಬೆಟ್ಟು ಗ್ರಾಮ: ಕೆರಮ ಎಂದು ಗುರುತಿಸುತ್ತಾರೆ. ಗ್ರಾಮವೆಂಬುದು ಸಂಸ್ಕೃತದ ಮೂಲ ಶಬ್ದ ಆದರೆ ಕೆರಮ ಎಂಬುದು ತುಳು ಮೂಲದ ಶಬ್ದ. ತುಳು ಆಡುಭಾಷೆಯ ಜನವರ್ಗ ವಾಸಿಸುವ ಪರಿಸರದಲ್ಲಿ ಸ್ಥಳನಾಮಗಳಾಗಲಿ, ಕೆರೆಯನ್ನು ಹೆಸರಿಸುವ ಜಾಗವನ್ನು ಗುರುತಿಸುವ ಶಬ್ದಗಳಾಗಲಿ ತುಳುವೇ ಆಗಿರುತ್ತದೆ. ಮುಂದೆ ಸಂಸ್ಕೃತ ಭಾಷಿಕರ ಪ್ರಭಾವದಿಂದ ಈ ತುಳು ಶಬ್ದಗಳೇ ಸಂಸ್ಕೃತವಾಗಿ ಎಂದೆ 'ಕೆರವ'ವು ಗ್ರಾಮವಾದಂತೆ ಪರಿವರ್ತನೆಯಾಗುವುದು ಸಹಜ ಕ್ರಿಯೆಯಾಗಿದೆ ಎಂದು ಸಂಶೋಧಕರು ಕರಾರುವಕ್ಕಾಗಿ ಆಧಾರಗಳ ಮೂಲಕ ವಿವರಿಸುತ್ತಾರೆ.

ಗ್ರಾಮವೇ ಹಳೆ ಶಬ್ದವಾಗಿದ್ದರೆ ಗ್ರಾಮವೆಂದು ಹೇಳಲು ಕಾರಣವಾಗುವ ಆಧಾರಗಳೇನು ಎಂದು ಪ್ರಶ್ನಿಸಬೇಕಾಗುತ್ತದೆ. 'ಗ್ರಾಮ' ಎಂಬುದು ಒಂದು ಪ್ರದೇಶ ವ್ಯಾಪ್ತಿಯನ್ನು ಸೂಚಿಸುವ ಅಥವಾ ವ್ಯವಸ್ಥೆಯೊಂದನ್ನು ಹೇಳುವ ಶಬ್ದವೇ ಹೊರತು ಬೇರೆ ಯಾವುದೇ ವಿಶೇಷ ಅರ್ಥವನ್ನು ಕೊಡುವ ಶಬ್ದವಲ್ಲ.

ಆದರೆ 'ಕೆರಮ' ಶಬ್ದದ ಬೆನ್ನು ಹತ್ತಿ ಹೋದಾಗ ಪರಿವರ್ತನೆ ಪೂರ್ವದ ಭೌಗೋಳಿಕ, ಪ್ರಾಕೃತಿಕ ಸ್ವರೂಪವನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಈ ಆಧಾರದಲ್ಲೇ ಪ್ರದೇಶಗಳನ್ನು ಗುರುತಿಸುತ್ತಿದ್ದರೆಂಬುದನ್ನು ಒಪ್ಪಬೇಕಾಗುತ್ತದೆ.

ಪಾದೆಬೆಟ್ಟು ಸುಬ್ರಹ್ಮಣ್ಯ ದೇವರು ಅವಭೃತಕ್ಕೆ ಹೋಗುವ ಕೆರೆಯೊಂದು ಪಾದೆಬೆಟ್ಟಿನ ಸ್ಥಳನಾಮಕ್ಕೆ ಕಾರಣವಾಯಿತು. ಈ ಕೆರೆ ಹಿಂದೆ ಪವಿತ್ರವಾದುದಾಗಿದ್ದು ಭಾರೀ ನೀರಿನ ಮೂಲವಾಗಿತ್ತು ಎಂಬ ಪುರಾವೆಗಳು ಸಿಗುತ್ತವೆ. ಪೂರ್ವದಲ್ಲಿ ಊರಿಗೆ ಜಲಾಶ್ರಯವಾಗಿದ್ದ ಈ ಕೆರೆಯ ಮೂಲಕವೇ ಈ ಪರಿಸರ ಗುರುತಿಸಲ್ಪಟ್ಟು ಈ ಕೆರೆ ಸಂಬಂಧವಾಗಿ 'ಕೆರೆಮ'ವಾಯಿತು. ಕೆರೆಮವನ್ನು ಗ್ರಾಮವೆಂದು ಸಂಸ್ಕೃತದಲ್ಲಿ ಹೆಸರಿಸಲಾಯಿತು ಎಂದು ವ್ಯಾಖ್ಯಾನಿಸಲಾಗಿದೆ.

ಕೆರೆ ಸಂಬಂಧವಾಗಿ ಕೆರೆಮ–ಗ್ರಾಮ ಬಂಡೇ(ಪಾದೆ)ಯಿಂದಾಗಿ ಪಾದೆಬೆಟ್ಟು. ಈ ಎರಡೂ ಸ್ಥಳನಾಮಗಳು ಭೌಗೋಳಿಕ ಮತ್ತು ಪ್ರಾಕೃತಿಕ ಸ್ವರೂಪ ಜನ್ಯವಾದುದು. ಇದು ಸಹಜವಾದುದು. ಆದುದರಿಂದಲೇ ಪರಿಗ್ರಾಹ್ಯವಾದುದು ಎನಿಸುತ್ತದೆ.

ಪಾದೆಬೆಟ್ಟಿನ ಸಂದರ್ಭದಲ್ಲಿ ಸುಮಾರು 14ನೇ ಶತಮಾನದಿಂದ ಪಾದೆಬೆಟ್ಟು, ಪಾದೆಟ್ಟು ಎಂಬ ಹೆಸರು ಇತಿಹಾಸದ ದಾಖಲೆಗಳಲ್ಲಿ ಲಭಿಸುತ್ತದೆ.

ಪಾದೆಬೆಟ್ಟು ಗ್ರಾಮಕ್ಕೆ ಸುಬ್ರಹ್ಮಣ್ಯ ದೇವರು ಗ್ರಾಮ ದೇವರಾಗಿದ್ದು ಗ್ರಾಮದ ಜನರನ್ನೆಲ್ಲಾ ರಕ್ಷಿಸುತ್ತಾರೆ ಎಂಬ ನಂಬಿಕೆಯೂ ಇದೆ. ತುಳುನಾಡಿನಲ್ಲಿ ಅದರಲ್ಲೂ ಪಾದೆಬೆಟ್ಟಿನ ಗ್ರಾಮದ ಜನರು ಸುಬ್ರಹ್ಮಣ್ಯ ದೇವರನ್ನು 'ಸುಬ್ರಾಯ ದೇವೆರ್' ಎಂದು ಕರೆಯುತ್ತಾರೆ.

ಈ ರೀತಿಯಾಗಿ ಪಾದೆಬೆಟ್ಟನ್ನು ಈ ಕೆಳಗಿನಂತೆಲ್ಲ ಕರೆಯುತ್ತಾರೆ.

ಕೆರಮ– ಗ್ರಾಮ; ಪಾದೆಟ್ಟು– ಪಾದೆಬೆಟ್ಟು

ಆ ಕಾಲದ ರಾಜಕೀಯ ಸ್ಥಿತಿ :

ಸುಮಾರು ಒಂದು ಶತಮಾನದಷ್ಟು ಹಿಂದೆ, ಪಡುಬಿದ್ರಿ ಬೀಡಿನ ಅರಸರ ಆಳ್ವಿಕೆಯ ಕಾಲವಾಗಿತ್ತು. ಆಗ ಗೋಪುರದ ಉಪ್ಪರಿಗೆಯಲ್ಲಿ ಪಾಠಶಾಲೆ ನಡೆಯುತ್ತಿತ್ತು. ಈ ಶಾಲೆಯನ್ನು 1906ರಲ್ಲಿ ಕುಚ್ಚಿಗುಡ್ಡೆಯ ಜನಾರ್ಧನ ರಾಯರು ಸ್ಥಾಪಿಸಿದರು. ಬ್ರಾಹ್ಮಣರ ಸಂಘವು ಹೆಚ್ಚು ಪ್ರಚಲಿತವಾಗಿದ್ದ ಆ ಕಾಲದಲ್ಲಿ ಗ್ರಾಮದ ಒಂದನೇ ಮನೆಯಾಗಿ ಭಾಗವತರ ಮನೆಯನ್ನು ಗುರುತಿಸಲಾಗುತ್ತಿತ್ತು. ಮಂಜಿತ್ತಾಯ ವಂಶದವರು ಶ್ರೀ ದೇವಳದ ಅರ್ಚಕರಾಗಿದ್ದರು. ಅರುವತ್ತು ಮುಡಿ ಗೇಣಿ ಬರುವ ಆಸ್ಥಿಯನ್ನು ಅವರು ಹೊಂದಿದ್ದರು. ಅದರಲ್ಲಿ ಮೂವತ್ತು ಮುಡಿ ಅಕ್ಕಿ ಗೇಣಿಯ ಆಸ್ಥಿಯನ್ನು ಅವರಿಂದ ಅಡಿಗಳ ಸುಬ್ರಹ್ಮಣ್ಯ ಭಟ್ಟ ಅಡಿಯರು ಪಡೆದು ಅವರ ವರ್ಗದವರು ನಾಲ್ಕು ಪಾಲು ಮಾಡಿಕೊಂಡಿದ್ದರು. ತಮ್ಮಲ್ಲಿಯ ಆಸ್ಥಿಗೋಸ್ಕರ ಮಂಜಿತ್ತಾಯ ವಂಶದವರು ದೇವಸ್ಥಾನದಲ್ಲಿ ಸಮಾರಾಧನೆ ಮಾಡಿಸಿಕೊಂಡು ಬರುತ್ತಿದ್ದರು. ಈ ಸಮಾರಾಧನೆಯು 1961ನೇ ಇಸವಿಯ ವರೆಗೆ ನಡೆಯಿತು.

ಅಡಿಗಳವರ ನಾಲ್ಕು ಪಾಲಿನವರು ದೇವರ ಸೇವೆ ಹಾಗೂ ನೈವೇದ್ಯ ಕೊಡುತ್ತಾ ಇರುವಾಗ, ಒಂದು ಪಾಲಿನವರು ಬ್ರಿಟಿಷ್ ಆಳ್ವಿಕೆಯಲ್ಲಿ ಅಂದರೆ 1938ನೇ ಇಸವಿಯಲ್ಲಿ ಹದಿನೈದು ಮುಡಿ ಅಕ್ಕಿಯ ಆಸ್ಥಿಯನ್ನು ತಮ್ಮ ಸ್ವಂತದ್ದು ಎಂದು ಮಾಡಿಕೊಂಡರು. ತದನಂತರ ಜೈನರ ಆಳ್ವಿಕೆಯಿಂದ ದೇವಳದ ನಿರ್ವಹಣೆಯ ಜವಾಬ್ದಾರಿಯನ್ನು ಊರಿನ ಗುರಿಕಾರ ಭಾಗವತರು ಪಡೆದುಕೊಂಡರು. ವ್ಯವಸ್ಥಿತವಾಗಿ ನಡೆಯುತ್ತಿತ್ತು. ಸ್ವಲ್ಪ ಸಮಯದ ಬಳಿಕ ಭಾಗವತರಿಗೆ ದೇವಳವನ್ನು ನಡೆಸಲು ಕಷ್ಟವಾಗಿ ತಮ್ಮ ಊರಿನ ಪಠೇಲರಿಗೆ ಹಸ್ತಾಂತರಿಸಲಾಯಿತು. ಪಠೇಲರು ಷಷ್ಠಿ, ಕಿರುಷಷ್ಠಿ, ಉತ್ಸವಾದಿಗಳನ್ನು ಕಾಲಕಾಲಕ್ಕೆ ಸರಿಯಾಗಿ ಕಷ್ಟಪಟ್ಟು ನೆರವೇರಿಸಿಕೊಂಡು ಬರುತ್ತಿದ್ದರು.

ಪೂರ್ವದಿಂದಲೂ ಪಡುಪೇಟೆಯ ಉಪಾಧ್ಯಾಯರು ತಂತ್ರಿಗಳಾಗಿ ಇಲ್ಲಿಗೆ ಹಾಗೂ ಪಡುಬಿದ್ರಿಗೆ ಬರುತ್ತಿದ್ದರು. ಸಾತ್ವಿಕವಾದ ಇವರಿಗೆ ಒಬ್ಬ ಪುತ್ರ ಇದ್ದರು. ಹಿರಿಯ ತಂತ್ರಿಯವರ

ಕಾಲಾನಂತರ ಪುತ್ರ ಪಾದೆಬೆಟ್ಟಿಗೆ ಬಂದು ಉತ್ಸವಾದಿಗಳನ್ನು ನಡೆಸುತ್ತಿದ್ದರು. ಇವರಿಗೆ ಗಂಡುಮಕ್ಕಳಿಲ್ಲವಾದ್ದರಿಂದ ಈಗ ಆಗಮಿಸುವ ತಂತ್ರಿಯವರ ತಂದೆಗೆ ಪಾದೆಬೆಟ್ಟು ಮತ್ತು ಪಡುಬಿದ್ರಿಯ ತಂತ್ರವನ್ನು ಕೈ ಬಟ್ಟಲು ಕೊಟ್ಟು ಹಸ್ತಾಂತರಿಸಿದರು.

ಪಠೇಲರ ಸರಳ–ಸಜ್ಜನಿಕೆಯ ಸ್ವಭಾವಕ್ಕೆ ಗ್ರಾಮಸ್ಥರು ತಲೆಭಾಗುತ್ತಿದ್ದರು. ಎಲ್ಲರನ್ನು ಗೌರವಿಸುತ್ತಾ–ಹೊಗಳುತ್ತಾ, ನಗು–ನಗುತ್ತಾ ಕೆಲಸ ಮಾಡಿಸುತ್ತಿದ್ದರು. ವ್ಯವಸ್ಥಿತವಾಗಿ ದೇವಸ್ಥಾನ ನಡೆಯುವಂತಾಯಿತು. ನಂತರದ ಕಾಲದಲ್ಲಿ ಪಾದೆಬೆಟ್ಟು ಗೋಪಾಲಕೃಷ್ಣ ಆಚಾರ್ಯರು ಭಕ್ತರ, ಊರವರ ಹಾಗೂ ಮುಂಬಯಿ ದಾನಿಗಳ ಸಹಕಾರದಿಂದ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿದರು. ದೇವಸ್ಥಾನದ ಕೆಲಸ ಕಾರ್ಯಗಳು ವ್ಯವಸ್ಥಿತವಾಗಿ ನಡೆಯಿತು. ಇದು ಸುಬ್ರಹ್ಮಣ್ಯ ದೇವಸ್ಥಾನದ ಆ ಕಾಲದ ರಾಜಕೀಯವಾಗಿದೆ. ನಂತರ ಹಲವು ವರ್ಷಗಳು ಕಳೆದ ಮೇಲೆ 2010 ರಲ್ಲಿ ಪುನಃಜೀರ್ಣೋದ್ಧಾರ ಮಾಡಿ ಬ್ರಹ್ಮಕಲಶ ನಡೆಯಿತು.

ಧಾರ್ಮಿಕ ಕ್ಷೇತ್ರ :

ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ ದೇವರು ಬಹು ಪುರಾತನವಾದ ಮತ್ತು ಭಾರೀ ಮಹಿಮೆಯ ದೇವರು. ಶ್ರದ್ಧಾ ಭಕ್ತಿಯಿಂದ ಭಕ್ತರು ಬೇಡಿಕೊಂಡರೆ ತಕ್ಷಣವೇ ಅನುಗ್ರಹಿಸುವ ಶಕ್ತಿಯಿದೆ. ಪಂಚಾಮೃತ ಅಭಿಷೇಕ ಮತ್ತು ಕಡುಬು ಸೇವೆ ಈ ದೇವರಿಗೆ ಬಹು ಇಷ್ಟವಾದ ಸೇವೆ. ಸಂತಾನ ಪ್ರಾಪ್ತಿಗೆ ಮತ್ತು ವಿವಾಹಕ್ಕೆ ಇಲ್ಲಿ ಪ್ರಾರ್ಥನೆ ಮಾಡಿಕೊಂಡರೆ ಅತೀ ಶೀಘ್ರದಲ್ಲಿ ಫಲಿಸುತ್ತದೆ. ಸಮಸ್ತ ನಾಗದೋಷ ಪರಿಹಾರಕ್ಕೆ ಇಲ್ಲಿ ನಾಗನ ಪೂಜೆ ಕೊಟ್ಟಲ್ಲಿ ನಾಗದೋಷ ನಿವಾರಣೆ ಆಗುತ್ತದೆ.

ಪಾದೆಬೆಟ್ಟಿನಲ್ಲಿ ಆಲಡೆ, ಧೂಮವತಿ ಸ್ಥಾನ, ಕೋರ್ದಬ್ಬು ದೈವಸ್ಥಾನ ಮತ್ತು ನರ್ಸಿಕಟ್ಟೆ ಪಂಚ ದೈವಸ್ಥಾನಗಳಿವೆ. ದೇವಾಲಯ ಸಂಸ್ಕೃತಿಯು ಭೂತಾರಾಧನೆ, ನಾಗಾರಾಧನೆಯಂತಹ ಅದಿಮ ಸಂಸ್ಕೃತಿಯೊಂದಿಗೆ ಸಮೀಕರಿಸಲ್ಪಟ್ಟು ಪರಸ್ಪರ ಸಂಬಂಧವನ್ನು ಹೊಂದಿ ಹಾಸುಹೊಕ್ಕಾಗಿ ತಲೆಮಾರುಗಳಿಂದ ಹರಿದು ಬಂದ ಕ್ರಮವನ್ನು ಅವಲೋಕಿಸಿದರೆ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿಕೊಂಡು ಸ್ಥಾಯಿಯಾಗಿ ನಿಂತಿರುವ ನಮ್ಮ ದೇಶದ ಮೂಲ ಸಂಸ್ಕೃತಿಯ ಬಗ್ಗೆ ಹೆಮ್ಮೆ ಎನಿಸುತ್ತದೆ.

ದೇವಸ್ಥಾನದಿಂದ ಒಂದು ಫರ್ಲಾಂಗ್ ದೂರದಲ್ಲಿ ಶ್ರೀ ವಿಷ್ಣುಮೂರ್ತಿ ದೇವರ ಪುಟ್ಟ ದೇವಳವೊಂದಿದೆ. ಶಾನುಭೋಗರ ಮನೆಯವರು ಪೂಜೆ ಮಾಡಿಕೊಂಡಿದ್ದಾರೆ. ಪಾದೆಬೆಟ್ಟುವಿನಲ್ಲಿ ಶ್ರೀ ರಾಘವೇಂದ್ರ ದೇವರ ಮರವಿದ್ದು ಪ್ರತಿವರ್ಷ ಆರಾಧನೆ, ಹನುಮಜಯಂತಿ, ರಾಮಜಯಂತಿಗಳು ಬಹು ವಿಜೃಂಭಣೆಯಿಂದ ನಡೆಯುತ್ತದೆ.

ಸಾಂಸ್ಕೃತಿಕ ಕ್ಷೇತ್ರ :

ಪಾದೆಬೆಟ್ಟು ಗ್ರಾಮವು ಸಾಂಸ್ಕೃತಿಕವಾಗಿಯೂ ಬಹಳ ಮುಂದುವರಿದಿದೆ. ಶ್ರೀ ಸುಬ್ರಹ್ಮಣ್ಯ ದೇವರ ಉತ್ಸವದ ಸಂದರ್ಭದಲ್ಲಿ ಆದಿಕಾಲದಿಂದಲೂ ಯಕ್ಷಗಾನ ತಾಳಮದ್ದಲೆ, ಹರಿಕಥೆ, ನಾಟಕ ಮತ್ತು ಸಾಂಪ್ರದಾಯಿಕ ಶೈಲಿಯ ನೃತ್ಯವೇ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗುತ್ತಿರುವುದು ಇಲ್ಲಿಯ ವಿಶೇಷವಾಗಿದೆ. ಪ್ರತಿವರ್ಷ ಷಷ್ಠಿಯ ಸಂದರ್ಭದಲ್ಲೂ ತುಳು ನಾಟಕಗಳು ನಡೆಯುತ್ತವೆ. ಇತ್ತೀಚಿನ ವರ್ಷಗಳಲ್ಲಿ ನಡೆದ ಬ್ರಹ್ಮಕಲಶದ ಸಂದರ್ಭದಲ್ಲಿ ಅನೇಕಾನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಜಾನಪದೀಯ ಕ್ಷೇತ್ರ :

ಪಾದೆಬೆಟ್ಟಿನ ಪ್ರದೇಶವು ಅನೇಕ ನಾಗಬನಗಳಿಂದ ಕೂಡಿದ್ದು, ಇದರೊಂದಿಗೆ ಭೂತಾರಾಧನೆಯು ಸಾಗಿಬರುತ್ತಿದೆ. ಪ್ರತಿಯೊಬ್ಬರ ಮನೆಯಲ್ಲಿಯೂ ಒಂದೊಂದು ದೈವಸ್ಥಾನವಿರುವುದು ಪಾದೆಬೆಟ್ಟಿನ ಜಾನಪದೀಯ ಸಂಸ್ಕೃತಿಗೆ ಒಂದು ಉತ್ತಮ ನಿದರ್ಶನವಾಗಿದೆ. ಈ ಪ್ರದೇಶದ ಪ್ರಮುಖ ದೈವಸ್ಥಾನಗಳೆಂದರೆ–ಕೋರ್ದಬ್ಬು ದೈವಸ್ಥಾನ, ಆಲಡೆ ನರ್ಸಿಕಟ್ಟೆ, ಧೂಮಾವತಿ, ಬ್ರಹ್ಮಬೈದರ್ಕಳ ಗರಡಿ, ವರ್ತೆಪಂಜುರ್ಲಿ, ರಕ್ತೇಶ್ವರಿ, ನಂದಿಕೋಣ, ಬ್ರಹ್ಮರು, ಕ್ಷೇತ್ರಪಾಲ, ಸತ್ಯದೇವತೆ ಮೊದಲಾದವುಗಳು.

ಶೈಕ್ಷಣಿಕ ಕ್ಷೇತ್ರ :

ಪಾದೆಬೆಟ್ಟು ಗ್ರಾಮವು ಶೈಕ್ಷಣಿಕ ಕ್ಷೇತ್ರದಿಂದಲೂ ಬಹಳ ಮುಂದುವರೆದಿದೆ. ಸುಮಾರು 150 ವರ್ಷಗಳ ಇತಿಹಾಸವಿರುವ ಒಂದು ಕಿರಿಯ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಕೇಂದ್ರವಿದೆ. ಇತ್ತೀಚಿಗೆ ಈ ಶಾಲೆಯನ್ನು ಪ್ರಾಥಮಿಕ ಶಾಲೆಯಿಂದ ಸರಕಾರಿ ಶಾಲೆಯನ್ನಾಗಿಸಿದ್ದು ನೂತನ ಕಟ್ಟಡದೊಂದಿಗೆ ಮಕ್ಕಳಿಗೆ ಬೇಕಾದ ಎಲ್ಲಾ ವಸ್ತುಗಳನ್ನು ದೊರಕಿಸಿಕೊಡುತ್ತಿದ್ದು ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಈ ಊರಿನ ಶಾಲೆಯಲ್ಲಿ ವ್ಯಾಸಂಗ ಮಾಡಿದವರು, ಸರ್ಕಾರಿ ಹಾಗೆ ಖಾಸಗಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಲ್ಲದೇ ಶಿಕ್ಷಕರಾಗಿ, ಪ್ರಾಚಾರ್ಯರಾಗಿ, ಪಂಡಿತರಾಗಿ ಕೀರ್ತಿಯನ್ನು ಮೆರೆಸುತ್ತಿದ್ದಾರೆ. ಇದೇ ಶಾಲೆಯಲ್ಲಿ ಗುರುಗಳಾಗಿ ಶಿಷ್ಯರಿಗೆ ಕಲಿಸುತ್ತಿದ್ದ ಶಾರದಾ ಬಾಯಿ ಇವರ ಬಳಿ ಸಂಭಾಷಣೆ ನಡೆಸಿದಾಗ ನಮಗೆ ಹಿಂದಿನ ಕಾಲದ ಆ ಗುರುಗಳ ಹಾಗೂ ಶಿಷ್ಯರ ಅನುಬಂಧ, ಕಲಿಕೆಯ ವಿಧಾನ ತಿಳಿಯಿತು.

ಶಾರದಾಬಾಯಿ :

ಶಾರದಾಬಾಯಿಯ ಇವರು ಪಾದೆಬೆಟ್ಟಿನಲ್ಲಿಯ ಎಲ್ಲಾ ವ್ಯಕ್ತಿಗಳವರಿಗಿಂತಲೂ ಹಿರಿಯರು ಪ್ರಸ್ತುತ ಇವರಿಗೆ 96 ವರ್ಷಗಳು.

1922ರಲ್ಲಿ ಇವರು ಜನಿಸಿದರು. 1906ರಲ್ಲಿ ಇವರ ಪತಿ ಜನಾರ್ಧನರಾಯರಿಂದ ಸ್ಥಾಪಿತವಾದ ಶಾಲೆಯಲ್ಲಿ ಶಿಕ್ಷಕಿಯಾಗಿ ಇವರು ಸೇವೆಸಲ್ಲಿಸಿದರು. 1940ರಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟರು. ಸುಮಾರು 40 ವರ್ಷಗಳ ಕಾಲ ಸೇವೆಸಲ್ಲಿಸಿದರು. ಮುಖ್ಯೋಪಾಧ್ಯಾಯಿನಿಯಾಗಿಯೂ ಇವರು ಸೇವೆಸಲ್ಲಿಸಿದ್ದರು. 1975ರಲ್ಲಿ ಇವರು ನಿವೃತ್ತಿಯಾಗಿದ್ದಾರೆ. ಇವರು ತುಂಬಾ ಶ್ರೇಷ್ಠ ವ್ಯಕ್ತಿಯಾಗಿ ಕಂಡುಬಂದಿದ್ದು ಸಮಾಜದಲ್ಲಿ ಬಹಳ ವಿರಳವಾಗಿ ಕಂಡುಬರುವ 5 ತಲೆಮಾರಿನ ವ್ಯಕ್ತಿಯಾಗಿದ್ದಾರೆ. ಇವರು ಪ್ರಸ್ತುತ ಮುತ್ತಜ್ಜಿಯ ಸ್ಥಾನದಲ್ಲಿದ್ದು ಮರಿಮರಿ ಮಕ್ಕಳನ್ನು ಹೊಂದಿದ್ದಾರೆ. ಶಾರದಾಬಾಯಿ –>ಜಾನಕಿ–>ಚಂದ್ರಮತಿ–>ರೇಷ್ಮ–>ತೇಜಸ್

ಇದು ಅವರ ಐದು ತಲೆಮಾರಿನ ವಿವರ.

ಶಾರದಾಬಾಯಿಯಂತಹ ಆ ಕಾಲದ ಗುರುಗಳು ಇಂದಿಗೂ ನಮಗೆ ಈ ಗ್ರಾಮದಲ್ಲಿ ಸಿಗುತ್ತಾರೆ. ಇವರಿಗೆಲ್ಲ 15 ವರ್ಷಗಳಿಗಿಂತಲೂ ಹೆಚ್ಚು ವರ್ಷವಾಗಿದ್ದು ಊರಿನ ಹಿರಿಯ ವ್ಯಕ್ತಿಗಳಾಗಿರುವರು. ದೇವಸ್ಥಾನದ ಬಗ್ಗೆ ಹಾಗೆ ಊರಿನ ಬಗೆಗಿನ ಆ ಕಾಲದ ಮಾಹಿತಿಯನ್ನು ಸ್ವಲ್ಪಸ್ವಲ್ಪ ನಮಗೆ ತಿಳಿಯಲು ಸಹಕರಿಸಿದರು.

ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮಗಳು :

ದೇವರ ಗರ್ಭಗುಡಿಯು ತೀರಾ ಶಿಥಿಲವಾದುದನ್ನು ಮನಗಂಡು, ಅದನ್ನು ನವೀಕರಿಸುವ ಉದ್ದೇಶದಿಂದ 1985ರಲ್ಲಿ ದೇವಳದ ಮೂಲ ವಿಗ್ರಹವನ್ನು ಇನ್ನೊಂದು ಕಡೆಯಲ್ಲಿ ಇರಿಸಿ ಪೂಜೆ ನಡೆಸಲಾಯಿತು. ಈ ಹಿಂದೆ ದೇವಸ್ಥಾನ ಬೃಹತ್ತಾಗಿಲ್ಲದೆ ಕೇವಲ ಗರ್ಭಗುಡಿಯಿಂದ ಮಾತ್ರ ಸೀಮಿತವಾಗಿದ್ದು, ಮೇಲ್ಚಾವಣಿಯನ್ನು ಹೊಂದಿರಲಿಲ್ಲ. ಹಾಗಾಗಿ 1985ರ ಈಚೆಗೆ ದೇವಾಲಯವನ್ನು ಬೃಹತ್ತಾಗಿ ನಿರ್ಮಿಸಲಾಯಿತು.

ಅನೇಕ ವರ್ಷಗಳ ನಂತರ ಬ್ರಹ್ಮಕಲಶವನ್ನು ಪುನಃ ಏರ್ಪಡಿಸಲಾಗಿತ್ತು. ಏಕೆಂದರೆ ವರ್ಷಕಳೆದಂತೆ ಬ್ರಹ್ಮಕಲಶದ ಅನಿವಾರ್ಯ ಕೂಡ ಇತ್ತು. ಇಪ್ಪತ್ತೂರು ವರ್ಷಗಳ ನಂತರ ಸುಬ್ರಹ್ಮಣ್ಯ ದೇವರಿಗೆ ಪುನಃ ಬ್ರಹ್ಮಕಲಶವನ್ನು ಏರ್ಪಡಿಸಲಾಯಿತು. ಅದಕ್ಕೆ ಆಶೇಷ ಜೀರ್ಣೋದ್ಧಾರ ಪೂರ್ವಕ ಬ್ರಹ್ಮಕಲಶಾಭಿಷೇಕ ನಡೆಸುವ ಸಂಕಲ್ಪ ಸ್ವೀಕರಿಸಲಾಯಿತು. ಜೀರ್ಣೋದ್ಧಾರದಲ್ಲಿ ಎದ್ದು ಕಾಣುವ ಕಾಮಗಾರಿಗಳು ಗರ್ಭಗುಡಿಯ ಸಂಪೂರ್ಣ ನವೀಕರಣ, ಒಳಗಿನ ಸುತ್ತುಪೌಳಿಯ ನೆಲದ ಸಂಪೂರ್ಣ ಕೆಲಸ, ಸುತ್ತುಪೌಳಿ ಮಾಡಿನ ಸಂಪೂರ್ಣ ಬದಲಾವಣೆ, ನೂತನ ಧ್ವಜಸ್ತಂಭ, ಶ್ರೀ ನಾಗದೇವರ ಸನ್ನಿಧಿ, ವಸಂತ ಮಂಟಪ, ಎದುರಿನ ಗೋಪುರ, ಆಫೀಸ್ ಕೋಣೆ ಅಲ್ಲದೆ ಎದುರಿನ ದೇವಸ್ಥಾನದ ಭಾಗಕ್ಕೆ ಮಣ್ಣು ಹಾಕಿ ಸಮನಾಂತರ ಮಾಡಿದ್ದು ಹೀಗೆ ಅನೇಕ ಕೆಲಸಗಳು ನಡೆದಿವೆ. ಹೀಗೆ ಸ್ವಚ್ಛ ಸುಂದರ ಕಾಮಗಾರಿ ನಡೆದು ಒಂದು ಮಾದರಿ ಕ್ಷೇತ್ರವಾಗಿ ರೂಪುಗೊಂಡಿದೆ ಎಂದರೆ ಅತಿಶಯೋಕ್ತಿ ಆಗಲಾರದು. 17/5/2010ರಿಂದ ನಡೆದ 25/5/2010ರ ವರೆಗೆ ಬ್ರಹ್ಮಕಲಶದ ಸಂದರ್ಭದಲ್ಲಿ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ನಾಗಮಂಡಲ ಸೇವೆ ಸಮರ್ಪಿಸುವ ಕುರಿತು ಯೋಚಿಸಿ ಸರ್ವಾನುಮತದಿಂದ ನಿರ್ಧರಿಸಲಾಯಿತು. ಈ ರೀತಿ ನಾಗಮಂಡಲ ಸೇವೆಗಳು ವೈಭವೋಪೇತವಾಗಿ ಸಂಪನ್ನಗೊಂಡಿತ್ತು.

ವಿಶೇಷ ಪರ್ವ–ಉತ್ಸವ :

ವಾರ್ಷಿಕ ಮಹೋತ್ಸವ ಮೇಷ ಮಾಸದ ಹುಣ್ಣಿಮೆಯಂದು ಧ್ವಜಾರೋಹಣದೊಂದಿಗೆ ಆರಂಭವಾಗುತ್ತದೆ. ಐದು ದಿನ ಉತ್ಸವ ಕಾಲ. ಅವಭೃತದೊಂದಿಗೆ ಧ್ವಜಾರೋಹಣ ಮೂಲಕ ಉತ್ಸವ ಸಮಾಪನ. ಈ ಉತ್ಸವಕ್ಕೆ ಪೂರ್ವಭಾವಿಯಾಗಿ ಮೇಷ ಶುದ್ಧ ದಶಮಿಯಂದು ಬಲಿ ಹೊರಡುವುದು ಸಂಪ್ರದಾಯ. ನಡಾವಳಿ ವೇಳೆ ಸಾವಿರಾರು ಭಕ್ತರು ಆಗಮಿಸುತ್ತಾರೆ. ಉತಸವದ ಸಮಯದಲ್ಲಿ ಕಟ್ಟೆಪೂಜೆ ಸುಡುಮದ್ದು ಸೇವೆ, ರಾತ್ರಿ ರಥೋತ್ಸವ ಮುಂತಾದವುಗಳು ನಡೆಯುತ್ತವೆ.

ಸುಬ್ರಹ್ಮಣ್ಯ ಷಷ್ಠಿ, ಕಿರುಷಷ್ಠಿಗಳು ವಿಶೇಷಗಳು ಇಲ್ಲಿ ಆಚರಿಸಲಾಗುವ ಪರ್ವದಿನ–ಸುಬ್ರಹ್ಮಣ್ಯ ಷಷ್ಠಿಯಂದು ಭಕ್ತರು ಮಡೆಸ್ನಾನ, ಉರುಳು ಸೇವೆ, ಬಾಳೆಹಣ್ಣು ಹಂಚುವುದು, ನರ ಕೈ ಕಾಲು, ನಾಲಗೆ, ಚರ್ಮವ್ಯಾಧಿಗಳ ಬೆಳ್ಳಿಯ ಸಂಕೇತಗಳನ್ನು ಒಪ್ಪಿಸುವುದು. ಮುಂತಾದ ಹಲವು ಸೇವೆಗಳಲ್ಲಿ ಭಾಗವಹಿಸುತ್ತಾರೆ. ಪ್ರತಿ ವರ್ಷ ಷಷ್ಠಿ ಹಾಗೂ ಕಿರುಷಷ್ಠಿಯ ರಾತ್ರಿ ದೊಡ್ಡ ರಂಗಪೂಜೆ ನಡೆಯುತ್ತದೆ. ಇದು ಇಲ್ಲಿನ ವಿಶೇಷವಾಗಿದೆ. ಹಾಗೆ ಸಾಮೂಹಿಕ ಕಡುಬು ಸೇವೆ, ಸತ್ಯನಾರಾಯಣ ಪೂಜೆ, ಹೂವಿನ ಪೂಜೆ ಇಲ್ಲಿನ ಮತ್ತೊಂದು ವಿಶೇಷ ಅರ್ಪಣೆ. ಸಮಾರಾಧನೆಯೂ ಹೆಚ್ಚಾಗಿ ನಡೆಯುತ್ತಿರುತ್ತದೆ.

ಸುಬ್ರಹ್ಮಣ್ಯನ ಸನ್ನಿಧಿಯಲ್ಲಿ ಅನ್ನದಾನಕ್ಕೆ ವಿಶೇಷ ಮಹತ್ವವಿದೆ. ಇಲ್ಲಿ ಸಲ್ಲುವ ವಿಶೇಷ ಹರಕೆ ಪರಮಾನ್ನ ಸೇವೆ. ಪ್ರತಿ ಮಂಗಳವಾರ ಈ ಸೇವೆಯನ್ನು ನಡೆಸಲಾಗುತ್ತದೆ. ದೇವಾಲಯ ಅಭಿವೃದ್ಧಿಗೊಳ್ಳುತ್ತಿರುವುದರಿಂದ ಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಭಕ್ತರ ಸ್ವಯಂಸ್ಫೂರ್ತಿಯ ಹರಕೆ, ಸೇವಾದಿಗಳೂ ಹೆಚ್ಚುತ್ತಿವೆ. ಸ್ವಾಮಿಯ ಸನ್ನಿಧಿಯಲ್ಲಿ ಕಾರ್ತಿಕಪೂಜೆ, ಹೂವಿನಪೂಜೆ, ರಂಗಪೂಜೆ, ಸಮಾರಾಧನೆ, ಪಂಚಾಮೃತಾಭಿಷೇಕ, ಗಟ್ಟಿಪಾಯಸ, ತುಲಾಭಾರ ಸೇವೆಗಳು, ಸತ್ಯನಾರಾಯಣ ಪೂಜೆ, ನಾಗದೇವರ ಸನ್ನಿಧಿಯಲ್ಲಿ ತನು–ತಂಬಿಲ, ಆಶ್ಲೇಷಾ ಬಲಿ, ನಾಗಪ್ರತಿಷ್ಠೆ, ದರ್ಶನ ಸೇವೆಗಳೂ ನಡೆಯುತ್ತವೆ.

ಶೀ ಸುಬ್ರಹ್ಮಣ್ಯ ಭಜನಾಮಂಡಳಿ ಊರ ಯುವಜನರ ಭಕ್ತಿಶ್ರದ್ಧೆಯ ಪ್ರತೀಕವಾಗಿ ಆರಂಭಗೊಂಡು ಪ್ರತೀ ಶನಿವಾರ ದೇವಸ್ಥಾನದಲ್ಲಿ ಭಜನಾ ಕಾರ್ಯಕ್ರಮ ಹಾಗೂ ಷಷ್ಠೀ

ಮಹೋತ್ಸವದಂದು ನಾಟಕ ಮನೋರಂಜನೆಗಳನ್ನು ಏರ್ಪಡಿಸುತ್ತದೆ. ಪ್ರತಿನಿತ್ಯ ಪ್ರಾತಃಕಾಲ ಉಷಾಕಾಲ ಪೂಜೆ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ ಹಾಗೂ ರಾತ್ರಿ 7 ಗಂಟೆಗೆ ರಾತ್ರಿಪೂಜೆ ನಡೆಸಲಾಗುತ್ತಿದೆ.

ನಮ್ಮ ಸೌಭಾಗ್ಯವೆಂಬಂತೆ ಈ ಕಾರ್ಯಯೋಜನೆಯಲ್ಲಿ ನಿರತರಾಗಿರುವ ಸಮಯದಲ್ಲೇ ಕಿರುಷಷ್ಠಿ ತಾರೀಕು 24.12.2017ರಂದು ನಡೆದ ಕಾರಣ ರಾತ್ರಿ ಸಮಯದಲ್ಲಿ ನಡೆದ ದೊಡ್ಡ ರಂಗಪೂಜೆಯ ಚಿತ್ರಾವಳಿಗಳನ್ನು ಸಂಗ್ರಹಿಸಿ ವೈಶಿಷ್ಟ್ಯತೆಯನ್ನು ತಿಳಿಸಲು ಸಹಕಾರಿಯಾಯಿತು.

ಅರ್ಚಕರ ಮಾತುಗಳು :

ಪಾದೆಬೆಟ್ಟು ಸುಬ್ರಹ್ಮಣ್ಯ ದೇವರು ಭಾರೀ ಪುರಾತನವಾದುದು ಹಾಗೂ ಭಾರೀ ಮಹಿಮೆಯ ದೇವರು. ಶ್ರದ್ಧಾ ಭಕ್ತಿಯಿಂದ ಭಕ್ತರು ಬೇಡಿಕೊಂಡರೆ ತಕ್ಷಣವೇ ಅನುಗ್ರಹಿಸುವ ಶಕ್ತಿಯಿದೆ. ಮಂಗಳವಾರ ದೇವರಿಗೆ ವಿಶೇಷವಾದ ದಿನ. ಇಂದಿಗೂ ಸಹ ಮಧ್ಯರಾತ್ರಿಯಲ್ಲಿ ಬ್ರಹ್ಮಚಾರಿಯ ರೂಪದಲ್ಲಿ ಸಂಚರಿಸುವರು ತುಂಬಾ ಭಕ್ತಿಯಿಂದ ನೋಡಿದವರಿಗೆ ದೃಶ್ಯ ನೀಡುವರು. ಹೀಗೆ ಸುಖ, ಸಮೃದ್ಧಿ, ಕೃಷಿ, ಅತಿಶಯತೆಯೊಂದಿಗೆ ಸತ್‌ಸಂತಾನವನ್ನು ಅನುಗ್ರಹಿಸುವ ಹಾಗೂ ಮಹಾವ್ಯಾಧಿಗಳನ್ನು ನಿವಾರಿಸುವ ದೇವರು ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ.

ನಾಗದೇವತೆಯೂ ಬಹಳ ವೈಶಿಷ್ಟ್ಯತೆಯನ್ನು ಹೊಂದಿರುತ್ತಾರೆ. ನಾಗದೋಷ ಪರಿಹಾರಕ್ಕೂ ಇಲ್ಲಿ ಪೂಜೆ ಮಾಡಲಾಗುತ್ತದೆ.

ಇತಿಹಾಸಾಧ್ಯಯನದ ಕುರಿತು ನಮ್ಮ ಮನದಾಳದ ಮಾತು :

ಇತಿಹಾಸದ ಕುರಿತಂತೆ ಸತ್ಯವಶವಾದ ಮಾಹಿತಿಯನ್ನು ಪಡೆಯುವುದು ಕ್ಲಿಷ್ಟಕರವಾದುದು. ಅದರಲ್ಲಿಯೂ ಸ್ಥಳವನ್ನು ನೇರವಾಗಿ ವೀಕ್ಷಿಸಿ, ಮಾಹಿತಿಯನ್ನು ಕಲೆಹಾಕುವುದರೊಂದಿಗೆ ಯೋಜನೆಯೊಂದನ್ನು ಸಿದ್ಧಪಡಿಸುವುದು ಸುಲಭಸಾಧ್ಯವಾದುದಲ್ಲ. ಆದರೂ ಕೂಡ ಮನಸ್ಸನ್ನು ಸೆಳೆಯುವ ಹಿಂದಿನ ಅಗ್ರಗಣ್ಯವಾದ ಇತಿಹಾಸವನ್ನು ವಿವರಿಸುವ ದಂತಕಥೆಗಳು, ಕುರುಹುಗಳು, ಆಕರಗಳು ಮೊದಲಾದವು ನಮ್ಮನ್ನು ಮತ್ತೆ ಮತ್ತೆ ಅಧ್ಯಯನಶೀಲರನ್ನಾಗಿಸುತ್ತದೆ.

2018–19ನೇ ಸಾಲಿನ ಇತಿಹಾಸ ಕಾರ್ಯಯೋಜನೆಗೆ ಪಾದೆಬೆಟ್ಟು ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಅಧ್ಯಯನ ಮಾಡತೊಡಗಿದೆವು. ನಾವು ಇತಿಹಾಸ ಕಾರ್ಯಯೋಜನೆಯನ್ನು ಕೈಗೊಂಡದ್ದು ಇದೇ ಪ್ರಥಮಬಾರಿಗಾದ್ದರಿಂದ ದೊರೆತ ಅನುಭವವೆಲ್ಲವೂ ಮಧುರವೇ ಆಗಿತ್ತು. ಪಾದೆಬೆಟ್ಟು ಶ್ರೀ ಸುಬ್ರಹ್ಮಣ್ಯ ದೇವರು ಬಹಳ ಪ್ರಾಚೀನವೂ, ವೈಶಿಷ್ಟ್ಯಪೂರ್ಣವೂ ಆಗಿದ್ದರಿಂದ ತಿಳುವಳಿಕೆಗೆ ಆ ತನಕ ದೊರೆತಿರದ ಸಂಗತಿಗಳು ಲಭ್ಯವಾಯಿತು. ದೇವಳದ ಮ್ಯಾನೇಜರ್ ಆದ ಜಿತೇಂದ್ರ ಶೆಟ್ಟಿ ಇವರನ್ನು ಭೇಟಿಯಾದಾಗ ಅವರಿಗೂ ಈ ಕುರಿತು ಆಸಕ್ತಿ ಹೆಚ್ಚಾಗಿ ನಮಗೆ ಅಗತ್ಯವೆನಿಸಿದ ಎಲ್ಲಾ ಮಾಹಿತಿಯನ್ನು ನೀಡಿದರು.

ದೇವಸ್ಥಾನದ ಅರ್ಚಕರಾದ ರಾಘವೇಂದ್ರ ಉಡುಪ, ಸುಬ್ರಹ್ಮಣ್ಯ ಉಡುಪರು ಇವರೆಲ್ಲರು ನಮಗೆ ದೇವಸ್ಥಾನದ ಶಾಸನ, ಪ್ರಾಚೀನತೆ, ಮೂರ್ತಿ, ದಂತಕಥೆಗಳು ಮುಂತಾದವುಗಳ ಬಗ್ಗೆ ತಿಳಿಸಿದರು.

31.12.2017ರಂದು ದೇವಸ್ಥಾನಕ್ಕೆ ಭೇಟಿಕೊಟ್ಟು ಅಲ್ಲಿನ ಎಲ್ಲಾ ನಮಗೆ ಬೇಕಾದ ಮಾಹಿತಿಯ ಚಿತ್ರೀಕರಣ ನಡೆಸಿದೆವು. ಈ ಮೊದಲು ಎರಡು ಮೂರು ಬಾರಿ ಭೇಟಿ ನೀಡಿ ನಮ್ಮ ಅಧ್ಯಯನ ನಡೆಸಿದೆವು. ಈ ಕ್ಷೇತ್ರ ಕಾರ್ಯ ಹಾಗೂ ಮಾಹಿತಿ ಸಂಗ್ರಹಣಾ ಅಧ್ಯಯನ ಹಂತದಿಂದ ತುಸು ಮುಂದೆ ಬಂದು ವರದಿ ತಯಾರಿಕೆ ನಾವು ನಡೆಸಿದೆವು.

ಉಪಸಂಹಾರ

ಪ್ರತಿಯೊಂದಕ್ಕೂ ತನ್ನದೇ ಆದ ವಿಶಿಷ್ಟತೆ ಎಂಬುದು ಇರುತ್ತದೆ. ಆದರೆ ಅದನ್ನು ನಾವು ಸರಿಯಾಗಿ ಗುರುತಿಸಬೇಕು. ಇತಿ+ಹಾಸ=ಇತಿಹಾಸ. ಅಂದರೆ 'ಹೀಗೆ ಇತ್ತು' ಎಂದು ಅರ್ಥ. ಹಿಂದಿನ ಇತಿಹಾಸವನ್ನು ಸಾರುವ ಅನೇಕ ಸಾಕ್ಷ್ಯಗಳು, ಅವಶೇಷಗಳು ಲಭ್ಯವಿದ್ದರೂ ಅದನ್ನು ನಾವು ಗುರುತಿಸುವಲ್ಲಿ ವಿಫಲರಾಗುತ್ತಿರುವುದರಿಂದ ಈ ಹೊತ್ತು ಅದೆಲ್ಲವೂ ನಮ್ಮ ಕೈತಪ್ಪಿ ಹೋಗುತ್ತಿದೆ. ಶಾಸನ ಮುಂತಾದವುಗಳಲ್ಲಿ ಇರುವಂತಹ ವಿಚಾರವನ್ನು ಗುರುತಿಸಲಾರದೆಯೇ ಅದನ್ನು ಮನೆಯ ಕೊಟ್ಟಿಗೆಯಲ್ಲಿ ದನಕಟ್ಟುವುದಕ್ಕೋ, ಗೃಹಬಳಕೆಯ ಉಪಯೋಗಕ್ಕೆ, ಚಪ್ಪಡಿಯ ರೂಪದಲ್ಲಿಯೋ ಬಳಸುವುದು ನೋವಿನ ಸಂಗತಿಯಾಗಿದೆ.

ಅತ್ಯಮೂಲ್ಯವಾದ ರಚನೆ, ಬರಹಗಳಿರುವ ಸಾಕ್ಷ್ಯಗಳು ಈ ಹೊತ್ತು ನಮ್ಮ ಅಜಾಗರೂಕತೆಯಿಂದ ಅಳಿದುಹೋಗುತ್ತಿದೆ. ಇಂತಹ ಸಾಕ್ಷ್ಯಗಳು ನಮ್ಮ ಪೂರ್ವಿಕರ ಸಂಸ್ಕೃತಿ, ಸಾಮಾಜಿಕ ಬದುಕು, ರಾಜಕೀಯ ವ್ಯವಸ್ಥೆ, ಧಾರ್ಮಿಕತೆ ಮುಂತಾದವುಗಳ ಕುರಿತು ಅಗ್ರಗಣ್ಯ ಮಾಹಿತಿ ಹೊಂದಿರುತ್ತದೆ. ಇದು ನಮ್ಮ ಮುಂದಿನ ಬಾಳ ಪಯಣಕ್ಕೆ ದಾರಿದೀಪವಾಗಬಹುದಾದ್ದರಿಂದ ಇಂತಹವುಗಳ ಸಮರ್ಥ ರಕ್ಷಣೆ ನಮ್ಮ ಆದ್ಯ ಕರ್ತವ್ಯವಾಗಿದೆ.

ಹಾಗಾಗಿಯೇ ಇತಿಹಾಸದ ವಿದ್ಯಾರ್ಥಿಗಳಾದ ನಾವು ಈ ನಿಟ್ಟಿನಲ್ಲಿ ನಮ್ಮದೇ ಊರಿನ ಪ್ರಾಚೀನತೆಯನ್ನು ಅಧ್ಯಯನ ಮಾಡುವುದರೊಂದಿಗೆ ಪಯಣ ಮಾಡಿ ಸಫಲರಾದೆವು. ಈ ನಮ್ಮ ಐತಿಹಾಸಿಕ ಅಧ್ಯಯನವೆಂಬುದು ಉಳಿದವರಿಗೆ ಪ್ರೇರಕ ಹಾಗೂ ಪೂರಕವಾಗಬಹುದೆಂದು ವಿಶ್ವಾಸದಿಂದ ಹೇಳಿಕೊಳ್ಳುತ್ತಾ ಎಲ್ಲರೊಂದಾಗಿ ನಮ್ಮ ಪ್ರಾಚೀನತೆಯ ಭವ್ಯ ಪರಂಪರೆಯನ್ನು ಕಾಪಾಡಿಕೊಂಡು ಉಳಿಸಿ, ಬೆಳೆಸುವುದು ಅನಿವಾರ್ಯ ಹಾಗೂ ಅಗತ್ಯವೆನ್ನುತ್ತಾ ಈ ನಮ್ಮ ಕಿರುಪ್ರಯತ್ನವನ್ನು ಸಮಾಜಕ್ಕೆ

ಅರ್ಪಿಸುತ್ತಿದ್ದೇವೆ. ಹಾಗಾಗಿ ಇದರಲ್ಲಿ ನಾವು ಸಾರ್ಥಕತೆಯನ್ನು ಕಂಡೆವು.

ಕೃತಜ್ಞತೆಗಳು :

ನಮ್ಮ ಈ ಇತಿಹಾಸ ಕಾರ್ಯಯೋಜನೆಯು ಕೇವಲ ನಮ್ಮ ತಂಡದ ಪರಿಶ್ರಮದಿಂದ ಮಾತ್ರ ಯಶಸ್ವಿ ರೂಪವನ್ನು ಪಡೆದುಕೊಳ್ಳಲಿಲ್ಲ. ಬದಲಾಗಿ ಈ ಕೆಲಸದ ಹಿಂದೆ ಅನೇಕರು ಕೈ ಜೋಡಿಸಿ, ಅಮೂಲ್ಯವಾದ ಮಾಹಿತಿಯನ್ನು ನಮಗೆ ನೀಡಿ ಕಾರ್ಯದ ಭರವನ್ನು ಬಹಳಷ್ಟು ರೀತಿಯಲ್ಲಿ ಹಗುರಗೊಳಿಸಿದ್ದಾರೆ. ಹಾಗಾಗಿ ಅಂತಹ ಅನೇಕ ಗಣ್ಯರನ್ನು ಈ ಸಮಯದಲ್ಲಿ ಮತ್ತೆ ಮತ್ತೆ ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ನಮ್ಮ ಮಾರ್ಗದರ್ಶಕರಾಗಿ ಸಲಹೆ ನೀಡಿ ಪ್ರೋತ್ಸಾಹಿಸಿದಂತಹ ಇತಿಹಾಸ ಉಪನ್ಯಾಸಕಿಯಾದ ಮಲ್ಲಿಕಾ ಮೇಡಮ್‌ರವರಿಗೂ ಕೃತಜ್ಞತೆಗಳು.

ಪಾದೆಬೆಟ್ಟು ದೇವಳದ ಬಗ್ಗೆ ಹಾಗೂ ಊರಿನ ವೈಶಿಷ್ಟ್ಯದ ಬಗ್ಗೆ ನಮಗೆ ಪ್ರಮುಖ ಮಾಹಿತಿಯನ್ನು ನೀಡಿದಂತಹ ದೇವಳದ ಅರ್ಚಕರಾದ ರಾಘವೇಂದ್ರ ಉಡುಪ ಹಾಗೂ ಸುಬ್ರಹ್ಮಣ್ಯ ಉಡುಪರಿಗೆ ಮತ್ತು ಮ್ಯಾನೇಜರ್ ಆದ ಜಿತೇಂದ್ರ ಶೆಟ್ಟಿಯವರಿಗೆ ತಂಡದ ಪರವಾಗಿ ಹಾಗೂ ಕಾಲೇಜಿನ ಪರವಾಗಿ ತುಂಬು ಹೃದಯದ ಧನ್ಯವಾದಗಳು. ಪಾದೆಬೆಟ್ಟಿನ ಶೈಕ್ಷಣಿಕ ಕ್ಷೇತ್ರದ ಬಗೆಗಿನ ವಿವರಣೆ ನೀಡಿದ ಚಂದ್ರಶೇಖರ ರಾವ್ ಇವರಿಗೂ ಧನ್ಯವಾದಗಳು. ಈ ಕಾರ್ಯಯೋಜನೆಗೆ ಸಂಬಂಧಿಸಿ ನಾವು ಕೆಲವಷ್ಟನ್ನು ಆಕರ ರೂಪವಾಗಿ ಬಳಸಿಕೊಂಡಿದೇವೆ.

ಅದರ ಲೇಖಕರಿಗೂ ಹಾಗೂ ಸಂಪಾದಕರಿಗೂ ಈ ಮೂಲಕ ಹೃತ್ಪೂರ್ವಕ ಧನ್ಯವಾದಗಳು.

ಅಧ್ಯಯನಕ್ಕೆ ಬಳಸಿಕೊಂಡ ಆಕರಗಳು

* ಪಂಚಾಮೃತ– ದೇವಳದ ಪುಸ್ತಕ
* ಸುಬ್ರಹ್ಮಣ್ಯ ಭಟ್ ಇವರ ಲೇಖನ
* ಸೀನಿಯರ್ಸ್‌ರವರ ಕಾರ್ಯಯೋಜನೆ: ಶಿವಕುಮಾರ್, ದೀಪಕ್
* ಸ್ಥಳೀಯ ಮಾಹಿತಿ

ಆದರ್ಶ ಗ್ರಾಮವಾಗಿ ಬೆಳಪು ಗ್ರಾಮಪಂಚಾಯತ್

ರೋಶನ್ ಕೆ, ರೋಹಿತ್, ಪ್ರಸನ್ನ ಪ್ರಭು,
ಉತ್ಪಾಲ್ ಶೆಟ್ಟಿ. – ತೃತೀಯ ಬಿ.ಎ.

ಪೀಠಿಕೆ: (Introduction) :

ಗ್ರಾಮ ಸ್ವರಾಜ್ಯದ ಕನಸ್ಸನ್ನು ಕಂಡವರು ಗಾಂಧೀಜಿ. ಭಾರತವೆಂಬ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅಭಿವೃದ್ಧಿ ಎಂಬ ಮಂತ್ರ ಶುರುವಾಗುವುದೇ ಗ್ರಾಮ ಪಂಚಾಯತಲ್ಲಿ. ಗ್ರಾಮಪಂಚಾಯತ್‌ನ ಕೆಲಸ ಕಾರ್ಯದ ಬಗ್ಗೆ ನಮ್ಮಲ್ಲೊಂದು ಬೇರೆಯದೇ ಆದ ಭಾವನೆ ಇದೆ.

ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯಲ್ಲಿರುವ ಕಾಪು ತಾಲೂಕಿನಿಂದ 8 ಕಿ.ಮೀ. ಚಲಿಸಿದಾಗ ಪುಟ್ಟ ಮತ್ತು ಸುಂದರ ಗ್ರಾಮವೇ ಬೆಳಪು. ಕಳೆದ ವರ್ಷದಿಂದ ಬೆಳಪು ತನ್ನದೇ ಆದ ಕೆಲವು ವಿಶೇಷ ಕಾರ್ಯಗಳಿಗೆ ಗುರುತಿಸಿಕೊಂಡಿದೆ. 1998ರ ಇಸವಿಯ ಬೆಳಪು ಗ್ರಾಮ ಪಂಚಾಯತ್ ಮೂಲಭೂತ ಸೌಕರ್ಯಗಳಿಂದಲೂ ವಂಚಿತವಾಗಿತ್ತು. ಆದರೆ ಇಂದು ಬೆಳಪು ಅನ್ನುವಂತಹ ಸುಂದರ ಗ್ರಾಮ ದೇಶದಾದ್ಯಂತ ಗಮನವನ್ನು ಸೆಳೆದಿದೆ. ಹಾಗೇ ನೋಡಿದರೆ ಬೆಳಪು ಪರಿಸರದ ಅಭಿವೃದ್ಧಿ ಶುರುವಾಗಿದೆ ಸಮರ್ಥ ನಾಯಕ ಶ್ರೀ ದೇವಿಪ್ರಸಾದ್ ಶೆಟ್ಟಿ ಇಲ್ಲಿನ ಗ್ರಾಮಪಂಚಾಯತ್‌ನ ಅಧಿಕಾರದ ಚುಕ್ಕಾಣಿಯನ್ನು ಹಿಡಿದ ನಂತರ.

ಇಂದು ಬೆಳಪುವಿಗೆ ಬೆಳಪುವೇ ಸಾಟಿಯಾಗಿ ನಿಂತಿದೆ. ಅಂತರಾಷ್ಟ್ರೀಯ ಯುನೆಸ್ಕೋದಿಂದ 20 ದೇಶದ ಸದಸ್ಯರು ಬೆಳಪು ಗ್ರಾಮ ಪಂಚಾಯತ್ ಅಭಿವೃದ್ಧಿಯ ಬಗ್ಗೆ ಮಾಹಿತಿ ಕಲೆ ಹಾಕಿ, ಇಲ್ಲಿನ ಕೆಲಸ ಕಾರ್ಯದ ಬಗ್ಗೆ ಹೆಮ್ಮೆ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ. ಗ್ರಾಮದ ಪರಿಪೂರ್ಣ ಅಭಿವೃದ್ಧಿಯ ಬಗ್ಗೆ ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರು, ಸಂಸದರು ಮತ್ತು ವಿಧಾನಸಭಾ ಸದಸ್ಯರು, ಸರಕಾರದ ಯೋಜನೆಗಳು ಪ್ರಮುಖ ಪಾತ್ರವನ್ನು ವಹಿಸಿದೆ. ಗ್ರಾಮದ ಹಿತಾಸಕ್ತ ಜನರು ಮತ್ತು ದಾನಿಗಳ ಸಹಕಾರವನ್ನು ಮರೆಯುವಂತಿಲ್ಲ. ಬೆಳಪು ಗ್ರಾಮಾಂಕಣದ ಕೆಲವು ವರ್ಷಗಳಲ್ಲಿ ಮುಡಡಿಗೇರಿಸಿಕೊಂಡ ಪ್ರಶಸ್ತಿ ಪುರಸ್ಕಾರಗಳನ್ನು ನೀವೇ ನೋಡಲಿದ್ದೀರಿ.

ಬೆಳಪುವಿನ ಅಭಿವೃದ್ಧಿ ಕೆಲಸದ ಮೇಲೆ ಒಂದು ನೋಟ :

ನೀರು (Water Facility) :

ಬೆಳಪುವಿನಲ್ಲಿ ನೀರಿನ ಅಭಾವ ಎದ್ದು ಕಾಣುತ್ತಿತ್ತು. ನೀರಿನ ಸಮಸ್ಯೆಯ ಬಗ್ಗೆ ಸರ್ವೆಗಳಿಂದ ಸಮಗ್ರ ಅಧ್ಯಯನವನ್ನು ನಡೆಸಿ ಸರಕಾರದ ವತಿಯಿಂದ 80 ಲಕ್ಷದ ಸಹಾಯವನ್ನು ಪಡೆದು

ನೀರಿನ ಸಮಸ್ಯೆಯನ್ನು ಬಗೆಹರಿಸಲಾಯಿತು. ಗ್ರಾಮದ ಮೂಲೆ ಮೂಲೆಗೆ ಪೈಪ್‌ಲೈನ್‌ನ್ನು ಅಳವಡಿಸಲಾಯಿತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾಲನಿಗಳು, ಶಾಲೆಗಳು ಮಾತ್ರವಲ್ಲ ಪ್ರತಿಯೊಂದು ಆಶ್ರಯ ಕಾಲನಿಯಲ್ಲಿ ಬಾವಿಯನ್ನು ನಿರ್ಮಿಸಲಾಗಿದೆ. ರಾಜೀವ್‌ಗಾಂಧಿ ಮತ್ತು ಸ್ವಜಲಧಾರ್ ಯೋಜನೆಯ ಅಡಿ ತಲ 15 ಮತ್ತು 40 ಲಕ್ಷ ಪಡೆದು ಸಮಗ್ರ ನೀರಿನ ಸಮಸ್ಯೆಯನ್ನು ಬಗೆಹರಿಸಲು ಬಳಸಿ 16 ಲಕ್ಷ ರೂ. ವೆಚ್ಚದಲ್ಲಿ ಬಾವಿಯನ್ನು ನಿರ್ಮಿಸಿ ಸಣ್ಣ ನೀರಾವರಿ ಯೋಜನೆ, 3 ಲಕ್ಷ ವೆಚ್ಚದಲ್ಲಿ ಇತರ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗಿದೆ. 1 ಲಕ್ಷ ವೆಚ್ಚದಲ್ಲಿ ಹದಗೆಟ್ಟ ಬಾವಿಯನ್ನು ಸರಿಪಡಿಸಲಾಗಿದೆ.

ದೇಶದ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಖಾಸಗಿ ಸಂಸ್ಥೆಯ ಸಹಭಾಗಿತ್ವದಲ್ಲಿ ಶುದ್ಧೀಕರಣ ಘಟಕ ಒಂದನ್ನು ಸ್ಥಾಪಿಸಿ ಶುದ್ಧೀಕರಿಸಿದ 12 ಲೀ. ನೀರನ್ನು ಮನೆ ಮನೆಗೆ ಪೂರೈಸಲಾಗುತ್ತಿದೆ. ಮೀಟರ್ ಅಳವಡಿಸುವ ಜೊತೆ ಜೊತೆಗೆ ನೀರನ್ನು ಅಗತ್ಯವಿರುವ ಮನೆ ಮೆನಗೆ ಪೂರೈಸಲಾಗುತ್ತಿದೆ. ಇಷ್ಟೇ ಅಲ್ಲದೆ ಮುಂದಿನ ಯೋಜನೆಗಳು ಹಲವಾರು ಇದೆ.

ಜನರ ಅಭಿಪ್ರಾಯ (People's Opinion) :

ನಮ್ಮ ಬೆಳಪು ಗ್ರಾಮದಲ್ಲಿ ಶುದ್ಧ ನೀರಿನ ಘಟಕ ಆದ ಮೇಲೆ ಬೆಳಪು ಗ್ರಾಮದ ಪ್ರತಿಯೊಂದು ಜನಕ್ಕೂ ಅನುಕೂಲವಾಗಿದೆ. ಪ್ರತಿಯೊಂದು ಮನೆಗೂ 12 ಲೀ. ನೀರನ್ನು ಒದಗಿಸುತ್ತಿದ್ದಾರೆ. ಮುಂಚೆ ಬಾವಿಯಲ್ಲಿ ಇದ್ದ ಕೊಳಕು ನೀರನ್ನೇ ಕುಡಿಯುತ್ತಿದ್ದರು. ಈಗ ಪ್ರತಿಯೊಂದು ಮನೆಗೂ ಆರೋಗ್ಯಕರವಾದ ನೀರಿದೆ.

ರಸ್ತೆ ಮತ್ತು ಸಾರಿಗೆ (Road & Transport) :

ಅತ್ಯಂತ ಹದಗೆಟ್ಟ ಪರಿಸ್ಥಿತಿಯಲ್ಲಿದ್ದ ಕೆಲವು ರಸ್ತೆಗಳು, ಗ್ರಾಮದ ಕೆಲವು ರಸ್ತೆಗಳನ್ನು ಗುರುತಿಸಿ ಅವುಗಳನ್ನು ಡಾಮರೀಕರಿಸಲಾಗಿದೆ ಮತ್ತು ಕೆಲವು ರಸ್ತೆಗಳನ್ನು ಕಾಂಕ್ರೀಟೀಕರಿಸಲಾಗಿದೆ. ಹೊಸ ರಸ್ತೆಗಳನ್ನು ಕೂಡ ನಿರ್ಮಿಸಲಾಗಿದೆ. ಸರಿಸುಮಾರು 1 ಕೋಟಿವರೆಗೂ ರಸ್ತೆಗಳ ಡಾಮರೀಕರಣ ಮತ್ತು ಕಾಂಕ್ರೀಟೀಕರಣಕ್ಕೆ ವ್ಯಯಿಸಲಾಗಿದೆ. ಬೆಳಪುವಿನ ಇಂದಿನ ರಸ್ತೆಗಳು ನಗರಗಳ ರಸ್ತೆಗೆ ಸರಿಸಮಾನವಾಗಿ ನಿಂತಿದೆ.

ಎಲ್ಲಾ ಒಳರಸ್ತೆಗಳನ್ನು, ಆಶ್ರಯ ಅಂಬೇಡ್ಕರ್ ಕಾಲೋನಿಗಳ ರಸ್ತೆಗಳನ್ನು, ಗ್ರಾಮದ ವರ್ತುಲ ರಸ್ತೆಗಳನ್ನು ಪರಿವರ್ತನೆ ಮಾಡಬೇಕೆಂಬ ಉದ್ದೇಶದಿಂದ ರಿಂಗ್‌ರೋಡ್‌ಗಳನ್ನು ರಚನೆ ಮಾಡಿದ್ದಾರೆ. ಸಂಪರ್ಕ ರಸ್ತೆಗಳನ್ನು ರಚನೆ ಮಾಡಿದ್ದಾರೆ. ಎಲ್ಲಾ ರಸ್ತೆಗಳಲ್ಲಿಯೂ ಕೂಡ ಅತ್ಯಂತ ಗುಣಮಟ್ಟದ ಫವರ್‌ಫಿನಿಷ್ ಡಾಮರೀಕರಣದ ವ್ಯವಸ್ಥೆ ಕಾಂಕ್ರೀಟೀಕರಣದ ವ್ಯವಸ್ಥೆ ಅದಕ್ಕೆ ಹೊಂದಿಕೊಂಡು ಒಳಚರಂಡಿಗಳನ್ನು ಮಾಡಲಾಗಿದೆ.

ಸರಕಾರದ ವತಿಯಿಂದ ದೊರೆಯುವ ಸ್ವಚ್ಛಗ್ರಾಮ ಯೋಜನೆ, ಸುವರ್ಣ ಗ್ರಾಮ ಯೋಜನೆ, ಜಿಲ್ಲಾ ಪಂಚಾಯತ್‌ನಿಂದ ದೊರೆತ ಅನುದಾನಗಳು. ಸಂಸದರು ಮತ್ತು ವಿಧಾನ ಸಭಾ ಸದಸ್ಯರ ನಿಧಿಗಳನ್ನು ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಬಳಸಲಾಗಿದೆ. ರಸ್ತೆಗಳ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ನೀರನ್ನು ಒಂದು ಜಾಗದಲ್ಲಿ ಶೇಖರಿಸಿ ಅವುಗಳ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ವ್ಯವಸ್ಥೆ ಕೂಡ ಮಾಡಲಾಗಿದೆ. ಕಾಂಕ್ರೀಟೀಕರಿಸಿದ ಡ್ರೈನೇಜ್ ವ್ಯವಸ್ಥೆಯನ್ನು ಕೂಡ ಮಾಡಲಾಗಿದೆ.

ಜನರ ಅಭಿಪ್ರಾಯ (People's Opinion):

ರೋಡಿನ ವಿಷಯದಲ್ಲಿ, ಬೇರೆ ವಿಷಯಗಳಲ್ಲಿ ಪಂಚಾಯತ್ ತುಂಬಾ ಅಭಿವೃದ್ಧಿಯಾಗಿದೆ. 5 ವರ್ಷ ಮುಂಚೆ ಇದು ಹೀಗಿರಲಿಲ್ಲ ಆದರೆ ಈಗ ತುಂಬಾ ಅಭಿವೃದ್ಧಿಯಾಗಿದೆ.

ವಿದ್ಯುತ್ (Electricity):

ಉತ್ತಮ ಗುಣಮಟ್ಟದ ದಾರಿದೀಪದ ಜೊತೆಗೆ ಹಳೆಯ ಪವರ್ ಕನೆಕ್ಟರ್‌ಗಳನ್ನು ಹೊಸದಾಗಿ ಅಳವಡಿಸಲಾಗಿದೆ. 4 ಹೊಸ ಟ್ರಾನ್ಸ್‌ಫರ್ಮರ್‌ಗಳ ಅಳವಡಿಕೆಯಿಂದ ಲೋ–ಓಲ್ಟೇಜ್ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ದಾರಿದೀಪಗಳನ್ನು ಅಳವಡಿಸುವ ನಿಟ್ಟಿನಲ್ಲಿ ಚಿಂತನೆ ಕೂಡ ನಡೆಸಲಾಗಿದೆ. ಸದ್ಯದಲ್ಲಿ ಕೆಲಸ ಕಾರ್ಯ ರೂಪಕ್ಕೆ ಬರಲಿದೆ.

ಗ್ರಾಮದ ಎಲ್ಲಾ ಮನೆಗಳಲ್ಲೂ ಆಶ್ರಯ ಅಂಬೇಡ್ಕರ್, ಸರಕಾರಿ ಜಮೀನಿನಲ್ಲಿ ವಾಸಿಸುವಂತಹ ಎಲ್ಲಾ ಜನರಿಗೂ ಕೂಡ ಮಾನವೀಯತೆಯ ನೆಲೆಯಲ್ಲಿ ವಿದ್ಯುತ್ ಸೌಲಭ್ಯವನ್ನು ಒದಗಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಾಲೋನಿಗಳಲ್ಲಿ ವಿದ್ಯುತ್ ದಾರಿದೀಪದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಗ್ರಾಮಪಂಚಾಯತ್‌ನ ಅತ್ಯುನ್ನತ ಕೆಲಸದಿಂದ ಇಂದೂ ಗ್ರಾಮ ಪಂಚಾಯತ್‌ನ ಪ್ರತಿಯೊಂದು ಮನೆಯೂ ಕೂಡ ಬೆಳಕಿನೆಡೆಗೆ

ಸಾಗುತ್ತಿದೆ.

ಗ್ರಾಮ ನೈರ್ಮಲ್ಯ (Village Sanitation (Cleanness):

ಬೆಳಪನ್ನು ಸಂಪೂರ್ಣ ಸ್ವಚ್ಛತಾ ಗ್ರಾಮ ಎಂದು ಗುರುತಿಸಲಾಗಿದೆ. ಎಲ್ಲಾ ಮನೆಗಳಲ್ಲಿ ಶೌಚಾಲಯಗಳನ್ನು ಕೂಡ ನಿರ್ಮಿಸಲಾಗಿದೆ. ಪ್ಲಾಸ್ಟಿಕನ್ನು ಸಂಪೂರ್ಣವಾಗಿ ನಿಷೇದಿಸಲಾಗಿದೆ.

ಅಭಿಮನ್ ಶೆಟ್ಟಿ ಎಂಬ ಯುವ ಇಂಜಿನಿಯರ್ ಕಂಡುಹಿಡಿದ ತ್ಯಾಜ್ಯ ವಿಲೇವಾರಿ ಘಟಕದ ಮೂಲಕ ಕೊಳೆತ ತ್ಯಾಜ್ಯ ವಸ್ತುಗಳನ್ನು ಗೊಬ್ಬರವಾಗಿ ಪರಿವರ್ತಿಸಲಾಗುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ಶೌಚಾಲಯ ಕೂಡ ಇದೆ. ಗ್ರಾಮದಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲಾಗಿದೆ. ಹಿಂದೂ ರುದ್ರಭೂಮಿ ಮತ್ತು ಮುಸ್ಲಿಂ ದಫನ್‌ಗಳನ್ನು ನಿರ್ಮಿಸಲಾಗಿದೆ.

ಆರೋಗ್ಯ (Health):

"ಆರೋಗ್ಯವೇ ಭಾಗ್ಯ" ಈ ಮಾತನ್ನು ಬೆಳಪು ಗ್ರಾಮ ಪಂಚಾಯತ್ ಸಂಪೂರ್ಣವಾಗಿ ಅಥೈಸಿಕೊಂಡಿದೆ. ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಗ್ರಾಮಪಂಚಾಯತ್ ಹಮ್ಮಿಕೊಂಡಿದೆ. ಆನೇಕಾಲು ನಿರ್ಮೂಲನೆಗೆ ಶಿಬಿರ, ರಕ್ತದಾನ ಶಿಬಿರಗಳನ್ನು ಆಗಾಗ ಹಮ್ಮಿಕೊಳ್ಳಲಾಗುತ್ತಿದೆ. ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಪ್ರತಿಸೋಮವಾರ ಹಮ್ಮಿಕೊಳ್ಳುವುದು ಮತ್ತೊಂದು ವಿಶೇಷ. ಶಾಲೆಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ. ಪ್ರತಿ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಉಚಿತವಾಗಿ ಔಷಧಿಗಳನ್ನು ವಿತರಿಸಲಾಗುತ್ತಿದೆ.

ವಸತಿ ಸೌಕರ್ಯಗಳು (Residential Shelters):

ಅತ್ಯಂತ ಮೂಲಭೂ ಸೌಕರ್ಯಗಳಲ್ಲಿ ವಸತಿ ಕುಡಾ ಒಂದು. ಹಲವು ವರ್ಷಗಳ ಹಿಂದೆ ಇಲ್ಲಿಯ ಜನರ ವಾಸ ಗುಡಿಸಲಲ್ಲಿತ್ತು. ಆಶ್ರಯ ಅಂಬೇಡ್ಕರ್, ಇಂದಿರಾ ಆವಾಜ್ ಮತ್ತು ಕಲ್ಯಾಣ ಯೋಜನೆಯಡಿಯಲ್ಲಿ ಮನೆಗಳನ್ನು ರಚಿಸಲಾಗಿದೆ. ಕೆಲವು ಮನೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಈಗಾಗಲೇ ಹಣವನ್ನು ಕೂಡ ಬಿಡುಗಡೆಗೊಳಿಸಲಾಗಿದೆ. ಸುಮಾರು 55 ನಿವೇಶನಗಳನ್ನು ಅಗತ್ಯಕ್ಕೆ ತಕ್ಕಂತೆ ಹಂಚಿ ಮನೆಗಳನ್ನು ನಿರ್ಮಿಸಲಾಗಿದೆ. ಗ್ರಾಮದಲ್ಲಿ 2,500 ಜನಸಂಖ್ಯೆ ಇದ್ದು, ಸುಮಾರು 300ಕ್ಕೂ ಹೆಚ್ಚು ಮಂದಿಗೆ ಮನೆ ನಿವೇಶನ ಹಂಚಿಕೆ ಮಾಡಿದೆ. 3 ಬಡಾವಣೆಗೆ 3 ಪಕ್ಷದ ನಾಯಕರ ಹೆಸರಿಡಲಾಗಿದೆ.

ಜನರ ಅಭಿಪ್ರಾಯ (People's Opinion):

ಜಾಗದ ವ್ಯವಸ್ಥೆಯನ್ನು ಮಾಡಿಕೊಟ್ಟು ನೀರಿನ ವ್ಯವಸ್ಥೆಯನ್ನು ಕೂಡ ಮಾಡಿಕೊಟ್ಟಿದ್ದಾರೆ. ಹಾಗೆಯೇ ಕರೆಂಟ್, ವಿದ್ಯುತ್ ದೀಪ ಇರಲಿಲ್ಲ. ಅದನ್ನೆಲ್ಲಾ ಮಾಡಿ ಕೊಟ್ಟಿದ್ದಾರೆ. ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ರೇಷನ್ ಕಾರ್ಡ್ ಹೀಗೆ ತುಂಬಾ ಕೆಲಸ ಮಾಡಿಕೊಟ್ಟಿದ್ದಾರೆ.

ಪ್ರತಿಯೊಂದು ಮನೆಗೆ ಶೌಚಾಲಯ ನಿರ್ಮಿಸಿಕೊಟ್ಟಿದ್ದಾರೆ. ಗಮನಾರ್ಹ ವಿಷಯವೆಂದರೆ 170 ಮನೆಗಳ ಆಶ್ರಯ ಯೋಜನೆಯಡಿಯಲ್ಲಿ ಪಂಚಾಯತ್ ಆಗಲೇ ನಿರ್ಮಿಸಿ ಹಸ್ತಾಂತರಿಸಿದೆ.

ಶಿಕ್ಷಣ (Education):

ಬೆಳಪು ಗ್ರಾಮ ಸಾಕಷ್ಟು ಅಭಿವೃದ್ಧಿಯನ್ನು ಶಿಕ್ಷಣ ಕ್ಷೇತ್ರದಲ್ಲೂ ಕಂಡಿದೆ. ಗ್ರಾಮದಲ್ಲಿನ ಪ್ರತಿಯೊಬ್ಬರೂ ಕೂಡ ಸುಶಿಕ್ಷಿತರು. 2 ಪ್ರಾಥಮಿಕ ಮತ್ತು 1 ಹೈಸ್ಕೂಲ್ ಉತ್ತಮ ಕಾರ್ಯ ನಿರ್ವಹಿಸುತ್ತಿದೆ. ಈ ಎರಡೂ ಶಾಲೆಗಳು ಖಾಸಗಿ ಶಿಕ್ಷಣ ಸಂಸ್ಥೆಗೆ ಹೋಲುವಷ್ಟರ ಮಟ್ಟಿಗೆ ಇದೆ. ಮಂಗಳೂರು ವಿಶ್ವವಿದ್ಯಾಲಯದ ವಿಜ್ಞಾನ ಸಂಶೋಧನಾ ಕೇಂದ್ರದ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಲಾಗಿದೆ. ವಿಭಿನ್ನ ಶೈಲಿಯಲ್ಲಿ ಅಂಗನವಾಡಿ ಕೇಂದ್ರವನ್ನು ಕೂಡ ಸ್ಥಾಪಿಸಲಾಗಿದೆ.

ಶಿಕ್ಷಕರ ಅಭಿಪ್ರಾಯ (Teachers Opinion):

ಈ ಶಾಲೆ 2007 ಮತ್ತು 08ರಲ್ಲಿ ಹೈಸ್ಕೂಲಾಗಿ ಪರಿವರ್ತನೆಯಾಯಿತು. ಇದಕ್ಕಿಂತ ಮುಂಚೆ ಪ್ರಾಥಮಿಕ ಶಾಲೆವರೆಗೆ ಇತ್ತು. ಈ ಶಾಲೆಗೆ ಹೊಸದಾಗಿ 30 ಲಕ್ಷ ರೂ. ಬಿಲ್ಡಿಂಗ್‌ಗೆ ಮಂಜೂರಾಗಿ ಉದ್ಘಾಟನೆಯಾಗಿದೆ. ಜೊತೆಗೆ RIDF ಅಲ್ಲಿ 2 ರೂಮ್ ಮಂಜೂರಾಗಿದೆ. ಈಗ ಉಚಿತವಾಗಿ ಸೈಕಲ್, ಬಿಸಿಯೂಟ, ಪುಸ್ತಕ ಕೊಡುತ್ತಿದ್ದಾರೆ. ಜೊತೆಗೆ ದಾನಿಗಳು ಸಹಾಯ ಮಾಡುತ್ತಿದ್ದಾರೆ ಮತ್ತು ಲೇಖನ ಸಾಮಾಗ್ರಿಗಳನ್ನು ಲ್ಯಾನ್ಸೊ ಫೌಂಡೇಶನ್ ನೀಡುತ್ತಿದೆ. ಊರಿನಲ್ಲಿರುವ ದಾನಿಗಳಿಂದಲೂ ಸಹಾಯ ತಗೊಳ್ಳುತ್ತಿದ್ದಾರೆ. ಆಮೇಲೆ ಎಸ್.ಎಸ್.ಎಲ್.ಸಿಯ ಕೆಲವೊಂದು ಮಕ್ಕಳಿಗೆ ಮನೆಯಲ್ಲಿ ಕರೆಂಟ್ ಇರಲಿಲ್ಲ. ಅವರಿಗೆ ಡೋನರ್‌ನಿಂದ ಎನರ್ಜಿ ಲ್ಯಾಂಪ್‌ಗಳನ್ನೆಲ್ಲಾ ಕೊಟ್ಟಿದ್ದಾರೆ.

ಮಕ್ಕಳಿಗೆ ಕುಡಿಯಲು ನೀರು, ಶೌಚಾಲಯ, ಆಡಲು ಮೈದಾನ, ಮಿನಿ ಹಾಲ್, ಉಚಿತ ಊಟ, ಟೈ ಧರಿಸಲು ಶೂಗಳು ಇವುಗಳನ್ನೆಲ್ಲಾ ಪೂರೈಸಲಾಗುತ್ತದೆ. ಅಲ್ಲದೆ ಅಂಗನವಾಡಿ ವ್ಯವಸ್ಥೆ ಕೂಡಾ ಇದೆ. ಶಾಲೆಯಲ್ಲಲಿನ ಲೈಬ್ರೆರಿಗೆ ರಾಷ್ಟ್ರಮಟ್ಟದ ಪ್ರಶಸ್ತಿ ಕೂಡ ಲಭಿಸಿದೆ. ಇಷ್ಟೇ ಅಲ್ಲದೆ ಉಚಿತವಾಗಿ ಕಂಪ್ಯೂಟರ್ ತರಬೇತಿಯನ್ನು ಕೂಡ ನೀಡಲಾಗಿದೆ.

NREGA ಯೋಜನೆ (NREGA Yojane):

ಕಡು ಬಡತನದಲ್ಲಿರುವ ಮಂದಿಯನ್ನು ಪಂಚಾಯತ್ ಗುರುತಿಸಿ ಅವರ ಪಟ್ಟಿಯನ್ನು ತಯಾರಿಸಿದೆ. NREGA ಯೋಜನೆಗಳನ್ನು ಕಾರ್ಮಿಕ ವರ್ಗದವರಿಗೆ ಒಪ್ಪುವಂತೆ ಸಿದ್ಧಪಡಿಸಲಾಗಿದೆ. ಪಟ್ಟಿಯಲ್ಲಿರುವ ಮಂದಿಗೆ ಕೆಲಸವನ್ನು ಕೊಡಿಸುವ ಉದ್ದೇಶದಿಂದ ಅವರಿಗೆ ಟ್ಯಾಂಕ್‌ಗಳು, ಡ್ರೈನೇಜ್‌ಗಳು, ರಸ್ತೆಯ ನಿರ್ಮಾಣ ಕಾರ್ಯದಲ್ಲಿ ಸೇರಿಸಿಕೊಳ್ಳಲಾಗಿದೆ. ತಯಾರಿಸಿದ ಪಟ್ಟಿಯಲ್ಲಿರುವ ಪ್ರತಿಯೊಬ್ಬರಿಗೂ ಕೂಡ ಕೆಲಸ ಕೊಡಿಸುವಲ್ಲಿ ಕೂಡ ಪಂಚಾಯತ್ ಗಮನ ಹರಿಸಿದೆ.

ಗ್ರಾಮೀಣ ಅಭಿವೃದ್ಧಿ (Rural Development):

ಸರಕಾರೇತರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಉಚಿತ ಆಯೋಜಿಸಿ ಔಷಧಿಗಳನ್ನು ಕೂಡ ಉಚಿತವಾಗಿ ನೀಡಲಾಗಿದೆ. ಉಚಿತ ಶಸ್ತ್ರಚಿಕಿತ್ಸೆ ಶಿಬಿರಗಳನ್ನು ಕೂಡ ಆಯೋಜಿಸಲಾಗುತ್ತಿದೆ. ಗ್ರಾಮದಲ್ಲಿ 120 ಸ್ವಸಹಾಯ ಸಂಘಗಳನ್ನು ರಚನೆ ಮಾಡುವ ಮೂಲಕ ಸ್ವ–ಅಭಿವೃದ್ಧಿಗಾಗಿ, ಆರ್ಥಿಕ ಸ್ವಾವಲಂಬನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೇವೆ. ಹೈನುಗಾರಿಕೆ ವಿವಿಧ ಯೋಜನೆಗಳ ಅದರ ಮೂಲಕ ಅನುಷ್ಠಾನ ಮಾಡಿದ್ದಾರೆ.

ಏಡ್ಸ್ ಜಾಗೃತಿ ಶಿಬಿರ, ಕಾಲರ ಕಾಯಿಲೆ ಮತ್ತು ಆನೇಕಾಲು ರೋಗಗಳ ಬಗ್ಗೆ ತಿಳಿಯಲು ಶಿಬಿರ, ಮನೋರಂಜನೆಗಾಗಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಪ್ರತಿಭಾವಂತರಿಗೆ ಹೊಲಿಗೆ ತರಬೇತಿಯನ್ನು ಉಚಿತವಾಗಿ ನಡೆಸಲಾಗುತ್ತಿದೆ. ಸ್ಕಿಮ್‌ನ ಅಡಿಯಲ್ಲಿ ಆಟೋ ಓಡಿಸಲು ಉಚಿತವಾಗಿ ಕಲಿಸಲಾಗುತ್ತಿದೆ. ಇವುಗಳನ್ನು 5 ಲಕ್ಷ ವೆಚ್ಚದಲ್ಲಿ ಪೂರೈಸಲಾಗಿದೆ. ಯುವ ಕ್ರೀಡಾಳುಗಳಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ 5 ಎಕರೆ ಜಾಗದಲ್ಲಿ ಆಟದ ಮೈದಾನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಕೃಷಿ ಮತ್ತು ಹೈನುಗಾರಿಕೆ (Agriculture & Dairying):

ರೈತನ ಅಭಿವೃದ್ಧಿಯೇ ಗ್ರಾಮದ ಅಭಿವೃದ್ಧಿ ಎನ್ನುವಂತೆ ರೈತರಿಗೆ ಸಾಕಷ್ಟು ಬೆಳೆಯಲು ಸಾಥ್ ನೀಡಿದೆ. ಅತೀ ಕಡಿಮೆ ದರದಲ್ಲಿ ಸಹಕಾರಿ ಬ್ಯಾಂಕ್‌ಗಳಿಂದ ಸಾಲವನ್ನು ಕೊಡಿಸಿ ತಮ್ಮ ಭೂಮಿಯನ್ನು ಅಭಿವೃದ್ಧಿ ಪಡಿಸುವಲ್ಲಿ ಪ್ರೋತ್ಸಾಹಿಸಲಾಗಿದೆ. ಸುಮಾರು 12,000 ಸಸಿಗಳನ್ನು ನೆಟ್ಟಿದ್ದು ತುಂಬಾ ವಿಶೇಷವೆನಿಸಿದೆ. ಅಲ್ಲದೇ ಮಾವು, ತೆಂಗು, ಗೇರು, ಚಿಕ್ಕುಗಿಡಗಳನ್ನು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ವಿತರಿಸಲಾಗಿದೆ. ಈಗಾಗಲೇ 6 ಸೆಂಡಿ ಅಣೆಕಟ್ಟುಗಳನ್ನು ನಿರ್ಮಿಸಿರುವುದು ಪಂಚಾಯತ್‌ಗೆ ಒಂದು ಹೆಮ್ಮೆಯ ವಿಷಯ. ಇನ್ನೂ 5 ಸೆಂಡಿ ಅಣೆಕಟ್ಟುಗಳನ್ನು ನಿರ್ಮಿಸಲು ಅನುಮತಿಯನ್ನು ಪಂಚಾಯತ್ ಪಡೆದಿದೆ. 8 ತೆರೆದ ಬಾವಿಯ ಜೊತೆಗೆ 5 ಕೊಳಗಳನ್ನು ಈಗಾಗಲೇ ನಿರ್ಮಿಸಲಾಗಿದೆ.

ಇಲ್ಲಿನ ಜನರ ಮುಖ್ಯ ಕಸುಬೇ ಹೈನುಗಾರಿಕೆ. ಈ ಕಸುಬನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಹಾಲು ಒಕ್ಕೂಟ ಒಂದನ್ನು ರಚಿಸಲಾಗಿದೆ. ಸುಮಾರು 100ಕ್ಕೂ ಹೆಚ್ಚು ಲೀ. ಹಾಲನ್ನು ಶೇಖರಿಸಿ ಇಡಲಾಗಿದೆ. ಜಾನುವಾರು ಮೇಳ, ಉಚಿತ ಜಾನುವಾರು ಆರೋಗ್ಯ ತಪಾಸಣಾ ಶಿಬಿರವನ್ನು ಆಗಾಗ ನಡೆಸಲಾಗುತ್ತಿದೆ.

ಮಳೆ ನೀರು ಕೊಯ್ಲು (Rain Water Harvesting):

ಪ್ರಾಯೋಗಿಕ ನೆಲೆಯಲ್ಲಿ (RTRWH) ವಿನ್ಯಾಸವನ್ನು ನಡೆಸಲು ಚಿಂತನೆಯನ್ನು ನಡೆಸಿ ನಂತರ ಪ್ರತಿ ಮನೆಗೂ ಇದನ್ನು ಕಡ್ಡಾಯಗೊಳಿಸಿದೆ. ಹೊಸಮನೆಗಳನ್ನು (RTRWH) ಶೈಲಿಯಲ್ಲಿ ನಿರ್ಮಿಸಲು ಅನುಮತಿಯನ್ನು ಕೊಡಲಾಗಿದೆ. ನೀರನ್ನು ಇನ್ನಷ್ಟು ಹೆಚ್ಚಿಸುವಲ್ಲಿ ಕೊಳವನ್ನು ಹೂಳೆತ್ತುವ ಕ್ರಮ ಕೈಗೊಳ್ಳಲಾಗಿದೆ. ನೀರನ್ನು ಶೇಖರಿಸಲು ಕೂಡ ಅಣೆಕಟ್ಟನ್ನು ನಿರ್ಮಿಸಲಾಗಿದೆ. ಇವೆಲ್ಲವನ್ನು ವಿಲೇವಾರಿ ಮಾಡಲು ಸರಿಸುಮಾರು 15 ಲಕ್ಷ ರೂ.ನ್ನು ಪಂಚಾಯತ್ ವ್ಯಯಿಸಿದೆ. ಯಾವುದೇ ಮನೆಗಳಿಗೆ ಅಥವಾ ಕಟ್ಟಡಗಳಿಗೆ ಪರವಾನಿಗೆ ನೀಡುವಾಗ ಮಳೆ ನೀರಿನ ಕೊಯ್ಲು ಕಡ್ಡಾಯವಾಗಿ ನಿರ್ಮಿಸುವುದಕ್ಕೆ ಚಾಲನೆ ನೀಡಿದ್ದಾರೆ.

ಅರಣ್ಯ ಘಟಕ ಮತ್ತು ಪರಿಸರ ಅಭಿವೃದ್ಧಿ (Forest Unit & Environmental Development) :

ಪಂಚಾಯತ್‌ಗೆ ಸೇರುವ ಕಾಡನ್ನು ಸರಕಾರದ ಅನುಮತಿಯ

ಮೇರೆಗೆ ಬೆಳಪು ಗ್ರಾಮ ಪಂಚಾಯತ್ ರಚಿಸುತ್ತಿದೆ. ಆಶ್ಚರ್ಯವೆಂದರೆ 1 ಲಕ್ಷ ಗಿಡಗಳನ್ನು ನೆಡುವ ಮುಖಾಂತರ ಒಂದು ಕಾಡನ್ನು ಸರಕಾರಿ ಜಾಗದಲ್ಲಿ ಸರಕಾರದಿಂದ ಬಂದ ಆದೇಶದ ಮೇರೆಗೆ ರಚಿಸಲಾಗಿದೆ. ಗಿಡಮೂಲಿಕೆ ವಿತರಣಾ ಕಾರ್ಯಕ್ರಮವನ್ನು ಕೂಡ ಹಮ್ಮಿಕೊಳ್ಳಲಾಗಿದೆ.

"ಮನೆಗೊಂದು ಮಗು, ಮಗುವಿಗೊಂದು ಮರ" ಎನ್ನುವ ಶೀರ್ಷಿಕೆಯ ಅಡಿಯಲ್ಲಿ ಪ್ರತಿವರ್ಷ ವನಮಹೋತ್ಸವವನ್ನು ಆಚರಿಸಲಾಗುತ್ತಿದೆ. ಅಗತ್ಯವಿದ್ದಲ್ಲಿ ರೈತರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿ ಮನೆಗೆ ತೆಂಗಿನ ಸಸಿಗಳನ್ನು ವಿತರಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿ(Development of SC & ST):

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳ ಶಿಕ್ಷಣಕ್ಕೆ ವಿಶೇಷ ಒತ್ತನ್ನು ನೀಡುತ್ತಿದೆ. 10 ಲಕ್ಷ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನವನ್ನು ರಚಿಸಲಾಗಿದೆ.

ಜನರ ಅಭಿಪ್ರಾಯ (People's Opinion):

ಈ ರೋಡಿನಲ್ಲಿ ಹಿಂದೆ ದನ ಎತ್ತುಗಳು ಹೋಗುತ್ತಿತ್ತು. ಆದರೆ ಈಗ ಕಾಂಕ್ರೀಟ್ ಹಾಕಲಾಗಿದೆ. ಬೆಳಪು ಅಂಬೇಡ್ಕರ್ ಭವನವನ್ನು ಕಟ್ಟಿಸಿ ಒಳ್ಳೆಯ ಕಾರ್ಯಕ್ರಮ ನಡೆಯುತ್ತಿದೆ. ಉಚಿತ ಔಷಧಿಯನ್ನು ಅವರಿಗೆ ವಿತರಿಸಲಾಗುತ್ತಿದೆ. ಪ್ರತಿ ಮನೆಯಲ್ಲಿ ಶೌಚಾಲಯ ನಿರ್ಮಿಸಿದ್ದಾರೆ. ಅವರಿಗೆ ಸ್ವಉದ್ಯೋಗ ಅವಕಾಶವನ್ನು ಕಲ್ಪಿಸಲಾಗುತ್ತಿದೆ.

ದೇವಿಪ್ರಸಾದ್ ಶೆಟ್ಟಿಯವರು ಅಧ್ಯಕ್ಷರು ಆದ ಮೇಲೆ ತಮ್ಮ ಕಾಲೋನಿಯಲ್ಲಿ ಅನೇಕ ರೀತಿಯ ಉದ್ಘಾಟನೆಯನ್ನು ಮಾಡಿದ್ದಾರೆ. ಪ್ರತಿ ಮೂಲೆ ಮೂಲೆ ರಸ್ತೆಗೆ ಡಾಮರೀಕರಣ, ಶೌಚಾಲಯ, ನೀರಿನ ವ್ಯವಸ್ಥೆ ಮಾಡಲಾಗಿದೆ. ಮೊನ್ನೆಯಷ್ಟೇ ಸಿಂಟೆಕ್ಸ್ ವಿತರಣೆ, ಮನೆ ಮನೆಗೆ 4 ಕೋಳಿಯನ್ನು ನೀಡಿದ್ದಾರೆ.

ಆದಾಯ ಸಂಚಲಯ (Revenue Mobilization):

ಪಂಚಾಯತ್‌ನ ಆದಾಯ ಹೆಚ್ಚಿಸಲು ಹಲವಾರು ಯೋಜನೆಯನ್ನು ಹಮ್ಮಿಕೊಂಡಿದ್ದಾರೆ. 1999–2000 ಇಸವಿಯಲ್ಲಿ ಕೇವಲ 30,000 ರೂ. ಆದಾಯವನ್ನು ಹೊಂದಿದ ಬೆಳಪು ಪಂಚಾಯತ್ ಇಂದು 3,50,000ರೂ. ವರೆಗಿನ ಆದಾಯ ಹೊಂದಿದೆ. ಸರಕಾರದ ಆದೇಶದಲ್ಲಿ ತೆರಿಗೆಯನ್ನು ನವೀಕರಿಸಲಾಗಿದೆ. ತೋಟಗಾರಿಕೆಯಿಂದ ಸುಮಾರು 4,00,000 ವರೆಗಿನ ಆದಾಯವನ್ನು ನಿರೀಕ್ಷಿಸಬಹುದಾಗಿದೆ. ಮನೆಗೆ ಅಳವಡಿಸಿದ ಮೀಟರ್‌ನಿಂದ ಆದಾಯ ಸಂದಾಯವಾಗುತ್ತಿದೆ. ತ್ಯಾಜ್ಯ ವಿಲೇವಾರಿಯಿಂದ ಕೂಡ ಆದಾಯ ಬರುತ್ತಿದೆ.

ಆಡಳಿತ (Administration) :

ಕಾರ್ಯನಿರ್ವಹಿಸಲು ಸುಂದರವಾದ ಕಚೇರಿ ಇದೆ. ಸರಕಾರದ ಎಲ್ಲಾ ಅನುದಾನಗಳು ಸಾಮಾನ್ಯರಿಗೆ ತಲುಪುವಲ್ಲಿ ಪಂಚಾಯತ್ ಸತತ ಪ್ರಯತ್ನವನ್ನು ವಹಿಸುತ್ತಿದೆ. ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವ ಬೆಳಪು ಪಂಚಾಯತ್‌ನಲ್ಲಿ ರಾಜಕರಣ ಎಂದೂ ಅಡ್ಡಿಯಾಗಿಲ್ಲ. ಉಡುಪಿ ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಕಂಪ್ಯೂಟರ್ ಬಳಸಿ ಆಡಳಿತ ನಡೆಸಿದ ಹೆಗ್ಗಳಿಕೆ ಬೆಳಪು ಪಂಚಾಯತ್‌ಗೆ ಸಲ್ಲುತ್ತದೆ.

ಸರಕಾರದ ಯೋಜನೆಯನ್ನು ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲಾಗಿದೆ. ಸುಮಾರು 4 ಕೋಟಿಗೂ ಮಿಕ್ಕಿ ಅಭಿವೃದ್ಧಿ ಕಾರ್ಯವನ್ನು ಇಲ್ಲಿ ಗಮನಿಸಬಹುದು. ಪಂಚಾಯತ್‌ನ ಸಿಬ್ಬಂದಿ ಮತ್ತು ಅಧ್ಯಕ್ಷರ ಜೊತೆಯಲ್ಲಿ ಸಾರ್ವಜನಿಕರು ಕೂಡ ಆಡಳಿತ ನಿರ್ವಹಣೆಯಲ್ಲಿ ಪಾಲುದಾರರಾಗಿದ್ದಾರೆ. 2 ವರ್ಷಕ್ಕೊಮ್ಮೆ ಗ್ರಾಮ ಪಂಚಾಯತ್‌ನಲ್ಲಿ ಪ್ರತಿಯೊಬ್ಬರನ್ನು ಸಭೆಗೆ ಆಹ್ವಾನಿಸಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳು ಮುಂದಿನ ಯೋಜನೆಗಳು, ಸಮಸ್ಯೆಗಳು, ಸಲಹೆಗಳು ಎಲ್ಲಾವನ್ನು ಈ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಲಾಗುತ್ತಿದೆ.

ಎಲ್ಲಾ ಅಧಿಕಾರಿಗಳ ಸಮಕ್ಷದಲ್ಲಿ ಪ್ರತಿ ತಿಂಗಳಿಗೊಮ್ಮೆ ವಾರ್ಡ್ ಸಭೆ ನಡೆಸಲಾಗುತ್ತಿದೆ. ಎಲ್ಲಾ ವಿಚಾರಗಳ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಲಾಗುತ್ತದೆ. ಯಾರೇ ಅಧಿಕಾರಿ ತಪ್ಪಿತಸ್ಥರೆಂದು ಕಂಡುಬಂದಲ್ಲಿ ಆತನ ವಿರುದ್ಧ ಮುಕ್ತವಾಗಿ ದೂರು ನೀಡಲು ಪ್ರತಿಯೊಬ್ಬನಿಗೂ ಅಧಿಕಾರವಿದೆ. ಆ ಅಧಿಕಾರಿ ತಪ್ಪಿತಸ್ಥ ಹಾಗೂ ಭ್ರಷ್ಟನೆಂದು ಕಂಡುಬಂದಲ್ಲಿ ತಕ್ಷಣಕ್ಕೆ ರಾಜೀನಾಮೆಯನ್ನು ನೀಡುವಂತೆ ಅಧಿಕಾರಿಯನ್ನು ನಿಯಂತ್ರಿಸುವುದು ಪಂಚಾಯತ್‌ನ ವಿಶೇಷತೆಯಲ್ಲೊಂದು. ಮಕ್ಕಳಲ್ಲಿ ರಾಜಕೀಯದ ಬಗ್ಗೆ ಸಾಮಾನ್ಯ ಜ್ಞಾನವನ್ನು ತುಂಬಿ ಮಾದರಿ ಗ್ರಾಮ ಸಭೆಯನ್ನು ಪ್ರತಿ ಶಾಲೆಯಲ್ಲೂ ನಡೆಸಲಾಗುತ್ತಿದೆ. ಪಂಚಾಯತ್ ವತಾರದಲ್ಲಿನ ಕೆಲವು ವೈಯಕ್ತಿಕ ಸಮಸ್ಯೆಗಳನ್ನು ಕೂಡ ಪಂಚಾಯತ್ ಆಲಿಸಿ ನ್ಯಾಯ ಚಾವಡಿ

ಎನ್ನುವ ತಮ್ಮದೇ ಆದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲಾಗುತ್ತದೆ.

ಯೋಗಕ್ಷೇಮ (Yogakshema):

ಇದು ಬೆಳಪು ಪಂಚಾಯತ್‌ನ ಕನಸ್ಸಿನ ಕೂಸು. ಇದನ್ನು ಸಾಕಾರಗೊಳಿಸುವತ್ತ ಪಂಚಾಯತ್ ಹೆಜ್ಜೆಯನ್ನು ಹಾಕುತ್ತಿದೆ. ಸಮಾಜದಲ್ಲಿನ ಕೆಳವರ್ಗದವರಿಗೆ, ಹಿರಿಯರಿಗೆ ಸಹಾಯ ಮಾಡುವ ಮತ್ತು ಆರೋಗ್ಯದ ಬಗ್ಗೆ ಮಾಹಿತಿಯನ್ನು ತಲುಪಿಸುವ ಉದ್ದೇಶದಿಂದ ಅಷ್ಟೇ ಅಲ್ಲ ದನಮನ ವಿಶೇಷ ಕಾಳಜಿಯಿಂದ ಹಾಕುವ ದೃಷ್ಟಿಯಿಂದ ಈ ಯೋಜನೆಯನ್ನು ರೂಪಿಸಲಾಗಿದೆ:

1) ಕುಟೀರ –Kuteera Naturopathy Clinic
2) ವೃದ್ಧಾಶ್ರ – Suraksha
3) ಅನಾಥಾಶ್ರಮ– Baduku
4) ಕಾಮಧೇನು – Kamadhenu ದನಗಳನ್ನು ಸಾಕಲು

ಹಲವಾರು ಗಣ್ಯ ವ್ಯಕ್ತಿಗಳು ಭೇಟಿ ನೀಡಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ ಅಂತವರಲ್ಲಿ

1) ಮಾಜಿ ಪ್ರಧಾನಿ ಶ್ರೀ ಹೆಚ್.ಡಿ. ದೇವೇಗೌಡ
2) ಕೇಂದ್ರ ಸಚಿವರು ಮತ್ತು ಪಾಂಡಿಚೇರಿಯ ಸಂಸದರು ಆದ ಶ್ರೀ ನಾರಾಯಣ ಸ್ವಾಮಿ
3) ಮಹಾರಾಷ್ಟ್ರದ ಮಂತ್ರಿಯಾದ ಶ್ರೀ ಸುರೇಶ್
4) ಮಾಜಿ ರಾಜ್ಯ ಪಂಚಾಯತ್ ಮಂತ್ರಿಯಾದ ಮಿ. ಎಂ. ವೈ. ಗೋರ್ಪಡೆ

ಇಲ್ಲಿಯವರೆಗೂ ಬೆಳಪು ಪಂಚಾಯತ್ ಸಾಗಿ ಬಂದ ದಾರಿಯನ್ನು ನೋಡಿದ್ದೀರಿ. ಈ ಯಶಸ್ಸಿನ ಹಿಂದೆ ಪ್ರತಿಯೊಬ್ಬರ ಬಲವಾದ ಶ್ರಮವಿದೆ. ಈ ಎಲ್ಲಾ ಅಭಿವೃದ್ಧಿಯನ್ನು ಬೆಳಪು ಪಂಚಾಯತ್ ತನ್ನ ಜಮೀನಿಗೆ ಅರ್ಪಿಸುತ್ತಿದೆ. ಮುಂದಿನ ದಿನಗಳಲ್ಲಿ ನಡೆಯಬೇಕಾದ ಮತ್ತುಷ್ಟು ಅಭಿವೃದ್ಧಿ ಯೋಜನೆಗಳನ್ನು, ನಕ್ಷೆಯನ್ನು ಪಂಚಾಯತ್ ಈಗಾಗಲೇ ತಯಾರಿಸಲಾಗಿದೆ.

ಉಪಸಂಹಾರ (Conclusion)

"ಹಳ್ಳಿಗಳು ದೇಶದ ಬೆನ್ನೆಲುಬು. ಗ್ರಾಮದ ಉದ್ಧಾರವಾಗದೆ ದೇಶದ ಉದ್ಧಾರ ಸಾಧ್ಯವಿಲ್ಲ" ಅಂತ ಮಹಾತ್ಮ ಗಾಂಧೀಜಿ ಹೇಳಿದ್ದರು. ಅದರಂತೆ ಉಡುಪಿ ಜಿಲ್ಲೆಯ ಕಾಪು ತಾಲೂಕಿನ ಬೆಳಪು ಗ್ರಾಮ ಅಭಿವೃದ್ಧಿಯಾಗಿದೆ.

ಬೆಳಪು ಗ್ರಾಮ ಪಂಚಾಯತ್ ಈ ದೇಶದಲ್ಲಿಯೇ ಮಾದರಿ ಗ್ರಾಮ ಪಂಚಾಯತ್ ಆಗಿದೆ. ಗ್ರಾಮದಲ್ಲಿ 2,500 ಜನಸಂಖ್ಯೆಯಿದ್ದು ಸುಮಾರು 300ಕ್ಕೂ ಹೆಚ್ಚು ಮನೆ ನಿವೇಶನ ಹಂಚಿಕೆ ಮಾಡಿದೆ. ಮೂರು ಬಡಾವಣೆಗೆ ಮೂರು ಪಕ್ಷದ ನಾಯಕರ ಹೆಸರಿಡಲಾಗಿದೆ. ಪ್ರತಿ ಮನೆಗೂ ದಿನಕ್ಕೆ 20ಲೀ. ಕುಡಿಯುವ ನೀರು ಉಚಿತವಾಗಿ ನೀಡಲಾಗುತ್ತದೆ. ಜೊತೆಗೆ 70 ಎಕರೆ ಜಮೀನನ್ನು ಸಣ್ಣ ಕೈಗಾರಿಕೆಗೆ ಮೀಸಲಿಡಾಗಿದೆ. ವಿಜ್ಞಾನ ಸಂಶೋಧನಾ ಕೇಂದ್ರಕ್ಕೆ ಈಗಾಗಲೇ ಬಜೆಟ್‌ನಲ್ಲಿ ಮೊತ್ತ ಮೀಸಲಿಡಲಾಗಿದೆ.

ಗ್ರಾಮದ ಎಲ್ಲಾ ಮನೆಗಳ ಕಸವನ್ನು ತಂದು ಪಂಚಾಯತ್ ವ್ಯಾಪ್ತಿಯಲ್ಲೇ ತ್ಯಾಜ್ಯ ನಿರ್ವಹಣಾ ಘಟಕ ಮಾಡಲಾಗಿದೆ. ಕಾಂಕ್ರೀಟ್ ರಸ್ತೆ, ವಾಣಿಜ್ಯ ಸಂಕೀರ್ಣ, ಬ್ಯಾಂಕ್, ಸಹಕಾರಿ ಸಂಘ, ಎ.ಟಿ.ಎಮ್. ಕರೆಗಳ ಅಭಿವೃದ್ಧಿ, ಸ್ಮಶಾನಕ್ಕೆ ವ್ಯವಸ್ಥೆ ಎಲ್ಲಾ ವ್ಯವಸ್ಥೆಯನ್ನು ಗ್ರಾಮ ಹೊಂದಿದೆ.

ಕಳೆದ 15 ವರ್ಷಗಳಿಂದ ಈ ಪಂಚಾಯತ್ ಸದಸ್ಯರ ಸ್ಥಾನಕ್ಕೆ ಚುನಾವಣೆಯೇ ನಡೆದಿರಲಿಲ್ಲ. ಈ ಬಾರಿ ಪ್ರಜಾಪ್ರಭುತ್ವಕ್ಕೆ ಗೌರವ ಕೊಡುವ ಉದ್ದೇಶದಿಂದ ಮತದಾನ ಮಾಡಲಾಯಿತು. ಆದರೂ ಎಲ್ಲಾ ಪಕ್ಷದವರು ಹೊಂದಿಕೊಂಡು ರಾಜಕೀಯ ಕೊಳಕು ಮಾಡದೆ ಗ್ರಾಮಕ್ಕಾಗಿ ಶ್ರಮಿಸುತ್ತಿದ್ದಾರೆ.

ಅಂದಿನ ರಾಷ್ಟ್ರಪತಿ ಅಬ್ದುಲ್ ಕಲಾಂ ಬೆಳಪುವಿನ ಸಾಧನೆ ಗುರುತಿಸಿ ಗೌರವಿಸಿದ್ರು. ಜೊತೆಗೆ ನೈರ್ಮಲ್ಯ ವಿಚಾರವಾಗಿ ರಾಜ್ಯ–ಕೇಂದ್ರ ಸರಕಾರಗಳು ಕೊಡ್ತಿರೋ ಪ್ರಶಸ್ತಿಗಳಿಗೂ ಬೆಳಪು ಭಾಜನವಾಗಿದೆ. ಆರು ಭಾಷೆಗಳಲ್ಲಿ ಬೆಳಪು ಗ್ರಾಮದ ಬಗ್ಗೆ ಪಠ್ಯ ಬಂದಿದೆ. ಮತ್ತೊಂದು ವಿಶೇಷವೆಂದರೆ ಯುನೆಸ್ಕೋದಿಂದ 20 ದೇಶದ ಸದಸ್ಯರು ಬೆಳಪು ಗ್ರಾಮ ಪಂಚಾಯತ್ ಅಭಿವೃದ್ಧಿ ಬಗ್ಗೆ ಮಾಹಿತಿ ಕಲೆ ಹಾಕಿದ್ದಾರೆ.

ಹೀಗೆ "ಬೆಳಪು ಗ್ರಾಮ ಪಂಚಾಯತ್‌ನ್ನು ಆದರ್ಶ ಗ್ರಾಮ ಪಂಚಾಯತ್" ಎಂದು ಹೇಳಬಹುದು.

ಇತಿಹಾಸ ಪ್ರಸಿದ್ಧ ಬಾರಕೂರು

– ಆಕಾಶ್ ಎಸ್. ಕೈಕಿಣಿ
ದ್ವಿತೀಯ ಬಿ.ಕಾಂ.

ಬಾರಕೂರು ಎಂದರೆ ನೆನಪಿಗೆ ಬರುವ ವಿಷಯವೇನೆಂದರೆ 365 ದೇವಸ್ಥಾನಗಳು. ತುಂಬಾ ಪುರಾಣ ಕಥೆಗಳನ್ನು ಹೊತ್ತು ತಂದ ಬಾರಕೂರಿನಲ್ಲಿ ನೆಲೆಸಿರುವ ನಾವು ಧನ್ಯರು. 'ತುಳುನಾಡಿನ ರಾಜಧಾನಿ, ದೇವಾಲಯಗಳ ಬೀಡು' ಎಂದು ಖ್ಯಾತ ಹೆಸರನ್ನು ಪಡೆದಿದೆ. ಹಲವು ವರ್ಷಗಳಿಂದ ರಾಜರು ಆಳಿದ ಈ ಪ್ರದೇಶದಲ್ಲಿ ಪ್ರತಿ ಶಾಸನವು ನಮಗೆ ಪುರಾತನ ಇತಿಹಾಸವನ್ನು ಹೇಳುತ್ತದೆ. ವಿಜಯನಗರದ ರಾಜರು ಆಳಿದ ಈಪ್ರದೇಶದಲ್ಲಿ ಈಗ ಕೆಲವು ದೇವಸ್ಥಾನದಲ್ಲಿ ಬೆರಳೆಣಿಕೆಯ ಪೂಜೆಯು ನಡೆಯುತ್ತಿದೆ. ಇಲ್ಲಿ ಹೆಸರಾಂತ ದೇವಸ್ಥಾನಗಳಾದ ಬಟ್ಟಿ ವಿನಾಯಕ, ಪಂಚಲಿಂಗೇಶ್ವರ, ಬನ್ನಿಮಹಾಕಾಳಿ, ಸೋಮೇಶ್ವರ ಹಲವು. ಬಾರಕೂರಿಗೆ ಕಾಲಿಟ್ಟಾಗ ನಮಗೆ ತೋರುವುದೇ ಹಂಪಿಯ ಶೈಲಿಯ ರಚನೆ, ಇದಕ್ಕೆ ಕಲ್ಲು ಚಪ್ಪರ ಎಂದು ಹೆಸರು. ಈ ಊರಿಗೆ ಮತ್ತೊಂದು ಹೆಸರೇನೆಂದರೆ, 'ಬಾರಕ್ಕನೂರು' ಹಾಗೆಯೇ ಇಲ್ಲಿ ಕೆರೆಗಳು ಹಲವು. ಕೋಟೆಕೇರಿ, ಚೌಳಿಕೇರಿ, ಮೂಡುಕೇರಿ. ಮೂರು ಕೇರಿಗಳು. 13 ಅಥವಾ 14ನೇ ಇತಿಹಾಸದಲ್ಲಿ ಕಟ್ಟಿದ ಹಲವು ದೇವಾಲಯಗಳು ಹಾಗೆಯೇ ಉಳಿದಿದೆ. ಇಲ್ಲಿ ಎಲ್ಲಾ ಧರ್ಮಗಳವರು ಒಗ್ಗಟ್ಟಾಗಿ ಬಾಳುತ್ತಾರೆ. ಇಲ್ಲಿನ ವೈಶಿಷ್ಟ್ಯತೆಯೆಂದರೆ, ಇಲ್ಲಿ ರಾಜರು ದಿನಕ್ಕೊಂದು ದಿನ ಎಲ್ಲಾ ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದರು. ಹಾಗೆಯೇ ಒಂದೊಂದು ದಿನ, ಒಂದೊಂದು ದೇವಸ್ಥಾನ, ಕಡೆಯೇ ದಿನ ಪ್ರಮುಖ ದೇವಸ್ಥಾನದ ಬಾರಕೂರಿಗೆ ಭೇಟಿ ನೀಡಿದರಂತೆ. ಆ ದೇವಸ್ಥಾನದ ಹೆಸರೇ ಪಂಚಲಿಂಗೇಶ್ವರ ಇಲ್ಲಿಹೋಗುವಾಗ ಒಂದು ಅದ್ಭುತವಾದ ಜಾತ್ರೆ ನಡೆಯುತ್ತಿತ್ತು. 5 ದಿನಗಳ ಕಾಲ ನಡೆಯುವ ಈ ಜಾತ್ರೆ ವರ್ಣಿಸಲು ಬಾರದು. ದೊಡ್ಡದಾದ, ಬೃಹತ್‌ಕಾರದ ಶಾಸನ ಶೈಲಿಯ ರಥ, ಊರು–ಕೇರಿಯ ಜನರೆಲ್ಲ ಸಂಭ್ರಮದಿಂದ ಸೇರುವ ಈ ಹಬ್ಬ. ಇದೇ ದೇವಸ್ಥಾನದಲ್ಲಿ ಅಂತಿಮ ದಿನ ಬೆಳಗಿನ ಜಾವ 'ಓಕುಳಿ' ಎಂಬ ಮನರಂಜನೆಯ ಆಟ. ಹಾಗೆಯೇ ಪುರಾಣ ಕಥನವಾದ ಶಿವ–ಪಾರ್ವತಿಯ ಸಂವಾದ. ಈ ದಿನ ದೇವಸ್ಥಾನದ ಅದ್ಭುತ ದೃಶ್ಯವನ್ನು ನೋಡಲು ಎರಡು ಕಣ್ಣುಗಳು ಸಾಲದು.

